
ಕಸ್ತೂ
ೂ. ೧-೨೫
ಮಾರ್ಚ್ ೧೯೭

ಕೋರೈಸುವ ಬಿಳಿಪು ಯಾರೇ ನೋಡಲಿ, ಒಂದೇ ಮಾತು...

ಇದು ಖಂಡಿತ

ಡೆಟ್

ಡಿಟರ್ಜೆಂಟ್ ಬಿಲ್ಲೆಯ ಒಗೆತ



Statement about ownership and other particulars about newspaper Kasturi to be published in the first issue every year after the last day of February.

FORM - IV

(*See Rule 8*)

1	Place of Publication	:	HUBLI
2	Periodicity of its publication	:	Monthly
3	Printer's name	:	Shri P. S. Bhat
	Whether citizen of India ?	:	Yes
	If, foreigner, state the country of origin	:	—
	Address	:	The Jayakarnataka News Printers Ltd., Post Box No. 30, Hubli-580 020
4	Publisher's Name	:	Shri P. S. Bhat
	Whether citizen of India ?	:	Yes
	If foreigner, state the country of origin	:	—
	Address	:	The Jayakarnataka News Printers Ltd., Post Box No. 30, Hubli-580 020
5	Editor's name	:	Shri P. S. Phat
	Whether citizen of India ?	:	Yes
	If foreigner, state the country of origin	:	—
	Address	:	The Jayakarnataka News Printers Ltd., 105, 1st Main, Palace Guttahalli, Bangalore-560 020
6	Name and address of individuals who own the newspaper and partners or share-holders holding more than one percent of the total capital	:	1. Shri H. R. Basavaraj, 26/A?, Sankey Road, Bangalore. 2. Shri M. Vinayak, Hyderabad. 3. Shri H. Ibrahim, Shimoga. 4. Shri H. S. Fakeerappa, B'lore.

5) Shri G. H. Allappa, Raichur 6) Shri H. T. Ramulu, Raichur 7) Shri E. Lakshman, Raichur 8) Shri C. H. Raghava Rao, Visakapatnam 9) Shri Rajamalliah, Mandya 10) Shri N. Jayanna. Challakere 11) Shri P. Venkata Rao, Visakapatnam 12) Shri C. H. Pattabhirama Rao, Visakapatnam 13) Smt. Vempalli Swarna, Visakapatnam 14) Shri D. Dasappa, Bangalore 15) Shri D. Ramachandrappa, Bangalore 16) Shri H. B. Narayanswamy, Bangalore 17) Shri E. Hanumantappa, Raichur 18) Shri R. Ammayya, Raichur 19) Shri R. Hyma Rao, Raichur 20) Shri K.S. Narayana, Raichur 21) Shri S.S.K. Prasad, Raichur 22) Shri P. Rama Rao, Visakapatnam 23) Shri P. Satyanarayana, Visakapatnam 24) Smt. Lingamma, Raichur 25) Smt. Narasamma, Raichur 26) Smt. Pramila, W/o. Shri G. H. Allappa, Raichur 27) Smt. Siddalingamma, Raichur 28) Smt. Gowramma, Raichur.

I P. S. Bhat hereby declare that the particulars given above are true to the best of my knowledge and belief.

Place : HUBLI

Date : 1-3-1979

P. S. BHAT

Signature of Publisher

ಕಸ್ತೂರಿ

✡

ವ್ಯವಸ್ಥಾಪಕ ಸಂಪಾದಕ:
ಎಚ್. ಆರ್. ಬಸವರಾಜ್

✡

ಸಂಪಾದಕ :
ಪ. ಸು. ಭಟ್ಟ

✡

ಕಲೆ :
ಕೆ. ಬಿ. ಕುಲಕರ್ಣಿ

✡

ಮುಖಪುಟ:
ಮುಲ್ಕಿಯ ಮಾನಸ್ತಂಭ

ಚಿತ್ರ:
ಆರ್. ಎನ್. ಹೆಗಡೆ

✡

ಚಂದಾದರ

೩ ವರ್ಷಕ್ಕೆ (ಅಂಚೆ ಸೇರಿ)		ರೂ. ೩೫-೦೦
೨ ವರ್ಷ	,,	ರೂ. ೨೫-೦೦
೧ ವರ್ಷ	,,	ರೂ. ೧೪-೦೦
ಅರ್ಧವರ್ಷ	,,	ರೂ. ೭-೫೦

KASTURI March 1979

ಬೆಳಕಿಂಡಿ

ಮದುವೆ ಅಂದರೆ;
ಅದೊಂದು ಮುಗಿಯಲಾರದ ಜಗಳ.

ಪ್ರೇಮಸಂಚಯ ಪಾತ್ರೆ.
ಫಟಸ್ಫೋಟದ ಮೂಲಬೀಜ.

ನಿಮ್ಮ ಬಟ್ಟೆಗಳನ್ನು ಪುಕ್ಕಟೆಯಾಗಿ ತೊಳೆಯಲು ಹುಡುಕಿಕೊಳ್ಳುವ ದುಬಾರಿಯಾದ ಉಪಾಯ.

ತನ್ನ ಹೆಂಡತಿ ಎಂಥ ಮನುಷ್ಯನನ್ನು ಬಯಸುತ್ತಾಳೆ ಎಂದು ಗಂಡನಿಗೆ ಅರ್ಥವಾಗುವ ಅವಧಿ.

-ಅನುಭವಿ

ಒಳ್ಳೆಯ ಮಾತುಗಳು ಬೇಕಾದಾಗ ಹೆಂಗಸರ ಬಾಯಿಂದ ಬರುತ್ತವೆ. ಆದರೆ, ಒಳ್ಳೆಯ ವಿಚಾರಗಳು ಮಾತ್ರ ಅವರ ತಲೆಗೆ ಅಪರೂಪಕ್ಕೊಮ್ಮೆ ಹೊಳೆಯುತ್ತವೆ.

-ಮ್ಯಾಕ್ಸಿಮ್ ಗಾರ್ಕಿ

ಮುನಿದ ಮಡದಿಯ ಮನ ಒಲಿಸಿ-ಕೊಳ್ಳಲು ತುಂಬಿದ ಜೇಬು ತೋರಿಸಿ, ತುಂಬಿದ ತಲೆಯನ್ನಲ್ಲ.

-ಸತಿಧರ್ಮ ಪರಾಯಣ

✡

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಚೇರಿಯಲ್ಲಿ ಮೊದಲು ವಿಚಾರಿಸಿ ಆನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸಮಚಿಂತನ

ಕರ್ವರ್ಣ

ಫೆಬ್ರುವರಿ ತಿಂಗಳ 'ಕರ್ವರ್ಣ' ಕಥೆ ತುಂಬಾ ಚೆನ್ನಾಗಿತ್ತು. ಆದರೆ ಕಥೆಯು ಅಪೂರ್ಣವಾದಂತಾಗಿ ಅಯ್ಯೋ ಅನ್ನಿಸುತ್ತದೆ.

ಕಾಮಗೆರೆ —ಎಂ. ಡಿ. ದಾಸೇಗೌಡ

ಭೂತ ಹಿಡಿಯಿತು

'ತ್ರಿವೇಣಿ'ಯವರ ಬೆಕ್ಕಿನ ಕಣ್ಣಿನ ನೆನಪು ಆರುವಲ್ಲಿ ಮನಶಾಸ್ತ್ರಜ್ಞ ಡಾ. ಕೆ. ಎಂ. ಧ್ರುವಕುಮಾರರ 'ಭೂತ ಹಿಡಿಯಿತು' ಲೇಖನ ಸೋತುಹೋಗದು. ಮಾರಣ, ಊರಣ, ಸ್ತಂಭನ, ಮೋಹನ, ಕರ್ಣಪಿಶಾಚಿ, ದೆವ್ವ, ಮಾರಿಯಮ್ಮ, ಚೌಡಿ, ಗುಳಿಗೆ, ಪಂಜುರ್ಲಿ, ಯಕ್ಷಿ ಮೊದಲಾದ ಅಶರೀರ ಶಕ್ತಿಗಳು ಇವೆ, ಅವುಗಳು ಮಾನವರ ಮೇಲೆ ಕಾಣಿಸಿಕೊಳ್ಳುತ್ತವೆ ಎನ್ನುವ ಅಜ್ಞಾನಿಗಳ ನಂಬುಗೆಯನ್ನು ಕೆಣಕಿ ಸಹಜ ಸ್ಥಿತಿಯನ್ನು ತಿಳಿಸಿಕೊಡುವ ಒಂದು ಉತ್ತಮ ಬರಹ ಶ್ರೀಯುತ ಧ್ರುವಕುಮಾರರದ್ದು.

ಬೆಳ್ವಾರೆ, ದ. ಕ. —ಪ್ರೊ. ರಾವ್ ಕುತ್ಯಾಡಿ

ಡಾ. ಕೆ. ಎಂ ಧ್ರುವಕುಮಾರರ 'ಭೂತ ಹಿಡಿಯಿತು' ಎಂಬ ಲೇಖನ ಒಳ್ಳೇ ಮಾರ್ಮಿಕವಾಗಿದೆ, ಮಾನಸಿಕ ರೋಗಗಳ ಬಗ್ಗೆ ವಿಶದವಾದ ಸ್ಪಷ್ಟೀಕರಣ ಕೊಟ್ಟಿದ್ದಾರೆ.

ಬಾಗಲಕೋಟೆ —ಕೃಷ್ಣಮೂರ್ತಿ ಅಂಬೇಕರ

'ಕಸ್ತೂರಿ'ಯಲ್ಲಿ ಪ್ರಕಟವಾದ 'ಭೂತ ಹಿಡಿಯಿತು' ಎಂಬ ಘಟನೆಯನ್ನು ಓದಿದ ಫೆಬ್ರವರಿ ಸಂಚಿಕೆಯನ್ನು ಯಾವ ರೀತಿಯಲ್ಲಿ ಹೊಗಳಲಿ ಎಂದು ತೋರುವುದಿಲ್ಲ. ಡಾ. ಕೆ. ಎಂ. ಧ್ರುವಕುಮಾರರು ಬರೆದ ಈ ಲೇಖನ ಸತ್ಯ ಘಟನೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಈ ಲೇಖನವನ್ನು ನನ್ನ "ಅಮೂಲ್ಯ ಲೇಖನಗಳು" ಎಂಬ ಫೈಲಿನಲ್ಲಿ ಇಟ್ಟಿದ್ದೇನೆ. ಇಂತಹ ಲೇಖನಗಳನ್ನು ಪ್ರಕಟಿಸುವ 'ಕಸ್ತೂರಿ'ಗೆ ನನ್ನ ಹೃತ್ಪೂರ್ವಕ ವಂದನೆಗಳು.

ಮುಂಬಯಿ —ಅಶೋಕ ಎಸ್. ಸುವರ್ಣ

ವೆಂಕೋಬರಾಯರು

ಅದೆಷ್ಟೋ ರತ್ನಗಳು ಇದ್ದರೂ ನಮ್ಮ ಕನ್ನಡ ನಾಡಿನಲ್ಲಿ ನಮಗೇ ಗೊತ್ತಿರುವುದಿಲ್ಲ. 'ವಿ. ಬಿ.' ಯವರ ಲೇಖನಗಳನ್ನು ಅಲ್ಲಲ್ಲಿ ಓದಿದ್ದರೂ, ಬರೆದವರ ಬಗ್ಗೆ ಗಮನ ಹರಿಸದೇ ಇದ್ದೆ. ಅಲ್ಲದೆ ವೆಂಕೋಬರಾಯರ ಎತ್ತರವೂ ನನಗೆ ಅಪರಿಚಿತವೇ ಆಗಿತ್ತು.

'ನಮ್ಮ ವೆಂಕೋಬರಾಯರು' ಬರೆದ ಶೇ. ಗೋ. ಕುಲಕರ್ಣಿಯವರಿಗೂ ಅದನ್ನು ಪ್ರಕಟಿಸಿದ್ದಕ್ಕಾಗಿ ನಿಮಗೂ ಅಭಿವಂದನೆಗಳು.

ಬೆಳಗಾಂವಿ —ಆರ್. ಕೆ. ಕುಲಕರ್ಣಿ

ಒಳ್ಳೆಯ ಸಂಚಿಕೆ

ಫೆಬ್ರುವರಿ ಮಾಸದ 'ಕಸ್ತೂರಿ' ಓದುಗರಿಗೆ ಪರಿಪೂರ್ಣ ತೃಪ್ತಿ ನೀಡುತ್ತದೆ. ಮುಖಪುಟದಿಂದ ಹಿಡಿದು ಸಂಚಿಕೆಯ ಲೇಖನಗಳು ಉತ್ತಮವಾಗಿ ಮೂಡಿಬಂದಿವೆ.

ಒಟ್ಟೆಯ ಮೇಲೆ ರಚಿಸಿದ ತಿರುಪತಿ ವೆಂಕಟಾಚಲಪತಿಯ ಚಿತ್ರ ಆಕರ್ಷಕವಾಗಿದೆ. ಇಂತಹ ಉತ್ತಮ ರಕ್ಷಾಪುಟದಿಂದ ಪತ್ರಿಕೆಗೆ ಒಳ್ಳೆಯ ಕಳೆ ಬಂದಿದೆ.

ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಸಂಕ್ರಮಣ' ಕತೆ ಅತ್ಯಂತ ಹೃದಯಸ್ಪರ್ಶಿಯಾಗಿದೆ. ಎರಡು ಹೆಣ್ಣುಗಳ ಹೃದಯದ ಭಾವನೆಗಳನ್ನು ಲೇಖಕರು ಹೃದಯಂಗಮವಾಗಿ ನಿರೂಪಿಸಿದ್ದಾರೆ. ಶೀಲಾಳ ಪಾತ್ರ ಓದುಗರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತದೆ. ಈ ಕತೆ ಓದಿದ ಪ್ರತಿಯೊಬ್ಬನ ಕಣ್ಣಲ್ಲೂ ನೀರು ಬರುತ್ತದೆ. ಇಂತಹ ಕತೆಗಳು ಸಂಚಿಕೆಗೆ ಕಿರೀಟವಿಟ್ಟಂತೆ.

ಹಾಗೂ ಉಳಿದ ಕತೆ, ಲೇಖನಗಳು ಓದುಗರಲ್ಲಿ ಸಂತಸ ತಂದಿವೆ. ಸದಾಕಾಲವೂ ನಮ್ಮ ಮೆಚ್ಚಿನ 'ಕಸ್ತೂರಿ'ಯಲ್ಲಿ ಇಂತಹ ಒಳ್ಳೆಯ ಲೇಖನ, ಕತೆ, ಉತ್ತಮ ರಕ್ಷಾಪುಟಗಳು ಬರುತ್ತಿರಲಿ ಎಂದು ಹಾರೈಸುತ್ತೇನೆ.

ಕೊಡುವ ಪ್ರತಿಯೊಂದು ಪೈಸೆಗೂ ಬೆಲೆ ಇರುತ್ತದೆ, ಉತ್ತಮ ಸಂಚಿಕೆಗಾಗಿ ಧನ್ಯವಾದಗಳು.

ನಂಜನಗೂಡು —ಶ್ರೀನಂದ

ಭಾಗೀನಾಯಕ

'ಭಾಗೀನಾಯಕನ ಸವಾಲು' ಓದಿದ ನನಗೆ ಆತ ಇನ್ನೂ ಕಣ್ಣಮುಂದೆ ಕಟ್ಟಿದ್ದಾನೆ. ಪರಿಣಾಮಕಾರಿಯಾಗಿ ಅನುವಾದಿಸಿದ ಲೇಖಕರು ಈ ದೃಷ್ಟಿಯಿಂದ ಅಭಿನಂದನಾರ್ಹರು.

ಮುಂಡರಗಿ —ಗೋಪಾಲ ದೀಕ್ಷಿತ

ಕರಡಿ

ಶಶಿಧರ ವಿಶ್ವಾಮಿತ್ರರ 'ಕರಡಿ ಮತ್ತು ವ್ಯಥೆ' ಎರಡು ದೃಷ್ಟಿಯಿಂದ ಗಮನೀಯ. ಬಹುದಿನದ ಮೇಲೆ ಪ್ರಕಟವಾದ ಪರಿಣಾಮಕಾರಿ ಲೇಖನವೆಂಬ ಅಂಶ ಒಂದಾದರೆ, ಶ್ರೀ ವಿಶ್ವಾಮಿತ್ರರು ಹಿಂದಿನಂತೆ ಬೋರಾಗುವ ದೊಡ್ಡ ವಾಕ್ಯಗಳನ್ನು ಬಿಟ್ಟು ಚಿಕ್ಕ ಮತ್ತು ಹೃದಯಸ್ಪರ್ಶಿ ವಾಕ್ಯಗಳಲ್ಲಿ ಚೊಕ್ಕಾಗಿ ವಿವರಿಸಿದ್ದು ಮತ್ತೊಂದು ಅಂಶ.

ಮುಡಿಗೆರೆ —ಯಡ್ತಲೆ ಬೈಕಲಣ್ಣ

ವಿದ್ಯುತ್ತಿನ ಬೆಲೆ

ನಾವು ಈ ವರೆಗ ಯೋಚಿಸದೇ ಇದ್ದ ದೈನಂದಿನ ವಿಚಾರವಾದ ವಿದ್ಯುತ್ ಬಳಕೆಯ ಬಗ್ಗೆ ವಿಶದವಾಗಿ ಬರೆದಿರುವ ಲೇಖಕದ್ವಯರಿಗೆ ಯಾವ ರೀತಿ ಕೃತಜ್ಞತೆ ತೋರಿಸಬೇಕೋ ಗೊತ್ತಾಗುತ್ತಿಲ್ಲ.

ಹುಬ್ಬಳ್ಳಿ —ಭಾವೂರಾಯ ದೇಸಾಯಿ

ಪೋ

ಪತ್ತೇದಾರಿ ಸಾಹಿತ್ಯದ ಜನಕ ಎಡ್ಗರ್ ಅಲೆನ್ ಪೋ ಬಗ್ಗೆ ಬರೆದಿರುವ ಗಣೇಶರಿಗಿದೋ ವಂದನೆ. ಸ್ವಾಮಿ-ಸಂಪಾದಕರೆ, ವ್ಯಕ್ತಿಚಿತ್ರಗಳನ್ನು ಪ್ರಕಟಿಸುವಾಗ ಆ ವ್ಯಕ್ತಿಯ ಚಿತ್ರವನ್ನು ಪ್ರಕಟಿಸುವ ಪರಿಪಾಠವನ್ನಿಟ್ಟುಕೊಂಡಿರುವ ನೀವು ಪೋನ ಚಿತ್ರ ಯಾಕೆ ಪ್ರಕಟಿಸಲಿಲ್ಲ? ನನಗಂತೂ ನಿರಾಶೆಯಾಗಿದೆ. ಎಷ್ಟೇ ಕಷ್ಟವಾದರೂ ವ್ಯಕ್ತಿ ಪರಿಚಯದೊಂದಿಗೆ ಚಿತ್ರ ಪ್ರಕಟಿಸಿ. ಫರ್ಡಿನಾಂಡನ ಪಂಚಾವತಾರಗಳು ಕುತೂಹಲಕಾರಿಯಾಗಿದೆ.

ಮಂಗಳೂರು —ಕೆ. ಉಮಾ ಪ್ರಭು

[ನಿಮ್ಮ ಸೂಚನೆ ಯೋಗ್ಯವಾಗಿದೆ. ಆದರೆ ಸಕಾಲದಲ್ಲಿ ಚಿತ್ರ ದೊರೆಯಲಿಲ್ಲವಾದ್ದರಿಂದ ಲೇಖನ ಹಾಗೆಯೇ ಬಂತು. —ಸಂ.]

ಪದಾರ್ಥ ಚಿಂತಾಮಣಿ

ಫೆಬ್ರುವರಿ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ. ಗೋ. ಕುಲಕರ್ಣಿಯವರ 'ನಮ್ಮ ವೆಂಕೋಬರಾಯರು' ಪೂರ್ಣ ಪರಿಚಯ ಸ್ವಾಗತಾರ್ಹವಾಗಿತ್ತು. 'ಬೇಟೆ ಬರಡಾದಾಗ' ಲೇಖನ ಚೆನ್ನಾಗಿತ್ತು. 'ಪದಾರ್ಥ ಚಿಂತಾಮಣಿ' ಹೊಸ ಶೀರ್ಷಿಕೆ ಆರಂಭವಾದದ್ದು ಸಂತಸದ ವಿಷಯ. ಎಂ. ಗಣೇಶರ 'ಎಡ್ಗರ್ ಅಲೆನ್ ಪೋ' ವಿಚಾರವತ್ತಾದ ಲೇಖನ. ದಯವಿಟ್ಟು ಕವನಗಳಿಗೆ ಮಹತ್ವ ನೀಡಿ, ಹಾಸ್ಯ ಚಟಾಕಿಗಳಿಗೆ ಪ್ರೋತ್ಸಾಹ ಕೊಡಿ.

ಶಿರ್ಲಾಪುರ —ನಾಗರಾಜ ಗೋಕರ್ಣಕರ

ನಾನು 'ಕಸ್ತೂರಿ'ಯನ್ನು ಪ್ರತಿ ತಿಂಗಳೂ ಓದುವೆ. 'ಕಸ್ತೂರಿ' ನನ್ನ ಅಚ್ಚು ಮೆಚ್ಚಿನ ಮಾಸಿಕ, ಏಕೆಂದರೆ ಅದರಲ್ಲಿ ಕೇವಲ ಕತೆ ಅಥವಾ ಹರಟೆ ಪ್ರಕಟವಾಗುವುದಿಲ್ಲ. ಇದರಲ್ಲಿಯ ಪುಸ್ತಕ ವಿಭಾಗ ತುಂಬಾ ಹಿಡಿಸಿತು. ಇಡೀ ಒಂದು ಕಾದಂಬರಿಯನ್ನು ಕೆಲವೇ ಪುಟಗಳಲ್ಲಿ ಅದರ ಅರ್ಥಬದಲಾಗದ ಹಾಗೆ ಬರೆದವರಿಗೆ ಸಲ್ಲಬೇಕಾದದ್ದು ಬಹಳಷ್ಟು. ಇನ್ನು ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆ, ನಾಟಕಗಳು ಕವನಗಳು, ಇತಿಹಾಸದ ಪುಟಗಳು, ವಿಜ್ಞಾನ, ಆರೋಗ್ಯ ಹಾಗೂ ಅನುಭವಗಳು ತುಂಬಾ ಚೆನ್ನಾಗಿರುತ್ತವೆ. ಫೆಬ್ರುವರಿ ೭೬ ರ ಮಾಸಿಕದಲ್ಲಿ ನೀವು ನೀಡಿರುವ ಶ್ರೀ 'ಪಾವೆಂ'ರವರ ಹೊಸ ಶೀರ್ಷಿಕೆ 'ಪದಾರ್ಥ ಚಿಂತಾಮಣಿ' ತುಂಬಾ ಚೆನ್ನಾಗಿದೆ. ಅದರಿಂದ ಶಬ್ದದ ಪೂರ್ಣ ವಿಚಾರ ನಮಗೆ ಓದಿದ ಕೂಡಲೇ ಆಗುತ್ತದೆ. ಈ ಶೀರ್ಷಿಕೆ 'ಶಬ್ದಭಾಂಡಾರ'ಕ್ಕಿಂತಲೂ ತುಂಬಾ ಪರಿಣಾಮಕಾರಿಯಾಗಿದೆ ಎಂದು ಅನಿಸುತ್ತಿದೆ 'ಕಸ್ತೂರಿ'ಯು ಯಾವಾಗಲೂ ಹೀಗೇ ವಿವಿಧ ರೀತಿಯ ಸಾಹಿತ್ಯವನ್ನು ಕನ್ನಡಿಗರಿಗೆ ಸುವಾಸನೆಯಂತೆ ಬೀರುತ್ತಿರಲೆಂದು ನನ್ನ ಹಾರೈಕೆ.

ಮಂಗಳೂರು —ಗಂಗಾಧರ ಮದ್ದಿಕೇರಿ



ಕಸ್ತೂರಿ

ಸಂಚಿಕೆ: ೭ ಕಸ್ತೂರಿ, ಮಾರ್ಚ್ ೧೯೭೯ ವರ್ಷ: ೨೩

ಸಡಿಲು ನಾಲಿಗೆ

ಒಬ್ಬ ಬೇಟೆಗಾರ ಒಮ್ಮೆ ಬೇಟೆಗಾಗಿ ಕಾಡಿಗೆ ನಡೆದ. ಬೇಟೆಯಾಡುತ್ತ ಬಳಲಿದ ಅವನು ವಿಶ್ರಾಂತಿಗಾಗಿ ಮರವೊಂದರ ಬಳಿ ಬಂದ. ಮರದ ಬುಡದಲ್ಲಿ ಮುಂಡದಿಂದ ಬೇರ್ಪಟ್ಟ ರುಂಡವೊಂದು ಕಾಣಿಸಿತು. ಬೇಟೆಗಾರ ಬೆರಗಾದ. ಅಯ್ಯೋ ಪಾಪ, ಇವನಿಗೇಕೆ ಬಂತು ಈ ದುರ್ಗತಿ ಎಂದು ಮನದಲ್ಲಿ ಕೊರಗಿದ. ಆಗ ಆ ರುಂಡ, "ನಾಲಿಗೆ ಸಡಿಲು ಬಿಟ್ಟುದರ ಪರಿಣಾಮವಿದು" ಎಂದು ನುಡಿಯಿತು. ಬೇಟೆಗಾರನಲ್ಲಿ ಆಶ್ಚರ್ಯ ಭಯ ಗಳೆರಡೂ ಎಡೆಯಾಡಿದುವು. ಕೂಡಲೆ ಅಲ್ಲಿಂದ ಹೊರಟ. ನಗರಕ್ಕೆ ಬಂದು ತಾನು ಕಣ್ಣಾರೆ ಕಂಡುದನ್ನು ಬಣ್ಣಿಸಿದ. ಕೆಲವರು ನಂಬಿದರು; ಇನ್ನು ಕೆಲವರು ನಂಬಲಿಲ್ಲ. ಮಾತು ನಿಲ್ಲುವುದೇ ? ಅರಮನೆಗೂ ತಲುಪಿತು.

ರಾಜ ಬೇಟೆಗಾರನನ್ನು ಬರಮಾಡಿಕೊಂಡು ಆ ಬಗ್ಗೆ ವಿಚಾರಿಸಿದ. ಬೇಟೆಗಾರ ಎಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ವಿವರಿಸಿದ. ಆದರೆ ರಾಜನಾಗಲಿ ರಾಜ ಸಭೆಯ ಸದಸ್ಯರಾಗಲಿ ಅವನ ಮಾತನ್ನು ನಂಬ ಲಿಲ್ಲ. ಕೊನೆಗೆ ರಾಜ ಬೇಟೆಗಾರನ ಮಾತನ್ನು ಪರೀಕ್ಷಿಸಬೇಕೆಂದುಕೊಂಡು ತನ್ನ ಕೆಲವು ಭಟರನ್ನು ಕರೆದು, "ಈ ಬೇಟೆಗಾರನೊಂದಿಗೆ ರುಂಡವಿರುವ ಜಾಗಕ್ಕೆ ತೆರಳಿರಿ, ಬೇಟೆಗಾರನ ಮಾತು ಸುಳ್ಳಾದರೆ ಆ ರುಂಡದ ಜತೆಯಲ್ಲಿ ಇವನ ರುಂಡವನ್ನೂ ಇರಿಸಿ ಬನ್ನಿ," ಎಂದು ಅಪ್ಪಣೆ ನೀಡಿದ.

ಅವರು ಕಾಡನ್ನು ತಲುಪಿದರು. ರುಂಡವಿದ್ದಲ್ಲಿ ಬರುತ್ತಲೆ ಬೇಟೆಗಾರ, "ಎಲೈ ರುಂಡವೆ, ನಿನಗೀ ದುರ್ಗತಿ ಹೇಗೆ ಒದಗಿತು ?" ಎಂದು ಕೇಳಿದ. ಉತ್ತರವಿಲ್ಲ. ಪುನಃ ಪ್ರಶ್ನೆ ಕೇಳಿದ. ರುಂಡ

ಆಗಲೂ ನಿರುತ್ತರವಾಗಿತ್ತು. ಭಟರು ಬೇಟೆಗಾರ ನನ್ನು ನೋಡಿದರು. ಬೇಟೆಗಾರ ಭಯಗೊಂಡ. ಪುನಃ ರುಂಡವನ್ನು ಕೇಳಿದ; ಯಾಚಿಸಿದ. ರುಂಡ ಹಾಗೆಯೆ ಬಿದ್ದುಕೊಂಡಿತ್ತು. ಹುಬ್ಬು ಗಂಟಿಕ್ಕಿದ ಭಟರು ಖಡ್ಗವನ್ನೆತ್ತಿ ಬೀಸಿದರು. ಬೇಟೆಗಾರನ ರುಂಡ ಕತ್ತಿನಿಂದ ಬೇರ್ಪಟ್ಟಿತು. ಭಟರು ರಾಜಧಾನಿಗೆ ಮರಳಿ ಹೋದರು. ತುಸು ಹೊತ್ತಿನಲ್ಲಿ ಅಲ್ಲಿದ್ದ ರುಂಡ, "ನಿನಗೀ ದುರ್ಗತಿ ಹೇಗೆ ಒದಗಿತು ?" ಎಂದು ಕೇಳಿತು, ಬೇಟೆಗಾರನ ರುಂಡ ಕಣ್ಣೀರಿಳಿಸಿತು, "ನಾಲಿಗೆಯನ್ನು ಸಡಿಲು ಬಿಟ್ಟಿದ್ದರಿಂದ" ಎಂದು.

ಕೆ. ವೀಣಾದೇವಿ

ಸದ್ಯದ ಮಳೆ ಹೀಗೇಕೆ?

ಕೆಲ ವೈಜ್ಞಾನಿಕ ಆಧಾರಗಳಿಂದ ಜೂನ್ ೭ ರಿಂದ ಮಳೆಗಾಲ ಎಂದು ಸರಕಾರ ಪರಿಗಣಿಸುವದು. ಆದರೆ ಮೃಗಶಿರಾ ಮಳೆ ಪ್ರಾರಂಭವಾದ ಕೂಡಲೇ ಮಳೆಗಾಲ ಪ್ರಾರಂಭ ಎಂದು ಹಿಂದೂ ಪಂಚಾಂಗಕರ್ತರ ಲೆಖ್ಖ. ಅಂದರೆ ಮೃಗಶಿರಾ ನಕ್ಷತ್ರ ಸೂರ್ಯನ ಸಮೀಪ ಬಂದಕೂಡಲೆ ಮಳೆಗಾಲ ಪ್ರಾರಂಭ. ಯಾವ ನಕ್ಷತ್ರ ಬರುವದೋ ಅದೇ ಹೆಸರಿನಲ್ಲಿ ಮಳೆಯನ್ನು ಕರೆಯುವ ರೂಢಿ.

ಉತ್ತರ ಗೋಲಾರ್ಧದ ೧೨ ರಿಂದ ೧೬ ನೇ ಅಕ್ಷಾಂಶಗಳ ಮಧ್ಯದಲ್ಲಿ ಕರಾವಳಿ. ಯಿಂದ ಅತಿ ದೂರದಲ್ಲಿ ಇರದೇ ಸಹ್ಯಾದ್ರಿಯ ಮಡಿಲಲ್ಲೇ ಇರುವ ಉತ್ತರ ಹಾಗೂ ದಕ್ಷಿಣ ಕನ್ನಡ ಜಿಲ್ಹೆಯವರಿಗೆ ಮಾತ್ರ ಈ ಸಂಗತಿ ಅನ್ವಯಿಸುವದು. ಆದರೆ ಭೌಗೋಲಿಕ ಲಕ್ಷಣಗಳು ಬೇರೆಯಾದ ವಿಜಾಪುರ ಹಾಗೂ ಗುಲಬುರ್ಗಾ ಜಿಲ್ಹೆ. ಯವರಿಗೆ ಅಗಸ್ಟ ೧೬ ರಿಂದ, ಅಂದರೆ ಮಘಾ ಮಳೆಯಿಂದ, ಮಳೆಗಾಲ ಪ್ರಾರಂಭ. ಆದರೆ ಸದ್ಯದ ಹವಾಮಾನ ಹಾಗೂ ಮಳೆಯ ಬದಲಾವಣೆಗೆ ವಿಜ್ಞಾನಿಗಳು ಹಾಗೂ ಪಂಚಾಂಗಕರ್ತರು ನೀಡುವ ಕಾರಣ ಬೇರೆ.

ಸೂರ್ಯನು ಸತತವಾಗಿ ಶಾಖವನ್ನು ಹೊರದೂಡುವದರಿಂದ ಪ್ರತಿವರ್ಷ ಆತನ ಗಾತ್ರ ಹಾಗೂ ತೂಕ ಕಡಿಮೆಯಾಗುತ್ತದೆ. ಇದರಿಂದ ಅವನ ಸುತ್ತಲೂ ಸುತ್ತು-ತ್ತಿರುವ ಆಕಾಶಕಾಯಗಳ ಪರಸ್ಪರ ಆಕರ್ಷಣ ಶಕ್ತಿಯಲ್ಲಿ ವ್ಯತ್ಯಾಸ ಉಂಟಾಗು-ವದು. ಈ ವ್ಯತ್ಯಾಸ ಸರಿ ಹೊಂದಲು ವಿಶ್ವದ ವ್ಯಾಸ ಪ್ರತಿ ೫೦-೬೦ ವರ್ಷಗಳಿ-ಗೊಮ್ಮೆ ಕುಗ್ಗುವದು. ಆಗ ವಿಶ್ವದಲ್ಲಿಯ ಪ್ರತಿಯೊಂದು ಆಕಾಶಕಾಯವು ತನ್ನ ಗಾತ್ರ ತೂಕ ಹಾಗೂ ಸ್ಥಾನಕ್ಕೆ ಅನುಸಾರವಾಗಿ ನಿರ್ದಿಷ್ಟ ವೇಗದಲ್ಲಿ ಸೂರ್ಯನ ಸಮೀಪ ಬರುವದು.

ಆದು ಸೂರ್ಯನ ಸಮೀಪ ಬರುವಾಗ ಯಾವದೇ ಆಕಾಶಕಾಯದ ವೇಗದಲ್ಲಿ ಸ್ವಲ್ಪ ವ್ಯತ್ಯಾಸವಾದರೆ ಗ್ರಹಗಳು ಯಾವ ಯಾವದೋ ದಿಶೆಯಲ್ಲಿ ಹೋಗಿ ಪರಸ್ಪರ ಡಿಕ್ಕಿ ಹೊಡೆಯುವ ಸಂಭವವಿರುವದರಿಂದ ಪ್ರಳಯವಾಗಬಹುದು. ಈ ಸಾಧ್ಯತೆ ಕಳೆದ ಸಲ ಅತಿ ಹೆಚ್ಚಿಗೆ ಇದ್ದುದರಿಂದ ಜಗತ್ ಪ್ರಳಯವಾಗುವದೆಂದು ಸುದ್ದಿ ೧೯೬೧ರಲ್ಲಿ ಹರಡಿರಬಹುದು.

ಕಳೆದ ಸಲ ವಿಶ್ವದ ವ್ಯಾಸ ಸುಮಾರು ೩೬ ಮೈಲುಗಳಷ್ಟು ಒಮ್ಮೆಲೇ ಕಡಿಮೆಯಾಗಿದ್ದರಿಂದ ಹವಾಮಾನ ಹಾಗು ಮಳೆ ಬೀಳುವಿಕೆಯಲ್ಲಿ ಸದ್ಯಕ್ಕಿರುವ ವ್ಯತ್ಯಾಸ ಉಂಟಾಗಿದೆ. ಎಲ್ಲ ಆಕಾಶಗಳು ತನಗೆ ಮೀಸಲಾದ ಸ್ಥಾನ ತಲುಪುವ ತನಕ ಈ ಅನಿಶ್ಚಿತ ಹವಾಮಾನ ಮುಂದುವರೆಯುವದು. ಆದರೆ ಅದಕ್ಕೆ ಬೇಕಾಗುವ ಕಾಲ ಸುಮಾರು ೧೫ ರಿಂದ ೨೦ ವರ್ಷಗಳು. ಅಂದರೆ ೧೯೮೧ ರ ನಂತರವೇ ಹವಾಮಾನ ಒಂದು ಸ್ಥಿರತೆಗೆ ಬರುವದೆಂದು ವಿಜ್ಞಾನಿಗಳ ವಾದ.

–ಪದ್ಮಾಕರ ಮುದಗಾಂವಕರ

'ಕರ್ಮವೀರ'ದ ಭಿಡೆ ಶಾಸ್ತ್ರಿಗಳು



ಸೌ. ಗೀತಾ ಉಪಗಾಂವಕರ

ಒಬ್ಬ ವ್ಯಕ್ತಿ ತನ್ನ ವ್ಯಕ್ತಿತ್ವವನ್ನು ತಾನೇ ರೂಪಿಸಿಕೊಂಡು ತನ್ನ ಸಾಮರ್ಥ್ಯದ, ಕರ್ತೃತ್ವಶಕ್ತಿಯ ಪರಿಮಿತಿಯಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿಯೇ ಬಾಳುವುದು. ತನ್ನ ಬಾಳಿಗೆ ಅರ್ಥವನ್ನು ರೂಪಿಸಿಕೊಳ್ಳುವುದು ಬಹಳ [illegible]ತ್ತಲ್ಲ. ನಾವೆಲ್ಲ ಬಹು ಮಟ್ಟಿಗೆ ಪ್ರವಾಹಪತಿತರಂತೆ ಪ್ರವಾಹದ ಗುಂಟ ಮಾತ್ರ ಮುಳುಗುವ ತನಕ ನಮ್ಮ ದೋಣಿಯನ್ನು ನೂಕಿಕೊಂಡು ಹೋಗುವವರು, ಆದರೆ ಸಾಮಾನ್ಯರಲ್ಲೂ ಅಸಾಮಾನ್ಯರಂತೆ ಇರುವ, ಇದ್ದ ವ್ಯಕ್ತಿಗಳನ್ನು ಗುರುತಿಸಬಹುದಾಗಿದೆ. ಅಂಥ ಒಬ್ಬ ವ್ಯಕ್ತಿಯ ಕುರಿತೇ ನಾನೀಗ ಹೇಳುತ್ತಿರುವುದು. ಈ ವ್ಯಕ್ತಿ ನನ್ನ ತಂದೆಯೇ ಆಗಿರುವುದು ಒಂದು ದೃಷ್ಟಿಯಿಂದ ನನ್ನನ್ನು ಅವರ ಗುಣದೋಷಗಳ ಬಗ್ಗೆ ಕೆಲ ಮಟ್ಟಿಗೆ ಕುರುಡಾಗಿಸಿರಬಹುದು. ಆದರೂ ಆ ಪರಿಮಿತಿಯ ಚೌಕಟ್ಟಿನೊಳಗೇ ಅದರ ಅರಿವಿನೊಂದಿಗೇ ಅವರ ಬಗೆಗಿನ ನನ್ನ ತಿಳುವಳಿಕೆಯನ್ನೂ ಭಾವನೆಗಳನ್ನೂ [illegible] ಬಯಸಿದ್ದೇನೆ.

ಕೃಷ್ಣಶಾಸ್ತ್ರಿ ಭಿಡೆ ನನ್ನ ತಂದೆ. ಸುಮಾರು ನಾಲ್ಕು ದಶಕಗಳ ಕಾಲ ಉತ್ತರ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರಗಳಲ್ಲಿ ಫಲಜ್ಯೋತಿಷ ಕ್ಷೇತ್ರದಲ್ಲಿ ತುಂಬ ಹೆಸರಾಂತ ವ್ಯಕ್ತಿ. ಸಂಯುಕ್ತ ಕರ್ನಾಟಕ ಸಂಸ್ಥೆಯೊಂದಿಗಂತೂ ಅವರ ಜನ್ಮದಿಂದಲೇ ಸಂಬಂಧವಿರಿಸಿಕೊಂಡಿದ್ದವರು ಅವರು. 'ಸಂಯುಕ್ತ ಕರ್ನಾಟಕ'ವನ್ನು ಮೊಟ್ಟ ಮೊದಲು ಬೆಳಗಾಂವಿಯಲ್ಲಿ ಪ್ರಾರಂಭಿಸಿದಾಗ ಆ ಪತ್ರಿಕೆಯ ಉಜ್ವಲ ಭವಿತವ್ಯಕ್ಕೆ ಕಾರಕವಾಗುವಂಥ ಮುಹೂರ್ತವನ್ನು ಅವರೇ ತೆಗೆದುಕೊಟ್ಟರು. ಮುಂದೆ 'ಕರ್ಮವೀರ' ವಾರಪತ್ರಿಕೆಯನ್ನು ಪುನರಾರಂಭಿಸಿದಾಗಿನಿಂದ ಮೂರು ದಶಕಗಳ ಕಾಲ ಪ್ರತಿವಾರವೂ ತಪ್ಪದೆ ದ್ವಾದಶ ರಾಶಿಗಳ ವಾರಭವಿಷ್ಯವನ್ನು, ದೀಪಾವಳಿ ವಿಶೇಷಾಂಕಕ್ಕೆ ವರ್ಷಭವಿಷ್ಯವನ್ನೂ ಬರೆದುಕೊಡುತ್ತಿದ್ದ ಈ ಮಾನುಷ್ಯ ಯಾರು, ಎಂಥವರು ಎನ್ನುವುದು ಹೆಚ್ಚಿನ ಓದುಗರ ಮಟ್ಟಿಗೆ ದೂರದ ಗುಪ್ತವೇ ಆಗಿ ಉಳಿದಿರಬೇಕು.

'ಕರ್ಮವೀರ'ದೊಂದಿಗೆ ನನ್ನ ತಂದೆಯವರಿಗಿದ್ದ ಸುದೀರ್ಘ ಸಂಬಂಧವನ್ನು ನೆನೆದು ಅವರು ನಿಧನರಾದ ಒಂದೆರಡು ತಿಂಗಳ ನಂತರ ನಾನು, ಆ ಸಾಪ್ತಾಹಿಕದಲ್ಲಿ ಪ್ರಕಟಿಸಬಹುದೆಂಬ ಆಸೆಯಿಂದ ಚಿಕ್ಕ ಲೇಖನವೊಂದನ್ನು ಕಳಿಸಿದ್ದೆ. ಆದರೆ ಕೆಲ ದಿನಗಳಲ್ಲೇ 'ಕಸ್ತೂರಿ'ಯ ಸಂಪಾದಕರಿಂದ ನನಗೊಂದು ಪತ್ರ ಬಂತು. 'ಕರ್ಮವೀರ'ದ ಪ್ರಕಟನೆ ಸದ್ಯ ಸ್ಥಗಿತವಾಗಿರುವುದರಿಂದ ಈ ಲೇಖನವನ್ನು ತಾವು ಪ್ರಕಟಿಸುವುದಾಗಿಯೂ ಲೇಖನವಿನ್ನೂ ವಿಸ್ತೃತವೂ ವಿಶದವೂ ಆಗಿರಬೇಕೆಂದೂ ಅವರು ಬಯಸಿದ್ದರು. ಅವರ ಇಚ್ಛೆಗೆ ಅನುಗುಣವಾಗಿ ಬರೆದ ಲೇಖನವಿದು.

ಜ್ಯೋತಿಷಿಯಾಗುತ್ತಾನೆ....

ಕೃಷ್ಣಶಾಸ್ತ್ರಿಗಳು ಹುಟ್ಟಿದ್ದು ೧೮೯೬ರ ಡಿಸೆಂಬರ್ ೧೮ರಂದು ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆಯಲ್ಲಿ ದೇವಗಡದ ಹತ್ತಿರವಿರುವ ಜಾಮಸಂಡೆ ಎಂಬ ಗ್ರಾಮದ ರಾಮಮಂದಿರದಲ್ಲಿ. ಮಗು ಹುಟ್ಟಿದೊಡನೆ ಅಳುವ ಧ್ವನಿ ಕೇಳಿ ನೆರೆಮನೆಯ ಗೃಹಸ್ಥರು, "ಗಂಡು ಮಗುವೇ ಹುಟ್ಟಿದಂತೆ ಕಾಣುತ್ತದಲ್ಲ," ಎನ್ನುತ್ತ ಬಂದು ತಮ್ಮ ಊಹೆ ಸರಿಯಿರುವುದನ್ನು ಖಚಿತಪಡಿಸಿಕೊಂಡರಂತೆ. ತಕ್ಷಣ ಅವರು ಆಕಾಶವನ್ನು ನಿರೀಕ್ಷಿಸಿ ಗಣಿತ ಹಾಕಿ, "ನಿಮ್ಮ ಮಗ ಪ್ರಸಿದ್ಧ ಜ್ಯೋತಿಷಿಯಾಗುತ್ತಾನೆ" ಎಂದುದ್ಗರಿಸಿದಾಗ ಮಗುವಿನ ತಂದೆಗೆ ಆಶ್ಚರ್ಯವೇ ಆಯಿತು. ತಮ್ಮ ವಂಶದಲ್ಲಿ ಹಿಂದೆ ಯಾರೂ ಜ್ಯೋತಿಷಿಗಳಿದ್ದುದು ಅವರಿಗಂತೂ ಗೊತ್ತಿರಲಿಲ್ಲ. ವಿಧಿ ಲಿಖಿತವೇ ಹಾಗಿದ್ದರೆ... ಎಂದುಕೊಂಡರಂತೆ ಅವರು.

ಕೃಷ್ಣಶಾಸ್ತ್ರಿಗಳ ಅಜ್ಜ ಸಾಂಗಲಿಯಲ್ಲಿ ದೊಡ್ಡ ಸರಾಫರಾಗಿದ್ದರು. ಈಗಲೂ ಅವರ ಹೆಸರಿನಲ್ಲೇ ವಾಸುದೇವರಾವ ನಾಯಿಕರ ಓಣಿ ಎಂಬ ಒಂದು ಬೀದಿ ಅಲ್ಲಿದೆ. ಆದರೆ ಅವರ ಉದ್ಯೋಗದಲ್ಲಿ ಒಮ್ಮೆ ಅವರಿಗೆ ಭಾರಿ ಹಾನಿಯುಂಟಾಗಿ ಅವರು ಉದ್ಯೋಗಕ್ಕೆ ತಿಲಾಂಜಲಿ ಬಿಟ್ಟು ಹುಟ್ಟೂರಿಗೆ ಹಿಂದಿರುಗಿ ಬರಬೇಕಾಯಿತು. ಶಾಸ್ತ್ರಿಗಳ ತಂದೆ ಮಾತ್ರ ಊರಲ್ಲಿದ್ದ ಜಹಗೀರು ಹೊಲ ಮನೆಯನ್ನು ನೋಡಿಕೊಂಡೇ ಇರಬೇಕಾಯಿತು.

ಶಾಸ್ತ್ರಿಗಳಿಗೆ ಮೂವರು ಸೋದರರು ಮತ್ತು ಇಬ್ಬರು ಸೋದರಿಯರು. ಇದ್ದುದು ಕುಗ್ರಾಮವಾದ್ದರಿಂದ ನಿತ್ಯ ಎರಡು ಮೈಲು ನಡೆದು ಶಾಲೆಗೆ ಹೋಗಬೇಕಾಗುತ್ತಿತ್ತು. ಆದರೂ ಅವರು [illegible] ಆರನೆಯ ಇಯತ್ತೆಯನ್ನು ಪೂರ್ಣಗೊಳಿಸಿದರು. ಆದರೆ ಆ ಕಾಲದಲ್ಲಿ ಮುಲಕೀ ಪರೀಕ್ಷೆಗೆ ಕೂಡುವುದಕ್ಕೆ ಅಭ್ಯರ್ಥಿಗೆ ೧೮ ವರ್ಷಗಳಾಗಿರಬೇಕೆಂಬ ನಿರ್ಬಂಧವಿದ್ದುದರಿಂದ ಊರಲ್ಲಿ ಅಷ್ಟು ವರ್ಷ ವ್ಯರ್ಥ ಸಮಯಹರಣ ಮಾಡುವುದಕ್ಕಿಂತ ಪುಣೆಗೆ ಹೋಗಿ ಇಂಗ್ಲಿಷ್ ಕಲಿಯಬೇಕೆಂದು ನಿರ್ಧರಿಸಿದರು. ಪುಣೆಯಲ್ಲಿ ಶಾಸ್ತ್ರಿಗಳ ಅಬಚಿಯ ಮಗ ಗಣಪತರಾವ್ ಗೋರೆ (ಈಗ ಇಂಗ್ಲೆಂಡಿನಲ್ಲಿ ಭಾರತದ ಹೈಕಮೀಶನರ್ ಆಗಿರುವ ಶ್ರೀ ಎನ್. ಜಿ. ಗೋರೆಯವರ ತಂದೆ)ಯವರ ಮನೆಯಿತ್ತು. ಅಲ್ಲಿದ್ದು ವಾರದ ಮನೆಗಳನ್ನು ಹಚ್ಚಿಕೊಂಡು ಕೆಲ ವರ್ಷ ಕಳೆದದ್ದಾಯಿತು. ಆದರೆ ಮುಂದೆ ಕೆಲವೊಂದು ಅಪರಿಹಾರ್ಯ ಕಾರಣಗಳಿಗಾಗಿ ಅವರು ಪುಣೆ ಬಿಟ್ಟು ಊರಿಗೆ ಮರಳಲು ನಿರ್ಧರಿಸಿದರು. ವಿಮನಸ್ಕ ಸ್ಥಿತಿಯಲ್ಲಿ ಅವರು ಪುಣೆ ರೈಲು ನಿಲ್ದಾಣಕ್ಕೆ ಹೋದಾಗ ಅಲ್ಲಿ ಆಕಸ್ಮಿಕವಾಗಿ ದೂರದ ಸಂಬಂಧಿಯೊಬ್ಬರ ಭೆಟ್ಟಿಯಾಯಿತು. ಅವರು ಇವರ ಮನವೊಲಿಸಿ ಇವರರನ್ನು ತಮ್ಮೊಂದಿಗೆ ಇಂದೂರಿಗೆ ಕರೆದುಕೊಂಡು ಹೋದರು. ಅಲ್ಲಿಗೆ ಹೋದ ನಂತರ–ಕೂಡ ಏನು ಮಾಡಬೇಕೆಂದು ತೋಚದಿದ್ದಾಗ ತಮ್ಮ ಹಣೇಬರಹವೇನೆಂದು ಜ್ಯೋತಿಷಿಗಳನ್ನಾದರೂ ಕೇಳೋಣ ಎಂದುಕೊಂಡು ಅಲ್ಲಿ ಸುಪ್ರಸಿದ್ಧರಾಗಿದ್ದ ತರಟೆ ಜ್ಯೋತಿಷಿಗಳ ಬಳಿ ಹೋದರು. "ಅರೆ! ನೀನು ಉತ್ತಮ ಜ್ಯೋತಿಷಿಯಾಗುತ್ತಿ" ಎಂದವರು ನುಡಿದಾಗ ಶಾಸ್ತ್ರಿಗಳಿಗೆ ತಮ್ಮ ತಂದೆ ಮೇಲಿಂದ ಮೇಲೆ ಹೇಳುತ್ತಿದ್ದ ಮಾತು ನೆನಪಾಯಿತು. ತರಟೆ ಜ್ಯೋತಿಷಿಗಳು ಇವರನ್ನು ತಮ್ಮ ಬಳಿಯೇ ಇಟ್ಟುಕೊಂಡು ಕೆಲವು ವರ್ಷ ಮಮತೆಯಿಂದ ವಿದ್ಯೆ ಹೇಳಿಕೊಟ್ಟರು. ಕೃಷ್ಣಶಾಸ್ತ್ರಿಗಳು ನಿಷ್ಠೆಯಿಂದ ಗುರುಸೇವೆ ಮಾಡಿಕೊಂಡು ವಿದ್ಯೆ ಕಲಿಯುತ್ತಿದ್ದರು. ಶಿಷ್ಯ ಸಾಕಷ್ಟು ಪ್ರಾವೀಣ್ಯ ಸಂಪಾದಿಸಿದ್ದಾನೆಂದು ಗುರುಗಳಿಗೆ ಅನಿಸಿದೊಡನೆಯೇ ಬಂದವರಿಗೆ ಇವರ ಕಡೆಯಿಂದ ಭವಿಷ್ಯ ಹೇಳಿಸುವುದಕ್ಕೆ ಆರಂಭಮಾಡಿದರು. ಹೀಗೆಯೇ ಒಮ್ಮೆ ಒಬ್ಬ ಶೇಠಜಿಗೆ ಇವರು ಹೇಳಿದಂತೆಯೆ ಬಹು ದೊಡ್ಡ ಕೆಲಸವೊಂದು ಕೈಗೂಡಿದ ಅನುಭವವಾಗಿ, ಆ ಕಾಲಕ್ಕೆ, ತಿಂಗಳಿಗೆ ಒಂದು ನೂರು ರೂಪಾಯಿ ಸಂಬಳ ಕೊಟ್ಟು ಇವರನ್ನು ತೇಜಿ ಬಾಜಾರದಲ್ಲಿನ ಏರಿಳಿತಗಳನ್ನು ಮುಂಚೆಯೇ ಹೇಳುವುದಕ್ಕಾಗಿ ನೇಮಿಸಿಕೊಂಡನು.

ಅಲ್ಲದೆ ಶಾಸ್ತ್ರಿಗಳಿಗೆ ನಾಟಕದ ಹುಚ್ಚು ಬಹಳ ಹೆಂದರಿತ ಅವನು ಮೇಲಿಂದ ಮೇಲೆ ಇವರಿಗೆ ನಾಟಕ ತೋರಿಸುವುದಕ್ಕೆಂದೇ ಇವರನ್ನು ಮುಂಬಯಿಗೆ ಕರೆದುಕೊಂಡು ಹೋಗುತ್ತಿದ್ದನು.

ವಿಚಿತ್ರ ಲೀಲೆ

ಒಂದು ದಿನ ಶೇಠಜಿಯಿಂದ ಶಾಸ್ತ್ರಿಗಳಿಗೆ ಅವಸರದ ಕರೆ ಬಂತು. ಅಲ್ಲಿಗೆ ಅವರು ಹೋದಾಗ ಶೇಠಜಿ ಅನಾರೋಗ್ಯದಿಂದ ಮಲಗಿದ್ದವನು ಇವರನ್ನು ಬಳಿ ಕರೆದು ತನ್ನ ಜೇಬಿಗೆ ಕೈ ಹಾಕಿ ಕೈಗೆ ಬಂದ ಹಣವನ್ನೆಲ್ಲ ಇವರ ಕೈಗಿತ್ತು, "ಇದನ್ನು ನೀವೇ ಇಟ್ಟುಕೊಂಡಿರಿ, ಮುಂದೆ ಮತ್ತೆ ನೋಡೋಣವಂತೆ," ಎಂದು ಹೇಳಿದನು. ಆದರೆ ಮುಂದೆ ಅವನು ಹೆಚ್ಚು ದಿನ ಬದುಕಲಿಲ್ಲ. ಅನಂತರ ಅವನಿತ್ತ ಹಣ ಎಷ್ಟಿರಬೇಕೆಂದು ಶಾಸ್ತ್ರಿಗಳು ಎಣಿಸಿ ನೋಡಿದರೆ ರೂ, ೧೭,೦೦೦/– ಇತ್ತು. ಈಗ ಶಾಸ್ತ್ರಿಗಳಿಗೆ ತಮ್ಮ ಕರ್ತವ್ಯದ ನೆನಪು ಬಂತು. ತಮ್ಮ ತಂದೆ ಮಾಡಿದ್ದ ಮೂರು ಸಾವಿರದಷ್ಟು ಸಾಲ ತೀರಿಸಬೇಕೆಂದು ನಿರ್ಧರಿಸಿ ಗುರುಗಳ ಅಪ್ಪಣೆ ಪಡೆದು ಊರಿಗೆ ಮರಳಿದರು.

ಸಾಲ ತೀರಿಸಿದ ನಂತರ ಕೈಲಿದ್ದ ಹಣದಿಂದ ಸ್ವಂತ ನಾಟಕ ಕಂಪೆನಿಯನ್ನು ಪ್ರಾರಂಭಿಸುವ ಇಚ್ಛೆ ಅವರಿಗಾಯಿತು. ಹಾಗೆ ಮಾಡಿಯೂ ಬಿಟ್ಟರು. ಎರಡು ಮೂರು ನಾಟಕಗಳನ್ನು ಪ್ರದರ್ಶಿಸಿದ್ದೂ ಆಯಿತು. 'ವಿಚಿತ್ರಲೀಲಾ' ಎಂಬ ನಾಟಕವನ್ನು ಸ್ವತಃ ತಾವೇ ಬರೆದರು. [illegible] ದುರ್ದೈವ ಬೆಂಬಿಡದಿದ್ದುದರಿಂದ ಕಂಪನಿ ಮುಳುಗಿ ಹೋಯಿತು.

ಏನು ಮಾಡುವುದೆಂದು [illegible] ಶಾಸ್ತ್ರಿಗಳಿಗೆ ಸ್ನೇಹಿತನೊಬ್ಬನ ಭೆಟ್ಟಿಯಾಯಿತು. ಇಬ್ಬರೂ ಹಣ ಹಾಕಿ ಮುಂಬಯಿಯಲ್ಲಿ ಬಟ್ಟೆ ಅಂಗಡಿಯೊಂದನ್ನು ತೆರೆಯಲು ನಿರ್ಧರಿಸಿದರು. ಮುಂಬಯಿಯ ಗಿರಗಾಂವದಲ್ಲಿ ಪ್ರಮುಖ ರಸ್ತೆಯಲ್ಲೇ ದೊಡ್ಡ ಅಂಗಡಿಯೊಂದನ್ನು ಬಾಡಿಗೆಗೆ ಹಿಡಿದರು. ಉತ್ತಮ ದರ್ಜೆಯ ಬಟ್ಟೆಗಳನ್ನು ತಂದಿಟ್ಟರು. ಒಬ್ಬ ಸಿಂಪಿಗನನ್ನೂ ಗೊತ್ತು ಮಾಡಿ ಒಂದು ಹೊಲಿಗೆ ಯಂತ್ರವನ್ನು ಕೊಂಡು ತಂದರು. ಒಂದು ದಿನ ಅಂಗಡಿಯ ಪ್ರಾರಂಭೋತ್ಸವವೂ ಆಯಿತು. ಮರುದಿನ ಬೆಳಿಗ್ಗೆ ಪಾಲುದಾರರಿಬ್ಬರೂ ಅಂಗಡಿಯ ಬಾಗಿಲು ತೆರೆದರೆ ಅಲ್ಲೇನಿದೆ? ಹೊಲಿಗೆಯ ಯಂತ್ರವೊಂದನ್ನು ಬಿಟ್ಟು ಉಳಿದೆಲ್ಲ ಮಾಲೂ ಕಳವಾಗಿಹೋಗಿತ್ತು. ಅದರೊಂದಿಗೆ ಶಾಸ್ತ್ರಿಗಳ ಬಳಿಯಿದ್ದ ಬಂಡವಾಳವೆಲ್ಲ ಕರಗಿಹೋದಂತಾಗಿತ್ತು.

ಈಗ ಅವರಿಗೆ ಬೇರೆ ದಾರಿಯೇ ಉಳಿಯಲಿಲ್ಲ. ಬಿನ್‌ಬಂಡವಾಳ ಅವರು ಮಾಡಬಹುದಾಗಿದ್ದ ಉದ್ಯೋಗವೆಂದರೆ ಜ್ಯೋತಿಷಿಯದೊಂದೇ ಆಗಿತ್ತು. ಬಹಳ ವಿಚಾರ ಮಾಡಿ ಅವರು ಗೋವೆಯಲ್ಲಿ ಮ್ಹಾಪ್ಸಾ ನಗರಕ್ಕೆ ಬಂದರು. ಅಲ್ಲಿಗೆ ಹೋದ ಹೊಸತರಲ್ಲೆ ದಾದಾ ಖಾನೋಳಕರ ಎಂಬ ಹೆಸರಿನ ವ್ಯಕ್ತಿಯೊಬ್ಬರು ಇವರ ಕಡೆಗೆ ಬಂದರು. ಅವರ ಮಗ ಪದವೀಧರ; ಆದರೆ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದವ. ಅವನನ್ನು ಸೆರೆಮನೆಯಲ್ಲಿ ಎರಡನೆಯ ದರ್ಜೆ ಕೊಟ್ಟು ಇಟ್ಟಿದ್ದರಂತೆ. ಅವನಿಗೆ ಮೊದಲನೆಯ ದರ್ಜೆ ಕೊಡಿಸಬೇಕೆಂದು ಇವರ ಇಚ್ಛೆ. ಆದರೆ ಅದು ಅಸಾಧ್ಯವೆಂದು ಸೆರೆಮನೆ ಅಧಿಕಾರಿಗಳು ಹೇಳಿದ್ದರಂತೆ. ಏನಾಗುವುದೆಂದು ಶಾಸ್ತ್ರಿಗಳನ್ನು ಕೇಳಲು ಬಂದರೆ ಅವರು ಪ್ರಶ್ನಕುಂಡಲಿ ಹಾಕಿ ಅವನಿಗೆ ಪ್ರಥಮ ದರ್ಜೆ ಸಿಗುವುದು ಖಂಡಿತವಷ್ಟೇ ಅಲ್ಲ ಆ ಬಗ್ಗೆ ಮರುದಿನದೊಳಗಾಗಿಯೇ ವಾರ್ತೆಯೂ ಬರುವುದೆಂದು ಹೇಳಿದರು. ಅಂಥದು ಆ ರಾತ್ರಿಯೇ ಪ್ರಥಮ ದರ್ಜೆ ಕೊಟ್ಟ ಬಗ್ಗೆ ತಾರು ಬಂದು ಖಾನೋಳಕರರು ತುಂಬ ಸಂತೋಷಚಿತ್ತರಾಗಿ ಶಾಸ್ತ್ರಿಗಳ ಮನವೊಲಿಸಿ ಅವರನ್ನು ತಮ್ಮೊಂದಿಗೆ ಸಾವಂತವಾಡಿಗೆ ಕರೆದುಕೊಂಡು ಹೋಗಿ ಅವರು ಅಲ್ಲಿಯೇ ನೆಲೆಸುವಂತೆ ಮಾಡಿದರು.

ಸ್ಥಾಯೀ ಜೀವನ

ಸಾವಂತವಾಡಿಯಲ್ಲಿ ಇದ್ದಾಗ ಆಗೀಗ ಗೋವೆಯ ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟು ಆಗೀಗ ಅಲ್ಲಿಗೆ ಹೋಗಿ ಬರುತ್ತಿದ್ದರು. ಹಾಗೆಯೇ ಒಂದು ದಿನ ಗೋವೆಯಲ್ಲಿ ತಮ್ಮ ಸಂಬಂಧಿಕನೊಬ್ಬನೊಂದಿಗೆ ವಾಯುವಿಹಾರಕ್ಕೆ ಹೋದಾಗ

ಗೋವಾ ಲಾಟರಿ ಮಾರುತ್ತಿದ್ದ ಹುಡುಗ ಟಿಕೆಟ್ಟು ಕೊಳ್ಳಿರೆಂದು ದುಂಬಾಲು ಬಿದ್ದ. ಶಾಸ್ತ್ರಿಗಳು ಒಂದು ಟಿಕೆಟ್ಟು ಕೊಳ್ಳುವಂತೆ ತಮ್ಮ ಸಂಗಡಿಗನಿಗೆ ಹೇಳಿದಾಗ ಅವನು ಹಿಂದೆ-ಮುಂದೆ ಮಾಡುತ್ತ ಕೊಂಡುಕೊಂಡನಾದರೂ ಅದನ್ನು ತಾನು ಕಾಯ್ದಿಡಲಾರೆನೆಂದೂ ಶಾಸ್ತ್ರಿಗಳೇ ಅದನ್ನು [illegible] ಬೇಕೆಂದೂ ಹೇಳಿ ಅದನ್ನವರಿಗೇ ಕೊಟ್ಟು[illegible]. ಎಂಟು ದಿನಗಳಲ್ಲಿ ಲಾಟರಿ ಪರಿಣಾಮ ಬಂದು ಆ ಟಿಕೆಟ್ಟಿಗೆ ಎಂಟು ಸಾವಿರ ರೂಪಾಯಿ ಬಹುಮಾನ ಹತ್ತಿತ್ತು. ಶಾಸ್ತ್ರಿಗಳ ಸ್ವಭಾವ [illegible] ನೇರ, ನಿಷ್ಕಪಟ. ಆ ಹಣವನ್ನು ಅವರು ತಾವೇ ಉಳಿಸಿಕೊಂಡುಬಿಟ್ಟಿದ್ದರೂ ಯಾರಿಗೂ ತಿಳಿಯುವಂತಿರಲಿಲ್ಲ. [illegible] ಸಂಬಂಧಿಕನಿಗೆ ಪತ್ರ ಹಾಕಿ ಲಾಟ[illegible] ಹತ್ತಿದ್ದ ವಿಷಯವನ್ನು ತಿಳಿಸಿದರು. ಆ ವ್ಯಕ್ತಿ ಧಾವಿಸಿ ಬಂದು ಹಣವನ್ನೆಲ್ಲ ತಗೆದುಕೊಂಡು ಮರಳಿ ಹೋದನು; [illegible] ಇವರೆಂಬ [illegible] ರೂಪಾಯಿಗಳನ್ನು ಸಹ ಇವರ ಕೈಲಿಡಲು ಅವನಿಂದಾಗಲಿಲ್ಲ!

ಅನಂತರ ಸಾವಂತವಾಡಿಯಲ್ಲೂ ಅವರ ಮನಸ್ಸು ಅಷ್ಟಾಗಿ ನಲಿಯಲಿಲ್ಲ. ಧಾರವಾಡ, ವಿಜಾಪುರಗಳಿಗೂ ಹೋಗಿ ಬಂದರು. ಅವರಿಗೆ ಆ ನಗರಗಳೂ ಅಷ್ಟೊಂದು ಅನುಕೂಲಕರವಾಗಿ ತೋರಲಿಲ್ಲ. ಕೊನೆಗೆ ಹಿತಸ್ನೇಹಿತರ ಸಲಹೆಯ ಮೇರೆಗೆ ಬೆಳಗಾಂವಿಗೆ ಬಂದರು. ಈ ಊರು ಅವರಿಗೆ ತಟ್ಟನೆ ಹಿಡಿಸಿತು. ೧೯೩೭ರಲ್ಲಿ ಅವರು ಬೆಳಗಾಂವಿಯಲ್ಲಿ ನೆಲೆಸಿದಾಗ ಖಡೆ ಬಾಜಾರದಲ್ಲಿ 'ಭವಿಷ್ಯ ಕಥನ ಆಫೀಸ್' ಎಂಬ ಹೆಸರಿಟ್ಟು ತಮ್ಮ ಜ್ಯೋತಿಷ್ಯ ಕಾರ್ಯಾಲಯವನ್ನು ತೆರೆದರು. ಮೊದಲ ಕೆಲ ವರ್ಷ ವ್ಯವಸಾಯ ಅಷ್ಟಕ್ಕಷ್ಟೇ ಇದ್ದರೂ ನಂತರದ ನಾಲ್ಕು ದಶಕಗಳಲ್ಲಿ ಮಾತ್ರ ಒಳ್ಳೆಯ ಭರಭರಾಟೆಯಿಂದಲೇ ನಡೆ[illegible].

[illegible] ಅವರ ಮದುವೆಯೂ ಆಯಿತು. ವೃತ್ತಿಜೀವನದಲ್ಲಿ ಮಾತ್ರ ಅವರು ಸಮಯನಿಷ್ಠೆ, ಸತ್ಯಪ್ರಿಯತೆ, ಪ್ರಾಮಾಣಿಕತನವನ್ನು ಸದಾ ಪಾಲಿಸಿಕೊಂಡು ಬಂದರು. ಅವರ ಸ್ಮರಣಶಕ್ತಿ ಅಪೂರ್ವವಾಗಿತ್ತು. ಒಮ್ಮೆ ನೋಡಿದ ವ್ಯಕ್ತಿಗಳನ್ನೂ ಅವರ ಕುಂಡಲಿಗಳನ್ನೂ ಅವರು ಎಷ್ಟೆಷ್ಟೋ ವರ್ಷಗಳ ನಂತರ ನೆನಪಿಟ್ಟು ಹೇಳುತ್ತಿದ್ದ ಉದಾಹರಣೆಗಳು ಬೇಕಷ್ಟು. ಅವರು ಅಕ್ಷರಶಃ ಶಿಸ್ತುಪ್ರಿಯರು. ತಮ್ಮ ಬಳಿ ನಾಲ್ಕು ಜನ ಕಾರಕೂನರನ್ನು ಇಟ್ಟುಕೊಂಡಿದ್ದರಲ್ಲದೆ ಅವರ ಹಸ್ತಾಕ್ಷರಗಳು ಯಾವಾಗಲೂ ಮುತ್ತಿನಂತೆ ದುಂಡವಾಗಿರುವಂತೆ ನೋಡಿಕೊಳ್ಳುತ್ತಿದ್ದರು. ಪ್ರತಿಯೊಂದಕ್ಕೂ ತಾವು ಮೊದಲೇ ನಿರ್ಧರಿಸಿದ್ದುದಕ್ಕಿಂತ ಹೆಚ್ಚಾಗಿ ಒಂದು ಚಿದಿಗಾಸನ್ನೂ ಅವರು ಬಕ್ಷೀಸು ಮುಂತಾಗಿ ಸ್ವೀಕರಿಸಿದವರಲ್ಲ. ಅವರನ್ನು ಭವಿಷ್ಯ ಕೇಳಲು ಬರುತ್ತಿದ್ದವರಲ್ಲಿ ಹಿಂದಿನ ಕೇಂದ್ರ ಮಂತ್ರಿ ಬಳವಂತರಾವ ದಾತಾರ, ಹಿಂದಿನ ಕರ್ನಾಟಕದ ರಾಜ್ಯಪಾಲ ಕೆ.ಕೆ. ಶಹಾ, ಉದ್ಯೋಗಪತಿ ಬಾ. ಮ. ಗೋಗಟೆ, ಬಾಲಗಂಧರ್ವ, ದಾಮೂ ಅಣ್ಣಾ ಮಾಲವಣಕರ ಮುಂತಾದವರನ್ನು ಹೆಸರಿಸಬಹುದು.

ಜ್ಯೋತಿಷ್ಯದೊಂದಿಗೇ ಅವರಿಗೆ ಸಂಗೀತದಲ್ಲೂ ಭಾರಿ ಆಸಕ್ತಿ. ಪ್ರತಿ ವರ್ಷ ಜನೆವರಿಯಲ್ಲಿ ತಮ್ಮ ಮನೆಯಲ್ಲೇ ಭರ್ಜರಿ ಸಂಗೀತ ಕಚೇರಿಯನ್ನೇರ್ಪಡಿಸುತ್ತಿದ್ದರು.

ಕರ್ಮಠರಲ್ಲ

ಶಾಸ್ತ್ರಿಗಳು ಇಷ್ಟೊಂದು ಕರ್ಮಠ ಕಾಲದಲ್ಲಿ, ಮನೆತನದಲ್ಲಿ ಬೆಳೆದುಬಂದವರಾಗಿದ್ದರೂ ಎಂದೂ ಮನೆಯಲ್ಲಿ ಅತಿಶಯ ಮಡಿ ಮೈಲಿಗೆ ಅಥವಾ ಧಾರ್ಮಿಕ ದಂಭಾಚಾರಕ್ಕೆ ಅವಕಾಶವಿತ್ತಿರಲಿಲ್ಲ. ಅವರ ಆರೂ ಮಕ್ಕಳೂ ಕನ್ಯೆಯರೇ ಆದರೂ ಗಂಡುಮಗುವಿಲ್ಲವೆಂಬ ಕೊರಗು ಅವರನ್ನೆಂದೂ ಕಾಡಿದಂತೆ ತೋರಲಿಲ್ಲ. ಬೆಳಗಾಂವಿಯಲ್ಲಿದ್ದ ೪೦ ವರ್ಷಗಳಲ್ಲಿ [illegible] ಲೇಶ್ವರ ಗಲ್ಲಿಯಲ್ಲಿ ಕಳೆದರು. ಬೆಳಗಾಂವಿಯಲ್ಲಿ ಜ್ಯೋತಿರ್ಮಂಡಳವೊಂದನ್ನು ಸ್ಥಾಪಿಸಿ ಅದಕ್ಕೆ ಮಾರ್ಗದರ್ಶಕರಾಗಿ ಕಾರ್ಯಮಾಡಿದರು.

ವಯಸ್ಸಾದಂತೆ ಬೆಳಗಾಂವಿಯಲ್ಲಿ ಏಕಾಕಿಯಾಗಿ

ಉಳಿಯುವುದಕ್ಕಿಂತ ತಮ್ಮ ಹೆಣ್ಣುಮಕ್ಕಳ (ಅವರೆಲ್ಲರ ಮದುವೆಯನ್ನು ಆಗಲೇ ಮಾಡಿ ಮುಗಿಸಿದ್ದರು) ಬಳಿ ಹೋಗಬೇಕೆಂದು ಅವರಿಗೆ ಅನಿಸತೊಡಗಿದರೂ – ಅದೇನು ಬೆಳಗಾಂವಿಯ ಮಣ್ಣಿನ ಮೋಹವೋ ಬೇಗ ಅಲ್ಲಿಂದ ಕದಲಲಾಗಲಿಲ್ಲ. ಕೊನೆಗೂ ೧೯೭೫ರ ಫೆಬ್ರುವರಿಯಲ್ಲಿ ಬೆಳಗಾಂವಿಯ ಮಿತ್ರವರ್ಗವನ್ನೆಲ್ಲ ಬೀಳ್ಕೊಂಡು ಮುಂಬಯಿಗೆ ಹೋದರು. ಅಲ್ಲಿಯೂ ಮತ್ತೆ ಹುರುಪಿನಿಂದ ತಮ್ಮ ಜ್ಯೋತಿಷ್ಯ ವೃತ್ತಿಯನ್ನಾರಂಭಿಸಿದರಾದರೂ ವಯಸ್ಸಾಗುತ್ತ ಬಂದಂತೆ ಹತ್ತಿರ ಒಬ್ಬ ವೈದ್ಯರಿರುವುದು ಕ್ಷೇಮಕರವೆಂಬ ಅಭಿಪ್ರಾಯ ಬಲವಾಯಿತು. ಕೊನೆಗೆ ೧೯೭೭ರ ಮೇ ತಿಂಗಳಲ್ಲಿ ನಾಗಪುರಿಗೆ ತಮ್ಮ ಕೊನೆಯ ಮಗಳ (ನನ್ನ) ಕಡೆಗೆ ಬಂದು ವಾಸವಾಗಿರತೊಡಗಿದರು. ಅಳಿಯ ಡಾಕ್ಟರ್ ಆಗಿದ್ದುದೂ ಒಂದು ಅನುಕೂಲವೇ ಆಯಿತು. ೧೯೭೮ರ ಮಾರ್ಚ್ ೨೫ ರಂದು ಅವರ ಆರೋಗ್ಯ ಸ್ಥಿತಿ ಗಂಭೀರವಾಗಿ ಅಂದೇ ಕೊನೆಯುಸಿರೆಳೆದರು. ಆಗ ಅವರಿಗೆ ೮೨ ವರ್ಷ ವಯಸ್ಸು.

ತಂದೆಯವರು ಬೆಳಗಾಂವಿಯಂಥ ದೊಡ್ಡ ಊರಲ್ಲಿ ಅರ್ಧ ಶತಮಾನ ಕಾಲ ಕಳೆದರಾದರೂ ತಮ್ಮದೆಂದು ಒಂದು ಮನೆ ಕಟ್ಟಿಕೊಳ್ಳಲಿಲ್ಲ. ಅಂತೆಯೇ ತಮ್ಮ ಮಕ್ಕಳಲ್ಲಿ ಒಬ್ಬರಾದರೂ ಸ್ವಂತ ಮನೆ ಕಟ್ಟಿಕೊಳ್ಳಬೇಕೆಂದು ಅವರ ಇಚ್ಛೆಯಾಗಿತ್ತು. ಅವರ ಜೀವನದ ಕೊನೆಯ ಒಂದು ವರ್ಷ ಅವರ ಸೇವೆಯನ್ನು ನನ್ನ ಮನೆಯಲ್ಲೇ ಇಟ್ಟುಕೊಂಡು ಮಾಡಿದೆನಾದರೂ ನಾವು ಕಟ್ಟಿಸುತ್ತಿದ್ದ ಮನೆ ಅವರು ಕಣ್ಮುಚ್ಚುವ ಮುನ್ನ ಸಿದ್ಧವಾಗಲಿಲ್ಲ. ಆದರೆ ಈಗ ಮಾತ್ರ ಅವರ ಆಶೀರ್ವಾದದಿಂದ ಸ್ವಂತ ಮನೆಯಲ್ಲೇ ವಾಸವಾಗಿದ್ದೇವೆ. ✡

ಹೇಮಾಳದ ಚಂದನದ ತರುವಿಗೆ ಸರಿಯೆ ಬಾಗಿದ ಕಾಷ್ಠ?

–ಕನಕದಾಸ

ಘಾತಕತನವ ಬಿಡದೆ ನಿತ್ಯ ಗೀತೆಯನೋದಿದರೇನು ಫಲ?

–ಪುರಂದರದಾಸ


ಹೀಗೊಂದು ರಶಿಯನ್ ಜೋಕು

"ತತ್ವಜ್ಞಾನ ಅಂದರೇನು?" ಒಬ್ಬಾತ ಕೇಳಿದ. ಕತ್ತಲ ಕೋಣೆಯಲ್ಲಿ ಕಪ್ಪು ಬೆಕ್ಕನ್ನು ಹುಡುಕುವ ವಿದ್ಯೆ, ಇನ್ನೊಬ್ಬ ಉತ್ತರಿಸಿದ: "ಹಾಗಾದರೆ ಮಾರ್ಕ್ಸ್‌ನ ತತ್ವಜ್ಞಾನವೆಂದರೇನು?" ಆತ ಮತ್ತೆ ಕೇಳಿದ. ಮಾರ್ಕ್ಸ್‌ನ ತತ್ವಜ್ಞಾನವೆಂದರೆ ಅದೂ ಕತ್ತಲ ಕೋಣೆಯಲ್ಲಿ ಕಪ್ಪು ಬೆಕ್ಕನ್ನು ಹುಡುಕುವ ವಿದ್ಯೆಯೆ; ಆದರೆ ಅಲ್ಲಿ ಯಾವ ಬೆಕ್ಕೂ ಇರುವದಿಲ್ಲ ಅಷ್ಟೆ. "ಹೀಗೋ ಸರಿ. ಆದರೆ ಮಾರ್ಕ್ಸಿಸ್ಟ್-ಲೆನಿನಿಸ್ಟ ತತ್ವಜ್ಞಾನವೆಂದರೇನು?" ಅದೂ ಹಾಗೆಯೇ. ಕತ್ತಲು ಕೋಣೆಯಲ್ಲಿ ಕಪ್ಪು ಬೆಕ್ಕನ್ನು ಹುಡುಕಿದಂತೆಯೆ. ಆ ಕೋಣೆಯಲ್ಲಿ ಬೆಕ್ಕು ಇರುವದಿಲ್ಲವೇನೋ ಸರಿ. ಆದರೂ ನೀವು ಬೆಕ್ಕು ಸಿಕ್ಕಿತು ಎಂದು ಒದರುತ್ತೀರಿ ಅಷ್ಟೆ."

–ಎರಿಕ್ ಡೇ. ಮರ್ರೆ

ಯೋಗಿನಿ

ಪ್ಯಾರಿಸ್ಸಿನ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ದ್ರಾವಿಡ ಕಲಾಕೃತಿಯೊಂದರ ಚಿತ್ರಗಳಿವು. ಕೆಳಗಿನ ಮತ್ತು ಬಲಕಿನ ಪುಟದಲ್ಲಿರುವ ಚಿತ್ರಗಳು ಈ ಚಿತ್ರದ ವಿವರಗಳನ್ನು ಸ್ಫುಟವಾಗಿ ಚಿತ್ರಿಸುತ್ತವೆ.





ಕರ್ನಾಟಕ ರಾಜ್ಯದಲ್ಲಿ ಪೌಷ್ಟಿಕ ಆಹಾರ ಕಾರ್ಯಕ್ರಮ
ಸುಮಾರು ೨೭ ಲಕ್ಷ ಮಕ್ಕಳಿಗೆ ಪ್ರಯೋಜನ

ಶಾಲಾ ಮಕ್ಕಳಿಗೆ ಉಪಯುಕ್ತವಾದ ಮಧ್ಯಾಹ್ನದ ಉಪಾಹಾರ ಮತ್ತು ವಿಶೇಷ ಪೌಷ್ಟಿಕ ಆಹಾರ ಕಾರ್ಯಕ್ರಮದನ್ವಯ ೧೯೮೨-೮೩ರ ಹೊತ್ತಿಗೆ ೨೭.೦೭ ಲಕ್ಷ ಮಕ್ಕಳು ಪ್ರಯೋಜನ ಪಡೆಯಲಿದ್ದಾರೆ. ಪ್ರಸಕ್ತ ವರ್ಷದಲ್ಲಿ ಈ ಕಾರ್ಯಕ್ರಮದ ಪ್ರಯೋಜನವನ್ನು ೨೧.೬೫ ಲಕ್ಷ ಮಕ್ಕಳು ಪಡೆದಿದ್ದಾರೆ. ಈ ಉದ್ದೇಶಕ್ಕಾಗಿ ೧೯೭೮-೮೩ರ ಯೋಜನೆಯಲ್ಲಿ ೨,೩೫೦ ಲಕ್ಷ ರೂಪಾಯಿಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. ಮಧ್ಯಾಹ್ನದ ಉಪಾಹಾರ ಕಾರ್ಯಕ್ರಮದನ್ವಯ ೬-೧೩ ವರ್ಷ ವಯಸ್ಸಿನ ೧೫.೬೦ ಲಕ್ಷ ಶಾಲಾ ಮಕ್ಕಳು ಮತ್ತು ವಿಶೇಷ ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮದ ಕೆಳಗೆ ೦-೬ ವರ್ಷ ವಯಸ್ಸಿನ ಮಕ್ಕಳು, ಗರ್ಭಿಣಿಯರು ಮತ್ತು ಬಾಣಂತಿಯರನ್ನು ಒಳಗೊಂಡಂತೆ ೧೧.೪೭ ಲಕ್ಷ ಜನ ಪ್ರಯೋಜನ ಪಡೆಯುತ್ತಾರೆ. ಅವರಲ್ಲಿ ಹೆಚ್ಚಿನವರು ಹರಿಜನ-ಗಿರಿಜನರಾಗಿದ್ದಾರೆ.

ಕರ್ನಾಟಕ ಬಡವರ ಏಳಿಗೆಗಾಗಿ

ನಿರಂತರ ಯತ್ನ ನಡೆಸುತ್ತಿರುವ ರಾಜ್ಯ

ಕರ್ನಾಟಕ ಸರಕಾರದ

ವಾರ್ತಾ ಮತ್ತು ಪ್ರಚಾರ ಇಲಾಖೆಯ ಪ್ರಕಟಣೆ

ಸಾಧನೆಯು ಬೆಂಬತ್ತಿ...

ಶಿವರಾಮು ಜೋಶಿ

ಹರಿದ್ವಾರದಿಂದ ಕನಖಲ್‌ಗೆ ಹೋಗಬೇಕಾಗಿತ್ತು. ಅಲ್ಲಿಂದ ಕೇವಲ ಒಂದೆರಡು ಮೈಲು. ಆನಂದಮಯಿ ಆಶ್ರಮ ಕನಖಿಲದಲ್ಲಿತ್ತು. ಆನಂದಮಯಿ ಮಾತೆ ಬಂಗಾಲದವರು. ಅನೇಕ ಭಕ್ತರು ಹಾಗು ಅನುಯಾಯಿಗಳನ್ನು ಪಡೆದ ಜಗತ್ಪ್ರಸಿದ್ಧ ಅಧ್ಯಾತ್ಮಗುರು ಅವರಾಗಿದ್ದರು. ದೇಶದ ದೊಡ್ಡ ದೊಡ್ಡ ಧುರೀಣರು ಅವರಲ್ಲಿಗೆ ಹೋಗುತ್ತಾರೆ, ಆಶ್ರಮದಲ್ಲಿ ತಂಗುತ್ತಾರೆ. ನಾನು ಋಷಿಕೇಶದಲ್ಲಿದ್ದಾಗಲೇ ಒಂದೆರಡು ಸಂದರ್ಭಗಳಲ್ಲಿ ಆನಂದಮಯಿ ಮಾತೆಯ ದರ್ಶನಕ್ಕೆ ಹೋಗುವ ಅವಕಾಶ ಲಭಿಸಿತ್ತು. ಆದರೆ ನಾನು ನನ್ನ ಸಾಧನೆಯಲ್ಲಿ ಚ್ಯುತಿ ತಂದುಕೊಳ್ಳಲು ಬಯಸಲಿಲ್ಲ. ನನ್ನ ಸಾಧನೆಯಿಂದ, ಭಗವಂತನ ಭಕ್ತಿ ಸೇವೆಯಿಂದ, ನನಗೆ ಆತ್ಮಶಾಂತಿ ಲಭಿಸಿತ್ತು. ನನಗೆ ಎಲ್ಲಿಯೂ ಹೋಗಲು ಮನಸ್ಸಾಗುತ್ತಿರಲಿಲ್ಲ. ಪುನಃ ಮಾನಸಿಕ ವ್ಯತ್ಯಯಕ್ಕೆ ನಾನು ಅನವಶ್ಯವಾಗಿ ಅವಕಾಶ ಕೊಡಲು ಇಷ್ಟಪಡುತ್ತಿರಲಿಲ್ಲ. ನನ್ನ ಏಕಾಂತವು ನಾನು ಬಯಸಿದಂತೆ ವಿತ್ತಂತಾಗುತ್ತಿತ್ತು. ಪಂಜಾಬದಿಂದ ಬಂದಿದ್ದ ಶ್ರೀ ಪುಂಜಾಜಿ ಮಹಾರಾಜರು ಶ್ರೀ ವಿಶಲಾಶ್ರಮದಲ್ಲಿ ತಂಗಿದಾಗ ಅವರೊಂದಿಗಿನ ನಿಕಟ ಸಾನ್ನಿಧ್ಯ, ಸತ್ಸಂಗ ಮತ್ತು ಚರ್ಚೆಯಿಂದ ನನಗೆ ಅವರ ಅಧ್ಯಾತ್ಮ ಬೋಧನೆಯಲ್ಲಿ ತೃಪ್ತಿಯುಂಟಾಗಿತ್ತು. ಆಶ್ರಮವು ಪ್ರಕಟಿಸುತ್ತಿದ್ದ 'ನಿರ್ವಿಕಲ್ಪ' ಪತ್ರಿಕೆಗಾಗಿ ಅವರದೊಂದು ಸಂದರ್ಶನ ಪಡೆದು ಪ್ರಕಟಿಸಿಯಾಗಿತ್ತು. ಶ್ರೀಮಾತೆ ಆನಂದಮಯಿಯವರ ಬಗೆಗೆ ಅವರು ಒಮ್ಮೆ ಹೇಳುತ್ತ ಅವರ ಪ್ರಸಿದ್ಧಿ ಹಾಗು ಪ್ರಭಾವವನ್ನು ಪ್ರಶಂಸಿಸಿದ್ದರು. ಆಗಲೇ ಶ್ರೀ ಮಾತೆಯವರಲ್ಲಿ ನನಗೆ ದರ್ಶನಾಕಾಂಕ್ಷೆ ಹುಟ್ಟಿದುದು. ಶ್ರೀ ಪುಂಜಾಜಿ ಮಹಾರಾಜರು ಆಶ್ರಮದಲ್ಲಿದ್ದಾಗ ಶ್ರೀಮಾತೆಯ ದರ್ಶನಕ್ಕೆಂದು ಹೋಗಿ ಬಂದಿದ್ದರು. ಆಶ್ರಮದಲ್ಲಿದ್ದ ಇನ್ನು ಕೆಲವರು ಹಾಗು ಬಂದುಹೋಗುವವರು ಅವರ ದರ್ಶನಕ್ಕೆ ಹೋಗುತ್ತಿದ್ದರು. ನನಗೆ ಈಗ ಅವರ ದರ್ಶನಕ್ಕೆ ಅವಕಾಶ ಒದಗಿ ಬಂದಿತ್ತು. ಹುದ್ವಾರದಿಂದ ಕಾಲುನಡಿಗೆಯಲ್ಲಿ ಹೊರಟೆ. ಇದೊಂದು ಅಪೂರ್ವ ಅವಕಾಶವೇ ಆಗಿತ್ತು. ಏಕೆಂದರೆ ನನ್ನಂತೆ ಅವರ ದರ್ಶನಕ್ಕೆ ಹೊರಟ ಅನೇಕರೊಂದಿಗೆ ನಾನು ಸಾಗಿದ್ದೆ. ಆಗ ಅವರ ಜನ್ಮದಿನೋತ್ಸವ ಒಳ್ಳೆ ವಿಜೃಂಭಣೆಯಿಂದ ಸಾಗಿತ್ತು. ಅನೇಕ ಸಂತರು ಮಹಾರಾಜರು (ಆಧ್ಯಾತ್ಮಿಕ) ಮತ್ತು ವೇದಾಂತಿಗಳು ಹಾಗು ಇತರ ಪ್ರಸಿದ್ಧ ಅಧ್ಯಾತ್ಮ ವೃಂದದವರು ಸಮಾರಂಭದಲ್ಲಿ ಭಾಗವಹಿಸಿದ್ದರು. ಒಂದು ವಾರದ ಉತ್ಸವ ಆರಂಭವಾಗಿ ಒಂದೆರಡು ದಿನ ಕಳೆದಿತ್ತು. ನಿತ್ಯ ಪ್ರವಚನ, ಬೋಧೆ, ಉಪದೇಶ ಜರುಗುತ್ತಿದ್ದವು. ಮಂಡಲಾಧೀಶರ ವಿದ್ಯುನ್ಮಯ ಭಾಷಣ, ಗಾಯಕರ ಸುಶ್ರಾವ್ಯ ಸಂಗೀತ,

ಉತ್ಸುಕರ ಸಾಂಸ್ಕೃತಿಕ ಕಾರ್ಯಕ್ರಮ ಜರುಗುತ್ತಿದ್ದವು. ಶ್ರೀ ಆನಂದಮಯಿ ಈ ಕಾರ್ಯಕ್ರಮದ ನಿಮಿತ್ತ ತಮ್ಮ ಆಶ್ರಮದಿಂದ ಸಮಾರಂಭ ಹೂಡಿದ ಆಶ್ರಮದಲ್ಲಿ ತಂಗಿದ್ದರು. ಅವರೊಂದಿಗೆ ಅವರ ಇಡೀ ಪರಿವಾರವೇ ಹೊರಟು ಬಂದಿತ್ತು.

ದಾರಿಯಲ್ಲಿ ಹೊರಟವ ಕೇಳಿದೆ. "ಸ್ವಾಮಿ, ಇಲ್ಲಿ ಆನಂದಮಯಿ ಆಶ್ರಮವೆಲ್ಲಿ? ನಾನು ಅಲ್ಲಿ ಹೋಗಬೇಕಾಗಿದೆ."

"ಒಳ್ಳೆಯದಾಯಿತು. ಬನ್ನಿ, ನಾವೂ ಅಲ್ಲಿಗೇ ಹೊರಟಿದ್ದೇವೆ." ದಾರಿ ಸಾಗಿತು. ಅವರಲ್ಲಿ ಕೆಲವರು ಕಾವಿ ಧರಿಸಿದವರೂ ಇದ್ದರು. ಗೀತೆಯ ಬಗೆಗೆ ಅವರಲ್ಲಿ ಚರ್ಚೆ ನಡೆದಿತ್ತು. ದಾರಿ ಸವೆಸಿದಂತೆಯೆ ಅಭಿಪ್ರಾಯ ವಿನಿಮಯ. ಆನಂದಮಯಿ ಆಶ್ರಮಕ್ಕೆ ಹೋಗಿ ಬರುವವರು ನಿತ್ಯ ನೂರಾರು.

ಮಾತೆ ಆನಂದಮಯಿ ತಂಗಿದ ಆಶ್ರಮ ತಲುಪುತ್ತಲೇ ಸಮಾರಂಭದ ಕಾರ್ಯಕ್ರಮದ ನುಡಿ, ಶಬ್ದ ಧ್ವನಿವರ್ಧಕದ ಮೂಲಕ ಕೇಳಿ ಬಂತು. ನಾನು ಆಶ್ರಮದ ಆವಾರ ತಲುಪಿದೆ. ದೊಡ್ಡ ಬಯಲು. ಕಾಂಪೌಂಡಿನೊಳಗಡೆ ಬಯಲು ಮಂಟಪ. ಸಹಸ್ರ ಸಹಸ್ರ ಜನಸಮೂಹ ಆಸೀನರಾಗುವಷ್ಟು ವಿಶಾಲ ತಂಬೂ. ದ್ವಾರದಲ್ಲಿ ಪ್ರವೇಶ ಮುಕ್ತ. ನೀನಾರು? ಎಂದು ಕೇಳುವವರಿಲ್ಲ. ಇಲ್ಲವಾದರೆ ಇಪ್ಪತ್ತು ದಿನಗಳಿಗೆ ಮುಂಚೆಯೆ ಆಶ್ರಮದ ಅಪ್ಪಣೆ ಪಡೆಯಬೇಕು. ನನಗೆ ಅಂತಹ ಪೂರ್ವ ಅನುಮತಿ ಅವಶ್ಯವಿರಲಿಲ್ಲ. ಮಂಟಪದಲ್ಲಿ ಬೇಕಾದಷ್ಟು ಸ್ಥಳಾವಕಾಶವಿತ್ತು. ಹೋಗಿ ಒಂದು ಕಡೆ ಕುಳಿತೆ. ಸಂಸ್ಕೃತ ಶ್ಲೋಕಗಳ ಅರ್ಥವನ್ನು ಹಿಂದಿಯಲ್ಲಿ ವಿವರಿಸಿ ಹೇಳುತ್ತಿದ್ದರು. ಒಬ್ಬ ಕಾವಿಧಾರಿ ಸ್ವಾಮೀಜಿ, ಅನೇಕ ವಿದ್ವನ್ಮಣಿಗಳು, ಸಂತ ಶ್ರೇಷ್ಠರು ವ್ಯಾಸ ಪೀಠದಲ್ಲಿ ಉಚ್ಚಾಸನದಲ್ಲಿ ಮಂಡಿಸಿದ್ದರು. ಮಾತೆ ಆನಂದಮಯಿ ನನಗೆ ಕಾಣಿಸಲಿಲ್ಲ. ಪ್ರವಚನ ಭಗವದ್ಗೀತೆ ಕುರಿತಾಗಿತ್ತು. ಏಕನಿಷ್ಠೆಯಿಂದ ಎಲ್ಲರೂ ಕೇಳುತ್ತಿದ್ದರು. ಶ್ರೋತೃಗಳಿಗೆ ಎಲ್ಲ ಸೂಕ್ತ ವ್ಯವಸ್ಥೆ ಮಾಡಲಾಗಿತ್ತು. ಕುಡಿಯುವ ನೀರು ಬೇಕಾದರೆ ಇದ್ದಲ್ಲಿಯೇ ತಂದು ಹಂಚುತ್ತಿದ್ದರು ಸ್ವಯಂಸೇವಕರು. ನಾನೂ ನೀರು ಕುಡಿದೆ. ಅದೇನೋ ಸಮಾಧಾನದ ನಿಟ್ಟುಸಿರು ಬಿಟ್ಟೆ. ಆನಂದಮಯಿ ಮಾತೆ ಸಮಾರಂಭಕ್ಕೆ ಬರುತ್ತಾರೆಯೋ? ನಾನು ಅವರ ದರ್ಶನ ಮಾಡಬೇಕಿತ್ತು.

ಅಲ್ಲಿಂದ ಎದ್ದು ಬಂದೆ. ಸ್ವಾಗತ ಕಚೇರಿಗೆ ಹೋದೆ. "ಮಾತೆ ಆನಂದಮಯಿಯವರನ್ನು ಕಾಣಬಹುದೆ?"

ಆಶ್ರಮಮದಲ್ಲಿ ವಿಚಾರಿಸಬೇಕೆಂದು ಹೇಳಿದರು. ನಾನಲ್ಲಿಗೆ ಹೋದೆ.

"ಮಾತೆಯವರನ್ನು ಯಾವಾಗ ಕಾಣಬಹುದು?"

"ಈಗ ಅವರು ಉತ್ಸವದ ಗಡಿಬಿಡಿಯಲ್ಲಿದ್ದಾರೆ."

"ವಿರಾಮ ದೊರೆಯುವುದೇ?"

"ಈಗ ಆ ಸಂಭವವಿಲ್ಲ. ನೀವು ಉತ್ಸವ ಮುಗಿದ ನಂತರ ಅವರ ಆಶ್ರಮದಲ್ಲಿಯೇ ಕಾಣಬಹುದು. ಕನಿಷ್ಠ ಒಂದು ವಾರವಾದರೂ ನೀವು ಕಾಯಬೇಕು."

ನನಗೆ ನಿರಾಶೆಯೇನೂ ಆಗಲಿಲ್ಲ. ಮತ್ತೆ ಬಂದರಾಯಿತು ಎಂದು ಹೊರಟೆ.

"ನೀವು ಆಶ್ರಮದಲ್ಲಿ ಎಷ್ಟು ದಿನ ಇರುತ್ತೀರಿ?"

"ಕೇವಲ ಈ ಒಂದು ರಾತ್ರಿ ಮಾತ್ರ"

"ಏಕೆ ಬಂದದ್ದು?"

"ಶ್ರೀ ಆನಂದಮಯಿ ದರ್ಶನಕ್ಕೆ"

"ಒಳ್ಳೆಯದು. ಇರಿ."

ರಾತ್ರಿ ದೇವಪೂಜೆ. ದೇವ ಭಜನೆ. ರಾಮ ಲಕ್ಷ್ಮಣ, ಸೀತೆಯರ ಚಂದ್ರಶಿಲಾ ಮೂರ್ತಿಗಳ ಸುಂದರ ಅಲಂಕಾರ. ದೇವಿಯ ವೈಭವದ ಶೃಂಗಾರ. ಪರಮೇಶ್ವರನ ಭಕ್ತಿಯುತ ಪೂಜನದ ಪುಷ್ಪಾಲಂಕಾರ. ಭಕ್ತರ ಮನ ಸೆಳೆದು ಹೋಗುತ್ತಿತ್ತು. ಗಂಗಾ ತಟಾಕದ ಸುಂದರ ಪರಿಸರ. ವಿಶಾಲ ಪ್ರಾಂಗಣದಲ್ಲಿ ಆಶ್ರಮದ ಕಟ್ಟಡಗಳು, ಶಿಕ್ಷಣ ಕೇಂದ್ರಗಳು, ಕಾವೀಧಾರಿ ಆಶ್ರಮವಾಸಿಗಳ ಮೌನ ಉಪಸ್ಥಿತಿ. ಹೋಗಿ

ಬರುವ ಅತಿಥಿಗಳು. ಗೃಹಸ್ಥರು. ಸ್ತ್ರೀಯರು ಬಾಲಕರು, ಇತ್ಯಾದಿ. ನಾನೂ ಭಜನೆ. ಪ್ರಾರ್ಥನೆಯಲ್ಲಿ ಪಾಲ್ಗೊಂಡೆ. ನಂತರ ಗಂಗಾ ತಟಾಕದಲ್ಲಿ ಏಕಾಂತದಲ್ಲಿ ಕುಳಿತೆ. ಕತ್ತಲಾಗಿತ್ತು. ಉಪವನದ ಸೌಂದರ್ಯದ ಅನುಭವವಾಗುತ್ತಿತ್ತು. ಬದಿಯಲ್ಲಿ ಗಂಗಾಲಹರಿ. ಋಷಿಕೇಶದಲ್ಲಿದ್ದಾಗ ಪಕ್ಕದ ಯೋಗಶ್ರೀ ಪೀಠಕ್ಕೆ ನಾನು ಹೋಗುತ್ತಿದ್ದೆ. ಈ ಪೀಠದ ಸ್ವಾಮಿಗಳು (೧೦೮ ತೀರ್ಥ ಇತ್ಯಾದಿ ಬಿರುದು) ಯುರೋಪಿನಲ್ಲಿ. ಶಿಷ್ಯರಿಂದ ಆಶ್ರಮದ ಕಾರ್ಯಭಾರ. ನನಗೆ ಸ್ವಾಮಿಗಳನ್ನು ಕಾಣುವ ಆಸೆ. ಆಗಾಗ ನಾನು ಅಲ್ಲಿಗೆ ಹೋಗುತ್ತಿದ್ದೆ. ಬೆಳಗಾವಿಯವರೊಬ್ಬರು. ಅವರಲ್ಲಿ ದೀಕ್ಷೆ ಪಡೆದು ಅಲ್ಲಿದ್ದರು. ಅವರು ಮಾತನಾಡುವಾಗ, ಹೇಳುತ್ತಿದ್ದರು, "ಗಂಗಾ ಲಹರಿಯಲ್ಲಿ 'ಓಂ' ಪ್ರಣವ ನಾದವಿದೆ. ಕಿವಿ ಆಲಿಸಿದರೆ ಕೇಳಿಸುತ್ತದೆ" ಎಂದು. ಅಲ್ಲಿ ನಿಂತು ನೋಡಿದರೆ ಗಂಗೆಯ ಸುಂದರ ದೃಶ್ಯ. ಅದರ ಭೋರ್ಗರೆತದ ನಿನಾದ ಸದಾ ಕೇಳಿಸುತ್ತದೆ. ರಾತ್ರಿ ನಾನು ಇರುತ್ತಿದ್ದ ಕೋಣೆಯಲ್ಲಿ ಗಂಗೆಯ ನಿನಾದ ತಪ್ಪದೆ ಕೇಳಿಸುತ್ತಿತ್ತು. ಚಲನಚಿತ್ರದ ಹಿನ್ನಲೆ ಸಂಗೀತದಂತೆ ಗಂಗೆಯ ಭೋರ್ಗ-ರೆತ ಕೇಳಿಸುತ್ತಿರುತ್ತದೆ. ಗಂಗೆಯ ಒಂದು ಬಗೆಯ ಮೋಹವೇ ನನ್ನನ್ನಾವರಿಸಿಕೊಂಡಿದೆ. ನನಗೆ ಮಾತ್ರವೇಕೆ? ಅಸಂಖ್ಯಾತ ಗಂಗಾಪ್ರಿಯರಿದ್ದಾರೆ. ಗಂಗೆಗಾಗಿಯೇ ಬಂದಿದ್ದಾರೆ. ಗಂಗೆಗಾಗಿಯೇ ನೆಲಸಿದ್ದಾರೆ. ಗಂಗೆಯಲ್ಲಿಯೇ ಕೊನೆಗೊಳ್ಳಬಯಸುತ್ತಾರೆ. ನಾವಿದ್ದ ಆಶ್ರಮದಲ್ಲಿ ಗ್ವಾಲಿಯರಿನಿಂದ ಬಂದ ಒಬ್ಬ ಸದ್ಗೃಹಸ್ಥ ಇದ್ದರು. ಅವರು ಗಂಗೆಯ ನಿಮಿತ್ತದಿಂದಲೇ ಬೇಸಿಗೆಯ ಆರು ತಿಂಗಳು. ಅಲ್ಲಿರುತ್ತಿದ್ದರು. ಗಂಗೆಯಲ್ಲಿ ಮೀಯುವುದೆಂದರೆ ಬಹು ಆನಂದ. ಗಂಗಾ ಪ್ರವಾಹದಲ್ಲಿ ನಿತ್ಯ ಈಜು ಹೊಡೆಯುವುದು ಅವರಿಗೆ ಬಹು ಪ್ರೀತಿ, ಅಭಿಮಾನ.

ಉಪವನದ ಸಿಮೆಂಟಿನ ಬೆಂಚೊಂದರ ಮೇಲೆ ಒಬ್ಬನೇ ಕುಳಿತಿದ್ದು ಗಂಗೆಯ ಮೊರೆತ ಕೇಳುತ್ತಿದ್ದಂತೆ ನನಗೆ ಉಳಿದೆಲ್ಲ ವಿಚಾರ ಮರೆತು ಹೋಯಿತು. ತಲ್ಲೀನನಾಗಿ ಕುಳಿತುಬಿಟ್ಟೆ. ಆಶ್ರಮವಾಸಿ ಸಾಧು ಒಬ್ಬ ಬಂದು ನನ್ನನ್ನು ಊಟಕ್ಕೆ ಕರೆದುಕೊಂಡು ಹೋದ. ಅಡುಗೆ ಮನೆಯ ಪಡಸಾಲೆಯಲ್ಲಿ ಸ್ವಾಮೀಜಿಯನ್ನು ಸುತ್ತುವರಿದು ಹತ್ತಿಪ್ಪತ್ತು ಜನ ಕುಳಿತಿದ್ದರು. ಒಬ್ಬ ಸಂತ ಮಹಿಳೆ ಹಾಗೂ ಇನ್ನಿತರ ಮಹಿಳೆಯರೂ ಇದ್ದರು. ಇಳಿದನಿಯಲ್ಲಿ ಗೋಷ್ಠಿ ನಡೆದಿತ್ತು. ಸತ್ಸಂಗ ದಾಟಿ ಹೋಗಲಿಚ್ಛಿಸದ ನನಗೆ ಅದರಲ್ಲಿ ಭಾಗವಹಿಸುವ ಪ್ರಮೇಯವಿರಲಿಲ್ಲ. ಎಷ್ಟೋ ಜನ ಬರುತ್ತಾರೆ. ಮಾತನಾಡುತ್ತಾರೆ. ಸಲಹೆ ಪಡೆಯುತ್ತಾರೆ. ಆತ್ಮಗತ ವಿಚಾರದಲ್ಲಿ ತೊಡಗಿರುತ್ತಾರೆ. ಸಾಧುವಿನ ಪ್ರೇರಣೆಯಂತೆ ಆತನನ್ನು ಹಿಂಬಾಲಿಸಿ ಅಡುಗೆ ಮನೆಗೆ ಹೋದೆ. ತಟ್ಟೆ. ಲೋಟ ಹಿಡಿದು ನಿಂತು ಸಾಲಿನಲ್ಲಿ ಎಲ್ಲರಂತೆ ನನ್ನ ಪಾಲಿನ ರೊಟ್ಟಿ ಪಡೆದುಕೊಂಡು ಒಂದೆಡೆ ಕುಳಿತು ಊಟ ಮಾಡಿದೆ. ಅವರವರ ತಟ್ಟೆಗಳನ್ನು ಅವರವರೇ ತೊಳೆದು ಸ್ವಸ್ಥಾನದಲ್ಲಿರಿಸಬೇಕು. ಅದು ನಿಯಮ.

ಊಟ ಮುಗಿಸಿ ಹೊರಬಂದಾಗಲೂ ಸತ್ಸಂಗ ನಡೆದಿತ್ತು. ನಾನು ಕೊಂಚ ಹೊತ್ತು ಕುಳಿತು ಮರಳಿದೆ. ಹೋಗುವಾಗ ಸ್ವಾಮೀಜಿಗೆ, ಅವರ ಲಕ್ಷ್ಯ ಸೆಳೆಯುವಂತೆ ನಮಸ್ಕರಿಸಿದೆ. ಮೆಲ್ಲನೆ ಜಾರಿದೆ. ಲಕ್ಷ್ಯಕ್ಕೆ ಬಿದ್ದರೆ ಯಾರು. ಏನು. ಎತ್ತ ವಿಚಾರಿಸುತ್ತಾರೆ.

ಊಟವಾಗಿತ್ತು. ಇನ್ನು ಮಲಗಲು ತಾಣ? ಎಲ್ಲಿಯಾದರೂ ಮಲಗಿ ನಿದ್ರಿಸಬಹುದು. ಒಳ್ಳೇ ಬೇಸಿಗೆ. ಅಲ್ಲಿಂದ ನಾನು ಮುಂದೆ ಹೊರಟೆ. ನಾಲ್ಕಾರು ಆಶ್ರಮಗಳನ್ನು ದಾಟಿದೆ. ಕತ್ತಲು. ಯಾವ ಆಶ್ರಮವೋ ಏನೊ! ದೊಡ್ಡ ಗೇಟು ದಾಟಿ ದೊಡ್ಡ ಕುಟೀರದ ಬಳಿ ಬಂದೆ. ಅಲ್ಲಿ ಯಾರೋ ನಿಂತಿದ್ದರು. ನಿರ್ಜನ ಪ್ರದೇಶ. ನನಗೆ ಬೇಕಾದುದೂ ಅದೇ.

"ನನಗೆ ಇಲ್ಲಿ ಮಲಗಲು ಸ್ಥಳ ಕೊಡುವಿರಾ?"

"ಹೋಗಿ ಅಲ್ಲಿ. ಗಂಗಾ ತೀರದಲ್ಲಿ ಮಲಗಿಕೊಳ್ಳಿ ... ಎಲ್ಲಿಂದ ಬಂದದ್ದು?"

"ಋಷಿಕೇಶದಿಂದ. ಆನಂದಮಾತೆಯ ದರ್ಶನಕ್ಕೆಂದು."

"ಒಳ್ಳೆಯದು. ಅಲ್ಲಿ ಹೋಗಿ, ಅಲ್ಲಿ ಒಬ್ಬ ಸಂತ ನಿದ್ರಿಸುತ್ತಿದ್ದಾನೆ. ಗಂಗೆಯ ತೀರದಲ್ಲಿ ನಿಮಗೆ ಬೇಕಾದಷ್ಟು ಸ್ಥಳವಿದೆ."

ನಾನು ಮುಂದೆ ಸಾಗಿದೆ. ಆಶ್ರಮಕ್ಕೆ ಸೇರಿದ ಗಂಗಾ ಘಾಟ ತಲುಪಿದೆ. ಸಿಮೆಂಟಿನ ಸಾಲು ಬೆಂಚುಗಳು. ಸಾಧುವೊಬ್ಬ ಅಲ್ಲಿ ಮಲಗಿದ್ದ. ವಿಶಾಲ ಪಾವಟಿಗೆಗಳನ್ನಿಳಿದು ಒಂದು ಬೆಂಚಿನ ಮೇಲೆ ಕುಳಿತೆ. ಬೆಳದಿಂಗಳಿನಲ್ಲಿ ಗಂಗೆ ಶಾಂತಳಾಗಿ ಪ್ರವಹಿಸುತ್ತಿದ್ದಳು. ಇನಿತೂ ಶಬ್ದವಿಲ್ಲ. ಇಪ್ಪತ್ನಾಲ್ಕು ವರ್ಷಗಳ ಹಿಂದೆ ತುಂಗಾ ನದಿಯ ದಂಡೆಯ ಮೇಲೆ ಬೆಳದಿಂಗಳಿನಲ್ಲಿ ಬಹು ಹೊತ್ತು ಕಾಲ ಕಳೆಯುತ್ತಿದ್ದುದು ನೆನಪಿಗೆ ಬಂತು. ನಾಲ್ಕು ವರ್ಷ ಬಹುಶಾಂತಿಯಿಂದ ಕಾಲಕಳೆದಿದ್ದೆ, ದೇಶನೂರು ದ್ವೀಪದಲ್ಲಿ. ಆಗಾಗ ಗೆಳೆಯರೆಲ್ಲಾ ಕೂಡಿ ವಿಹಾರದಲ್ಲಿ ತೊಡಗಿರುತ್ತಿದ್ದೆವು. ಉಪವನದ ಮರಳಿನ ರಾಶಿಯಲ್ಲಿ ಬೆಳದಿಂಗಳ ರಾತ್ರಿ ಕಳೆಯುತ್ತಿದ್ದೆವು. ವಿಜಯನಗರದ ಶ್ರೀಕೃಷ್ಣದೇವರಾಯನು ತುಂಗಭದ್ರೆಗೆ ಏಳು ಸುತ್ತಿನ ಅಣೆಕಟ್ಟು ಕಟ್ಟಿಸಿದ್ದಾನೆ. ರಭಸದಿಂದ ಹರಿಯುವ ತುಂಗಭದ್ರೆ ಏಳು ಸುತ್ತಿನಲ್ಲಿ ಹರಿದು ಶಾಂತಳಾಗಿ ನಿಂತಿದ್ದಾಳೆ. ಸರೋವರವಾಗಿ, ಅಲ್ಲಿಂದ ಸಸ್ಯಶ್ಯಾಮಲೆಯಾಗಿ ಕಂಗೊಳಿಸಿದ್ದಾಳೆ ಕಣ್ಣೋಟ ಹರಿಯುವವರೆಗೆ. ತುಂಗಭದ್ರೆಯ ಸರೋವರದಲ್ಲಿ ಮೀಯಲು ಆಗಾಗ ನಾವು ಹೋಗುತ್ತಿದ್ದುದುಂಟು. ಈಗ ನನ್ನ ಕಣ್ಣಿಗೆ ಗಂಗೆಯದು ಅದೇ ನೋಟ. ಹಾಗೆಯೇ ನೋಡುತ್ತ ಕುಳಿತೆ. ನಿದ್ರೆ ಬಂತು. ಹಾಗೆಯೆ ಬೆಂಚಿನ ಮೇಲೆ ಒರಗಿದೆ. ನಿದ್ರೆ ಆವರಿಸಿತು.

ಎಚ್ಚರವಾದಾಗ ರಾತ್ರಿ ಎರಡು ಗಂಟೆ. ಅಲ್ಲಿ ಮಲಗಿದ್ದ ಸಂತ ಗಂಗಾ ಘಾಟಿನಲ್ಲಿ ಕಸ ಉಡುಗ–ತೊಡಗಿದ್ದ.

"ಹರಿಯೋಂ ಸ್ವಾಮೀಜಿ."

"ಹರಿಯೋಂ..."

"ಎಲ್ಲಿಂದ ಬಂದಿರಿ?"

ಸ್ವಾಮೀಜಿಗೆ ನಾನು ಹೇಳಿದೆ.

"ನಿಮಗೆ ನಿದ್ರೆಯ ತೊಂದರೆಯಾಯಿತೇನೋ?"

"ಇಲ್ಲ, ಹಾಗೇನೂ ಇಲ್ಲ."

"ನೋಡಿ, ನಾನು ನಿತ್ಯ ಈ ಸಮಯಕ್ಕೆ ಎದ್ದು ಈ ಸಾಧನೆಯಲ್ಲಿ ತೊಡಗುತ್ತೇನೆ. ಸಾಧನೆಗೆ ಇದು ಬಹು ಉತ್ಕೃಷ್ಟ ವೇಳೆ. ಯಾರ ಉಪಟಳ, ಆತಂಕವಿರುವುದಿಲ್ಲ. ಮೈ ಕೆಲಸ ಮಾಡುತ್ತದೆ. ಮನಸ್ಸು ಭಗವಂತನನ್ನು ಧೇನಿಸುತ್ತದೆ."

"ನಿಜ."

ಋಷಿಕೇಶದಲ್ಲಿದ್ದಾಗ ನನಗೆ ಬೆಳಗ್ಗೆ ಮೂರು ಗಂಟೆಗೆ ಎಚ್ಚರವಾಗಿ ಬಿಡುತ್ತಿತ್ತು. ವಿಶೇಷವಾಗಿ ಚಳಿಗಾಲದಲ್ಲಿ ಬಹು ಕಷ್ಟ. ಬೇರೆ ದಿನಗಳಲ್ಲಿ ಧ್ಯಾನಕ್ಕೆ ಯೋಗ್ಯ ಹಾಗು ಸಾಕಷ್ಟು ನಿರಾತಂಕ ಸಮಯ ದೊರೆಯುತ್ತಿತ್ತು. ಬೆಳಗಿನ ಸಮಯ ಬಹಳ ಅಮೂಲ್ಯ. ಶ್ರೀ ಗುರುದೇವ ಆಶ್ರಮದಲ್ಲಿದ್ದಾಗಲೇ ನನಗೆ ಈ ಅಭ್ಯಾಸವಾಗಿ ಹೋಗಿತ್ತು. ಆದರೆ ಹಿಮಾಲಯದ ಚಳಿಯಲ್ಲಿ ತೊಂದರೆಯಾಗುತ್ತಿತ್ತು. ಒಮ್ಮೆ ಎಚ್ಚರವಾದರೆ ನಿದ್ರೆಯೇ ಬರುತ್ತಿರಲಿಲ್ಲ. ನಾನೂ ದೇವಾಲಯದ ಆವಾರದಲ್ಲಿ ಮರದಡಿ ಉದುರಿದ ತರಗೆಲೆಗಳನ್ನು ಬಳಿದು ಒಂದು ಕಡೆ ಸೇರಿಸುತ್ತಿದ್ದೆ. ಅಗ್ನಿ ಹೊತ್ತಿಸಿ ಚಳಿ ಕಾಯಿಸುತ್ತ ಕುಳಿತುಬಿಡುತ್ತಿದ್ದೆ. ನಿಶಾಂತ ರಾತ್ರಿ. ಗಂಗೆಯ ಪ್ರವಾಹದ ವಿನಾ ಬೇರೆ ಶಬ್ದವಿಲ್ಲ. ಆಗಾಗ ವನ್ಯ ಜಂತುಗಳ ಕೂಗಾಟ.

ವಿಶಾಲ ಘಾಟಿನ ಕಸವನ್ನು ಗುಡಿಸತೊಡಗಿದ ಸಾಧು. ನಾನೂ ಎದ್ದು ಉಡುಗಲೇ ಅನಿಸಿತು. ಆದರೆ ನಾನು ಏಳಲಿಲ್ಲ. ಅದೇಕೋ ನನಗೆ ಸಮಯ ಸ್ಫೂರ್ತಿ ಹಿಡಿಸುತ್ತಿರಲಿಲ್ಲ. ಸೇವೆ ಮಾಡಬೇಕಾದಲ್ಲಿ ಸೇವೆ ಮಾಡಿದರೆ ಅದು ಸೇವೆಯ ಲಕ್ಷಣ. ಅಸ್ಫೂರ್ತಿಯ ಸೇವೆಯಿಂದ ಆಗ ಬೇಕಾದುದೇನು? ನನ್ನನ್ನು ನಾನೇ ವಂಚಿಸಿಕೊಳ್ಳಲು ತಯಾರಿರಲಿಲ್ಲ.

ಸಾಧು ಗುಡಿಸಬೇಕಾದುದು ಇನ್ನೂ ಬಹಳಷ್ಟಿತ್ತು. ನಾನು ಮತ್ತೆ ಮಲಗಿದೆ. ಮುಂಜಾನೆ ಎಚ್ಚರವಾದಾಗ ಎಲೆಗಳ ಒಂದು ದೊಡ್ಡ ರಾಶಿ ಹಾಕಿ ಅಗ್ನಿ ಹೊತ್ತಿಸಿದ್ದ ಸಾಧು. ರಾತ್ರಿಯನ್ನು ಗಂಗಾಘಾಟಿನಲ್ಲಿ ಕಳೆದು ಹಗಲು ಭಿಕ್ಷೆ ಬೇಡುತ್ತಿದ್ದ.

ಹಿಂದಿನ ರಾತ್ರಿಯೇ ಹೇಳಿದ್ದ ಸಾಧು: "ಬೆಳಗ್ಗೆ ಎದ್ದ ಕೂಡಲೇ ಅತ್ತ ಕಡೆ ಬನ್ನಿ. ಚಹ ಮಾಡಿರುತ್ತೇನೆ," ಎಂದು.

ಬೆಳಗಾಗಿತ್ತು. ಸಾಧು ಹೇಳಿದ ಕಡೆ ನಾನು ಹೋದೆ. ಗಂಗೆಯಲ್ಲಿ ಮುಖ ತೊಳೆದಾಗಿತ್ತು. ಸಾಧು ಚಹದ ತಯಾರಿ ನಡೆಸಿದ್ದ. ಜೊತೆಗೆ ರಾತ್ರಿ ನನಗೆ ಅಲ್ಲಿ ಮಲಗಲು ಅನುವು ಮಾಡಿ ಕೊಟ್ಟ ವ್ಯಕ್ತಿಯೂ ಅಲ್ಲಿದ್ದ.

"ಆನಂದಮಯಿ ಆಶ್ರಮಕ್ಕೆ ಏಕೆ ಹೊರಟಿದ್ದೀರಿ?"

"ನನಗೆ ಕೆಲವು ದಿನಗಳ ಸಾಧನೆ ಮಾಡಬೇಕಾಗಿದೆ"

"ಹಾಗಾದರೆ 'ಸಾಧನ ಸದನ'ಕ್ಕೆ ಏಕೆ ಹೋಗಬಾರದು?"

ಸಾಧನ ಸದನದ ಬಗೆಗೆ ನಾನು ಕೇಳಿರಲಿಲ್ಲ. ಅಲ್ಲಿಯ ಚಟುವಟಿಕೆಗಳ ಕುರಿತಾಗಿ ಕೇಳಿದೆ. ಒಂದೊಂದು ಆಶ್ರಮದ ತತ್ತ್ವ, ನೀತಿ ಒಂದೊಂದು ತೆರನಾದದ್ದು.

ಸಾಧುವೂ ಅದನ್ನೇ ಹೇಳಿದ. ಮಾರ್ಗದರ್ಶನ ಮಾಡಿದ. ನಾನು 'ಸಾಧನ ಸದನ'ದ ದಾರಿ ಹಿಡಿದೆ.

ಸಾಧುಗಳದೂ ಬಹು ವಿಚಿತ್ರ. ಒಬ್ಬೊಬ್ಬರದು ಒಂದೊಂದು ತೆರ. ಗಂಗಾತಟಾಕದ ಸಾಧು ನನಗೆ ಚಹ ಕೊಟ್ಟು ಆದರಿಸಿ 'ಸಾಧನ ಸದನ'ದ ದಾರಿ ತೋರಿಸಿದ್ದ. ಹಿಂದಿನ ದಿನವೇ ಒಬ್ಬ ಕಾವೀಧಾರಿ ನನ್ನ ಮಾತನ್ನು ಕಿವಿಗೊಟ್ಟು ಆಲಿಸಿ, ಇನ್ನೇನು ನನಗೆ ಯಾವುದಾದರೂ ಆಶ್ರಮವನ್ನು ತಲುಪಲು ಸಹಾಯ ಮಾಡುತ್ತಾನೋ ಏನೋ ಎನ್ನುವಂತೆ ಕೆಲ ಕ್ಷಣಗಳವರೆಗೆ ನನ್ನೊಂದಿಗೆ ನಿಂತು, ಅವನ ಸಂಗಡಿಗರು ಬಂದು ಸೇರಿದೊಡನೆಯೇ ಹೊರಟು ಬಿಟ್ಟ.

ನಾನು ಪುನಃ ಕೇಳಿದೆ "ಸ್ವಾಮೀಜಿ, ಯಾವುದಾದರೂ ಆಶ್ರಮದ ದಾರಿ ತೋರಿಸುತ್ತೀರಾ?"

"ಇಲ್ಲ, ನನಗೆ ಗೊತ್ತಿಲ್ಲ. ಮತ್ತೆ ಯಾರನ್ನಾದರೂ ಕೇಳು."

ನಾನು ಏನೂ ಹೇಳಲಿಲ್ಲ. ಆಶ್ಚರ್ಯವೆಂದರೆ ನಾನು 'ಸಾಧನ ಸದನ'ದಲ್ಲಿ ಕಂಡುದು ಅದೇ ಸಾಧುವನ್ನು! ನಾನು ಊಟಕ್ಕೆ ಕುಳಿತ ಪಂಕ್ತಿಯಲ್ಲೇ ಆ ಸಾಧುವೂ ಕುಳಿತಿದ್ದ. ಮತ್ತೆ ನಾನು ಮಾತನಾಡಲಿಲ್ಲ. ✡



ಪ್ರೇಮ : ಶಹಾಜಹಾನ್ ಮಾದರಿ

ಆಫ್ರೊ - ಯುರೇಶಿಯನ್ ಮೂಲದ ಅಮೇರಿಕೆಯ ನಾಗರಿಕನೊಬ್ಬನಿಗೆ "ತಾಜಮಹಲಿನ ಮೆಟ್ಟಿಲ ಮೇಲೆ ಮದುವೆ"ಯಾಗುವ ಆಶೆಯಂತೆ. ಕೆಲವೇ ದಿನಗಳಲ್ಲಿ ತಾನು ಮದುವೆಯಾಗುವುದಾಗಿಯೂ ಆತ ತಿಳಿಸಿದ್ದಾನೆ. ಆತ ತನ್ನ ಪ್ರೇಮವು 'ಪ್ರೇಮದ ದೊರೆ' ಶಹಾಜಹಾನನ ಮಾದರಿಯದೆಂದು ಹೇಳಿಕೊಳ್ಳುತ್ತಾನೆ.

ತನಗೆ ಅನುರೂಪಳಾದ ವಧು ಬೇಕೆಂಬ ಬಗ್ಗೆ ಶಿಕಾಗೋವಿನ ೫೦ ಕೋಟಿ ಪ್ರಸಾರದ ಪತ್ರಿಕೆಯಲ್ಲಿ ಜಾಹೀರಾತು ನೀಡಿದ. ಆದರೆ ಈವರೆಗೂ ಆತನಿಗೆ "ಮುಮ್ತಾಜ್" ದೊರೆತಿಲ್ಲ. ಆತನಿಗೆ ಈಗ ೩೫ ವರ್ಷ. ೧೫ ವರ್ಷಗಳಿಂದಲೂ ಅಮೇರಿಕೆಯ ಅಂಚೆ ಇಲಾಖೆಯಲ್ಲಿ ಕೆಲಸ.

ಒಂದುವೇಳೆ ತನಗನುರೂಪಳಾದ ಕನ್ಯೆ ಅಮೇರಿಕೆಯಲ್ಲಿ ದೊರೆಯದೇ ಹೋದರೆ "ತಾಜಮಹಲಿನ ನಾಡು" ಭಾರತಕ್ಕೇ ಬಂದು ಕನ್ಯಾನ್ವೇಷಣೆ ನಡೆಸಿ ಯೋಗ್ಯ ವಧುವಿನೊಂದಿಗೆ ಮದುವೆಯಾಗಿ ಅಲ್ಲಿಯೇ ಉಳಿಯುವುದಾಗಿಯೂ ಆತ ಸಾರಿದ್ದಾನೆ.


తంత్ర
Patil

ವೃದ್ಧ ವೈದ್ಯ ಮತ್ತು ಒಬ್ಬ ತರುಣಿ–ಅವನ ಪೇಷಂಟ್—ಅಗ್ನಿಕುಂಡದ ಪಕ್ಕದಲ್ಲಿ ಮಾತಾಡುತ್ತ ಕುಳಿತಿದ್ದರು. ಹೇಳಬೇಕೆಂದರೆ, ಅವಳಿಗೆ ಅಂಥ ಹೇಳಿಕೊಳ್ಳುವ ಕಾಯಿಲೆಯೇನೂ ಆಗಿರಲಿಲ್ಲ. ಆದರೆ ಹೆಂಗಳೆಯರನ್ನು ಆಗಾಗ್ಗೆ ಬಾಧಿಸುವ–ಮದುವೆಯಾದ ಹೊಸದರಲ್ಲಿ ಹೆಂಗಳೆಯರಿಗೆ ಉಂಟಾಗುವ ಸುಸ್ತು, ನರದೌರ್ಬಲ್ಯ, ರಕ್ತಹೀನತೆಯಂಥ–ಒಂದು ರೀತಿಯ ಅಸ್ವಸ್ಥತೆ ಅವಳಲ್ಲಿತ್ತು.

ಖುರ್ಚಿಯಲ್ಲಿ ಆರಾಮವಾಗಿ ಒರಗಿಕೊಂಡು ಅವಳು ಮಾತನಾಡುತ್ತಿದ್ದಳು.

'ಇಲ್ಲ ಡಾಕ್ಟರ್,' ಅವಳು ಹೇಳಿದಳು, 'ತನ್ನ ಗಂಡನನ್ನೇ ವಂಚಿಸುವ ಹೆಂಗಸನ್ನು ಅರ್ಥ [illegible] [illegible] ಹೇಳಿಕೆಯನ್ನು [illegible] ದಿನದ ಕೋಪತಾಪಗಳನ್ನೂ [illegible] ವಾಸನೆಯನ್ನೂ [illegible] ಹಂಚಿಕೊಳ್ಳುವುದೇ ನಿಜವಾದ ವೈವಾಹಿಕ ಜೀವನ. ಮದುವೆಯಾಗದೆ ಯಾವ ಹೆಣ್ಣೂ ಗಾಢವಾಗಿ ಪ್ರೇಮಿಸಲಾರಳು. ಅವಳನ್ನು ಒಂದು ಮನೆಗೆ ಹೋಲಿಸುವುದಾದರೆ, ಗಂಡ ಗಾರೆಯನ್ನು ಒಣಗಿಸುವವರೆಗೂ ಹೆಂಡತಿ ವಾಸಯೋಗ್ಯಳಲ್ಲ.

'ಇಂಥ ಸಂದರ್ಭಗಳಲ್ಲಿ ಸೋಗು ಹಾಕುವುದು ಹೆಂಗಸರಿಗೇನೂ ಕಷ್ಟವಾಗುವುದಿಲ್ಲ. ಬಹಳ ನಯವಾಗಿ [illegible]

ಮೂಲ :
ಗಾಯ್ ದ ಮೊಪಾಸಾ

ಕನ್ನಡಕ್ಕೆ :
ಜಯಪ್ರಕಾಶ ಟಿ.

ಮಾಡಿಕೊಳ್ಳಲು ನನ್ನಿಂದ ಎಂದೂ ಸಾಧ್ಯವಾಗದು. ತನ್ನ ಗಂಡನನ್ನು ಪ್ರೀತಿಸದೆ, ತಾನು ಮಾಡಿದ ಆಣೆ– ಪ್ರಮಾಣಗಳನ್ನು ಗಮನದಲ್ಲಿಟ್ಟುಕೊಳ್ಳದೆ ತನ್ನನ್ನು ತಾನೇ ಬೇರೆ ಒಬ್ಬನಿಗೆ ಹೇಗೆ ಒಪ್ಪಿಸಿಕೊಳ್ಳುತ್ತಾಳೆ? ಬೇರೆಯವರ ಕಣ್ಣಿಗೆ ಮಣ್ಣೆರಚಿ ತನ್ನ ವ್ಯವಹಾರವನ್ನು ಬಚ್ಚಿಟ್ಟುಕೊಳ್ಳಲು ಹೇಗೆ ಸಾಧ್ಯ? ಮೋಸ–ವಂಚನೆಗಳ ಮಧ್ಯೆ ಪ್ರೇಮಿಸಲು ಹೇಗೆ ಸಾಧ್ಯ?'

ಡಾಕ್ಟರ್ ಮುಗುಳ್ನಕ್ಕ.

'ಓಹ್, ಅದೇನು ಬಹಳ ಸುಲಭ. ಒಬ್ಬ ಹೆಣ್ಣು ಅಡ್ಡದಾರಿ ಹಿಡಿಯುವ ನಿರ್ಧಾರ ಮಾಡಿಬಿಟ್ಟರೆ ಅಂಥ ಚಿಕ್ಕ ಪುಟ್ಟ ಸಂಗತಿಗಳನ್ನೆಲ್ಲ ಮರೆತುಬಿಡುತ್ತಾಳೆ. ಇನ್ನೂ ಸ್ಪಷ್ಟವಾಗಿ ಹೇಳುವುದಾದರೆ, ವೈವಾಹಿಕ ಜೀವನದಲ್ಲಿ ಲೈಂಗಿಕ ಅನುಭವ, ನಿರಾಶೆ ಮೊದಲಾದವುಗಳನ್ನು ಅನುಭವಿಸಿದ ಹೆಂಗಸರು ಅದ್ಭುತ ಸುಳ್ಳುಗಾರ್ತಿಯರು. ಅಷ್ಟೇ ಅಲ್ಲ, ಎಂಥ ಕಷ್ಟ ಪರಿಸ್ಥಿತಿಯಲ್ಲಾದರೂ ಸರಿ, ತುಂಬ ಜಾಣತನದಿಂದ ಪಾರಾಗಿಬಿಡುತ್ತಾರೆ.'

ಅವನ ಮಾತನ್ನು ನಂಬಲು ಅಥವಾ ಒಪ್ಪಿಕೊಳ್ಳಲು ಅವಳು ಸಿದ್ಧವಾಗಿದ್ದಂತೆ ಕಾಣಲಿಲ್ಲ.

'ಇಲ್ಲ ಡಾಕ್ಟರ್,' ಅವಳು ಹೇಳಿದಳು, 'ಅಪಾಯಕಾರಿ ಪರಿಸ್ಥಿತಿಯಲ್ಲಿ ಏನು ಮಾಡಬೇಕು ಎಂದು ಅನಂತರ ಯಾರೂ ಯೋಚಿಸುವುದಿಲ್ಲ. ಅಲ್ಲದೆ ಇಂಥ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಳ್ಳುವವರು ಗಂಡಸರಿಗಿಂತ ಹೆಂಗಸರೇ ಹೆಚ್ಚು.'

ಡಾಕ್ಟರ್ ತನ್ನ ಕೈ ಚೆಲ್ಲಿದ.

'ಅಂತಹ ಪರಿಸ್ಥಿತಿ ಎದುರಾದ ನಂತರ ಎಂದು ಹೇಳುತ್ತೀರಿ; ನಾವು ಗಂಡಸರು ಉತ್ಸುಕ–

ರಾಗುವುದು ಅಂಥ ಘಟನೆ ಸಂಭವಿಸಿದ ನಂತರವೇ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ನೀವು, ಹೆಂಗಸರು…ಇಲ್ಲಿ ನೋಡು, ಶಂಕಿಸಲು ಸಾಧ್ಯವೇ ಇಲ್ಲದಂತೆ ಇದ್ದ ನನ್ನ ಒಬ್ಬ ರೋಗಿಯ ಬದುಕಿನಲ್ಲಿ ನಡೆದ ಘಟನೆಯನ್ನು ಹೇಳುತ್ತೇನೆ ಕೇಳು.

'ಈ ಘಟನೆ ನಡೆದದ್ದು ಒಂದು ಚಿಕ್ಕ ನಗರದಲ್ಲಿ. ಒಂದು ರಾತ್ರಿ. ಆಗ ತಾನೇ ಮಲಗಿದ್ದ ನನಗೆ ಮೊದಲ ಸುತ್ತಿನ ಗಾಢವಾದ ನಿದ್ರೆ. ಬೆಂಕಿಯ ಅಪಘಾತ ಸಂಭವಿಸಿದುದನ್ನು ಸೂಚಿಸಲು ಇಡೀ ನಗರದ ಎಲ್ಲ ಗಂಟೆಗಳೂ ಇದ್ದಕ್ಕಿದ್ದಂತೆ ಬಾರಿಸತೊಡಗಿದಂತೆ ಕನಸು ಕಂಡೆ. ಕೂಡಲೇ ಎಚ್ಚರವಾಯಿತು. ಹಾಗೆ ಶಬ್ದ ಮಾಡಿದ್ದು ನಮ್ಮ ಮನೆಯ ಕರೆಗಂಟೆ ಎಂಬುದು ಎದ್ದ ನಂತರ ತಿಳಿಯಿತು. ಸೇವಕ ಏಳದಿದ್ದುದನ್ನು ಗಮನಿಸಿ, ನಾನೇ ಉತ್ತರ ಕೊಟ್ಟೆ. ಕೂಡಲೇ ರಾತ್ರಿಯ ನೀರವತೆಯನ್ನು ಕಲಕುವಂಥ ಬಾಗಿಲು ಬಡಿಯುವ ಮತ್ತು ಅವಸರದ ಹೆಜ್ಜೆಯ ಸದ್ದು ಕೇಳತೊಡಗಿತು. ಆಗ ಜೀನ್ ನನ್ನ ಕೈಗೆ ಒಂದು ಚೀಟಿ ಕೊಟ್ಟ; "ಡಾಕ್ಟರ್ ಸೈಮನ್, ಈ ಕೂಡಲೇ ಮನೆಗೆ ಬರಲು ಮೇಡಮ್ ಅಲಿಪ್ರಿ ಪ್ರಾರ್ಥಿಸುತ್ತಾಳೆ" ಎಂಬ ಒಂದೇ ವಾಕ್ಯ ಅಲ್ಲಿತ್ತು.

ಒಂದು ಕ್ಷಣ ಯೋಚಿಸಿ, "ಈ ದಿನ ಯಾಕೋ ಒಂದು ರೀತಿಯ ಸುಸ್ತು" ಅಂದುಕೊಂಡು, ಮೇಡಮ್ ಅಲಿಪ್ರಿಗೆ ಒಂದು ಕಾಗದ ಕೊಟ್ಟು ಕಳಿಸಿದೆ: "ಡಾಕ್ಟರ್ ಸೈಮನ್ ಅಸ್ವಸ್ಥರಾಗಿದ್ದಾರೆ. ಆದ್ದರಿಂದ ಸಹೋದ್ಯೋಗಿ ಡಾ. ಬಾನೆಟ್‌ರ ಬಳಿ ಹೋಗುವುದು ಒಳ್ಳೆಯದು."

'ಕಾಗದ ಕಳಿಸಿ ಮಲಗಿಕೊಂಡೆ. ಅರ್ಧ ಗಂಟೆ ಕಳೆಯುವುದರಲ್ಲೇ ಕರೆಗಂಟೆ ಮತ್ತೆ ಹೊಡೆದುಕೊಂಡಿತು. ಈ ಸಲ ಒಳಗೆ ಬಂದ ಜೀನ್, "ಕೆಳಗೆ ಯಾರೋ ನಿಂತಿದ್ದಾರೆ. ಬಂದವರು ಗಂಡಸೋ ಹೆಂಗಸೋ ತಿಳಿಯದು. ಮುಖ ಕಾಣದಂತೆ ಮುಚ್ಚಿಕೊಂಡಿರುವ ಆ ವ್ಯಕ್ತಿ, ಇಬ್ಬರು ಸಾವು-ಬದುಕಿನ ಹೋರಾಟದಲ್ಲಿದ್ದಾರೆ ಎಂದು ಹೇಳುತ್ತಿದೆ." ಎಂದು ಹೇಳಿದ.

'ಹಾಸಿಗೆಯಿಂದ ಎದ್ದ ನಾನು, ಆ ವ್ಯಕ್ತಿಯನ್ನು ಒಳಗೆ ಕರೆದು ಕುಳಿತುಕೊಳ್ಳುವಂತೆ ಹೇಳಲು ಜೀನ್‌ಗೆ ಹೇಳಿ ಕಳಿಸಿದೆ.

"ಫ್ಯಾಂಟಮ್‌ನಂತಹ ಕಪ್ಪು ಬಟ್ಟೆ ತೊಟ್ಟಿದ್ದ ಆ ವ್ಯಕ್ತಿ, ಜೀನ್ ಅಲ್ಲಿಂದ ಹೊರಗೆ ಹೋಗುತ್ತಿದ್ದಂತೆ, ತಾನು ಹೊದ್ದ ಬಟ್ಟೆಯನ್ನು ತೆಗೆಯಿತು. ಈ ಸಲ ಮೇಡಮ್ ಅಲಿಪ್ರಿಯೇ ಬಂದಿದ್ದಳು. ಮೂರು ವರ್ಷಗಳ ಹಿಂದೆ ಈ ನಗರದ ದೊಡ್ಡ ವ್ಯಾಪಾರಿಯೊಬ್ಬನನ್ನು ಮದುವೆಯಾಗಿದ್ದ ಅವಳು ಸುತ್ತಮುತ್ತಲೆಲ್ಲ ಅತ್ಯಂತ ಸುಂದರಿ ಎಂದು ಹೆಸರಾಗಿದ್ದಳು.

'ಭಯದಿಂದಾಗಿ ಅವಳ ಮುಖ ಬಿಳಿಚಿಕೊಂಡಿತ್ತು. ಕೈಗಳು ನಡುಗುತ್ತಿದ್ದವು. ಮಾತಾಡಲು ಎರಡು ಸಲ ಪ್ರಯತ್ನಿಸಿದಳು. ಆದರೆ ಒಂದು ಮಾತೂ ಹೊರಡಲಿಲ್ಲ. ಕೊನೆಗೆ ತೊಡರುತ್ತಾ, "ಬೇಗ…ಬೇಗ…ಬೇಗ, ಡಾಕ್ಟರ್… ಬೇಗ ಬನ್ನಿ. ನನ್ನ… ನನ್ನ ಪ್ರೇಮಿ ಈಗ ತಾನೇ ನನ್ನ ಮಲಗುವ ಕೋಣೆಯಲ್ಲಿ ಸತ್ತುಬಿದ್ದಿದ್ದಾನೆ." ಅತಿ ಉದ್ವೇಗದಿಂದ ಸ್ವಲ್ಪ ಹೊತ್ತು ಮಾತು ನಿಲ್ಲಿಸಿದ್ದಳು. "ನನ್ನ ಗಂಡ… ನನ್ನ ಗಂಡ ಇನ್ನು ಸ್ವಲ್ಪ ಹೊತ್ತಿನಲ್ಲೇ ಕ್ಲಬ್ಬಿನಿಂದ ಬಂದುಬಿಡುತ್ತಾನೆ…"

"ಮೈಮೇಲಿನ ಬಟ್ಟೆಯ ಪರಿವೆಯೂ ಇಲ್ಲದೆ ನಾನು ಹಾಸಿಗೆಯಿಂದ ತರಾತುರಿಯಲ್ಲಿ ಎದ್ದವನೇ ಒಂದು ಕ್ಷಣದಲ್ಲಿ ಬಟ್ಟೆ ಹಾಕಿಕೊಂಡು, "ಸ್ವಲ್ಪ ಹೊತ್ತಿನ ಹಿಂದೆ ಬಂದದ್ದು ನೀವೇನಾ ?" ಎಂದು ಕೇಳಿದೆ.

"ಇಲ್ಲ," ಭಯದಿಂದ ಕಲ್ಲಿನಂತೆ ನಿಂತಿದ್ದ ಅವಳು ತೊದಲಿಸಿದಳು. "ಆಗ ಬಂದವಳು ನಮ್ಮ ಮನೆಯ ಸೇವಕಿ… ಅವಳಿಗೆ ಎಲ್ಲ ಗೊತ್ತು…" ಒಂದು ಗಳಿಗೆ ಸುಮ್ಮನಿದ್ದು, "ಆಗ ನಾನು ಅಲ್ಲೇ… ಅವನ ಪಕ್ಕದಲ್ಲೇ ಇದ್ದೆ"— ಇಷ್ಟು ಹೇಳುತ್ತಿದ್ದಂತೆ, ಬಲವಂತವಾಗಿ ಒತ್ತಿಹಿಡಿದಿದ್ದ ದುಃಖ ಒತ್ತರಿಸಿ ಬಂದು ಜೋರಾಗಿ ಅಳತೊಡಗಿದಳು, ಬಿಕ್ಕಳಿಸತೊಡಗಿದಳು. ಒಂದೆರಡು ನಿಮಿಷದಲ್ಲಿ ತಾನೇ ಸುಮ್ಮನಾದಳು. ತನ್ನ ಆಗಿನ ಸ್ಥಿತಿಯನ್ನು ಅರ್ಥ ಮಾಡಿಕೊಂಡವಳಂತೆ, "ಡಾಕ್ಟರ್ ಬೇಗ ಹೋಗೋಣ" ಎಂದು ಅವಸರಪಡಿಸಿದಳು.

"ನಾನೇನೋ ರೆಡಿಯಾಗಿದ್ದೇನೆ. ಅರೆ,

ನನ್ನ ಗಾಡಿ ಹೊರತರುವುದಕ್ಕೆ ಹೇಳುವುದನ್ನೇ ಮರೆತು ಬಿಟ್ಟೆ" ಎಂದೆ.

"ನಾನು ಬಂದ ಗಾಡಿ ಹೊರಗೆ ನಿಂತಿದೆ. ಈಗ ಅದರಲ್ಲೇ ಹೋಗೋಣ ಬನ್ನಿ" ಎಂದಳು.

ಅವಳು ಮುಖ ಮುಚ್ಚುವಂತೆ ಹೊದ್ದುಕೊಂಡಳು. ಅವಸರದಲ್ಲಿ ಇಬ್ಬರೂ ಹೊರಬಿದ್ದೆವು.

ಓಡುತ್ತಿದ್ದ ಗಾಡಿಯಲ್ಲಿ ಕತ್ತಲು ಕವಿದಿತ್ತು. ಪಕ್ಕದಲ್ಲಿ ಕುಳಿತಿದ್ದ ಅವಳು ಇದ್ದಕ್ಕಿದ್ದಂತೆ ತನ್ನ ಮೃದುವಾದ ಕೈಗಳಲ್ಲಿ ನನ್ನ ಕೈ ಒತ್ತಿ ಹಿಡಿದು ಏನೋ ಹೇಳಿದಳು. ಆ ಧ್ವನಿ ಒಡೆದ ಹೃದಯದಿಂದ ಹೊರಟ ಧ್ವನಿಯಾಗಿತ್ತು. "ನನ್ನ ಕಷ್ಟ ನಿಮಗೆ ಅರ್ಥವಾಗಿದ್ದರೆ .. ಅರ್ಥವಾಗಿದ್ದರೆ...ಈಗ ಆರು ತಿಂಗಳಿಂದ ಅವನನ್ನು ಬಹಳಷ್ಟು ಪ್ರೀತಿಸುತ್ತಿದ್ದೆ."

"ಈಗ ಮನೆಯಲ್ಲಿ ಯಾರಾದರೂ ಇದ್ದಾರಾ ? "

"ಇಲ್ಲ," ಅವಳು ಉತ್ತರಿಸಿದಳು. "ಮನೆಯ ಕೆಲಸದವಳು ರೋಜಿ ಬಿಟ್ಟರೆ ಯಾರೂ ಇಲ್ಲ. ಅವಳಿಗೆ ಎಲ್ಲ ಗೊತ್ತು."

"ಅವಳ ಮನೆಯ ಮುಂದೆ ಗಾಡಿ ನಿಂತಿತು. ಅವಳು ಆಗಲೇ ಹೇಳಿದಂತೆ ನೆರೆ-ಹೊರೆಯ ಎಲ್ಲ ಜನ ಮಲಗಿದ್ದರು. ನಾವು ಸದ್ದು ಮಾಡದೆ ತುದಿಗಾಲಮೇಲೆ ಮಹಡಿ ಹತ್ತಿದೆವು. ಹೆಣದ ಹತ್ತಿರ ಕುಳಿತುಕೊಳ್ಳಲು ಧೈರ್ಯ ಸಾಲದೆ ಕೆಲಸದಾಕೆ ಮನೆಯ ಹೊರಗೆ ನಾವು ಬರುವುದನ್ನೇ ಕಾಯುತ್ತ ಕುಳಿತಿದ್ದಳು. ಅವಳ ಪಕ್ಕದಲ್ಲಿ ಒಂದು ಮೇಣ ಬತ್ತಿ ಉರಿಯುತ್ತಿತ್ತು.

"ಬೆಡ್ ರೂಮಿನಲ್ಲಿ ಕಾಲಿಡುತ್ತಿದ್ದಂತೆ ಕಣ್ಣಿಗೆ ಬಿದ್ದದ್ದು ತಿರುಗುಮುರುಗಾಗಿ ಬಿದ್ದಿದ್ದ ಮಂಚ. ಅದರ ಸ್ಥಿತಿಯನ್ನು ನೋಡಿದರೆ ಅದರ ಮೇಲೆ ಯಾರಾದರೂ ಹೊಡೆದಾಡಿದ್ದರೇನೋ ಎನ್ನುವಂತಿತ್ತು. ಅದರ ಮೇಲಿದ್ದ ಹಾಸಿಗೆ ತನ್ನನ್ನು ಎತ್ತಿ ಸರಿಪಡಿಸಲು ಯಾರಾದರೂ ಬರುವರೇನೋ ಎಂಬ ನಿರೀಕ್ಷೆಯಲ್ಲಿ ಇದ್ದಂತಿತ್ತು. ನೆಲದ ಮೇಲೆ ಬೇಸಿನ್ ಪಕ್ಕದಲ್ಲಿ ಕೆಲವು ಹಸಿ ಟವಲ್‌ಗಳು ಅಸ್ತವ್ಯಸ್ತವಾಗಿ ಬಿದ್ದಿದ್ದವು. ಆ ಯುವಕನ ಕಣತಲೆಯನ್ನು ಒರೆಸಲು ಆ ಟವಲ್‌ಗಳನ್ನು ಉಪಯೋಗಿಸಿದಂತಿತ್ತು. ಸುಗಂಧ ದ್ರವ್ಯಗಳ ಪರಿಮಳದೊಂದಿಗೆ ಅಡುಗೆ ಮನೆಯಿಂದ ಬರುತ್ತಿದ್ದ ವಿನಿಗರ್ ವಾಸನೆಯೂ ಸೇರಿ ಆ ಕೋಣೆಯೆಲ್ಲ ವಿಚಿತ್ರ ಪರಿಮಳದಿಂದ ತುಂಬಿಹೋಗಿತ್ತು.

"ಆ ಯುವಕನ ಶವ ಕೋಣೆಯ ಮಧ್ಯೆ ಮುಖ ಮೇಲಾಗಿ ಬಿದ್ದಿತ್ತು. ಅದರ ಹತ್ತಿರ ಹೋದ ನಾನು ಅದನ್ನು ಒಮ್ಮೆ ನೋಡಿ ಮುಟ್ಟಿದೆ. ಅವನ ಕಣ್ಣುಗಳನ್ನು ತೆರೆದು ನೋಡಿದೆ. ಕೈ ಮುಟ್ಟಿ ನೋಡಿದೆ. ಚಳಿಗೆ ತಾವೇ ಹೆಪ್ಪುಗಟ್ಟಿ ಬಿಡುವೆವೋ ಎನ್ನುವಂತೆ ಥರ-ಗುಟ್ಟುತ್ತ ಅಲ್ಲಿ ನಿಂತಿದ್ದ ಆ ಇಬ್ಬರು ಹೆಂಗಸರತ್ತ ನೋಡಿ, "ಇವನನ್ನು ಹಾಸಿಗೆಯ ಮೇಲೆ ಮಲ-ಗಿಸಲು ನನಗೆ ಸಹಾಯ ಮಾಡಿ." ಎಂದು ಹೇಳಿದೆ. ಅವನನ್ನು ಹಾಸಿಗೆಯ ಮೇಲೆ ಮೆತ್ತಗೆ ಮಲಗಿಸಿದ ನಂತರ, ಹೃದಯಕ್ರಿಯೆಯನ್ನು ಪರೀಕ್ಷಿಸಿದೆ. ತುಟಿಗಳಿಗೆ ಕನ್ನಡಿ ಹಿಡಿದು ನೋಡಿ, "ಎಲ್ಲ ಮುಗಿದುಹೋಗಿದೆ. ಅವನಿಗೆ ಬೇಗಬೇಗ ಬಟ್ಟೆ ತೊಡಿಸೋಣ." ಎಂದು ಹೇಳಿದೆ.

'ಅವನಿಗೆ ಬಟ್ಟೆ ತೊಡಿಸಿದ್ದು ದೊಡ್ಡ ಕಸರತ್ತು ಮಾಡಿದಂತಾಗಿತ್ತು. ಅವಳು ತಂದು ಕೊಟ್ಟ ಅಂಗಿ, ಕೋಟಿನಲ್ಲಿ ಅವನ ಕೈ ತೂರಿಸು-ವಾಗ ಬಹಳ ಕಷ್ಟವಾಯಿತು. ಆದರೂ ಬಿಡದೆ ಚೆಡ್ಡಿ, ಕಾಲ್ಚೀಲ, ಒಳ ಅಂಗಿ–ಹೀಗೆ ಎಲ್ಲ ಬಟ್ಟೆಗಳನ್ನು ತೊಡಿಸಿದೆವು.

"ಅವರಿಬ್ಬರು ಅವನ ಬೂಟುಗಳನ್ನು ಹಾಕತೊಡಗಿದರು. ಪಾದಗಳು ಊದಿಕೊಳ್ಳತೊಡಗಿದ್ದರಿಂದ ಆ ಕೆಲಸ ಬಹಳ ಕಷ್ಟದ್ದಾಗಿತ್ತು. ಬೂಟಿನ ಗುಂಡಿಗಳನ್ನು ಹಾಕುವುದಕ್ಕೆ ಸಾಧ್ಯವೇ ಆಗದ್ದರಿಂದ ಅವಳು ತನ್ನ ಹೇರ್‌ಪಿನ್ ಸಿಕ್ಕಿಸಿ ಬೂಟು ಹಾಕಿದಳು.

"ಹೆಣಕ್ಕೆ ಸಿಂಗಾರ ಮಾಡುವ ಕೆಲಸ ಮುಗಿದ ಕೂಡಲೇ, ನಮ್ಮ ಕೆಲಸ ಎಷ್ಟರಮಟ್ಟಿಗೆ ಸಮರ್ಪಕವಾಗಿದೆ ಎಂಬುದನ್ನು ಮತ್ತೆ ಪರೀಕ್ಷಿಸಿದೆ. ಅನಂತರ, "ಅವನ ತಲೆ ಸ್ವಲ್ಪ ಬಾಚ-ಬೇಕಾಗಿತ್ತು." ಎಂದು ಹೇಳಿದೆ. ಕೆಲಸದಾಕೆ ಒಳಗೆ ಹೋಗಿ ತನ್ನ ಯಜಮಾನಿಯ ಬ್ರಷ್ ಮತ್ತು ಬಾಚಣಿಕೆಯನ್ನು ತಂದು. ಅವನ [illegible] ಮತ್ತು ಸುಕ್ಕುಗಟ್ಟಿದ್ದ ಕೂದಲನ್ನು ಅರ್ಥವಿಲ್ಲದ ರೀತಿ

ಯಲ್ಲಿ ಬಾಚುತ್ತ ಕುಳಿತಳು. ಅದನ್ನು ಕಂಡ ಮಿಸೆಸ್ ಅಲಿಪ್ರಿ, ಅವಳ ಕೈಯಿಂದ ಬಾಚಣಿಕೆ ಯನ್ನು ಕಿತ್ತುಕೊಂಡು ತಾನೇ ಮೃದುವಾಗಿ ಬಾಚತೊಡಗಿದಳು. ಬೈತಲೆ ತೆಗೆದು, ಗಡ್ಡವನ್ನು ಬಾಚಿ, ಮೀಸೆಯನ್ನು ಹುರಿಗಟ್ಟಿದ ಅವಳ ಕೆಲಸವನ್ನು ನೋಡಿದ ನನಗೆ, ಪ್ರೇಮದ ಸಲುಗೆ ಯಲ್ಲಿ ಈ ಕೆಲಸವನ್ನು ಮಾಡುವುದು ಅವಳಿಗೆ ಅಭ್ಯಾಸವಾಗಿತ್ತೇನೋ ಅನಿಸಿತು.

'ಇದ್ದಕ್ಕಿದ್ದಂತೆ ಬಾಚುವುದನ್ನು ಬಿಟ್ಟು, ನಿಶ್ಚಲವಾಗಿದ್ದ ಅವನ ತಲೆಯನ್ನು ಬಿಗಿಯಾಗಿ ಹಿಡಿದುಕೊಂಡು, ಇನ್ನೆಂದೂ ತನ್ನನ್ನು ನೋಡಿ ಮುಗುಳ್ನಗಲು ಸಾಧ್ಯವಿಲ್ಲದ ತನ್ನ ಪ್ರೇಮಿಯ ಮುಖವನ್ನು ನೋಡುತ್ತ ಕುಳಿತುಬಿಟ್ಟಳು. ಶವದ ಮೈಮೇಲೆ ಬಿದ್ದು, ಬಿಗಿಯಾಗಿ ತಬ್ಬಿಕೊಂಡು, ಮತ್ತು ಬಂದವಳಂತೆ ತುಟಿಗಳಿಗೆ, ಕಣ್ಣುಗಳಿಗೆ, ಹಣೆಗೆ, ಕಣತಲೆಗೆ ಮುತ್ತು ಕೊಟ್ಟಳು. ಇನ್ನು ಅವಳು ಪಿಸುಗುಟ್ಟುವುದನ್ನು ಅವನು ಕೇಳಿಸಿ ಕೊಳ್ಳುವನೇನೋ ಎನ್ನುವ ರೀತಿಯಲ್ಲಿ ಅವನ ಕಿವಿಯ ಬಳಿ ಏನೇನೋ ಪಿಸುಗುಟ್ಟಿ, ಹತ್ತಾರು ಬಾರಿ, ಹೃದಯ ಕರಗಿಸುವ ಧ್ವನಿಯಲ್ಲಿ "ಗುಡ್ ಬೈ ಡಾರ್ಲಿಂಗ್" ಎಂದು ಹೇಳಿದಳು.



"ಬಡತನವನ್ನು ನಿವಾರಿಸುವ ನಿಮ್ಮ ಕಾರ್ಯದ ವೇಗ ಕುಂಠಿತವಾಗಿರುವುದರ ನಿಜವಾದ ಕಾರಣ ಈಗ ತಿಳಿಯಿತು ಬುದ್ಧಿ !"

"ಅಷ್ಟು ಹೊತ್ತಿಗೆ. ಮಧ್ಯರಾತ್ರಿಯಾಗಿದೆ ಎಂಬುದನ್ನು ಗಡಿಯಾರ ಸೂಚಿಸಿದ್ದರಿಂದ, ಒಹ್! ಆಗಲೇ ಹನ್ನೆರಡು ಗಂಟೆ. ಈಗ ಕ್ಲಬ್ ಮುಚ್ಚುವ ಹೊತ್ತಾಯಿತು. ಸಮಯ ವ್ಯರ್ಥಮಾಡುವಂತಿಲ್ಲ, ಬೇಗ ಬೇಗ ಕೈ ಹಾಕಿ" ಎಂದು ಅವಸರ ಮಾಡ ತೊಡಗಿದೆ.

'ನಾನು ಅವಸರ ಮಾಡಿದ್ದರಿಂದ ಅವಳು ಶವವನ್ನು ಬಿಟ್ಟು ಎದ್ದು ನಿಂತಳು. ಶವವನ್ನು ಡ್ರಾಯಿಂಗ್ ರೂಮಿಗೆ ಸಾಗಿಸಿ ಸೋಫಾದ ಮೇಲೆ ಕೂಡಿಸಿದೆವು. ಒಂದು ಮೇಣಬತ್ತಿಯನ್ನು ಹಚ್ಚಿ ಅದರ ಪಕ್ಕದಲ್ಲಿ ಇಟ್ಟೆ.

'ಮುಂದಿನ ಬಾಗಿಲನ್ನು ಯಾರೋ ತಟ್ಟ ತೊಡಗಿದರು. ಅವಳ ಗಂಡ ಆಗಲೇ ಬಂದು ಬಿಟ್ಟಿದ್ದ. "ಬೇಗ ಏಳಿ. ಬೇಸಿನ್ ಮತ್ತು ಟವಲ್ ಕೊಡಿ. ಬೆಡ್‌ರೂಮನ್ನು ಬೇಗ ಬೇಗ ಸರಿಪಡಿಸಿ. ಮಿಸ್ಟರ್ ಅಲಿಪ್ರಿ ಈಗ ತಾನೇ ಬಂದು ಬಾಗಿಲು ತಟ್ಟುತ್ತಿದ್ದಾರೆ." ಎಂದು ಅವಸರಪಡಿಸಿದೆ.

'ಅಲಿಪ್ರಿ ಮೆಟ್ಟಿಲು ಹತ್ತಿ ಕಾರಿಡಾರಿನಲ್ಲಿ ನಡೆದು ಬರುತ್ತಿದ್ದುದು ಅವನ ಹೆಜ್ಜೆಯ ಸದ್ದಿನಿಂದ ತಿಳಿಯಿತು. ಕತ್ತಲಿನಲ್ಲಿ ತಡವರಿಸುತ್ತ ಗೋಡೆಗುಂಟ ಒಳ ಬಂದ. "ಇಲ್ಲಿ ಬನ್ನಿ ಮಿ. ಅಲಿಪ್ರಿ," ನಾನು ಅವನನ್ನು ಕರೆದೆ. "ಈಗಷ್ಟೆ ಒಂದು ಅಪಘಾತ ಸಂಭವಿಸಿತು,"

'ಅಚ್ಚರಿಗೊಂಡ ಅವಳ ಗಂಡ ಬಾಗಿಲ ಬಳಿ ಬಂದು ನಿಂತ. ಹೊಗೆಯಾಡುತ್ತಿದ್ದ ಸಿಗಾರ್ ಅವನ ಬಾಯಲ್ಲಿ ಸಿಕ್ಕಿಕೊಂಡಿತ್ತು. "ಏನು ಸಮಾಚಾರ ?" ಅವನು ಕೇಳಿದ. "ಏನು ಹಾಗೆಂದರೆ ?"

'ಅವನ ಬಳಿಗೆ ಹೋಗುತ್ತಾ ನಾನು ಹೇಳಿದೆ. "ನಿಮಗೆ ನಾನು ವಿಚಿತ್ರವಾಗಿ ಕಾಣುತ್ತಿರ ಬಹುದು, ಅಲ್ಲವೆ ? ಈ ನನ್ನ ಮಿತ್ರನ ಜೊತೆ ಆಟದ ಗಾಡಿಯಲ್ಲಿ ನಾನೂ ಬಂದೆ. ಇದುವರೆಗೆ ನಿಮ್ಮ ಮಿಸೆಸ್ ಜೊತೆ ಮಾತನಾಡುತ್ತ ಕುಳಿತಿ

ದ್ದೆವು. ಸುಮಾರು ಎರಡು ಗಂಟೆಗಳ ಹಿಂದೆ ಇದ್ದಕ್ಕಿದ್ದಂತೆ ಅವನು ಕುಸಿದುಬಿಟ್ಟ. ವಿಶ್ವ ಪ್ರಯತ್ನ ಮಾಡಿದರೂ ಇನ್ನೂ ಅಪ್ರಜ್ಞಾವಸ್ಥೆ ಯಲ್ಲೇ ಇದ್ದಾನೆ. ಪರಿಚಯ ಇಲ್ಲದ ನೆರೆ ಹೊರೆಯ ಯಾರನ್ನೂ ಕರೆಯಲು ನಾನು ಇಷ್ಟ ಪಡಲಿಲ್ಲ. ಈಗ ಅವನನ್ನು ಕರೆದುಕೊಂಡು ಹೋಗಲು ನೀವು ಸಹಾಯ ಮಾಡುವುದಾದರೆ, ಅವನ ಮನೆಯಲ್ಲಿ ಸರಿಯಾದ ಚಿಕಿತ್ಸೆ ನಡೆಸಲು ಸಾಧ್ಯವಾಗುತ್ತದೆ."

'ಆಶ್ಚರ್ಯಗೊಂಡ, ಆದರೆ ಸ್ವಲ್ಪವೂ ಸಂಶಯ ಪಡದ ಮಿ. ಅಲಿಪ್ರಿ ತನ್ನ ಹ್ಯಾಟ್ ತೆಗೆದ. ಇನ್ನೆಂದೂ ಆಗದ ತನ್ನ ಪ್ರತಿಸ್ಪರ್ಧಿಯ ಬೆನ್ನಿಗೆ ಕೈ ಹಾಕಿದ. ನಾನು ಅವನ ಎರಡು ಕಾಲುಗಳನ್ನು ಹಿಡಿದುಕೊಂಡು ಕೆಳಗೆ ಇಳಿಯು ತ್ತಿದ್ದಂತೆ ಮಿಸೆಸ್ ಅಲಿಪ್ರಿ ದೀಪದೊಂದಿಗೆ ನಮ್ಮನ್ನು ಹಿಂಬಾಲಿಸಿದಳು."

'ಗಾಡಿಯ ಬಳಿ ಬರುತ್ತಿದ್ದಂತೆ, ಗಾಡಿಯವ ನಿಗೆ ಅನುಮಾನ ಬಾರದಿರಲು ಶವದ ಜೊತೆ ಮಾತನಾಡತೊಡಗಿದೆ. "ನಿನಗೆ ಅಂಥದ್ದೇನೂ ಆಗಿಲ್ಲ ಬಾರಯ್ಯ, ಮೊದಲಿಗಿಂತ ಈಗ ಎಷ್ಟೋ ವಾಸಿ. ಸ್ವಲ್ಪ ಪ್ರಯತ್ನ ಮಾಡಿ ಹತ್ತು. ಎಲ್ಲವೂ ಸರಿಹೋಗಿಬಿಡುತ್ತೆ."

'ಹೀಗೆ ಹೇಳುತ್ತಿರುವಾಗ ಆಯ ತಪ್ಪಿ ಕೆಳಗೆ ಬೀಳುವುದರಲ್ಲಿದ್ದ ಆ ಶವವನ್ನು ಒಮ್ಮೆ ಜೋರಾಗಿ ಗಾಡಿಯಲ್ಲಿ ತಳ್ಳಿ ನಾನೂ ಹತ್ತಿಕೊಂಡೆ.

'ಇದನ್ನೆಲ್ಲ ನೋಡುತ್ತಿದ್ದ ಮಿ. ಅಲಿಪ್ರಿ ಕುತೂಹಲದಿಂದ, "ಅವನ ಸ್ಥಿತಿ ತುಂಬ ಸೀರಿ ಯಸ್ಸಾಗಿದೆಯೆ ?" ಎಂದು ಕೇಳಿದ. "ಇಲ್ಲ." ಎಂದು ಮುಗುಳ್ನಕ್ಕು ಮಿಸೆಸ್ ಅಲಿಪ್ರಿಯ ಮುಖ ನೋಡಿದೆ. ಅವಳು ತನ್ನ ನಿಷ್ಪ್ರಾಣವಂತ ಗಂಡನ [illegible] ಭದ್ರವಾಗಿ [illegible] ಕೊಂಡು ಕತ್ತಲು ಕವಿದಿದ್ದ ಗಾಡಿಯ ಒಳಗೆ ನೋಡುತ್ತ ನಿಂತಿದ್ದಳು.

'ಅವರ ಕೈ ಕುಲುಕಿ ಗಾಡಿಯನ್ನು ಓಡಿಸು ವಂತೆ ಚಾಲಕನಿಗೆ ಹೇಳಿದೆ. ದಾರಿಯುದ್ದಕ್ಕೂ ಶವದ ಭಾರ ನನ್ನ ಬಲಭುಜದ ಮೇಲೆ ಬಿದ್ದಿತ್ತು. ಅವನ ಮನೆ ತಲುಪಿದ ನಂತರ, ಅವನು ದಾರಿ ಯಲ್ಲಿ ಪ್ರಜ್ಞೆ ತಪ್ಪಿ ಬಿದ್ದುದಾಗಿ ಹೇಳಿ ಅವನನ್ನು ಮೇಲೆ ಕರೆದುಕೊಂಡು ಹೋಗಲು ಸಹಾಯ ಮಾಡುವಂತೆ ಗಾಡಿಯ ಚಾಲಕನನ್ನು ಕೇಳಿಕೊಂಡೆ. ವ್ಯಾಕುಲಗೊಂಡಿದ್ದ ಅವನ ಮನೆಯವರಿಗಾಗಿ ಇನ್ನೊಂದು ತಮಾಷೆಯ ನಾಟಕ ಆಡಬೇಕಾಗಿ ಬಂತು. ಅವನು ಸತ್ತಿದ್ದಾನೆಂಬ ಪ್ರಮಾಣ ಪತ್ರ ವನ್ನು ಕೊಟ್ಟು ಅಲ್ಲಿಂದ ಹೊರಬಿದ್ದೆ. ಇಷ್ಟೆಲ್ಲ ಮಾಡುವ ಹೊತ್ತಿಗೆ ಬಳಲಿದ್ದ ನಾನು ಮನೆಗೆ ಬಂದು, ಎಲ್ಲ ಪ್ರೇಮಿಗಳನ್ನು ಶಪಿಸುತ್ತ ಹಾಸಿಗೆ ಯಲ್ಲಿ ಉರುಳಿದೆ.'

ಇಷ್ಟು ಹೇಳಿದ ವೃದ್ಧ ವೈದ್ಯ ಸುಮ್ಮನಾದ. ಅವನು ಇನ್ನೂ ಮುಗುಳ್ನಗುತ್ತಿದ್ದ. 'ಇಂಥ ಭಯಾನಕ ಕತೆಯನ್ನು ನಾನೇಕೆ ಹೇಳಿದೆ?' ಎಂದು ಕೇಳಿದ ಆ [illegible] ಧ್ವನಿ [illegible].

'ಅಗತ್ಯ ಬಿದ್ದರೆ ನನ್ನ ಸೇವೆ ನಿಮಗಾಗಿ ಕಾದಿದೆ,' ಎಂದು ಹೇಳಿದ ವೃದ್ಧ ವೈದ್ಯ ರೀವಿ [illegible]. ☆

~~~~~~~~

ಜೀವನೋಪಾಯ

"ಮನುಷ್ಯರ ರಕ್ತವು ಇತ್ತೀಚೆ ಕಲಬೆರಕೆ ಆಹಾರದಿಂದ ಕಲುಷಿತಗೊಂಡಿದೆ; ಇಂತಹ ರಕ್ತಪಾನ ಮಾಡಿದ ತಮ್ಮ ಸಂತತಿ ಭೂಲೋಕದಲ್ಲಿ ಹೇಳಹೆಸರಿಲ್ಲದಾಗು ಗುತ್ತದೆ. ದಯವಿಟ್ಟು ಜೀವನೋಪಾಯಕ್ಕೆ ಬೇರೆ ಉದ್ಯೋಗ ಕಲ್ಪಿಸಿಕೊಡಿ" ಎಂಬ ತಾಪದ ಮನವಿಗಳೊಂದಿಗೆ ಸೊಳ್ಳೆ-ತಿಗಣೆಗಳ ನಿಯೋಗವೊಂದು ಬ್ರಹ್ಮನಲ್ಲಿಗೆ ಹೋಯಿತು. ನಿಯೋಗದ ವಾದದಲ್ಲಿ ಹುರುಳಿರುವುದನ್ನು ಕಂಡ ಬ್ರಹ್ಮನು ಬಹಳ ಯೋಚಿಸಿ ಕೊನೆಗೆ, "ನೀವೆಲ್ಲರೂ ಈಗಲೇ ಭೂಲೋಕಕ್ಕೆ ಹೋಗಿ, ಖಾಸಗಿ ನರ್ಸಿಂಗ್ ಹೋಮ್ ಅಥವಾ ಖಾಸಗಿ ಶಾಲಾ-ಕಾಲೇಜುಗಳನ್ನು ನಡೆಸಿಕೊಂಡು ಸುಖವಾಗಿರಿ" ಎಂದು ಆಜ್ಞಾಪಿಸಿದ.

-ಭರತ
~~~~~~~~

ಹೀಗಿದ್ದಾರೆ ಈ ಮದ್ರಾಸಿ ಮರಾಠಿಗರು

ಗೋವಿಂದಮೂರ್ತಿ ದೇಸಾಯಿ

ಶಾಯ್ದ್ರಾವನ್ನು ತ್ಯಜಿಸಿ ಭಾರತದ ಬೇರೆ ಬೇರೆ ಪ್ರಾಂತಗಳಿಗೆ ಹೋಗಿ ನೆಲಸಿರುವ ಮದ್ರಾಸಿಗರ ತವರೂರಾದ ತಮಿಳು ನಾಡಿಗೇನೇ ಗಣನೀಯ ಪ್ರಮಾಣದಲ್ಲಿ ಮಹಾರಾಷ್ಟ್ರೀಯರು ವಲಸೆ ಬಂದು ಸ್ಥಾಯಿಕರಾಗಿದ್ದಾರೆಂಬುದು ಕೆಲವರಿಗೆ ಆಶ್ಚರ್ಯವನ್ನುಂಟುಮಾಡಬಹುದು! ಇಂದು ತಮಿಳುನಾಡಿನಲ್ಲಿ ಎರಡು ಲಕ್ಷಕ್ಕೂ ಮಿಕ್ಕ ಮರಾಠಿಗರಿದ್ದಾರೆಂದರೆ ಕೆಲವರಿಗೆ ನಂಬಿಕೆಯಾಗ ಲಿಕ್ಕಿಲ್ಲ. ಆದರಿದು ವಸ್ತುಸ್ಥಿತಿ.

ಮುನ್ನೂರು ವರ್ಷಗಳಿಂದಲೂ ತಮಿಳು ನಾಡನ್ನೇ ತಮ್ಮ ತಾಯ್ನೆಲವನ್ನಾಗಿ ಮಾಡಿ ಕೊಂಡ ಮದ್ರಾಸಿ ಮರಾಠಿಗರೂ ಇತ್ತೀಚಿನ ದಶಕ ಗಳಲ್ಲಿ ನೌಕರಿಯ ನಿಮಿತ್ತ ಮದ್ರಾಸಕ್ಕೆ ಬಂದಿರುವ ನವ ಮಹಾರಾಷ್ಟ್ರೀಯರೂ ಸೇರಿ ಎರಡು ವರ್ಷಗಳ ಹಿಂದೆ ರಾಮೇಶ್ವರದಲ್ಲಿ ಒಂದು ಬೃಹತ್ ಮಹಾರಾಷ್ಟ್ರ ಪರಿಷತ್ತನ್ನು ನಡೆಸಿದರು. ಆ ಪರಿ ಷತ್ತಿನಲ್ಲಿ ಮದ್ರಾಸಿನಲ್ಲಿ ಶೀಘ್ರವಾಗಿ ಮರಾಠಿ ಭಾಷೆಯನ್ನು ಕಲಿಸಲು ವಿದ್ಯಾಸಂಸ್ಥೆಗಳನ್ನು ಸ್ಥಾಪಿ ಸಬೇಕೆಂಬ ನಿರ್ಣಯವೊಂದನ್ನು ಸ್ವೀಕರಿಸಿದರು. ರಾಮೇಶ್ವರದಲ್ಲಿ ಪರಿಷತ್ತನ್ನು ಸೇರಿಸಲು ಮುಖ್ಯ ಕಾರಣವೊಂದಿದೆ. ರಾಮೇಶ್ವರದಲ್ಲಿ ದೇವಾಲಯಕ್ಕೆ ಸೇರಿದ ಐವತ್ತು ಮಹಾರಾಷ್ಟ್ರೀಯ ಅರ್ಚಕ ಕುಟುಂಬಗಳಿವೆ. ನೂರಾರು ವರ್ಷಗಳಿಂದಲೂ ರಾಮೇಶ್ವರದ ರಾಮಲಿಂಗಕ್ಕೆ ಈ ಮಹಾ- ರಾಷ್ಟ್ರೀಯ ಅರ್ಚಕರಿಂದಲೇ ಅಭಿಷೇಕ. ವ್ಯವ ಹಾರಕ್ಕಾಗಿ ಅವರು ತಮಿಳನ್ನು ತಮಿಳರಷ್ಟೇ ಸತ್ವಯುತವಾಗಿ ಮಾತನಾಡಿದರೂ ಮನೆಯಲ್ಲಿ ಈ ಅರ್ಚಕರ ಭಾಷೆ ಮರಾಠಿ.

ಮದ್ರಾಸ ಪ್ರಾಂತದ ಎಲ್ಲ ಸರಕಾರೀ ಶಾಲೆ ಗಳಲ್ಲಿಯೂ ಮರಾಠಿಯನ್ನು ಕಲಿಸುವ ಏರ್ಪಾ ಡಿತ್ತು. ಮದ್ರಾಸಿನ ಒಂದೆರಡು ಶಾಲೆಗಳಲ್ಲಿ ಮರಾಠಿ ವರ್ಗಗಳಿದ್ದವು. ಆದರೆ ೧೯೪೭ ರಿಂದ ಇತ್ತೀಚೆ ಸರಕಾರದ ಧೋರಣೆಯಿಂದ ಮರಾಠಿ ಕಲಿಸುವ ಏರ್ಪಾಡು ನಿಂತುಹೋಗಿದೆ. ಆದರೆ ಇತ್ತೀಚೆಗೆ ಮತ್ತೆ ಈ ಮದ್ರಾಸಿ ಮರಾಠಿಗರಲ್ಲಿ ಮರಾಠಿ ಕಲಿಯುವ ಆಶೆ ಪುನಃ ಚಿಗುರಹತ್ತಿದೆ.

ಈಗ ತಮಿಳುನಾಡಿನಲ್ಲಿರುವ ಎರಡು ಲಕ್ಷ ದಷ್ಟು ಮಹಾರಾಷ್ಟ್ರೀಯರು, ಮೊನ್ನೆ ಮೊನ್ನೆ ನೌಕರಿಗಾಗಿ ಮುಂಬೈಗೆ ಅಥವಾ ಮದ್ರಾಸಿಗೆ ಹೋಗಿ ನೆಲೆಸಿದ ಕನ್ನಡಿಗರಂತಲ್ಲ. ಮೂರು ನೂರು ವರುಷಗಳಷ್ಟು ಹಿಂದೆ ೧೬೭೪ ರಿಂದ ೧೮೫೫ರ ಮಧ್ಯದಲ್ಲಿ ಅಂದಿನ ಮದ್ರಾಸ ಪ್ರಾಂತದ ತಂಜಾವೂರಿನಲ್ಲಿ ಮರಾಠಾ ರಾಜ್ಯವಿರುವಾಗ ಇವರು ಹೋಗಿ ನೆಲೆಸಿದರು. ಈ ಮದ್ರಾಸಿ ಮರಾ



ಮದ್ರಾಸಿ ಮರಾಠಿಗ ವಧೂವರರು ಆರತಿಗೆ ಸಿದ್ಧರಾಗಿ ಕುಳಿತಿದ್ದಾರೆ. ತಲೆಗೆ ದಂಡೆ ಕಟ್ಟಿ ಕುಳಿತ ಇವರನ್ನು ನೋಡಿದಾಗ ಇವರು ದಕ್ಷಿಣ ಭಾರತೀಯರೆಂದು ನಂಬುವುದೇ ಕಷ್ಟವಾಗುತ್ತದೆ.

ಠಿಗರು ಬಹುಪಾಲು ತಂಜಾವೂರಿನಲ್ಲಿದ್ದರೂ ಮದ್ರಾಸ, ಕುಂಭಕೋಣಂ, ಸೇಲಂ, ಶ್ರೀರಂಗಮ್, ತಿರುಚಿನಾಪಳ್ಳಿ, ಮದುರೆ, ತಿರುನೆಲ್-ವೇಲ್ವಿ, ಆರಣಿ, ರಾಮೇಶ್ವರಗಳಲ್ಲಿಯೂ ಇದ್ದಾರೆ. ಇವರೆಲ್ಲರೂ ರಾಮಚಂದ್ರರಾವ್, ಶಂಕರರಾವ್, ಆತ್ಮಾರಾಮರಾವ್, ಶ್ರೀನಿವಾಸ್‌ರಾವ್, ರಘುತ್ತಮರಾವ್, ಎಂದು ತಮ್ಮ ಅಂಕಿತನಾಮದೊಂದಿಗೆ ರಾವ್ ಸೇರಿಸಿ ಹೇಳುತ್ತಾರೆ. ಹೆಂಗಸರ ಹೆಸರುಗಳು ವೆಂಕೂಬಾಯ್, ಸೀತಾಬಾಯ್, ಎಂಬ ತೆರದಲ್ಲಿರುತ್ತವೆ. ಈ ರಾವ್ ಪ್ರತ್ಯಯದಿಂದ ಇವರನ್ನು ತಮಿಳರು "ರಾವಜಿ" ಗಳೆಂದೇ ಕರೆಯುತ್ತಾರೆ.

ಮಹಾರಾಷ್ಟ್ರಕ್ಕೂ ತಮಿಳುನಾಡಿಗೂ ಈ ಪೂರ್ವದಲ್ಲಿಯೇ ಒಂದು ಅಥವಾ ಎರಡು ಶತಮಾನಗಳಷ್ಟು ಹಳೆಯ ಸಂಬಂಧವಿತ್ತೆಂದು ಇತ್ತೀಚೆಗೆ ಕೆಲವರು ಶೋಧಿಸಿದ್ದಾರೆ. ಮಣಿಮೇಕಲೈ ಹಾಗೂ 'ಶಿಲಪ್ಪದಿಗಾರಂ' ಎಂಬೆರಡು ತಮಿಳು ಮಹಾಕಾವ್ಯಗಳಲ್ಲಿ ಮದುರೆಯನ್ನಾಳಿದ ಪಾಂಡ್ಯರಾಜರ ಆಶ್ರಯದಲ್ಲಿ ಮಹಾರಾಷ್ಟ್ರದ ಅಕ್ಕಸಾಲಿಗರು ಆಶ್ರಯ ಪಡೆದಿದ್ದರೆಂದು ಬರುವ ಉಲ್ಲೇಖಗಳಿಂದ ಈ ಸಂಬಂಧವು ತೀರ ಪ್ರಾಚೀನವಿತ್ತೆಂದು ಈ ಸಂಶೋಧಕರು ತರ್ಕಿಸಿದ್ದಾರೆ. ಇವರ ವ್ಯತಿರಿಕ್ತ ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವ 'ಇಂದ್ರೋತ್ಸವ'ವೆಂಬ ಹಬ್ಬವು ತಮಿಳು ನಾಡಿನಲ್ಲಿ ಆಚರಿಸುವ 'ಪೊಂಗಲ'. ಹಬ್ಬಕ್ಕೂ ಮಹಾರಾಷ್ಟ್ರದಲ್ಲಿ ಆಚರಿಸುವ ಸಂಕ್ರಾಂತಿಗೂ ಒನ್ನಲೆಯಾಗಿರಬೇಕೆಂದು ಈ ಸಂಶೋಧಕರ ಊಹೆ. ಮುಂಬೈ ಕರ್ನಾಟಕದಲ್ಲಿ ಆಚರಿಸುವ ಸಂಕ್ರಾಂತಿ ನಿರ್ವಿವಾದವಾಗಿ ಮಹಾರಾಷ್ಟ್ರದ ಕೊಡುಗೆ. ಹೀಗಾಗಿ ತಮಿಳುನಾಡು

ಹಾಗು ಮಹಾರಾಷ್ಟ್ರಗಳೆರಡರಲ್ಲೇ ಈ ಸಂಕ್ರಾಂತಿ ಆಚರಿಸಲ್ಪಡುವುದರಿಂದ ಈ ಸಂಶೋಧಕರ ತರ್ಕಕ್ಕೆ ಅದೊಂದು ಬಲವಾಗಿದೆ. ಅಲ್ಲದೆ ಮರಾಠಿ ಭಾಷೆಯಲ್ಲಿರುವ ಕೆಲ ಶಬ್ದಗಳು ತಮಿಳಿನಲ್ಲಿ ಇವೆಯಂತೆ. ಅಲ್ಲದೆ ಮರಾಠಿ ಭಾಷೆಯ ಕೆಲ ಗಾದೆಗಳು ಹಾಗು ಜಾನಪದ ಕತೆಗಳು ತಮಿಳಿನಲ್ಲಿಯೂ ಇವೆ ಎಂದು ಈ ಸಂಬಂಧ ಕಲ್ಪಿಸುವವರು ಸೋದಾಹರಣವಾಗಿ ಹೇಳುತ್ತಾರೆ.

ಪ್ರಾಚೀನ ಇತಿಹಾಸವು ಏನೇ ಇದ್ದರೂ, ಛತ್ರಪತಿ ಶಿವಾಜಿಯ ಮಲ ತಮ್ಮನಾದ ವೆಂಕೋಜಿ ಅಥವಾ ಏಕೋಜಿ ತಂಜಾವೂರಿನ ಗಾದೆಗೆ ಬಂದ ಮೇಲೆ ಈ ಮರಾಠಿಗರು ಪುಣೆಯ ಕಡೆಯಿಂದ ಇಲ್ಲಿಗೆ ಬಂದು ನೆಲಸಹತ್ತಿದರು. ಮೂರು ನೂರು ವರ್ಷಗಳಷ್ಟು ಕಾಲ ಆಳಿದ ಈ ಮರಾಠಾ ರಾಜರು ಪುಣೆ, ಗೋವೆ, ಕೊಂಕಣ ಕಡೆಯಿಂದ ಮರಾಠಿಗರನ್ನು ಕರೆತಂದು ಇಲ್ಲಿ ನೆಲೆಸಲು ಆಶ್ರಯವಿತ್ತರೆಂಬುದು ಐತಿಹಾಸಿಕ ಸತ್ಯ. ಛತ್ರಪತಿ ಶಿವಾಜಿಯ ತಂದೆ ಸರದಾರ ಶಹಾಜಿ ವಿಜಾಪುರ ಆದಿಲ್‌ಶಾಹಿ ಸೇವೆಯಲ್ಲಿದ್ದು ತನ್ನಾಯುಷ್ಯದ ಬಹುಭಾಗವನ್ನು ರಾಜಧಾನಿ ಬೆಂಗಳೂರಿನಲ್ಲಿಯೇ ಕಳೆದನಲ್ಲದೆ ಕರ್ನಾಟಕದ ಹೊದಿಗೆರೆಯಲ್ಲಿಯೇ ಕೊನೆಯುಸಿರನ್ನೆಳೆದನು. ಶಹಾಜಿಗೆ ಇಬ್ಬರು ಹೆಂಡಂದಿರು. ಒಬ್ಬಳು ಜೀಜಾಬಾಯಿ, ಇನ್ನೊಬ್ಬಳು ತುಕಾಬಾಯಿ. ಶಿವಾಜಿ ಜೀಜಾಬಾಯಿಯ ಮಗ. ತುಕಾಬಾಯಿಗೆ ವೆಂಕೋಜಿ ಹುಟ್ಟಿದನು. ಶಹಾಜಿ ಎರಡನೇ ಹೆಂಡತಿ ತುಕಾಬಾಯಿಯೊಂದಿಗೆ ಬೆಂಗಳೂರಿನಲ್ಲಿ ಇರುತ್ತಿದ್ದನು. ಜೀಜಾಬಾಯಿಯ ತಂದೆ ಸರದಾರ ಲಖುಜಿ ಜಾಧವರಾಯನಿಗೂ ಶಹಾಜಿಗೂ ಕೂಡಿಬರದ್ದರಿಂದ ಶಹಾಜಿ ಮತ್ತು ಜೀಜಾಬಾಯಿ ಇವರಲ್ಲಿ ಅಷ್ಟೇನೂ ಮಧುರ ಸಂಬಂಧ ಉಳಿದಿಲ್ಲವೆಂದು ಹಲವಾರು ಇತಿಹಾಸಜ್ಞರ ಅಭಿಪ್ರಾಯ.

ಅಂತಲೇ ಶಿವಾಜಿಯ ಬಾಲ್ಯೇತಿಹಾಸವನ್ನು ಸ್ಮರಿಸುವಾಗ ಮರಾಠಿ ಇತಿಹಾಸಿಗರು ತಾಯಿ ಜೀಜಾಬಾಯಿ ಮಗನನ್ನು ವೀರನನ್ನಾಗಿ ಮಾಡಿದಳೆಂದು ಹೇಳುತ್ತಾರೆಯೇ ವಿನಾ ತಂದೆ ಶಹಾಜಿಯ ಬಗ್ಗೆ ಒಂದಕ್ಷರವನ್ನೂ ಉಲ್ಲೇಖಿಸುವದಿಲ್ಲ. ಸುಪ್ರಸಿದ್ಧ ಇತಿಹಾಸಕಾರ ಯದುನಾಥ ಸರ್ಕಾರರು "ಜೀಜಾಬಾಯಿ ತಾರುಣ್ಯವನ್ನು ಕಳೆದುಕೊಂಡು ರೂಪ ಲಾವಣ್ಯಗಳಿಂದ ವಂಚಿತಳಾದಾಗ, ಸರದಾರ ಶಹಾಜಿ ತುಕಾಬಾಯಿಯನ್ನು ಮದುವೆಯಾಗಿರಬೇಕು" ಎಂದು ಹೇಳಿದ್ದಾರೆ. ಈ ಮಾತನ್ನೇ ಬಖರಕಾರರೂ ಪುಷ್ಟೀಕರಿಸಿದ್ದಾರೆ. ಅದೇ ಕಾರಣಕ್ಕೋ ಏನೋ, ಶಹಾಜಿಯು ಹೆಂಡತಿ ತುಕಾಬಾಯಿ ಹಾಗು ಮಗ ವೆಂಕೋಜಿಯೊಂದಿಗೇನೇ ದಕ್ಷಿಣದಲ್ಲಿ ತನ್ನ ಹೆಚ್ಚಿನ ಆಯುಷ್ಯವನ್ನು ಕಳೆದನು. ಅದರಿಂದ ಶಹಾಜಿ ತಂಜಾವೂರನ್ನು ಗೆದ್ದು ಮಗನಾದ ವೆಂಕೋಜಿಯನ್ನು ಸಿಂಹಾಸನದ ಮೇಲೆ ಕೂಡಿಸಿದನು. ಅಂದಿನಿಂದಲೇ ಈ ಮರಾಠಿಗರು ವಲಸೆ ಬಂದು ತಮಿಳುನಾಡನ್ನು ತಾಯ್ನಾಡನ್ನಾಗಿ ಮಾಡಿಕೊಂಡಿದ್ದಾರೆ.

ಈ ಮದ್ರಾಸಿ ಮರಾಠಿಗರು ತಮಿಳರೊಂದಿಗೆ ಅದೆಷ್ಟು ಸಮರಸರಾಗಿ ಬೆರೆತಿದ್ದಾರೆಂದರೆ, ಮೂಲ ತಮಿಳರಷ್ಟೇ ಸತ್ವಯುತವಾಗಿ ತಮಿಳನ್ನು ಮಾತನಾಡುತ್ತಾರಲ್ಲದೆ ತಮಿಳಿನಲ್ಲಿ ಬರೆಯುತ್ತಾರೆ. ಹಲವಾರು ಶಿಕ್ಷಣ ಸಂಸ್ಥೆಗಳಲ್ಲಿ ಹಾಗು ಸರಕಾರಿ ಶಿಕ್ಷಣ ಶಾಖೆಗಳಲ್ಲಿ ಈ ರಾವ್‌ಜಿಗಳು ಒಳ್ಳೇ ಹೆಸರನ್ನು ಗಳಿಸಿದ್ದಾರೆ. ಅವರು ಉಸಿರಾಡಿಸುವುದು ತಮಿಳನ್ನೇ ಆಗಿದ್ದರೂ ಮರಾಠಿಯನ್ನು ಮಾತ್ರ ಮರೆತಿಲ್ಲ. ಹೊಸ್ತಿಲದ ಬಳಿ ಅವರು ಮಾತನಾಡುವುದು ಮರಾಠಿ. ಹುಟ್ಟಿದ ಕೂಸುಗಳನ್ನಾಡಿಸಿ ಬಾಲಭಾಷೆಯನ್ನು ಕಲಿಸುವುದು ಮರಾಠಿಯಲ್ಲಿ. ಆದರೆ ಮದ್ರಾಸಿ ಮರಾಠಿಗರು ಮಾತನಾಡುವ ಭಾಷೆ ಅಲ್ಲಿಯ ಮರಾಠಿಗರಿಗಷ್ಟೇ ಅರ್ಥವಾಗುವದು. ಅವರ ಮರಾಠಿ ಅತ್ಯಂತ ವಿಕೃತಗೊಂಡಿದೆ. ಅದರ ಮೇಲೆ ತಮಿಳಿನ, ಕನ್ನಡದ ಪ್ರಭಾವ ಸಾಕಷ್ಟಾಗಿದೆ. ಕೆಲ ಮದ್ರಾಸಿ ಮರಾಠಿಗರಿಗೆ ತಾವಾಡುವ ಮರಾಠಿ ಭಾಷೆಗೆ ಒಂದು ಲಿಪಿ ಇದೆಯೆಂದು ಕೂಡ ಗೊತ್ತಿಲ್ಲ. ಇದು ಅವರ ಅಜ್ಞಾನವಲ್ಲ; ಅವರು ಮರಾಠಿಯನ್ನೇ ಓದುವುದಿಲ್ಲ. ಈ ಮದ್ರಾಸಿ ಮರಾಠಿಗರಲ್ಲಿ ಕಾಲು ಭಾಗಕ್ಕೂ ಮಿಕ್ಕಿ ಮಾಧ್ವ ಬ್ರಾಹ್ಮಣರೇ ಇದ್ದಾರೆ. ಕಾಲು ಭಾಗದಷ್ಟು ಮರಾಠಾ ಜನಾಂಗದವರು ಅರ್ಥಾತ್ ಕ್ಷತ್ರಿಯರು ಇದ್ದಾರೆ. ಉಳಿದವರು

ನಾಮದೇವ ಹಾಗು ಶೈವ ಸಂಪ್ರದಾಯಕ್ಕೆ ಸೇರಿದವರಾಗಿದ್ದಾರೆ. ಮಾಧ್ವ ಬ್ರಾಹ್ಮಣರು ಮನೆಯಲ್ಲಿ ಮರಾಠಿಯೊಂದಿಗೆ ಕನ್ನಡವನ್ನೂ ಬಳಸುತ್ತಾರೆ. ದಿಗಂಬರ ಜೈನರೂ ವೀರಶೈವರೂ ಯಾವುದೇ ಪ್ರಾಂತದಲ್ಲಿದ್ದರೂ ಕನ್ನಡದಿಂದ ದೂರವಿರದಂತೆ ಈ ಮಾಧ್ವ ಬ್ರಾಹ್ಮಣರೂ ಕನ್ನಡದಿಂದ ದೂರವಾಗಿರುವುದು ಅಸಾಧ್ಯ. ಈ ಮದ್ರಾಸಿ ಮರಾಠಿಗರಾಡುವ ಮರಾಠಿಯೇ ಒಂದು ವಿಚಿತ್ರ. "ವಳಿ ಸೋಪಾ" ಅರ್ಥಾತ್ ಹಾದಿಯನ್ನು ಬಿಡಿರಿ ಎಂಬ ಶಬ್ದಗಳಲ್ಲಿ 'ವಳಿ' (ಹಾದಿ) ತಮಿಳು ಶಬ್ದವಾದರೆ 'ಸೋಡಾ' (ಬಿಡಿರಿ) ಮರಾಠಿ ಶಬ್ದ. "ಮುಲಗಿಲಾ ಒಪ್ಲಹೋ" (ಹುಡುಗಿಯನ್ನು ಒಪ್ಪಿದನು) ಎಂಬ ಶಬ್ದ ಸಮುಚ್ಚಯದಲ್ಲಿ ಮುಲಗಿ(ಹುಡುಗಿ) ಎಂಬುದು ಮರಾಠಿಯಾದರೆ "ಒಪ್ಲಹೋ" (ಒಪ್ಪಿದನು) ಎಂಬುದು ಕನ್ನಡದ ಒಪ್ಪು ಶಬ್ದದಿಂದ ಬಂದುದು. ಈ ಕಲಬೆರಕೆ ಮಾತುಗಳು ಎರಡೂ ಭಾಷೆ ಬಂದವರಿಗೆ ಕೇಳಲು ಒಳ್ಳೇ ಮೋಜನ್ನುಂಟು ಮಾಡುತ್ತವೆ. ಆದರೂ ಅವರು ತಾವಾಡುವ ಭಾಷೆಯನ್ನು ಬಿಟ್ಟು ಕೊಡಲು ಸಿದ್ಧರಿಲ್ಲ. ಯುಗಾದಿ ಬಂದರೆ, ಮರಾಠಾ ಜನರ ಮನೆಯ ಮುಂದೆ 'ಗುಡಿಪಾಡ್ವಾ' ಅಂದರೆ ಕೋಲಿಗೊಂದು ಖಣ ಹಾಗು ಗಿಂಡಿಯನ್ನು ಕಟ್ಟಿ ಮನೆಯ ಮುಂದೆ ಕೋಲನ್ನು (ಗುಡಿಯನ್ನು) ಏರಿಸುತ್ತಾರೆ. ಆ ಗುಡಿಗಳನ್ನು ನೋಡಿ ಇವರು ಮಹಾರಾಷ್ಟ್ರೀಯರು ಮತ್ತು ಮದ್ರಾಸಿಗೆ ಯುಗಾದಿ ಬಂದಿತೆಂದು ಖಂಡಿತವಾಗಿಯೂ ನಿರ್ಧರಿಸಬಹುದು. ಈ ಯುಗಾದಿ ಬಂದು ಕೆಲ ದಿವಸಗಳ ಮೇಲೆ ತಮಿಳರ ಹೊಸವರ್ಷ ಬರುತ್ತದೆ. ಆದರೂ ತಮಿಳುನಾಡಿನಲ್ಲಿ ತಮ್ಮ ಹೊಸ ವರುಷವಲ್ಲದೆ ಈ ಯುಗಾದಿಯ ದಿವಸವೂ ಸರಕಾರಿ ರಜೆಯನ್ನು ಘೋಷಿಸುತ್ತಾರೆ. ಇದನ್ನವರು ತೆಲುಗು ಹೊಸ ವರುಷವೆಂದು ಕರೆದರೂ, ತಂಜಾವೂರು ಸಂಸ್ಥಾನದಲ್ಲಿ ಹಲವಾರು ವರ್ಷಗಳಿಂದಲೂ 'ಗುಡಿಪಾಡ್ವಾ' ಅಥವಾ 'ಯುಗಾದಿ' ಎಂದೇ ಸರಕಾರಿ ರಜೆಯನ್ನು ಕೊಡುತ್ತಿದ್ದ ಉಲ್ಲೇಖಗಳಿವೆ.

ಭತ್ತದ ಕಣಜವೆಂದು ಕರೆಸಿಕೊಳ್ಳುವ ತಂಜಾವೂರು ಇಂದಿಗೂ ಈ ರಾವ್‌ಜಿಗಳ ಸಾಂಸ್ಕೃತಿಕ ಕೇಂದ್ರ. ಅದರ ಅಭಿವೃದ್ಧಿಗೆ ಮರಾಠಿಗರು ಶ್ರಮಿಸಿದಷ್ಟು ತಮಿಳರು ಶ್ರಮಿಸಿಲ್ಲವೆಂದು ತಮಿಳರೇ ಒಪ್ಪುತ್ತಾರೆ. ಕರ್ನಾಟಕ ಸಂಗೀತಪಿತಾಮಹ ತ್ಯಾಗರಾಜರು ತಂಜಾವೂರಿನ ಸುಪ್ರಸಿದ್ಧ ಮರಾಠಾ ಸರ್ಫೋಜಿ ರಾಜರ ಉದಾರ ಆಶ್ರಯದಲ್ಲಿದ್ದರು. ಸರ್ಫೋಜಿ ಸ್ವತಃ ಸಂಗೀತ ಕೃತಿಗಳನ್ನು ರಚಿಸಿ ಕರ್ನಾಟಕ ಸಂಗೀತಕ್ಕೆ ಒಂದು ಮಹದುಪಕಾರವನ್ನು ಮಾಡಿದ್ದಾರೆ. ಅವರು ತಂಜಾವೂರಿನಲ್ಲಿ ಸ್ಥಾಪಿಸಿದ 'ಸರಸ್ವತಿ ಮಹಲ್' ಭಾರತದಲ್ಲಿಯೇ ಅತ್ಯಂತ ಮಹತ್ವದ ಗ್ರಂಥಭಾಂಡಾರವಾಗಿದೆ. ಇತಿಹಾಸಕಾರರಿಗೆ ಹಾಗು ಖಗೋಲಶಾಸ್ತ್ರ, ವೈದ್ಯಕೀಯ, ಸಂಗೀತವನ್ನು ಅಭ್ಯಸಿಸಬೇಕೆನ್ನುವವರಿಗೆ ಈ ಗ್ರಂಥಭಾಂಡಾರ ಒಂದು ವರ. ಅಲ್ಲಿರುವಷ್ಟು ಅಮೂಲ್ಯ ಪ್ರಾಚೀನ ಕೃತಿಗಳು ಭಾರತದ ಬೇರಾವ ಗ್ರಂಥಭಾಂಡಾರದಲ್ಲಿಯೂ ಇಲ್ಲವೆಂದು ಹೇಳಬಹುದು.

ತಮಿಳು ನಾಡಿನಲ್ಲಿರುವ 'ಕಾಲಕ್ಷೇಪಮ್' ಅಥವಾ ಹರಿಕಥೆ ಅಭಿವೃದ್ಧಿ ಹೊಂದಲು ಈ ಮರಾಠಿಗರು ಸಾಕಷ್ಟು ಶ್ರಮಿಸಿದ್ದಾರೆ. ತಮಿಳರು ಇಂದಿಗೂ ಕಾಲಕ್ಷೇಪದಲ್ಲಿ ಮರಾಠಿ ಅಭಂಗಗಳನ್ನೂ ಪುರಂದರದಾಸರ ಕೃತಿಗಳನ್ನೂ ಉದಾರವಾಗಿ ಬಳಸುತ್ತಾರೆ. ತಮಿಳಿನ ಸುಪ್ರಸಿದ್ಧ ಕಾಲಕ್ಷೇಪಕರಾದ ತಿರುಪಾಲಕೃಷ್ಣ ಶಾಸ್ತ್ರಿಗಳು ನಾನು ಮದ್ರಾಸಿನಲ್ಲಿದ್ದಾಗ ಹಲವಾರು ಸಲ ನನ್ನೊಡನೆ ಈ ಅಭಂಗ ಹಾಗು ಪುರಂದರದಾಸರ ಕೀರ್ತನೆಗಳನ್ನು ಕುರಿತು ಚರ್ಚಿಸಿದ್ದುಂಟು. ಅವರು ತಮ್ಮ ಹರಿಕಥೆಗಳಲ್ಲಿ ಪುರಂದರದಾಸರ ಹಾಡುಗಳನು ಹಾಡಿ ತಮಿಳಿನಲ್ಲಿ ಅರ್ಥವನ್ನು ಹೇಳುತ್ತಿದ್ದರು.

ತಂಜಾವೂರಿನಲ್ಲಿ ಸುಂದರವಾದ ಚಿತ್ರಾಳಿ ನಕ್ಷೆಯ ಪಾತ್ರೆಗಳನ್ನು ಮಾಡುತ್ತಾರೆ. ಅದು ಭಾರತದಾದ್ಯಂತ ಹೆಸರನ್ನು ಗಳಿಸಿದೆ. ಆ ಕಲೆಯನ್ನು ಬೆಳೆಸಿ ಉಳಿಸಿಕೊಂಡು ಬಂದವರೇ ಈ ಮರಾಠಿ ಕಲಾವಿದರು. ಹದಿನೆಂಟನೇ ಶತಮಾನದ ಆದಿಯಲ್ಲಿ ಶಿವಾಜಿ ತಮಿಳನಾಡನ್ನು ಸಂದರ್ಶಿಸಿದ್ದನು. ಆಗ ಛತ್ರಪತಿ ಶಿವಾಜಿ ಆಜ್ಞೆಮಾಡಿ ಕಟ್ಟಿಸಿದನೆಂದು ಹೇಳುವ ಭವಾನಿ ಅಥವಾ ದೇವಿಗುಡಿ ಇಂದಿಗೂ ಮದ್ರಾಸಿನ ಜಾರ್ಜಟೌನಿನಲ್ಲಿರುವ ಅಂಗಪ್ಪ ನಾಯ್ಕ ಬೀದಿ

ಯಲ್ಲಿದೆ. ಆ ದೇವಿಯ ವಿಗ್ರಹ ಮಹಾರಾಷ್ಟ್ರದ ಭವಾನಿಯಂತೆಯೇ ಇದೆ. ಪೂಜೆಯನ್ನು ಇಂದು ತಮಿಳು ಅರ್ಚಕರು ಮಾಡಿದರೂ ಅದನ್ನು ಶಿವಾಜಿ ಗುಡಿಯೆಂದೇ ಕೆಲವರು ಕರೆಯುತ್ತಾರೆ. ಬ್ರಿಟಿಷರು ಬಡೋದೆ ಗಾಯಕವಾಡ ರಾಜರೊಬ್ಬರನ್ನು ಗಡಿಪಾರು ಮಾಡಿ ಮದ್ರಾಸಿನಲ್ಲಿ ಇಟ್ಟಿದ್ದರು. ಮುಂದೆ ಆ ಮಹಾರಾಜನನ್ನು ಬ್ರಹ್ಮದೇಶದ ಮಂಡಾಲೆಗೆ ಸ್ಥಳಾಂತರಿಸಿದರು. ಆಗ ಅವರ ಜೊತೆಗೆ ಬಂದ ಹಲವಾರು ಮರಾಠಿ ಅಧಿಕಾರಿಗಳ ಕುಟುಂಬಗಳು ಮದ್ರಾಸಿನಲ್ಲಿಯೇ ಉಳಿದವು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ತಂಜಾವೂರಿನ ಮರಾಠಾ ರಾಜರಿಗೆ ಪಿಂಚಣಿಯನ್ನಿತ್ತು ಸಿಂಹಾಸನದಿಂದ ಪದಚ್ಯುತಿಗೊಳಿಸಿದಾಗ, ನೂರಾರು ವರುಷಗಳಿಂದಲೂ ಆ ನೆಲದಲ್ಲಿ ಕಾಲೂರಿದ ಮರಾಠಾ ಕುಟುಂಬಗಳು ಅಲ್ಲಿಯೇ ನಿಂತವು. ರಾಜಾಶ್ರಯ ತಪ್ಪಿದರೂ, ಸಂಕಟಪಡುತ್ತ ಅದನ್ನೇ ತಮ್ಮ ಶಾಶ್ವತ ನೆಲವನ್ನಾಗಿ ಮಾಡಿಕೊಂಡಿದ್ದಾರೆ ಈ ಮದ್ರಾಸಿ ಮರಾಠಿಗರು.

ಮರಾಠಿ ಪ್ರಖ್ಯಾತ ಕಾದಂಬರಿಕಾರರಾದ ವಿ.ಸ. ಖಾಂಡೇಕರರ ಕಾದಂಬರಿಗಳು ತಮಿಳಿನಲ್ಲಿ ಭಾಷಾಂತರಗೊಂಡು ಜನಪ್ರಿಯವೆನಿಸಿವೆ. 'ವಾ. ರಾ.' 'ಕು. ಪಾ. ರಾ.' 'ಶಿ. ವಾ. ಜಾ.' ಮೊದಲಾದ ಲೇಖಕರು ಖಾಂಡೇಕರರ ಕಾದಂಬರಿಗಳು ತಮ್ಮ ಮೇಲೆ ಮಾಡಿದ ಪರಿಣಾಮವನ್ನು ನೆನೆದಿದ್ದಾರೆ.

ಈ ಮದ್ರಾಸಿ ಮರಾಠಿಗರು ಇಂದಿಗೂ ತಮ್ಮ ಸಂಪ್ರದಾಯವನ್ನು ಕಾಯ್ದುಕೊಂಡು ಬಂದಿದ್ದಾರೆ. ಅವರು ತಮ್ಮ ಹಳೆಯ ಪದ್ಧತಿಯಲ್ಲಿಯೇ ವಿವಾಹಗಳನ್ನು ನೆರವೇರಿಸುತ್ತಾರೆ. ಅವರಲ್ಲಿಯೂ ಮರಾಠಾ ಸಮಾಜದ ವಿವಾಹಗಳಲ್ಲಿ ಪಟಗಾ ಸುತ್ತಿ ಕುದುರೆಯ ಮೇಲೆಯೇ ಮೆರವಣಿಗೆ ತೆಗೆಯುತ್ತಾರೆ.

ಈ ಮದ್ರಾಸಿ ಮರಾಠಿ ಹೆಣ್ಣುಮಕ್ಕಳು ಕಚ್ಚೆ ಹಾಕಿ ಸೀರೆ ಉಟ್ಟುಕೊಂಡು, ಮೂಗಿನಲ್ಲಿ ನತ್ತನ್ನಿಟ್ಟುಕೊಂಡು, ತೋಳಿಗೆ ಬಾಜುಬಂದ್ ತೊಡಿಸಿ ಹಣೆಗೆ ಉದ್ದನೆಯ ಕುಂಕುಮವನ್ನಿಟ್ಟುಕೊಂಡು ಬಂದರೆ ಮಹಾರಾಷ್ಟ್ರದ ಚಲುವೇ ಮದ್ರಾಸಿನ ನೆಲದಲ್ಲಿ ನಡೆದಾಡಿದಂತಾಗುತ್ತದೆ. ಗಂಡಸರು ಲುಂಗಿಗಳನ್ನುಟ್ಟುಕೊಂಡರೂ ಮದುವೆಗಳಂಥ ಸಮಾರಂಭಗಳಲ್ಲೂ ದೇವತಾ ಕಾರ್ಯಗಳು ನಡೆದಾಗಲೂ ಕಚ್ಚೆ ಹಾಕಿ ಧೋತರ ಉಡುತ್ತಾರೆ.

ಭೋಜನ, ಮದುವೆ ಸಂಬಂಧಗಳು ಇನ್ನೂ ಸಂಪ್ರದಾಯಬದ್ಧ ರೀತಿಯಲ್ಲಿ ನಡೆಯುತ್ತಿವೆ. ಹಬ್ಬಹುಣ್ಣಿಮೆಗಳು ಮಹಾರಾಷ್ಟ್ರೀಯ ಪದ್ಧತಿಯಲ್ಲಿಯೇ ಆಚರಿಸಲ್ಪಡುತ್ತದೆ. ವಧೂವರರನ್ನು ಇವರು ಇನ್ನೂ ತಮ್ಮತಮ್ಮಲ್ಲಿಯೇ ಆಯ್ಕೆ ಮಾಡಿಕೊಳ್ಳುತ್ತಾರೆ. ಮರಾಠಿ ಮಾಧ್ವ ವಧು ಕರ್ನಾಟಕದ ವರನನ್ನು ಮದುವೆಮಾಡಿಕೊಳ್ಳುವುದು ಅತಿ ವಿರಳ. ಮಹಾರಾಷ್ಟ್ರದೊಡನೆಯಂತೂ ಇವರ ಸಂಬಂಧ ಆದೆಂದೋ ತಪ್ಪಿಹೋದಂತಾಗಿದೆ. ಆದರೂ ಸಂಬಂಧವನ್ನು ತಮ್ಮ ಸೀಮಿತ ಗುಂಪಿನಲ್ಲಿಯೇ ಬೆಳೆಸುತ್ತ ಬಂದಿದ್ದಾರೆ.

ಈ ಮದ್ರಾಸಿ ಮರಾಠಿಗರು ನೈಸರ್ಗಿಕವಾಗಿ ತಮಿಳರೊಂದಿಗೆ ಹೊಂದಿಕೊಂಡು ತಮಿಳರೇ ಆಗಿದ್ದರೂ, ಮದ್ರಾಸಿನಲ್ಲಿ ಒಂದು ನೂರು ಮರಾಠಿ ಕುಟುಂಬಗಳು ಇತ್ತಿಚಿನ ದಶಕಗಳಲ್ಲಿ ಬಂದು ನೆಲೆಸಿವೆ. ಇವರ ವ್ಯತಿರಿಕ್ತ ತಮಿಳು ನಾಡಿನ ಬೇರೆ ಬೇರೆ ಊರುಗಳಲ್ಲಿಯೂ ಕೆಲವು ಕುಟುಂಬಗಳು ಬಂದಿವೆ. ಆಗೀಗ ಮದ್ರಾಸಿನಲ್ಲಿ ನಡೆಯುವ ಮರಾಠಿ ನಾಟಕಗಳಿಗೆ ಪ್ರವೇಶ ದೊರೆಯುವುದು ಸಹ ಕಠಿಣವಾಗುವಷ್ಟು ನೂಕುನುಗ್ಗಲಾಗುತ್ತದೆ. ಆ ನಾಟಕಗಳನ್ನು ನೋಡಿ ಆಸ್ವಾದಿಸುವವರು ಇತ್ತೀಚೆಗೆ ಬಂದ ಮರಾಠಿಗರೇ ವಿನಾ, ವೆಂಕೋಜಿ ಕಾಲದಿಂದಲೂ ಬಂದ ಮದ್ರಾಸಿನಲ್ಲಿ ನೆಲಸಿದ ಮರಾಠಿಗರಲ್ಲ! ಅವರಿಗೆ ಆಧುನಿಕ ಅಥವಾ ಮಹಾರಾಷ್ಟ್ರದಲ್ಲಿ ಇಂದು ಆಡುವ ಮರಾಠಿಯೇ ಅರ್ಥವಾಗುವುದಿಲ್ಲ. ಅವರದೇ ಒಂದು ವಿಶಿಷ್ಟ ರೀತಿಯ ಮರಾಠಿ. ಆ ಮರಾಠಿ ಅಚ್ಚ ಮಹಾರಾಷ್ಟ್ರೀಯರಿಗೂ ಅರ್ಥವಾಗುವಂತಿಲ್ಲ. ಹೀಗಿದೆ ಈ ಮದ್ರಾಸಿ ಮರಾಠಿಗರ ಜೀವನದ ರೀತಿ!

✡

ಇದು ನಿಮ್ಮ ಅನುಭವಕ್ಕೂ
ಬಂದಿರಬಹುದಲ್ಲವೆ ?

ಅತಿಥಿಗಳು ಅತಿಯಾದಾಗ....

ಪಾ. ವೆಂ. ಆಚಾರ್ಯ

ಭಾರತದ ಸ್ವರ್ಣಯುಗವನ್ನು ಅತಿಥಿ ಸತ್ಕಾರದ ಯುಗ ಅನ್ನಬೇಕು. ಶಾಸ್ತ್ರಗಳ ಪ್ರಕಾರ ಅತಿಥಿ ಸತ್ಕಾರ ಅನ್ನುವುದು ಪಂಚಮಹಾಯಜ್ಞಗಳಲ್ಲಿ ಒಂದು. ಆ ಕಾಲವೇ ಹಾಗಿತ್ತು. ಹಳ್ಳಿಗಳು ದೂರ ದೂರ. ಊರಿಂದೂರಿಗೆ ಪ್ರಯಾಣ ಅಪರೂಪ. ದಿನಾ ಅದೇ ಅದೇ ಮೋರೆಗಳನ್ನು ನೋಡಿ, ಅದೇ ಅದೇ ಜನರ ಕೈಲಿ ಜಗಳಾಡಿ ಬೇಜಾರು. ಹಳ್ಳಿಯಲ್ಲಿ ಹೊಸ ಮುಖ ಕಾಣಿಸಿಕೊಂಡರೆ ಸರ್ಕಸ್ ಬಂದಷ್ಟು ಉತ್ಸಾಹ. ಪಯಣಿಗರಿಗೂ ಅಷ್ಟೇ. ಹೋಟೆಲು ಗಳಿಲ್ಲ, ಪ್ರವಾಸಿ ಬಂಗ್ಲೆಗಳಿಲ್ಲ. ಕತ್ತಲಾದಲ್ಲಿ ಯಾರ ಮನೆಯಲ್ಲಾದರೂ ಠಾಣೆ ಹೊಡೆಯದೆ ಗತಿಯಿಲ್ಲ. ಏನಾದರೂ ಸಂಬಂಧದ ಗೊಣಸು ಸಿಕ್ಕಿದರೆ ಮತ್ತಷ್ಟು ಪ್ರಶಸ್ತ. ಆಗಿನ ಕಾಲದಲ್ಲಿ ನಿಮ್ಮ ತಾಯಿಯ ಸೋದರತ್ತೆಯ ಅತ್ತಿಗೆಯ ಅಜ್ಜಿ ಯನ್ನೂ ಅತಿಥಿಯ ತಂದೆಯ ಅಜ್ಜಿಯನ್ನೂ ಒಂದೇ ಅಡವಿಯಲ್ಲಿ ಹುಲಿ ಅಟ್ಟಿಕೊಂಡು ಬಂದಿದ್ದರೆ ಅದು ತುಂಬಾ ಹತ್ತಿರದ ಸಂಬಂಧ; ಇಂಥ ನಂಟಿನ ಎಳೆ ಸಿಕ್ಕಿದರೆ ಮನೆಯಲ್ಲಿ ಸಂಭ್ರಮವೋ ಸಂಭ್ರಮ. ಅವನ ಉಪಚಾರಕ್ಕೆ ಮನೆಯೆಲ್ಲ ಬುಡಮೇಲು. ಮಕ್ಕಳು ಹೊರಗೆ ಬಂದು ಹಣಕಿ ಹಾಕಿ ನೋಡ ಬೇಕು. ಮಾರನೇ ದಿನ ಬೆಳಗ್ಗೆ ಎದ್ದು ಅತಿಥಿ ಹೊರಡು ತ್ತೇನೆ ಅಂದರೆ, "ಛೇ, ಛೇ; ಎಲ್ಲಾದರೂ ಉಂಟೆ ? ನಿನ್ನೆ ತಾನೆ ಬಂದಿದ್ದೀರಿ ? ಹೊರಡಲಿಕ್ಕೆ ಅಂಥಾ ಪರಾತುರಿ ಏನು?" ಅಂತ ತಗಾದೆ. ಅಷ್ಟು ದೂರ ಯಾಕೆ? ನಾವೇ ಚಿಕ್ಕವರಿದ್ದಾಗ. ಮನೆಗೆ ಯಾವ ನಾದರೂ ಬಾದರಾಯಣ ಸಂಬಂಧದ ನಂಟ ಬಂದರೆ, ಆತ ಬೇಗ ಹೊರಡದ ಹಾಗೆ ಅವನ ಕೊಡೆಯನ್ನ ನಾವು ಮಕ್ಕಳು ಅಡಗಿಸಿಡುತ್ತಿದ್ದೆವು.

ನೆಂಟರೆ ಯಾಕೆ ? ಯಾವ ನಂಟೂ ಇಲ್ಲದೆ ಹೋದರೂ ಅತಿಥಿಗೆ ಒಂದು ರಾತ್ರಿಯ ಆತಿಥ್ಯ ವಂತೂ ಪುರಾತನದಲ್ಲಿ ಗ್ಯಾರಂಟಿ ಇತ್ತು. ಮನೆಯಲ್ಲಿ ಯಜಮಾನ ಇಲ್ಲದಿದ್ದರೂ ಹೆಂಗಸರು ಅಂಜದೆ ಆತಿಥ್ಯ ಮಾಡುತ್ತಿದ್ದರು. ಅತಿಥಿ ತರುಣನಾಗಿದ್ದರೆ ಮತ್ತು ಮನೆಯ ಸೊಸೆಯೋ ಮಗಳೋ ತರುಣಿ ಯಾಗಿದ್ದರೆ, ಕಣ್ಣುಗಳು ಕಣ್ಣುಗಳ ಸಂಗಡ ಮಾತಾ- ಡುತ್ತಿದ್ದದ್ದೂ ಉಂಟು. ಗಾಥಾ ಸಪ್ತಶತಿಯ ಒಬ್ಬ ದಿಟ್ಟೆ ಸೊಸೆ ಸಂಜೆ ಆಶ್ರಯಾರ್ಥಿಯಾಗಿ ಬಂದ ಅತಿಥಿಗೆ ಹೀಗೆ ಅರ್ಥಪೂರ್ಣ ಎಚ್ಚರಿಕೆ ಕೊಟ್ಟಳಂತೆ.

ಅತ್ತೆಮ್ಮ ಹಣ್ಮುದುಕಿ, ಮೈಮರೆತು
ಮಲಗುವಳು;
ಇದು ನಾನು ಮಲಗುವಾ ತಾಣ
ಎಲೆ ಅತಿಥಿ, ನೀ ಇರುಳುಗಣ್ಣ,
ರಾತ್ರಿಯಲೆದ್ದು;
ಎಡವದಿರು ನನ್ನನ್ನು ಜಾಣ.

ಮರುದಿನ ಬೆಳಿಗ್ಗೆ ಅತಿಥಿಯ ಮುಂಪಯಣ ಎಷ್ಟು ಹೃದಯಭೇದಕವಾಗಿದ್ದಿರಬಹುದು, ನೀವೇ ಊಹಿಸಿಕೊಳ್ಳಿ, ಅಥವಾ ಅವನ ಮೇಲೆ ಹೊಟ್ಟೆ ಕಿಚ್ಚುಪಡಿ.

ಬಹಳ ಪ್ರಾಚೀನದಲ್ಲಿ ಅತಿಥಿಯ ಮೂಲಭೂತ ಹಕ್ಕುಗಳ ಅಧ್ಯಾಯ ವಿಸ್ತಾರವಾಗಿತ್ತಂತೆ. ಮನೆಯ ಯಜಮಾನಿಯೂ ಸೇರಿದ ಹಾಗೆ ಎಲ್ಲಾ ಸೊತ್ತುಗಳ ಉಪಭೋಗದ ಸ್ವಾತಂತ್ರ್ಯ ಆ ರಾತ್ರೀ ಮಟ್ಟಿಗೆ ಅತಿಥಿಗಿತ್ತು. ಎಸ್ಕಿಮೋ ಜನರಲ್ಲಿ ಈ ಆತಿಥ್ಯ ಧರ್ಮ ಈಗಲೂ—ಅಥವಾ ಈಚೆಗಿನ ವರೆಗೂ ಇತ್ತಂತೆ. ಅತಿಥಿ ಮನೆಯ ಯಜಮಾನಿಯನ್ನ ನಿರಾಕರಿಸಿದರೆ ಅದು ಯಜಮಾನನಿಗೆ ಮಹಾ ಇನ್‌ಸಲ್ಟ್ ಅಂತೆ.

ಈ ಸುವರ್ಣಯುಗದಲ್ಲಿ ಕೂಡ ಕೆಲವೊಮ್ಮೆ ಅತಿಥಿ ಸತ್ಕಾರದಲ್ಲಿ ಯಜಮಾನನ 'ತಿಥಿ'ಯೇ ಆಗಿ ಬಿಡುತ್ತಿತ್ತು. ಅಂಥ ಭಯಂಕರ ಅತಿಥಿಗಳು ಆಗ ಇದ್ದರು. ನೀವು ಅಗಸ್ತ್ಯ ಮುನಿಯ ಹೆಸರು ಕೇಳಿಲ್ಲವೇ ? ಆತ ಒಂದು ಸಲ ಇಂದ್ರದ್ಯುಮ್ನ ಅನ್ನುವ ಪಾಂಡ್ಯರಾಜನಲ್ಲಿಗೆ ಹೋದ. ಮಹಾ ವಿಷ್ಣುವಿನ ಧ್ಯಾನದಲ್ಲಿ ಮುಳಗಿದ್ದ ರಾಜನಿಗೆ ಕೂಡಲೆ ಅತಿಥಿಯ ಆಗಮನ ತಿಳಿಯಲಿಲ್ಲ. ಧಿಡೀರ್ ಉಪಚಾರ ಆಗದ್ದಕ್ಕೆ ಅಗಸ್ತ್ಯನಿಗೆ ಕೋಪಾವೇಶ ಬಂದು ರಾಜನಿಗೆ ಆನೆಯಾಗಿ ಹುಟ್ಟು ಅಂತ ಶಾಪ ಕೊಟ್ಟುಬಿಟ್ಟ. ಸರ್ವಶಕ್ತನಾದ ವಿಷ್ಣು ಕೂಡ ಮಧ್ಯಪ್ರವೇಶ ಮಾಡುವುದಕ್ಕೆ ಅಶಕ್ತನಾದ. ಇನ್ನೊಂದು ಉದಾಹರಣೆ ದುರ್ವಾಸ ಮುನಿಯದು. ಆತ ವನವಾಸಿ ಪಾಂಡವರ ಬಿಡಾರಕ್ಕೆ ಒಂದು ದಿನ ಅಪರಾಹ್ನದಲ್ಲಿ ಹಿಂಡು ಶಿಷ್ಯರ ಬೆರಸಿ ಪಕ್ಕರಿಸಿ ಈಗಿಂದೀಗ ಎಲ್ಲರಿಗೂ ಔತಣ ಆಗಬೇಕು ಅಂದ. ಪಾಂಡವರೋ ಊಟ ಮುಗಿಸಿ ಆಗಿತ್ತು. ಅಕ್ಷಯ ಪಾತ್ರೆಯೆಂಬ ಅನ್ನದ ಗಡಿಗೆಯನ್ನ ತೊಳೆದಿಟ್ಟಾಗಿತ್ತು. ಪುಣ್ಯಕ್ಕೆ ಅನ್ನದ ಗಡಿಗೆಯಲ್ಲಿ ಹೇಗೋ ಒಂದು ಮುಸುರೆ ಅಗಳು ಉಳಿದದ್ದರಿಂದ ಪಾಂಡವರು ಬಚಾವಾದರಂತೆ. ಈ ಘಟನೆಯ ಒಂದು ಕೊರಲರಿಯೆಂದರೆ, ದ್ವಾಪರಯುಗದಲ್ಲಿ ಕೂಡ ಮುಸುರೆ ತಿಕ್ಕುವವರು ಕಲಿಯುಗದವರ ಹಾಗೆನೇ ಕೆಲಸ ಮಾಡುತ್ತಿದ್ದರು ಅಂತ. ಆದರೆ ಇದು ಇಲ್ಲಿ ಅಪ್ರಸ್ತುತ. ಮಾತಿಗೆ ಹೇಳಿದೆ ಅಷ್ಟೇ.

ಇದು ಪುರಾತನದ ಮಾತಾಯಿತು. ಈಗ ಮುನಿಗಳೂ ಇಲ್ಲ; ಶಾಪಶಕ್ತಿಯೂ ಇಲ್ಲ ಅನ್ನಬೇಡಿ. ಮುನಿಗಳು ಇಲ್ಲದಿದ್ದರೂ ಮುನಿಸಿನ ಅತಿಥಿಗಳು ಇದ್ದೇ ಇದ್ದಾರೆ. ನನ್ನ ಒಬ್ಬ ಸ್ನೇಹಿತರ ಮನೆಗೆ ಒಬ್ಬ ಅತಿಥಿ–ಮಹಾರಾಜ ಬಂದಿದ್ದರು. ಯಾರೋ ಒಬ್ಬ ಸ್ನೇಹಿತರ ಶಿಫಾರಸು ಹಿಡಿದುಕೊಂಡು ಬೇರೆ ಬಂದಿದ್ದರಿಂದ ಅವರನ್ನ ನನ್ನ ಮಿತ್ರರು ಮನೇಲಿ ಇಳಿಸಿಕೊಂಡರು. ಮೊದಲನೇ ದಿನ ನಾರ್ಮಲ್ಲಾಗಿ ಸಾಗಿತು. ಅತಿಥಿಗಳು ಭಾರಿ ಆಚಾರವಂತರು. ಸ್ನಾನಪಾನಾದಿವರು ಮೂರು ಗಂಟೆ ಕಾಲ ಮೂಗು ಹಿಡಿದು ಕೂತದ್ದು ಕಂಡು, ಸ್ವಲ್ಪ ಧರ್ಮಾಭಿಮಾನಿಗಳಾದ ನನ್ನ ಮಿತ್ರರಿಗೆ ತುಂಬಾ ಇಂಪ್ರೆಶ್ಯನ್ ಆಯಿತು. ಅತಿಥಿಗಳು ಜಪಾಹ್ನಿಕದಲ್ಲಿ ಎಷ್ಟು ಬಲವೋ ಊಟದಲ್ಲಿಯೂ ಅಷ್ಟೇ ಬಲ ಅನ್ನೋದು ಊಟದ ಹೊತ್ತಿಗೆ ಸಿದ್ಧವಾಯಿತು. ಆದರೆ ನನ್ನ ಸ್ನೇಹಿತರಿಗೆ ಪ್ರಕೃತಿ ದೋಷದಿಂದ ಸ್ವತಃ ಹೆಚ್ಚು ಊಟ ಹೋಗುತ್ತಿರಲಿಲ್ಲವಾಗಿ, ಉದರಾಗ್ನಿ ಚೆನ್ನಾಗಿದ್ದವರನ್ನು ಕಂಡರೆ ಖುಷಿಯೇ ಆಗುತ್ತಿತ್ತು. ಎರಡನೇ ದಿನ ಯಜಮಾನರು ಲೋಕಾಭಿರಾಮ ವಾಗಿ ತಮ್ಮಲ್ಲಿಯ ಊಟ ಅತಿಥಿಗಳಿಗೆ ಸರಿ ಹೋಗುತ್ತೋ ಅಂತ ಕೇಳಿದ್ದಕ್ಕೆ, ಮತ್ತೆಲ್ಲ ಉತ್ಕೃಷ್ಟವಾಗಿದೆ, ಆದರೆ ತಮಗೆ ಸ್ವಲ್ಪ ಹೆಚ್ಚು ಖಾರ ಅಭ್ಯಾಸ, ತೀರ ಸಪ್ಪಗಿನ ಊಟ ಅಷ್ಟು ಒಳ್ಳೇದೂ ಅಲ್ಲ– ಅಂತ ನಗುನಗುತ್ತಲೇ ಅಂದರು. ಅವರ ಇಷ್ಟಕ್ಕೆ ಸರಿಯಾಗಿ ಎಲ್ಲರಿಗೂ ಖಾರ ಅಡಿಗೆ ಪ್ರಾರಂಭವಾಯಿತು. ಊಟದ ವಿಷಯದಲ್ಲಿ ಯಜಮಾನರ ಮನೆಯನ್ನು ತಮ್ಮ ಮೂಗಿನ ನೇರಕ್ಕೆ ತಿದ್ದಿಕೊಂಡ ಮೇಲೆ ಅತಿಥಿಗಳು, ಮನೆಯ

ಹೆಂಗಸರು–ಮಕ್ಕಳ ಶೀಲವನ್ನು ತಿದ್ದುವ ಕೆಲಸ ಕೈಕೊಂಡರು. ಮನೆಯ ಸೊಸೆ ಒಂದು ದಿನ ಅಬ್ಬಲ್ಲಿಗೆ ಹೂ ಮುಡಿದದ್ದು ನೋಡಿ ಅವರು "ಕೋಪ ಮಾಡಿಕೋಬೇಡಮ್ಮ, ಅಬ್ಬಲ್ಲಿಗೆ ಸೂಳೇರು ಮುಡಿಯೋ ಹೂ. ಗರತಿಯರಿಗೆ ಸಲ್ಲ. ತೆಗೆದುಹಾಕಿಬಿಡು." ಅಂದರು. ಸೊಸೆ ಮುಖ ಸಿಂಡರಿಸಿಕೊಂಡರೂ ಅತಿಥಿಗಳ ಆಜ್ಞೆ ಪಾಲಿಸಿದಳು. ಮರುದಿನ ಮನೆಯ ಕಾಲೇಜು ಮಗಳ ಹಣೆಯ ಕುಂಕುಮದ ಬೊಟ್ಟಿನ ಗಾತ್ರದ ವಿಮರ್ಶೆ ಆಯಿತು. ಅವಳು ಹುಬ್ಬು ಗಂಟಿಕ್ಕಿದ್ದು ನೋಡಿ, "ನಾನು ಕಂಡದ್ದು ಕಂಡ ಹಾಗೆ ಹೇಳುವವನೇ, ಕೇಳುವವರು ಕೇಳಲಿ ಬಿಡಲಿ," ಎಂದರು. ಅದರ ಮರುದಿನ ಸೇವಕನ ಸೇವಾಧರ್ಮದ ಅಸಮರ್ಪಕತೆ ಟೀಕೆಗೆ ಗುರಿಯಾಯಿತು. ಅವನು ಲಘುವಾಗಿ, "ಭಟ್ಟರೇ, ನೀವು ಹೇಳೋ ಧರ್ಮ. ಜನಮೇಜಯ, ರಾಯ ಲಂಗೋಟೀಲಿ ತಿರುಗುತ್ತಿದ್ದಾಗ ಬರೆದಿಟ್ಟದ್ದಲ್ಲವೇ?" ಅಂತ ಉಡಾಫೆ ಮಾತಾಡಿದ್ದಕ್ಕೆ ರಾದ್ಧಾಂತ ಎದ್ದುಹೋಯಿತು. ನಡುನಡುವೆ ಯಜಮಾನರ ಕಾರು ಅತಿಥಿಗಳಿಂದ ಕಮಾಂಡಿಯರ್ ಆಗುತ್ತಿತ್ತು. ಎರಡು ವಾರ ಹೋಯಿತು, ತಿಂಗಳು ಹೋಯಿತು. ಈ ಮನೆಯ ನಡತೆಯನ್ನು ಪೂರ್ತಿ ತಿದ್ದದ ಹೊರ್ತು ಅತಿಥಿ ದೇವರು ಕದಲುವ ಲಕ್ಷಣ ಕಾಣಿಸಲಿಲ್ಲ. ಸಾಲದ್ದಕ್ಕೆ, "ನನ್ನ ಸಂಬಂಧಿಕ ವೆಂಕಟೇಶ ತನ್ನಲ್ಲಿ ಬಂದುಬಿಡು ಅಂತಾ ಇದ್ದಾನೆ. ನಿಮಗೆ ಬೇಜಾರಾಗುತ್ತೆ ಅಂತ ಹೋಗಲಿಲ್ಲ" ಅಂತ ಬೇರೆ ಉಪಕಾರದ ಧಾಟಿ.

ಕಡೆಗೆ ಸಮಸ್ಯೆ ಬಗೆಹರಿದದ್ದು ಹೀಗೆ: ಒಂದು ದಿನ ಅತಿಥಿಗಳ ಹೆಸರಿಗೆ ಅವಳ ಮಗಳ ಹೆಸರಿಂದ ಎಕ್ಸ್‌ಪ್ರೆಸ್ ತಂತಿ ಬಂತು "ಸ್ಟಾರ್ಟ್ ಇಮಿಜಿಯಟ್ಲಿ" ಅಂತ. ಯಜಮಾನರ ಕಾಲೇಜು ಮಗ ಅವರನ್ನ ಕಾರಿನಲ್ಲೇ ಕರೆದುಕೊಂಡು ಹೋಗಿ ತಾನೇ ಟಿಕೆಟ್ ತೆಗೆಸಿ ರೈಲು ಹತ್ತಿಸಿ ಬಂದ. ನಾಲ್ಕನೇ ದಿವಸ ಅತಿಥಿಗಳ ಪತ್ರ ಬಂದದ್ದರಲ್ಲಿ ಯಾರೋ ತಮಗೆ ಸುಳ್ಳು ತಂತಿ ಕೊಟ್ಟು ಫೂಲ್



"ಸ್ಮೈಲ್ ಪ್ಲೀಸ್……"

ಮಾಡಿದರು ಅಂತ ಇತ್ತು. ಯಜಮಾನರ ಮಗ ಬಲ್ಲವರ ಹಾಗೆ ಸಣ್ಣಗೆ ನಕ್ಕು, "ಪುಣ್ಯಕ್ಕೆ ಈ ಸುದ್ದಿ ಹೇಳಲಿಕ್ಕೆ ಮಹಾರಾಯ ತಾನೇ ಚಿತ್ತೈಸಲಿಲ್ಲವಲ್ಲ" ಅಂದುಬಿಟ್ಟ. ಯಜಮಾನರು ಹೆಚ್ಚು ಕ್ರಾಸ್ ಮಾಡಲಿಲ್ಲ.

ಎಲ್ಲಾ ಅತಿಥಿಗಳೂ ನಮ್ಮೀ ಆದರ್ಶ ಅತಿಥಿ ಮಹಾಶಯನ ಹಾಗೆ ಇರುತ್ತಾರೆ ಅಂತ ನಾನು ಹೇಳುವುದಿಲ್ಲ. ಕೆಲವರು ತುಂಬಾ ಇನ್ನೊಸೆಂಟ್-ನಿರ್ಮಾಯಕರಾಗಿರುತ್ತಾರೆ. ವಿಶೇಷವಾಗಿ ಗ್ರಾಮಾಂತರದಿಂದ ಬಂದವರು ಶಹರಿನಲ್ಲಿ ಆಸ್ಪತ್ರೆ ಕೆಲಸಕ್ಕೋ ಕಾಲೇಜು ಸೇರಬೇಕೆಂಬ ಮಗನ ಕೆಲಸಕ್ಕೋ ಬರುವವರು ಅವರು. ನಿಮ್ಮ ಅಸ್ಪತ್ರೆ ಬೀಳಬೇಕೆಂಬವರಲ್ಲ, ಆದರೆ ಶಹರಿನಲ್ಲಿ ಇರುವವರ ಬದುಕು ಕಟ್ಟುನಿಟ್ಟಾಗಿ ಸಾಗಬೇಕಾಗುತ್ತೆ ಅಂತ ಅವರಿಗೆ ಅರ್ಥವೇ ಆಗುವುದಿಲ್ಲ. ನೀವು ಉಪಚಾರಕ್ಕೆ ಕೂಡ, "ನಿಮ್ಮ ಮನೇ ಅಂತಲೇ ತಿಳಕೊಳ್ಳಿ" ಅನ್ನದಿದ್ದರೂ ನಿಮ್ಮ ಮನೆಯನ್ನ ತಮ್ಮ ಮನೆಯ ಹಾಗೇನೇ ಮಾಡಿಬಿಡುತ್ತಾರೆ. ತಮ್ಮೂರಿನಲ್ಲಿ ಮಾಡಿದಂತೆ, ಇಲ್ಲಿಯೂ ಗಟ್ಟಿಯಾಗಿ ಮಾತಾಡಿ ನಿಮ್ಮ ಚಾಳಿನ ನೆರೆಯವರು ಗೊಣಗುವ ಹಾಗೆ ಮಾಡುತ್ತಾರೆ. ನಿಮ್ಮ ಓವರ್ ಹೆಡ್ ಟ್ಯಾಂಕ್ ಅಂದರೆ ಗಂಗೆಯನ್ನ ತುಂಬಿಟ್ಟುಕೊಂಡ ಶಿವನ ಜಡೆ ಅಂತಲೇ ತಿಳಕೊಂಡು ನೀರು ಖರ್ಚು ಮಾಡುತ್ತಾರೆ. ನಿಮಗೆ ಇರುವ ಅಲ್ಪ ಸ್ವಲ್ಪ ಅಂಗಳದಲ್ಲೇ ಎಲೆ ಅಡಿಕೆ ಜಗಿದು ಚಿರಂತ ಪಿಚಕಾರಿ ಹೊಡೆದು, ದುನಿಯಾ ರಂಗ ಬಿರಂಗೀ ಮಾಡುತ್ತಾರೆ. ಒಬ್ಬರು ಬಂದರೆ ಸಾಲು ವಲ್ಲಿ ಹೆಂಡರೂ ಮಕ್ಕಳನ್ನೂ ಕಟ್ಟಿಕೊಂಡು ಬಂದು ಠಾಣೆ ಹೊಡುತ್ತಾರೆ. ನನ್ನ ಸಂಬಂಧಿಕರೊಬ್ಬರು ನೆಂಟರ ಕಾಟ ತಪ್ಪಿಸಿಕೊಳ್ಳಬೇಕಂತಲೇ ದೊಡ್ಡ ಮನೆ ಬಿಟ್ಟು ಸಣ್ಣ ಮನೆ ಹಿಡಿದಿದ್ದಾರೆ. ದೊಡ್ಡ ಮನೆ ಅತಿಥಿಗಳನ್ನು ಬಲವಾಗಿ ಆಕರ್ಷಿಸುತ್ತದೆ ಅನ್ನೋ ಗುರುತ್ವಾಕರ್ಷಣ ಸಿದ್ಧಾಂತವನ್ನ ಅವರು ಕಂಡುಹಿಡಿದಿದ್ದಾರೆ.

ಅತಿಥಿಗಳ ಆಗಮನದಿಂದಾಗುವ ದೊಡ್ಡ ಕಷ್ಟ ಅಂದರೆ ನಿಮ್ಮ ಸ್ವಾತಂತ್ರ್ಯ ನಾಶ. ಈವೊತ್ತು ರಾತ್ರಿ ಅಡಿಗೆ ಮಜಾ, ಗಂಡ - ಹೆಂಡತಿ ಹೋಟೆಲಿನಲ್ಲಿ ಉಂಡು ಬಂದು ತಣ್ಣಗೆ ಮಲಗುವಾ ಅಂತಲೋ, ಅಥವಾ ಈವೊತ್ತು ಅಕ್ಕಿ ಮುಗಿದಿದೆ, ಸುಮ್ಮನೆ ಭಕ್ಕರಿ ಮೇಲೆ ಕಾಲ ತಳ್ಳೋದು ಅಂತಲೋ ನೀವು ನಿಶ್ಚಯಿಸಿದ ದಿನವೇ ಹೇಳಿಕಳಿಸಿದವರ ಹಾಗೆ ಅತಿಥಿಗಳು ಹಾಜರಾದರೆ ನೀವು ಏನು ಮಾಡಬೇಕು? ನೆರೆಮನೆಗೆ ಹೋಗಿ ಅಕ್ಕಿ ಕೈಗಡ ತಂದು ಅತಿಥಿ ಸತ್ಕಾರ ಮಾಡಬೇಕು. ಮತ್ತು ನೆರೆಯವರಿಗೆ ಕೈಗಡಕ್ಕೆ ನಿಮ್ಮಲ್ಲಿಗೆ ಬರುವುದಕ್ಕೆ ಮುಕ್ತದ್ವಾರ ಮಾಡಿಕೊಡಬೇಕು-ಅಲ್ಲವೇ?

ಅತಿಥಿ ವಕ್ರಿಸಿದನೋ, ನಿಮ್ಮ ಮನೆಯ ಪ್ರೈವೆಸಿ-ಖಾಸಗಿತನ ಏನೂ ಉಳಿಯೋದಿಲ್ಲ. ಇಲ್ಲಿ ಒಂದು ರೊಮ್ಯಾಂಟಿಕ್ ಕಥೆ ಹೇಳಬೇಕು. ಹೊಸದಾಗಿ ಮದುವೆ ಮಾಡಿಕೊಂಡು ಮನೆ ಹೂಡಿದ ಸತಿ-ಪತಿ. ಒಳ್ಳೆಯ ಮಸಾಲೆ ರೋಮಾನ್ಸ್ ಬೇಕು ಅಂತ ಒಂದು ನವೀನ ಯೋಜನೆ ಹೂಡುತ್ತಾರೆ. ಇಬ್ಬರಿಗೂ ಪ್ರಿಯವಾದ ಪಕೋಡಾ ತಯಾರಿಸಿ ನಡುವೆ ಇಟ್ಟುಕೊಂಡು ಇಬ್ಬರೂ ಕಣ್ಣು ಕಟ್ಟಿಕೊಂಡು ಎದುರುಬದುರು ಕೂತುಕೊಬೇಕು. ಅವನ ಬಾಯಿಗೆ ಅವಳು, ಅವಳ ಬಾಯಿಗೆ ಅವನು ಸರತೀ ಮೇಲೆ ಒಂದೊಂದಾಗಿ ಪಕೋಡಾ ತುಂಬಬೇಕು. ಯೋಜನ ಮಜಾ ಇತ್ತು ಅನ್ನಿ. ಆದರೆ ಮನೆ ಬಾಗಿಲಿಗೆ ಅಗಳಿ ಹಾಕಿಕೊಳ್ಳದೆ ಅವರು ಪ್ರಮಾದ ಮಾಡಿದರು. ಅವರು ಕಣ್ಣು ಕಟ್ಟಿಕೊಂಡು ಎದುರುಬದುರು ಕೂತುಕೊಂಡಿದ್ದರೋ ಇಲ್ಲವೋ ಅವಳ ತಮ್ಮ ಆಕಸ್ಮಿಕ ಅತಿಥಿಯಾಗಿ ಬಂದವನು ಮೆಲ್ಲಗೆ ಅರೆ ಅರೆ ಬಾಗಿಲನ್ನ ತಳ್ಳಿ ಒಳಹೊಕ್ಕ. ಹುಡುಗ ಬಲೇ ಘಾಟಿ. ಸದ್ದಿಲ್ಲದೆ ಬಂದು ಮಧ್ಯದಲ್ಲೆ ಕೂತ. ಅವಳು ಅವನ ಬಾಯಿಗೆ ಕೊಡೋದಕ್ಕೆ ಪಕೋಡಾ ಎತ್ತಿದರೆ ಅದಕ್ಕೆ ಬಾಯಿ ಒಡ್ಡಿದ. ಅವನು ಅವಳ ಬಾಯಿಗೆ ಒಯ್ದರೆ ಅದಕ್ಕೂ ಬಾಯಿ ಒಡ್ಡಿದ. ಪಕೋಡಾ ಅರ್ಧ ಖಾಲಿಯಾದ ಮೇಲೆ. ಇಬ್ಬರೂ ಒಬ್ಬರನ್ನೊಬ್ಬರು ವಿಶ್ವಾಸಘಾತಕ್ಕಾಗಿ ಆರೋಪಿಸಿದರು. ಇಬ್ಬರೂ ನಾಟ್ ಗಿಲ್ಟಿ ಪ್ರತಿವಾದ ಹೂಡಿದರು. ಕಣ್ಣು ಬಿಚ್ಚಿ ನೋಡಿದರೆ ಕೂತಿದ್ದಾನೆ ನಡುವೆ ಗುಂಡೋದರ ಭಾವ ಮೈದ.

ನನ್ನ ಅತಿಥಿಪೀಡಿತ ಕ್ಲಾಸ್ಮೇಟಿಗೆ ನಾನು ಈ ಕಥೆ ಹೇಳಿದರೆ ಆತ ತಲೆ ಚಚ್ಚಿಕೊಂಡು ಹೇಳಿದ. "ನಿನ್ನ ರೋಮಾನ್ಸಿಗೆ ಬೆಂಕಿ ಹಚ್ಚ: ಮದುವೆ

ಹಳೇದಾಗಿ ರೋಮಾನ್ಸ್ ಐಸ್ ಕೋಲ್ಡ್ ಆಗಿರೋ ನನ್ನ ದಾಂಪತ್ಯಕ್ಕೆ. ನನ್ನ ಹೆಂಡತಿ ಸಂಗಡ ಹೇಗಾದರೂ ಕಾಲು ಕೆದರಿ ಖಡಾಖಡಿ ಜಗಳ ಮಾಡಿ ಸ್ವಲ್ಪ ಬಿಸಿ ಏರಿಸಬೇಕು ಅಂದುಕೊಂಡರೆ ನನ್ನ ಹಣೇಬರಕ್ಕೆ ಅದಕ್ಕೂ ಚಾನ್ಸ್ ಸಿಗಲ್ಲ ನೋಡಯ್ಯ ಈ ಅತಿಥಿಗಳ ಕಾಟದಿಂದ! ಜಗಳ ತೆಗೆಯಕ್ಕೆ ನನಗೆ ಒಳ್ಳೆ ನೆವ ಸಿಕ್ಕಿದ ದಿವಸ ಸಂಜೆ ಅವಳ ಪೈಕಿ ಯಾರಾದರೂ ಒಬ್ಬ ಅತಿಥಿ ಹಾಜರ್. ಅವಳಿಗೆ ಒಳ್ಳೆ ಕಾರಣ ಸಿಕ್ಕಿದಾಗ ನನ್ನ ಪೈಕಿ ಯಾರಾದರೂ ತಯಾರ್. ಜಗಳ ಸ್ವಾತಂತ್ರ್ಯ ಕೂಡ ಇಲ್ಲಯ್ಯ ನಮಗೆ!" ನಿಜವೇ. ಅತಿಥಿಗಳ ಸಮ್ಮುಖದಲ್ಲೇ ಹೇಗಪ್ಪಾ ಜಗಳ ಮಾಡೋದು? ಆದರೆ ಬುದ್ಧಿವಂತರು ಅತಿಥಿಗಳು ಬಂದಾಗ ತಮ್ಮಲ್ಲೇ ಜೋರಾಗಿ ಜಗಳಾಡಿ ಅತಿಥಿಗಳನ್ನ ಓಡಿಸಿದ್ದನ್ನೂ ನಾನು ನೋಡಿದ್ದೇನೆ.

ಅತಿಥಿ ಅನ್ನೋ ಶಬ್ದಕ್ಕೆ "ನ ತಿಷ್ಠತಿ ಶ್ವಃ" ನಾಳೆ ಬೆಳಗಿನ ನಂತರ ನಿಲ್ಲುವುದಿಲ್ಲ ಅಂತ ಅರ್ಥವಂತೆ. ಅತಿಥಿಗಳು ನಿಜಕ್ಕೂ ಹೀಗೆ ಮಾಡಿದ್ದರೆ ಯಜಮಾನರು ಸಹಿಸಬಹುದು. ಹೆಚ್ಚು ಕಾಲ ನಿಂತು ಯಜಮಾನರ ಸಹನಾಪರೀಕ್ಷೆ ಮಾಡುವವರಿಗೆ ಹಿಂದಿನವರು ಒಂದು ಸಾಂಕೇತಿಕ ನೋಟೀಸು ಕೊಡುತ್ತಾ ಇದ್ದರಂತೆ. ಏನು ಅಂದರೆ ಶಾವಿಗೆ ಮಾಡಿ ಬಡಿಸೋದು. ಶಾವಿಗೆ ಮಾಡಿದರೆ ಅತಿಥಿ ಇನ್ನು ಇಲ್ಲಿಂದ ಕದಲಬಹುದು ಅಂತ ಅರ್ಥವಂತೆ.

ಒಮ್ಮೆ ಬೊಂಬಾಯಿಗೆ ಹೋಗಿದ್ದಾಗ ಅತಿಥಿಗಳನ್ನು ನಿಭಾಯಿಸುವಲ್ಲೇ ಗೃಹಿಣಿಯರ ಪಾತ್ರವನ್ನು ಕುರಿತು ನನಗೆ ಒಂದು ಆಬ್ಜೆಕ್ಟ್ ಲೆಸನ್ ಸಿಕ್ಕಿತು. ಹೋಟೆಲಿನಲ್ಲಿ ಅತಿಥಿಯಾಗಿದ್ದ ನನಗೆ ನನ್ನ ಒಬ್ಬ ಬೊಂಬಾಯಿ ಮಿತ್ರ ತನ್ನ ಮನೆಗೆ ಬರಬೇಕು ಅಂತ ದಿನಾ ನಿರ್ಬಂಧಪಡಿಸ್ತಾ ಇದ್ದ. ಕಡೆಗೆ ಒಂದು ರವಿವಾರ ಐದು ಗಂಟೆಗೆ ನಾನು ಅವನ ಸಬರ್ಬಿಗೆ ಬಸ್ಸಿನಲ್ಲಿ ಹೋಗಬೇಕು, ಅವನು ನನ್ನನ್ನು ಅಲ್ಲಿ ಪಿಕಪ್ ಮಾಡಿ ಮನೆಗೆ ಕರಕೊಂಡು ಹೋಗಬೇಕು, ರಾತ್ರಿ ಅಲ್ಲೇ ಊಟ ಅಂತ ತಹಾ ಆಯಿತು. ಹದಿನೇಳು ಮೈಲು ದೂರದ ಅವನ ವಸ್ತಿಗೆ ಬಸ್ಸಿನಲ್ಲೇ ಹೋಗಿಳಿದರೆ ಎಲ್ಲಿದ್ದಾನೆ ಆತ? ಪುಣ್ಯಕ್ಕೆ ಇನ್ನೊಬ್ಬ ಮಿತ್ರರು ಸಿಕ್ಕಿ ತಮ್ಮ ಮನೆಗೆ ಕರೆದುಕೊಂಡು ಹೋದರು. ಅಲ್ಲಿದ್ದ ನನ್ನ ಆ ಆತಿಥೇಯ: ಅಲ್ಲಿಯೋ ಚಹಾ ಆಯಿತು. ಮಹಾಶಯ? ಕತ್ತಲಾದರೂ ತನ್ನ ಮನೆಗೆ ಕರೆದೊಯ್ಯುವ ಸುದ್ದಿಯೇ ಇಲ್ಲ. ಎಂಟು ಗಂಟೆಯ ಮೇಲೆ ಆತ ಅಲ್ಲಿಂದ ಸದ್ದಿಲ್ಲದೆ ಜಾರಿದ. ನಾನು ಅರ್ಧ ರೈಲು, ಅರ್ಧ ಟ್ಯಾಕ್ಸಿ ಹಿಡಿದು ಹೇಗೆ ಹೋಗೋ ಹೋಟೆಲಿಗೆ ಹನ್ನೊಂದು ಗಂಟೆಗೆ ವಾಪಸಾಗಿ, ಊಟದ ಸೆಕ್ಶನ್ ಬಂದಾಗಿದ್ದರಿಂದ ಬರಿಹೊಟ್ಟೆಯಲ್ಲೇ ಮಲಗಿದೆ. ಆ ಮೇಲೆ ಸೂಕ್ಷ್ಮವಾಗಿ ವಿಚಾರಿಸಿದಾಗ ಗುಟ್ಟು ತಿಳಿಯಿತು. ಅವನ ಹೆಂಡತಿ ಅವನ ಪ್ರೊಪೋಸಲ್ ವಿಟೋ ಮಾಡಿದ್ದಳು. ಅವಳ ಆತಿಥ್ಯ ನೀತಿ ಬಲು ಜಾಣತನದ್ದಾಗಿತ್ತು. "ಪ್ರಕ್ಷಾಲನಾದ್ಧಿ ಪಂಕಸ್ಯ ದೂರಾದಸ್ಪರ್ಶನಂ ವರಮ್"–ಕೆಸರು ತಗಲಿಸಿಕೊಂಡು ತೊಳೆಯೋದಕ್ಕಿಂತ ತಗಲಿಸಿಕೊಳ್ಳದಿರುವುದೇ ಒಳ್ಳೇದು—ಅಂತ. ✡

(ಆಕಾಶವಾಣಿ ಕೃಪೆಯಿಂದ)

ಬಹುದಿನಗಳ ನಂತರ ಮನೆಗೆ ಬಂದ ಸ್ನೇಹಿತನನ್ನು ಗುಂಡ ಸ್ವಾಗತಿಸಿದ. ತಿಂಗಳ ಕೊನೆ. ಮನೆಯಲ್ಲಿ ಡಬ್ಬಿಗಳೆಲ್ಲ ಖಾಲಿ. ಆದರೂ ಅತಿಥಿಸತ್ಕಾರ ಮಾಡಲೇಬೇಕಲ್ಲ. 'ಊಟಕ್ಕೆ ಏಳು' ಅಂದ. ಸ್ನೇಹಿತನೊಂದಿಗೆ ಊಟ ಮಾಡುತ್ತ ಮಾತಾಡತೊಡಗಿದ. 'ನಾಲ್ಕೈದು ದಿನ ಇಲ್ಲಿ ಕೆಲಸ ಇದೆ' ಅಂದ ಸ್ನೇಹಿತ. ಅಷ್ಟರಲ್ಲಿ ಗುಂಡನ ಹೆಂಡತಿ ಮತ್ತೊಮ್ಮೆ ಭಕ್ಕರಿ ತಂದು 'ಬೇಕೇನು?' ಎಂದು ಕೇಳಿದಳು ಗಂಡನಿಗೆ. 'ಏನು? ನಾಲ್ಕೈದು ಭಕ್ಕರಿ ತಿನ್ನಲಿಕ್ಕೆ ತಾನೇನು ಕತ್ತೆ ಅಂದ್ಕೊಂಡೇನು? ಬೇಕಾದ್ರೆ ಇವನಿಗೆ ಹಾಕು' ಅಂದವನೇ ಹೆಂಡತಿಯತ್ತ ನೋಡಿದ. ಪಾಪ, ಸ್ನೇಹಿತ 'ಸಾಕು' ಎಂದು ಆಪೋಶನ ತೆಗೆದುಕೊಂಡು ತ್ವರಿತ ತೇಗು ತೇಗಿ ಎದ್ದು ಕೈ ತೊಳೆದುಬಿಟ್ಟ. ಸಂಜೆಯೇ ಗಾಡಿ ಬಿಟ್ಟ.

ಗಂಡಸರಿಗೆ ಮಾತ್ರ

ನಿಮ್ಮ ಹೆಂಡತಿಯ ಕಣ್ಣು ತಪ್ಪಿಸಿ ಗುಟ್ಟಾಗಿ ಓದಬೇಕಾದ ವಿಷಯ

[illegible] ?

ಕೆ. ಚಂದ್ರಮೌಳಿ

ಮೊನ್ನೆ ಮಂಜು ಬಂದಿದ್ದ, ತನ್ನ ಮದುವೆ ವಿಚಾರ ಹೇಳಲಿಕ್ಕೆ. "ಅಯ್ಯೋ: ನೀನೂ ಬಲೆಗೆ ಬಿದ್ದೆಯಾ ಮಂಜ?" ಅನ್ನುವಷ್ಟರಲ್ಲಿ ನನ್ನಾಕೆ ಜೋರಾಗಿ "ಓಹೋ. ಬಹಳ ಸಂತೋಷ, ಸಿಹಿ ಎಲ್ಲಿ ತಂದೇ ಇಲ್ಲ. - ಹೋಗ್ಲಿ ಬಿಡು ಈಗ ನಾನೇ ಮಿಠಾಯಿ ಕೊಡ್ತೀನಿ" ಅಂತ ಒಂದೇ ಸಮನೆ ಮಾತಾಡಿಬಿಟ್ಟಳು. ಹೆಣ್ಣಿನವರು ಯಾರು, ಎಲ್ಲಿದ್ದಾರೆ, ಹುಡುಗಿ ಏನು ಓದಿದ್ದಾಳೆ. ಸಂಗೀತ ಬರುತ್ತೋ. ಬೆಳ್ಳಗಿದ್ದಾಳೋ. ಕಪ್ಪಗಿದ್ದಾಳೋ. ತೆಳ್ಳಗಿದ್ದಾಳೋ. ಫೋಟೋ ಯಾಕೆ ತರಲಿಲ್ಲ ಎಂದೆಲ್ಲಾ ಪ್ರಶ್ನೆಗಳ ಸುರಿಮಳೆಯನ್ನೇ ಶುರು ಮಾಡಿದಾಗ ಮಂಜು ಪೆಕರನಂತೆ ಉತ್ತರ ಕೊಡ್ತಾ ಕೂತಿದ್ದ. ನಾನೂ ಮೂಕನಂತೆ ಕೇಳ್ತಾ ಕೂತಿದ್ದೆ ಮದುವೆ ಆದ ಮೇಲೆ ಹೆಂಡತಿಯ ಜೊತೆ ಮಾತಾಡುವುದಿರಲಿ. ಬಂದವರೊಡನೆ ಮಾತನಾಡುವ ಸ್ವಾತಂತ್ರ್ಯವೂ ಹೋಗಿಬಿಟ್ಟಿದೆ. ಮಾತಾಡುವುದಿರಲಿ. ಏನು ಬೇಕೋ ಆ ಮಾತನ್ನು ಮಾತ್ರ ಕೇಳೋಣ ಅಂದ್ರೆ ಅದಕ್ಕೂ ಅವಕಾಶವಿಲ್ಲ. ಹಾಗಾಗಿ ಬಿಟ್ಟಿದೆ ನನ್ನ ಸ್ಥಿತಿ. ನನ್ನ ಸ್ಥಿತಿಯೇನು ಮದುವೆಯಾಗಿರುವ ಶೇಕಡ ನೂರರಷ್ಟು ಗಂಡಿಗೆ ಇದೇ ಪಾಡಿನ ಸ್ಥಿತಿ. ಶೇಕಡ ನೂರೇನೋ ಸರಿ. ಆದರೆ ನೂರರ ಮೇಲೆ [illegible] ಅಂತೀರೇನು? ಇದೋ ನೋಡಿ. ಮಂಜುವಿನಂತೆ ಮದುವೆಯಾಗದ [illegible] ಗಂಡಸರೂ ಹೀಗೆ ಮದುವೆಗೆ ಮುಂಚೆಯೇ ತಮ್ಮ ವಾಕ್ ಸ್ವಾತಂತ್ರ್ಯ ಕಳೆದುಕೊಂಡಿರುತ್ತಾರೆ. "ಏನು ಮಾತಾಡ್ತಾನೆ ಇದ್ದೀರೋ, ಅವನಿಗೆ ಕಾಫಿ. ತಿಂಡಿ ಏನಾದರೂ ಕೊಡ್ತೀರೋ!" ಅಂದೆ. [illegible] ನನಗೆ [illegible] ಕಾಫಿ ಬೇಕಿತ್ತು. "[illegible]" ಅಂದುಕೊಂಡೇ ಒಳಗೆ ಹೊರಟಳು.

ಹಾಗಲ್ಲ, ಹೀಗೆ

ಇದೇ [illegible]

ನಿಯಂತ್ರಣ, ನಿರುದ್ಯೋಗ ಸಮಸ್ಯೆ, ಕಷ್ಟ-ಕಾರ್ಪಣ್ಯದ ಜೀವನದ ಉದಾಹರಣೆ ಕೊಟ್ಟು ಮದುವೆ ಆಗದಿದ್ದರೇ ಚೆನ್ನ ಅಂದೆ. ವೆಂಕೂಗೆ ಇದ್ಯಾವುದೂ ತಲೆಗೆ ಹೋದ ಹಾಗೆ ಕಾಣಿಸಲಿಲ್ಲ. ಮದುವೇ ಅಂದರೆ ತುರ್ತು ಪರಿಸ್ಥಿತಿ ಜಾರಿಗೆ ಬಂದಹಾಗೋ, ಎಲ್ಲಾ ಸ್ವಾತಂತ್ರ್ಯಕ್ಕೂ ಕಡಿವಾಣ ಹಾಕಿದ ಹಾಗೋ ಅಂತ ಅವನಿಗೆ ಸ್ವಾತಂತ್ರ್ಯದ ಆಸೆ ತೋರಿಸಿದೆ. ಕಾಡಿನಲ್ಲಿ ಹಾರೋ ಹಕ್ಕಿಗೆ ಬಂಧನದ ಬಾಳಿನ ಬಗ್ಗೆ ಏನು ಗೊತ್ತು ಹೇಳಿ. ಇನ್ನೂ ಪಂಜರದ ಗಿಳಿ ಕೇಳಿದರೆ ಅದು ಎಂದಿಗೆ ಹೊರಗೆ ಹಾರಿ ಹೋದೇನೋ, ರೆಕ್ಕೆ ಬಡಿದೇನೋ ಅಂತ ಇರುತ್ತೆ. ಇಲ್ಲೂ ಹಾಗೇ ವೆಂಕೂಗೆ ಮದುವೆಯ ಪಂಜರದ ಜೀವನ ಅರ್ಥವಾಗದಿದ್ದುದು ಆಶ್ಚರ್ಯವೇನಿಲ್ಲ. ಸಾಮ, ದಾನವಾಯಿತು. ಇನ್ನು ಭೇದೋಪಾಯ ನೋಡೋಣವೆಂದು 'ಹೆಣ್ಣೆಂದು ಬಲೆ' ಅಂತ ಶುರು ಮಾಡಿದೆ. ಅಷ್ಟರೊಳಗೇ ಒಳಗಿನಿಂದ ಕಾಫಿ ಲೋಟ ಹಿಡಿದು ತರುತ್ತಾ "ಏನ್ರೀ ಅದು, ಹೆಣ್ಣು ಬಲೆ ಗಿಲೆ ಅಂತೀರಾ" ಎಂದು ಗುಡುಗಿದಳು. "ಹೆಣ್ಣು ಬಲೆ ಅನ್ನಲಿಲ್ಲ. ಹೆಣ್ಣು ಅಬಲೆ ಅಂದರೆ ಬಲೆಯಾಗಿಲ್ಲದೇ ಇರುವವಳು ಅಂದೆ" ಎಂದು ಜಾರಿಕೊಳ್ಳಲು ಪ್ರಯತ್ನಿಸಿದೆ. ಅಬಲೆ ಅಂದರೆ ಅಶಕ್ತಳೊಂತ ಅರ್ಥವಾಗುತ್ತದೆಂದು ತಕ್ಷಣ ಹೊಳೆದು, "ಅಲ್ಲ ಅಲ್ಲ, ಹೆಣ್ಣು ಬಲೆಯಲ್ಲ, ಅಬಲೆಯೂ ಅಲ್ಲ, ಆದರೆ ಹೆಣ್ಣು ಸಬಲೆ" ಎಂದು ಮಾತು ತಿರುಗಿಸಿ [illegible] ತಪ್ಪಿಸಿಕೊಂಡೆ. ಮುಂದೇನಾಯ್ತೂಂತ ಕೇಳಬೇಡಿ. ವೆಂಕೂ ಮದುವೆಯೆಂಬ ಪ್ರಪಾತಕ್ಕೆ ಧುಮ್ಮಿಕ್ಕದೇ ಇರಲಿ ಎಂದು ನಾನು ಮಾಡಿದ ಸಾಮ, ದಾನ, ಭೇದೋಪಾಯಗಳೆಲ್ಲಾ ವ್ಯರ್ಥವಾದ ಮೇಲೆ ದೊಪ್ಪೆಂದು ಹೋಗಿ ಬಲೆಗೆ ಸಿಕ್ಕಿದ–ಗುಂಡಿಗೆ ಬಿದ್ದ. ಇದರೊಳಗೆ ವೆಂಕನದೇನು ತಪ್ಪು. ಪ್ರೀತಿ, ಮದುವೆಯ ವಿಚಾರ ಬಂದಾಗ ವೆಂಕ, ನೊಣ, ಸೀನಿ ಇತ್ಯಾದಿಯಾಗಿ ಎಲ್ಲಾ ಗಂಡಸರೂ ಒಂದೇ. ಆತುರಾತುರವಾಗಿ ಓಡಿಹೋಗಿ ದೀಪದ ಹುಳುಗಳಂತೆ ದೀಪಕ್ಕೆ ಬಿದ್ದು ಸಾಯುತ್ತಾರೆ. ಬಲೆಗೇ ಬೀಳ್ತಾರೆ. ಅದಕ್ಕೇ ಹೇಳುವುದು ಪ್ರೇಮಕ್ಕೆ ಕಣ್ಣಿಲ್ಲ ಅಂತ. ಕಣ್ಣಿಲ್ಲದವರಂತೆ ರಾತ್ರಿ ಕಂಡ ಬಾವೀಲೇ ಹಗಲು ಹೋಗಿ ಬೀಳ್ತಾರೆ ಗಂಡುಗಳು. ಮದುವೆ ಆದ ಮೇಲೆ ಅಂದರೆ ಪ್ರೇಮ ಆರಿದ ಮೇಲೇ ಅವರಿಗೆ ಕಣ್ಣು ಬಂದು ತಾವು ಬಿದ್ದಿರೋದು ಬಲೆಗೇ ಎಂದು ಗೊತ್ತಾಗುವುದು.

ಶೇಕಡ ಒಂದೂವರೆ ?

ಅಂಕಿ ಅಂಶಗಳ ಪ್ರಕಾರ ಶೇಕಡ ತೊಂಬತ್ತೆಂಟೂವರೆ ಜನ ಮೋಹದಿಂದ ಮದುವೆಯ ಬಲೆಗೆ ಬೀಳುವ ಗಂಡುಗಳೇ. ಉಳಿದ ಒಂದೂವರೆ ಗಂಡುಗಳೇ ಪುಣ್ಯವಂತರು. ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂದು ಮೆರೆಯುತ್ತಾ ಮುಂದೆ ನಡೆಯುವ ಧೈರ್ಯ ಬೇಕು, ತಲೆ ಉಪಯೋಗಿಸಬೇಕು, ಅಂದರೆ ಕೆಚ್ಚೆದೆ, ಜಾಣತನ ಎರಡೂ ಬೇಕು. ಹೆಣ್ಣಿಗೆ ತಲೆ ತಗ್ಗಿಸಿ ನಡೆದರೂ ತಲೆ ಪ್ರತಿಷ್ಠೆಯುಳ್ಳವರಾಗಿ, ಮೈ ಬಗ್ಗಿಸಿದರೂ ಮನ ಬಗ್ಗದವರಾಗಿ, ಕೈ ಕೊಟ್ಟರೂ ಕೈಚೀಲ ಕೊಡದವರಾಗಿ, ಕಿವಿ ಕೊಟ್ಟು ತಲೆಯಾಡಿಸಿದರೂ ತನ್ನ ದಾರಿ ಬಿಡದವರಾಗಿ, ಒಟ್ಟಿನಲ್ಲಿ ಸೋತು ಸುಣ್ಣವಾದವರಂತೆ ಕಂಡರೂ ಗೆದ್ದು ನಗುತ್ತಾ ಇರುವವರಾಗಿರಲು ಗಂಡಸರಿಗೆ ಚಾಣಾಕ್ಷತೆ ಬೇಕೇಬೇಕು. 'ಮದುವೆ ಮಾಡ್ಕೊಬೇಡವ್ರೊ' ಅಂತ ಯಾವ ಗಂಡಸಿಗೂ (ಶೇಕಡ ಒಂದೂವರೆ ಬಿಟ್ಟು) ಹೇಳುವ ಹಾಗಿಲ್ಲ, ಹೇಳಿದರೂ ಪ್ರಯೋಜನವಿಲ್ಲ. ಆದರೆ 'ಮದುವೆ ಮಾಡಿಕೊಂಡರೂ ಗಂಡಾಗಿರೊ' ಎಂದು ಹೇಳಲು ಯಾವ ಹೆಣ್ಣಿನ ಅಭ್ಯಂತರವೂ ಇಲ್ಲವಷ್ಟೇ. ಹೆಣ್ಣಿನ ಅಭ್ಯಂತರ ಇದ್ದರೆ ನಮಗೇನು– ನೀವು ನಾನು ಹೇಳುವುದನ್ನೆಲ್ಲಾ ಹೇಗಾದರೂ ಗುಟ್ಟಾಗಿ ಓದುತ್ತಿದ್ದೀರಲ್ಲವೇ? ಹಾಗಾದ್ರೆ ಕೇಳಿ, ಇಲ್ಲಿ ನನ್ನ ಮತ್ತು ನನ್ನ ಸ್ನೇಹಿತರ ಕೆಲವು ಅನುಭವಗಳು ನಿಮ್ಮ ಉಪಯೋಗಕ್ಕೂ ಬಂದಾವು.

ಬೆಳಗಿನ ಜಾವ ಸೂರ್ಯ ಕಿಟಕಿಯಿಂದ ತೂರಿ ಬರುತ್ತಿದ್ದಾನೆ. ಹಕ್ಕಿಗಳು ಕಿಟಕಿಯಲ್ಲಿ ಚಿಲಿಪಿಲಿ ಗುಟ್ಟಿ ಬೇಸತ್ತೋ ನಿಮ್ಮ ಗೊರಕೆಯ ಶಬ್ದಕ್ಕೆ ಹೆದರಿಯೋ, ಎಲ್ಲಾ ಹಾರಿ ಹೋಗಿವೆ ಅಂದರೆ ಬೆಳಗಿನ ಏಳೂವರೆ ಗಂಟೆ. ಆ ಕಡೆ ಈ ಕಡೆ ಹೊರಳಿ, ಆಕಳಿಸಿ, ಮೈಮುರಿದು ಏಳಲೋ ಬೇಡವೋ ಅಂತ ಇರುವಾಗ ನಿಮ್ಮ ಕೈಗೆ ಬಿಸಿ ಬಿಸಿ ಲೋಟ ಕಾಫಿ ಸಿಕ್ಕಿದರೆ ಸ್ವರ್ಗ! ಅದೆಂಥ ಸುಖವು! ಹೌದು, ಅಂತಹ ಸುಖವೂ ಇದ್ದೀತು. ಮದುವೆಗೆ

ಮೊದಲು. ಅಡಿಗೆಯವನು ಮನೆಯಲ್ಲಿದ್ದಾಗ ಎಂದು ಈಗ ಪಶ್ಚಾತ್ತಾಪ ಪಟ್ಟು ಫಲ? ಹೀಗೆ ಕೊರಗನ್ನು ನಿಮ್ಮಲ್ಲಿ ಎಷ್ಟು ಮಂದಿ ನೆನಪಿಸಿಕೊಳ್ಳುತ್ತಾ ಹಲುಬುತ್ತೀರೋ ಏನೋ. ಬೆಳಗೆ ಬೆಡ್‌ಕಾಫಿ ಸಿಗದಿರುವಂತಹ ಕೋಟಲೆಯು ಹೀಗೆ ಮದುವೆಯ ಮೊದಲ ವರ್ಷದ ಸರಸ ಸಲ್ಲಾಪದ ಸಡಗರವೇ ಕಾರಣ ಅನ್ನಬೇಕು. ಮದುವೆಯಾದ ಹೊಸತರಲ್ಲಿ ಬೆಳಗ್ಗೆ ಎದ್ದಾಗ, ಪಕ್ಕದಲ್ಲಿ ಇನ್ನೂ ಮಲಗಿರುವ ಆಲಸ್ಯದ ಕಳೆ ಮುಖದಮೇಲೆ ತಾಂಡವವಾಡುತ್ತಾ ಮುಗ್ಧ ಮಗುವಿನಂತೆ ಕಾಣುವ ಹೆಂಡತಿಯ ಮುಖವನ್ನು ನೋಡಿ, 'ಅಯ್ಯೋ ಪಾಪ ಹೇಗೆ ಎಬ್ಬಿಸಿ ಕಾಫಿ ಕೇಳಲಿ' ಅನ್ನಿಸುವುದು ಸ್ವಾಭಾವಿಕ. ಅದೇ ನಿಮ್ಮ ಗಂಡುತನದ ದೌರ್ಬಲ್ಯದ ಮೊದಲ ಗಳಿಗೆ. ಧೈರ್ಯ ಮಾಡಿ, ಹೃದಯ ಗಟ್ಟಿ ಮಾಡಿಕೊಳ್ಳಿ. ಕಲ್ಲು ಮಾಡಿಕೊಳ್ಳಿ. ಮನಸ್ಸು ಕಲ್ಲಾಗಲಿ. ಏನಾದರೂ ಆಗಲಿ. ಬೇಕಾದ್ರೆ ಕಣ್ಣು ಮುಚ್ಚಿಕೊಂಡಾದರೂ ಸರಿ, ನಿಮ್ಮ ಹೆಂಡತಿಯನ್ನು ಎಬ್ಬಿಸಿ ಬೆಡ್‌ಕಾಫಿ ಕೇಳಿ. ಅವಳ ನಿದ್ರೆಯ ಮಾತು. ಅಷ್ಟಕ್ಕೆ. ಬೇಸರ. ನಿಮ್ಮ ಯಾವುದಕ್ಕೂ ಉತ್ತರ ಕೊಡದೆ ಕಾಫಿ ಕೇಳಿ. ಇದೆಲ್ಲಾ ತಾಪತ್ರಯ ಬೇಡ ಅನ್ನಿಸಿದರೆ, ಹೆಂಡತಿ ಮೊದಲು ಏಳುವ ವರೆಗೂ ನೀವೂ ಈ ಕಡೆ ತಿರುಗಿ ಗೊರಕೆ ಹೊಡೆಯಿರಿ, ಇಲ್ಲವೆ ಮಲಗಿದವರಂತೆ ಆಡಿ. ಏನೇ ಆದರೂ ಬೆಡ್‌ಕಾಫಿಯಿಲ್ಲದೆ ಹಾಸಿಗೆ ಬಿಟ್ಟು ಏಳಲೇ ಆರಿರಿ ಎಂದು ಸಿದ್ಧಾಂತ ಮಾಡಿಕೊಳ್ಳಿ. ಮದುವೆಯಾದ ಮೊದಲ ವಾರ, ಮೊದಲ ತಿಂಗಳು ಅಥವಾ ಮೊದಲ ವರ್ಷದಲ್ಲಿ ಯಾವಾಗ ಈ ವಿಷಯದಲ್ಲಿ ನೀವು ಸಡಿಲಾದರೂ ನಿಮಗೆ ಜೀವನ ವಿಡೀ ಬೆಡ್‌ಕಾಫಿ ತಪ್ಪಿತೆಂದೇ ತಿಳಿಯಬೇಕು. ಹಾಗೂ ಹೀಗೂ ಮೊದಲ ವರ್ಷ ರೂಢಿಸಿಕೊಂಡು ಬಂದರೆ ಆಮೇಲೆ ಜೀವನವಿಡೀ ನಿಮ್ಮ ಸ್ಥೈರ್ಯದ ಫಲ ಉಣ್ಣುತ್ತೀರ. ಇದೇ ರೀತಿ ಮೊದಲ ವರ್ಷದಲ್ಲಿ ತಪ್ಪಿಹೋಗುವ, ಆದರೆ ರೂಢಿಸಿಕೊಳ್ಳಲೇ ಬೇಕಾದ, ಬ್ರಹ್ಮಚಾರಿಗಳ ದಿನಗಳ ಇನ್ನೂ ಕೆಲವು ಮುಖ್ಯ ಅಭ್ಯಾಸವೆಂದರೆ ಬೆಡ್‌ಕಾಫಿಯ ನಂತರ ಹಾಸಿಗೆಯಲ್ಲೇ ಸಮಾಚಾರ ಪತ್ರಿಕೆ ಓದುವುದು. ಸ್ನಾನಕ್ಕೆ ಬೇಕಾದ ಬಟ್ಟೆಗಾಗಿ ಕೂಗುವುದು. ಆಫೀಸಿನಿಂದ ಬಂದ ತಕ್ಷಣ ಬಂದದ್ದು ಅಷ್ಟೇ ಡ್ರಾಯಿಂಗ್ ರೂಮಿನಲ್ಲಿ ಬಿಟ್ಟಿರುವುದು. ಬಿಚ್ಚಿದ ಬಟ್ಟೆಗಳನ್ನು ಹಾಸಿಗೆಯ ಮೇಲೋ ಕುರ್ಚಿಯ ಮೇಲೆ ಬಿಸಾಕುವುದು. ಕೊಳೆಯ ಬಟ್ಟೆಗಾಗಿ ಗಂಟು ನಿಂತಿರುವುದು. ಒಂದನ್ನು ಆರಿಸಿಕೊಳ್ಳುವುದು. ಡ್ರಾಯಿಂಗ್ [illegible] [illegible] ಆಷ್ಟ್ರೇ ಇಲ್ಲದೆ ... ಬೂದಿ ಹಾಕುವುದು. ಬ್ರಹ್ಮಚಾರಿಗಳ ಈ ಅಭ್ಯಾಸಗಳನ್ನು ಮದುವೆಯ ಹೊಸತರಲ್ಲಿ ಮರೆತುಬಿಡುವುದು ರೂಢಿ. ಮದುವೆಯ ಹೊಸತರಲ್ಲಿನ ಮೈಮರೆತ ಕಾಲ. ಆದರೂ ಯಾರೂ ಬ್ರಹ್ಮಚಾರಿ ಅಭ್ಯಾಸಗಳನ್ನು ಮರೆಯಬಾರದು. ಅಭ್ಯಾಸಗಳನ್ನು ಮರೆಯಬಾರದು.

ಉಪಾಯ

ಗಂಡನು ತನ್ನನ್ನು ಉಳಿಸಿಕೊಳ್ಳಬೇಕಾದರೆ ಬ್ರಹ್ಮಚಾರಿ ಜೀವನದ ಕೆಲ ಅಭ್ಯಾಸಗಳನ್ನು ಮರೆಯಬಾರದು ಮತ್ತು ಹೆಂಡತಿ ಕಲಿಸುವ ಹೊಸ ಅಭ್ಯಾಸಗಳನ್ನು ಕಲಿಯಬಾರದು. ಹೆಂಡತಿ

"...ಎಷ್ಟೋ ಬಾರಿ ಸಿದ್ಧಾಂತ ಮಾಡಿಕೊಂಡ ನನಗೆ ನಿನ್ನನ್ನು ತೂಗಿಸಿಬಿಡೋದಂದ್ರೆ ದೊಡ್ಡ ಸಂಗತೀನಾ ?"

ಕಲಿಸುವ ಹೊಸ ಅಭ್ಯಾಸಗಳೆಲ್ಲಾ ಹೆಚ್ಚಾಗಿ ಬ್ರಹ್ಮಚಾರಿ ಜೀವನದ ಅಭ್ಯಾಸಗಳಿಗ ತದ್ವಿರುದ್ಧ ಆಗಿರುವುದೇ ಒಂದು ವಿಶೇಷ. ಹಲ್ಲುಜ್ಜದೆ ಕಾಫೀ ಕುಡೀಬೇಡಿ, ಅದು ಅಸಹ್ಯ, ಸ್ನಾನಕ್ಕೆ ಬಟ್ಟೆ ತಗೊಂಡು ಹೋದರೆ ನಿಮಗೇನು ಕೈ ಸವೆಯುತ್ತದೆಯೋ. ಡ್ರೆಸ್ಸಿಂಗ್ ರೂಮಿನಲ್ಲಿ ಬೂಟ್ಸು ಬಿಚ್ಚಬೇಡಿ. ಬಟ್ಟೆ ಸರಿಯಾಗಿ ಹ್ಯಾಂಗರ್‌ನಲ್ಲಿ ತೂಗು ಹಾಕಿ, ಇವೇ ಮೊದಲಾದುವು. ಈ ತದ್ವಿರುದ್ಧಗಳ ಜೊತೆಗೆ, ಸ್ವಾಭಾವಿಕ ನಡತೆಗಳೇ ಗಂಡ ಹೆಂಡತಿಯರಲ್ಲಿ ಸಾಮಾನ್ಯವಾಗಿ ತದ್ವಿರುದ್ಧವಾಗಿರುತ್ತವೆ. ನಮ್ಮನೇಲೇ ನೋಡಿ–ನಾನು ಹಾಗಲಕಾಯಿ ಗೊಜ್ಜು ಚೆನ್ನ ಅಂದ್ರೆ ಅವಳು ಥೂ ಅನ್ನುತ್ತಿದ್ದಳು. ನಾನು ನಾಟಕ ಅಂದ್ರೆ ಅವಳು ಸಿನೇಮಾ ಅನ್ನುತ್ತಿದ್ದಳು. ನಾನು ಆಕಾಶವಾಣಿ ಅಂತ ರೇಡಿಯೋ ಕಿವಿ ಹಿಂಡಿದರೆ ಅವಳು ರೇಡಿಯೋ ಸಿಲೋನ್‌ಗೆ ತಿರುಗಿಸುತ್ತಿದ್ದಳು. ನಾನು ಪುಸ್ತಕದ ಅಂಗಡಿಗೆ ಹೊರಟರೆ ಅವಳು ಸೀರೆ ಅಂಗಡಿಗೆಳೆಯುತ್ತಾಳೆ, ಅಲ್ಲಿ ನೀಲಿ ಸೀರೆ ಅಂದರೆ ಕೆಂಪು ಆರಿಸಿ ತೆಗೆಯುತ್ತಾಳೆ... ಹೀಗೆ ಹೆಜ್ಜೆ ಹೆಜ್ಜೆಗೂ ತಾಳ ತಪ್ಪುತ್ತಿದ್ದುದನ್ನೆಲ್ಲಾ ಸರಿ ಹೊಂದಿಸಿಕೊಂಡು ಬರುತ್ತಲೇ ಇರಬೇಕು. ಗಂಡಸಾದವನು ತನ್ನ ತಾಳಕ್ಕೆ ಹೆಂಡತಿಯಾದವಳನ್ನು ಕುಣಿಸುತ್ತಾನೆ; ಅವಳ ತಾಳಕ್ಕೆ ಅವನು ಕುಣಿಯುವುದಿಲ್ಲ. ಹಾಗಲಕಾಯಿ ಗೊಜ್ಜು ಮಾಡಿಸಲು ಸರ್ವಪ್ರಯತ್ನ ಮಾಡಿದೆ, ಪ್ರಯೋಜನವಾಗಲಿಲ್ಲ. ಕೊನೆಯ ಉಪಾಯವಾಗಿ ಇವಳ ಬದ್ಧ ದ್ವೇಷಿ ಕಮಲು ಮಾಡುವ ಹಾಗಲಕಾಯಿ ಗೊಜ್ಜನ್ನು ಇವಳ ಮುಂದೆ ಹೊಗಳಿದ್ದೇ ಹೊಗಳಿದ್ದು. ಜೊತೆಗೆ ಅವರ ಮನೆಗೆ ಹೋದಾಗಲೆಲ್ಲಾ "ಏನ್ರೀ, ನೀವು ಯಾವಾಗ ಹಾಗಲಕಾಯಿ ಮಾಡಿದರೂ ನನಗೋಸ್ಕರ ಎರಡು ಸೌಟು ಕಳಿಸಿಕೊಟ್ಟುಬಿಡ್ರಿ ಮರೀಬೇಡಿ" ಅಂತ ಗೋಗರೆಯುತ್ತಿದ್ದೆ. ಒಂದೆರಡು ಸಲ ಅಲ್ಲಿಂದ ಬಂದ ಗೊಜ್ಜು ಬಟ್ಟಲು ಸೇರಿತ್ತು. ಅನಂತರ ಇವಳೇ [illegible]... ಈಗಲೂ ಹಾಗಲ [illegible] ಗೊಜ್ಜು ಅಂದರೆ [illegible]. ನನ್ನ [illegible] ಹೆಂಡತಿಗೆ

ಸಿನೇಮಾ ಅಂದರೆ ಪ್ರಾಣ. ಅವರು ತಿಂಗಳುಗಟ್ಟಲೆ ಸಂಜೆಯಲ್ಲಿ ನಾಟಕದ ಅಭ್ಯಾಸ ಅಂತ ಹೊರಟುಬಿಟ್ಟರೆ ಇಲ್ಲಿ ಹೆಂಡತಿಯ ಪಾಡೇನು! ಈ ಸಂದಿಗ್ಧ ತಪ್ಪಿಸಲು ಅವರೇನೇನೋ ಉಪಾಯ ಮಾಡಿ ಯಾವುದೋ ನಾಟಕದಲ್ಲಿ ಅವಳಿಗೂ ಒಂದು ಕಿರು ಪಾತ್ರ ಕೊಡಿಸಿದ್ದೇ ಅಲ್ಲದೆ ಒಂದು ಕಣ್ಣೊರೆಸುವ ಬಹುಮಾನವನ್ನೂ ಕೊಡಿಸಿಬಿಟ್ಟರು. ಈಗ ನೋಡಿ ಮುಂದಿನ ನಾಟಕದಲ್ಲಿ ತನಗೇ ಮೊದಲ ಬಹುಮಾನ ಅಂದುಕೊಂಡು ಹೆಂಡತಿ ಎಲ್ಲಾ ನಾಟಕಕ್ಕೂ ಗಂಡನಿಗಿಂತ ಮೊದಲೇ ತಯಾರು!

ಒಂಟೆಯೂ ಅರಬನೂ

ಬರೀ ಹಳೇ–ಹೊಸ ಅಭ್ಯಾಸಗಳ ತಿಕ್ಕಾಟವೇ ಆಗಿದ್ರೆ ಹೇಗೋ ತನ್ನತನ ಇಟ್ಟುಕೊಂಡು, ಬೆಳೆಸಿಕೊಂಡು ಗಂಡು ನೆಮ್ಮದಿಯಾಗಿ ಬಾಳಬಹುದಾಗಿತ್ತು. ಆದರೆ ಯಾರೋ ಹೇಳಿದ ಹಾಗೆ "ಮಾಯೆಯಾಗಿ ಕಾಡಿತ್ತು ಹೆಣ್ಣು" ಅಂತ ಹೆಂಡತಿಗೆ ಯಾವಾಗಲೂ ಗಂಡಸನ್ನು ಕಾಡುವ ಹೊಸ ಹೊಸ ಯೋಚನೆಗಳು ಹೊಳೆಯುತ್ತಲೇ ಇರುತ್ತದೆ. ಅದು ಹೇಗೆ ಈ ವಿಚಾರದಲ್ಲಿ ಅಷ್ಟು ಯೋಚನೆಗಳು ಬರುತ್ತವೋ ಏನೋ ದೇವರಿಗೇ ಗೊತ್ತು. ಈ ಯೋಚನೆಗಳಲ್ಲಿ ಹೆಚ್ಚಿನವೆಲ್ಲಾ ಗಂಡಸಿಗೆ ದಿನನಿತ್ಯದ ಕೆಲಸಗಳನ್ನೂ ಕ್ರಮೇಣವಾಗಿ ವಹಿಸುವುದು ಮುಖ್ಯವಾದುದು. ಈ ವಿಚಾರದಲ್ಲಿ ಮಾತ್ರ ಗಂಡಸರು ಬಹಳ ಎಚ್ಚರಿಕೆ ವಹಿಸಲೇಬೇಕು. ಒಂಟೆ ಅರಬಿಯವನ ಗುಡಾರದಲ್ಲಿ ತಲೆ ಹಾಕಿ ಕೊನೆಗೆ ಅವನನ್ನೇ ಹೊರ ಹಾಕಿದ ಹಳೇ ಕಥೆ ನೆನಪಿದೆಯಲ್ಲಾ, ಅದೇ ರೀತಿ ಬೆರಳು ಕೊಟ್ಟರೆ ಹಸ್ತ ನುಂಗುವ ಜಾತಿ ಹೆಂಗಸಿನದು. ನನ್ನ ಸ್ನೇಹಿತರೊಬ್ಬರಿಗೆ ಬೆಡ್‌ಕಾಫಿ ಕುಡಿಯುವ ಚಟ ಇರಲಿಲ್ಲ. ಆದ್ದರಿಂದ ಹೆಂಡತಿಗೆ ಇವರಿಗಿಂತ ಮುಂಚೆ ಏಳಬೇಕಾದ ಅವಶ್ಯಕತೆಯಿರಲಿಲ್ಲ. ಹೊಸ ಹೊಸದು ಹೆಂಡತಿ "ಹೇಗಿದ್ರೂ ಮುಂಚೆ ಎದ್ದಿರುತ್ತೀರಲ್ಲ, ಸ್ವಲ್ಪ ಹಾಲು ಹಾಕಿಸಿಕೊಂಡುಬಿಡಿ" ಎಂದು ಶುರು ಮಾಡಿದಳು. ಸ್ವಲ್ಪ ದಿನಗಳಲ್ಲೇ "ರೀ ಹಾಗೇ ಸ್ವಲ್ಪ ಕಾಫಿಗೆ ನೀರು ಇಟ್ಟುಬಿಡ್ರಿ" ಎಂದು ಹೇಳುತ್ತಾ ಹೋಗಿ ಒಂದು

ತಿಂಗಳೊಳಗೇ ಗಂಡ ಮಾಡಿತಂದ ಬೆಡ್‌ಕಾಫಿ ಸೇವಿಸದೇ ಏಳಲು ಸಾಧ್ಯವೇ ಇಲ್ಲ ಅನ್ನುವ ಸ್ಥಿತಿಗೆ ಬಂದಿದ್ದಳು. ಇದನ್ನು ವಿವರಿಸಿದಾಗ ನನ್ನ ಸ್ನೇಹಿತರ ಧ್ವನಿ ಗದ್ಗದಿತವಾಗಿತ್ತು. ಇನ್ನು ಸ್ವಲ್ಪ ದಿನ ಹೀಗೇ ಬಿಟ್ಟರೆ ಆ ಗಂಡನೆನ್ನುವ ಪ್ರಾಣಿ ಅಡಿಗೆಯ ಕೆಲಸವೆಲ್ಲಾ ಮಾಡಬೇಕಾದ ಘೋರ ಪರಿಸ್ಥಿತಿ ಕಣ್ಣೆದುರಿಗೇ ಕಾಣುತ್ತಿತ್ತು. ಏನಾದರೂ ಮಾಡಿ ಈ ರೋಗ ಉಲ್ಬಣಾವಸ್ಥೆಗೆ ತಲುಪುವ ಮೊದಲೇ ರೋಗಿಯನ್ನು ಚಿಂತಾಜನಕ ಸ್ಥಿತಿಯಿಂದ ಪಾರುಮಾಡಲೇಬೇಕೆಂದು ಯೋಚಿಸಿ ಅನೇಕ ಸಲಹೆಗಳನ್ನೂ ನೀಡಿದ್ದಾಯಿತು. ಅದಾದ ಮೇಲೆ ಒಂದು ದಿನ ಸಕ್ಕರೆಯಿಲ್ಲದ ಕಾಫಿ, ಮತ್ತೊಂದು ದಿನ ಹಾಲಿಲ್ಲದ ಕರಿ ಕಾಫಿ. ಮೂರನೆ ದಿನ ಬಗ್ಗಡದ ಕಾಫಿ ಕೊಟ್ಟಾಗ ಹೆಂಡತಿ ರೇಗಿದಳಂತೆ. ಆದರೆ ನಾಲ್ಕನೇ ದಿನ ಕಾಫಿ ಪುಡಿಯನ್ನೇ ಹಾಕಲು ಮರೆತು ಬಿಸಿ ನೀರು ಬಗ್ಗಿಸಿಕೊಟ್ಟು ಕಾಫಿಯೆಂದು ಕೊಟ್ಟಾಗಲಂತೂ ಅವಳು ಹೌಹಾರಿದಳಂತೆ. ಎಲ್ಲೋ ನೋಡಲಿಲ್ಲ ನಿದ್ದೆಗಣ್ಣಲ್ಲಿ ಅಂತ ವಿವರಣೆ ಕೊಟ್ಟನಂತೆ. ಅಂದಿನಿಂದ ಬೆಡ್ ಕಾಫಿಯ ಹುಚ್ಚು ಬಿಟ್ಟಳಂತೆ, ಆ ಮಹಾ ರಾಯತಿ. ಆದರೂ ಬೆಳಗಾಗೆದ್ದು ಹಾಲು ಪಾತ್ರೆ ಹಿಡಿದು ಹಾಕಿಸಿಕೊಳ್ಳುವ ಕೆಲಸ ತಪ್ಪಲಿಲ್ಲ. ಎರಡು ಲೀಟರ್ ಹಾಲಿನ ಪಾತ್ರೆಯನ್ನು ಅಲ್ಲೇ ಮುಯಾಗಿಲಲ್ಲೇ ದೊಪ್ಪೆಂದು–ಬೇಕಂತಲೇ ಅಂತ ಹೇಳಲೇಬೇಕೇನು–ಬೀಳಿಸಿದಾಗಲೇ ಹಾಲು ಚೆಲ್ಲಿದ್ದಕ್ಕೆ ಆಗಿದ್ದ ನಷ್ಟ ಒಂದು ಐದಾರು ರೂಪಾಯಿ. ಅವತ್ತಿನ ಕಾಫೀ ಕೋತಾ, ದಿನವಿಡೀ ಸಿಡಿಮಿಡಿ ಇಷ್ಟೇ, ಆದರೆ ಅದರಿಂದಾದ ಲಾಭ–ಜೀವನವಿಡೀ ಹಾಲು ಹಾಕಿಸಿಕೊಳ್ಳುವ ದೀನ ಕೆಲಸದಿಂದ ಗಂಡಿಗೆ ಮುಕ್ತಿ.

ಮೇಲಿನ ಅನುಭವದಿಂದ ಪ್ರತಿಯೊಬ್ಬ ಗಂಡಸೂ ಕಲಿಯಬೇಕಾದ ಒಂದು ಮುಖ್ಯಪಾಠ ಅಂದರೆ ಯಾವುದೇ ಸಂದರ್ಭದಲ್ಲೂ ಯಾವ ರೀತಿ ಮನೆಗೆಲಸವೂ ತನಗೆ ಮಾಡಲು ಬರುತ್ತದೆ ಎಂದು ತೋರಿಸಿಕೊಡದಿರುವುದು. ಯಾವಾಗ–ಲಾದರೂ ಒಮ್ಮೆ ಅಪ್ಪಿತಪ್ಪಿ ನಿಮ್ಮ ಕೈಂಕರ್ಯ ತೋರಿಸಿದಿರೊ ಆಯ್ತು ನಿಮಗೆ ಇನ್ನು ಜೀವನವಿಡೀ ಆ ಕೆಲಸ ತಪ್ಪಿದ್ದಲ್ಲ ಅಂದು ಕೊಂಡುಬಿಡಿ. ನಮ್ಮಣ್ಣನ ಮನೇಲಿ ಚಕ್ಕಲಿ ಮಾಡಬೇಕಾದರೆ ಈಗಲೂ ನಮ್ಮಣ್ಣನೇ ಓಡಿ ಬರಬೇಕು– ಮದುವೆಯ ಮುಂಚೆ ನಾವಿಬ್ಬರೂ ಸೇರಿ ಚಕ್ಕಲಿ ಮಾಡಿದ್ದ ಕಥೆ ಕೇಳಿಯೇ ನಮ್ಮ ಅತ್ತಿಗೆ ಗಾಳ ಹಾಕಿಬಿಟ್ಟಿದ್ದಾರೆ. ಒಂದು ದಿನ ಮನೆಗೆ ತುಂಬಾ ಜನ ಊಟಕ್ಕೆ ಬಂದಾಗ. ಯಾವುದೋ ಅವಸರದಲ್ಲಿ ಯಾಗೋ ಬೇಕಾದ ಒಂದು ತಟ್ಟೆ ತೊಳೆದು ಕೊಟ್ಟುಬಿಟ್ಟಿದ್ದೆ. ಅದರ ಪರಿಣಾಮ ನನಗೆ ಗೊತ್ತಾಗಿದ್ದು ನಂತರ-ಹೆಂಡತಿ ನನ್ನನ್ನು ಕರೆದು "ನೆನ್ನೆ ಅಷ್ಟು ಚೆನ್ನಾಗಿ ತಟ್ಟೆ ತೊಳೆದಿರಿ, ಇವತ್ತು ಕೆಲಸದವಳೂ ಇಲ್ಲ, ನನಗೆ ಸ್ವಲ್ಪ ಸಹಾಯ ಮಾಡಬನ್ನಿ." ಅಂದಾಗಲೇ ಒಳಗೆ ನನಗಾದ ಶಾಕ್ ಅನ್ನು ಹಾಗೇ ನಗುವಿನಿಂದ ಮುಚ್ಚಿ ಮುಗ್ಧ ಮುಖದಿಂದ ಪತ್ನೀವಾಕ್ಯ ಪರಿಪಾಲಕನಂತೆ ಬಂದು, ಎರಡು ಗಾಜಿನ ಲೋಟ ಬೀಳಿಸಿ ಒಡೆದೆ. ಅಂದಿನಿಂದ ಈ ಒಡಕಲ ಕೈಗೆ ಅಂತಹ ಕೆಲಸಗಳಾವವೂ ಬಂದಿಲ್ಲ.

"ಸಾಂಬರ್‌ನಲ್ಲಿ ಏನೋ ವಾಸನೆ ಬರುತ್ತಾ ಇದೆ ತರಕಾರಿಗಳನ್ನು ಚೆನ್ನಾಗಿ ತೊಳೆದೆಯಾ ?"

"ಓ!......ಶುದ್ಧವಾದ ಸೋಪ್ ಹಾಕಿ...... ತೊಳೆದೇ ಹಾಕಿದ್ದು......"

ಪೂರ್ವ ಅಂದ್ರೆ...

ಇವೆಲ್ಲಾ ಮನೆಯ ಒಳಗಿನ ಕೆಲಸಗಳಾದವು. ಮನೆಯ ಹೊರಗಿನ ಕೆಲಸಗಳಿಗೆ ಗಂಡಸರೇ ಸರಿ ಎಂದು ಹೆಂಡತಿಯರಿಗೇ ಏಕೆ, ಎಷ್ಟೋ ಜನ ಗಂಡಂದಿರಿಗೂ ಹೆಮ್ಮೆ. ಇದೇನೊ ಒಪ್ಪಿಕೊಳ್ಳುವ ಮಾತೇನೋ ಸರಿ, ಆದರೆ ಗಂಟೆಗಟ್ಟಲೆ ಹೆಂಡತಿಯ ಜೊತೆ ಸಂತೆಯಲ್ಲಿ, ಜನಜಂಗುಳಿಯ ಮಧ್ಯೆ, ನೂಕು ನುಗ್ಗಲಲ್ಲಿ ಕಾಲು ತುಳಿಸಿಕೊಂಡು, ಎರಡಾಣೆ ಸೊಪ್ಪಿಗೆ ಚೌಕಾಶಿ ಮಾಡುತ್ತಾ, ನಿಂತಿರುವುದಂ ಯಾವ ಸೌಭಾಗ್ಯ ನೀವೇ ಹೇಳಿ. ತರಕಾರಿಯವಳು ಕೇಳಿದ್ದಷ್ಟು ಕೊಟ್ಟು ಅವಳು ಕೊಟ್ಟಿದ್ದನ್ನು ಮನೆಗೆ ತಂದು ಹಾಕುವುದು ಒಂದು ರೀತಿ. ಒಂದು ಸಲ ಬಲಿತು ಒಣಗಿದ ತರಕಾರಿ ಮನೆಗೆ ಬಂದು ಜೇಬು ಖಾಲಿ–ಯಾದಾಗ ತರಕಾರಿ ವ್ಯಾಪಾರ ಮಾಡುವ ಕೆಲಸ ತಾನಾಗಿ ನಿಮ್ಮಿಂದ ಕಳಚಿಹೋಗುತ್ತದೆ. ತರಕಾರಿ ವ್ಯಾಪಾರವೇನೋ ಸುಲಭವಾಯಿತು. ಆದರೆ ಸೀರೆ ವ್ಯಾಪಾರ ನಿಜವಾದ ತಲೆನೋವಿನದು. 'ಸೀರೆ ಯಾಕೆ ಬೇಡ' ಅನ್ನುವ ಹಾಗಿಲ್ಲ, ಬೇಡ ಅಂದರೂ ವರ್ಷಕ್ಕೆ ಕೆಲವು ಬಾರಿಯಾದರೂ ತರಲೇಬೇಕು– ಹಬ್ಬ, ಹುಟ್ಟಿದಹಬ್ಬ ಹಬ್ಬ, ಹುದಿನ. ಮುಂಜಿ ಮದುವೆ. ಪಕ್ಕದ ಮನೆಯಲ್ಲಿ ಮಗು ಹುಟ್ಟಿದ್ದು– ಅಂತ ಏನಾದರೂ ಸೀರೆ ತರಲು ನೆಪ ಹುಡುಕುತ್ತಲೇ ಇರುತ್ತಾರೆ ಹೆಂಡಂದಿರು. ಸೀರೆ ತರದೆ ಬೇರೆ ದಾರಿಯೇ ಇಲ್ಲ, ತಲೆ ನೋವಾದರೂ ತಪ್ಪಿ ಎಂದಾದ 'ಹೂಂ' ಅಂದಿರೋ ತಗೊಳ್ಳಿ ಬೇರೆ ತಲೆ ನೋವು ಶುರುವಾಗುತ್ತದೆ. ಬೀದಿಯಿಂದ ಬೀದಿಗೆ, ಅಂಗಡಿಯಿಂದ ಅಂಗಡಿಗೆ ಸೀರೆಗಾಗಿ ಅಲೆತವೇ ಅಲೆತ. ಅವರ ಮಾತು ತಗೊಂಡು ನಿಮಗೇನು ಸ್ವಾಮಿ ಅನ್ನಬೇಡಿ. ಅವರ ಜೊತೆ ಗಂಡ ಅನಿಸಿಕೊಂಡವನು ಹೋಗಲೇಬೇಕು— ಹಣದ ಚೀಲ ಹೆಂಡತಿಯ ಹತ್ತಿರವಿದ್ದರೂ, ಸೀರೆ ಆರಿಸಿದ್ದನ್ನು ಒಪ್ಪಿಕೊಳ್ಳಲು ನೀವು ಹೋಗಲೇಬೇಕು. ಅವರು ಇಲ್ಲಿ ಪ್ರಿಂಟ್ ಚೆನ್ನಾಗಿಲ್ಲ, ಇಲ್ಲಿ ನೂಲು ದಪ್ಪ, ಇಲ್ಲಿ ದುಡ್ಡು ಜಾಸ್ತಿ ಅಂತ ಸೀರೆಗಳ ರಾಶಿಯನ್ನೇ ತೆಗೆಸಿಹಾಕುತ್ತಿದ್ದಾಗ, ನಾನು ಮೂಲೇಲಿ ನಿಂತು ಲೆಕ್ಕ ಬರೆಯುವ ಗುಮಾಸ್ತನ ಮಗನ ವಿದ್ಯಾಭ್ಯಾಸದ ಬಗ್ಗೆ ಹರಟೆ ಕೊಚ್ಚುತ್ತಿದ್ದೆ. ಕೊನೆಗೆಲ್ಲೊ ಒಮ್ಮೆ "ನೋಡ್ರೀ ಇದು ಹೇಗಿದೆ?..." ಅಂದಾಗ ಹಿಂದೆ ಮುಂದೆ ನೋಡದೆ "ತಥ್ ಏನೂ ಚೆನ್ನಾಗಿಲ್ಲ, ನಿಂಗೆ ಒಪ್ಪೂದೇ ಇಲ್ಲ ಈ ಬಣ್ಣ" ಅಂದುಬಿಟ್ಟೆ. ಬಣ್ಣ ಅವಳಿಗೆ ಒಪ್ಪುತ್ತಿತ್ತೋ ಬಿಡುತ್ತಿತ್ತೋ ಹಣ ಮಾತ್ರ ನಂಗೆ ಹಿಡಿಸುತ್ತಿರಲಿಲ್ಲ. ನನ್ನಾಕೆ ರೇಗಿ "ಸರಿ ಹಾಗಾದ್ರೆ ನೀವೇ ಆರಿಸಿಕೊಡಿ" ಎಂದು ನನ್ನನ್ನೂ ರಣಾಂಗಣಕ್ಕೆ ಎಳೆದಳು. ನಾನು ಸೀರೆಯ ಕಪಾಟುಗಳ ಮೇಲೆಲ್ಲಾ ಕಣ್ಣು ಹಾಯಿಸುತ್ತಾ ಹೋಗಿ ಮೂಲೆಯಲ್ಲಿಟ್ಟಿದ್ದ ಪಟ್ಟೆ ಪಟ್ಟೆ ಬಟ್ಟೆ ತೆಗೆಸಿ "ಇದು ನೋಡು ಚೆನ್ನಾಗಿದೆ" ಅಂದಾಗ ಅಂಗಡಿಯವ ಗೊಳ್ಳೆಂದ, ನನ್ನಾಕೆ ರೇಗಿ ಕೆಂಪಾಗಿ ನನ್ನನ್ನೂ ಅಲ್ಲಿಂದ ದರದರನೆ ಹೊರಗೆಳೆದುಕೊಂಡು ಬಂದಳು. ರಸ್ತೆಯ ತಿರುವಿನಲ್ಲಿ ನನಗೆ ನನ್ನ ತಪ್ಪು ಅರಿವಾಯಿತು. ನಾನು ತೆಗೆಸಿದ್ದು ಸೀರೆಯನ್ನಲ್ಲ, ಬೆಡ್ ಶೀಟನ್ನು. ಅವಮಾನವೇನೋ ಆಯಿತು. ಆದರೆ ಈಗ ಸೀರೆ ಆರಿಸುವಾಗ ನಾನು ಅವಳ ಹಿಂದೆ ಮುಂದೆ ಅಲೆಯಬೇಕಾಗಿಲ್ಲ.

ಒಳ್ಳೆಯ ಧ್ಯೇಯ?

ಇನ್ನು ಕೆಲವು ಕೆಲಸಗಳಿವೆ. ಅವುಗಳು ಮನೆಗೆಷ್ಟು ಮುಖ್ಯವೋ ನಿಮಗೂ ಅಷ್ಟೇ ಮುಖ್ಯ. ಇಲ್ಲ ಅನ್ನುವ ಹಾಗಿಲ್ಲ, ಕೆಲಸ ಮಾಡದೆ ಬಿಡುವ ಹಾಗಿಲ್ಲ. ಇವು ಎಂಥವು ಗೊತ್ತೇನು— 'ರ್ರೀ, ನಲ್ಲಿ ರಿಪೇರಿ ಮಾಡಿಸಬೇಕರಿ...' 'ಕಛೇರಿಯಿಂದ ಬರುತ್ತಾ ಹಾಗೇ ವಿದ್ಯುತ್ ಬಿಲ್ಲಿನ ಹಣ ಕಟ್ಟಿಬಿಡಿ,' 'ಅಂದ್ಹಾಗೆ ಅಂಚೆ ಕಛೇರಿಯಿಂದ ಒಂದೆರಡು ಕವರ್ ತನ್ನಿ...' ಇತ್ಯಾದಿಗಳು. ಇಂತಹ ಕೆಲಸಗಳಿಗೆಲ್ಲಾ ನಿಮ್ಮ ಮರೆವೇ ಸರ್ವೌಷಧ. ಎರಡು ದಿನ ಮರೆತರೆ ಮೂರನೇ ದಿನ ತಾವೇ ಹೊರಗೆ ಹೋಗಿ ಕೆಲಸ ಮಾಡಿಕೊಂಡು ಬರುತ್ತಾರೆ ಈಗಿನ ಕಾಲದ Equal Rights ಬೇಡುವ ಹೆಣ್ಣುಗಳು. ಅಲ್ಲದೆ ಹೀಗೆ ಮಾಡುವುದರಿಂದ ಅವರಿಗೆ ನೀವು ಧೈರ್ಯ ಕಲಿಸಿದ ಹಾಗಾಗುತ್ತದೆ, ಅವರ ಕಾಲ ಮೇಲೆ ಅವರು ಸ್ವತಂತ್ರವಾಗಿ

ನಿಲ್ಲಲು ಸಮಯ ಬಾರದ ಹಾಗಾಗುತ್ತದೆ. ಇದು ಒಳ್ಳೆಯ ಧ್ಯೇಯವೇ ಎಂದು ಯಾರಾದರೂ ಒಪ್ಪಲೇಬೇಕು.

ಯಾರೋ ಒಬ್ಬರು ಹೆಣ್ಣಿಗೆ ಹೇಗೆ ಗಂಡ ನಡೆಸಬೇಕೆಂದು ಹೇಳಿಕೊಡುವಾಗ ಮೊದಲನೆ ಪಾಠವಾಗಿ "ಬ್ರಹ್ಮಚಾರಿಯಾಗಿದ್ದಾಗಿನ ಅಭ್ಯಾಸಗಳನ್ನು ಮದುವೆ ಆದ ತಕ್ಷಣ ಬಿಡಬೇಕು. ಹೆಂಡತಿ ಹೇಳಿಕೊಡುವ ಹೊಸ ಅಭ್ಯಾಸಗಳನ್ನು ಕಲಿಯಬೇಕು. ಮತ್ತು ಅವಳ ಮನೆಗೆಲಸಗಳಲ್ಲಿ ಸಹಭಾಗಿಯಾಗಬೇಕು." ಎಂದು ಹೇಳಿದೆ. ಅವರಿಗೆ ಸಿಟ್ಟು ಬಂದು "ಹಾಗಾದ್ರೆ ಮದುವೆ ಆದ ಮೇಲೆ ಹೆಂಡತಿಯ ಗುಲಾಮನೇ ಆಗಬೇಕು ಅಂತೀರೇನು ?" ಎಂದು ಪ್ರಶ್ನಿಸಿದರು. ಇಲ್ಲ ಸ್ವಾಮೀ ಇಲ್ಲ. ಹೆಂಡತಿಯ ಕತ್ತಿಗೆ ಗಂಟು ಬಿಗಿದಿದ್ದಕ್ಕೇ ಅಲ್ಲವೇ ನೀವು ಗಂಡಾಗಿದ್ದು. ಗಂಡಾಗೇ ಇದ್ದು, ಅಂದಮಾತ್ರಕ್ಕೆ ಎಲ್ಲಾ ಕಡೆಯೂ ಯಾವಾಗಲೂ ಹೆಣ್ಣು ನಿಮ್ಮ ಬಾಲವಾಗಿ ನಿಮಗೆ ಗಂಟಾಗೇ ಇದ್ದರೆ ಏನು ಚೆಂದ. ಆಗ ನಿಮ್ಮ ಸ್ವಾತಂತ್ರ್ಯ ಎಲ್ಲಿ ಅಂದೆ ಅಷ್ಟೆ. ಬೆಳಗ್ಗೆದ್ದು ತಿಂಡಿ ತಿಂದು ಆಫೀಸಿಗೆ ಹೋಗಿ ಸಂಜೆ ಆಫೀಸು ಮುಗಿದದ್ದೆ ತಡ ಮನೆಗೆ ಓಡಿ ಬಂದು ಹೆಂಡತಿಯ ಬಿಡದೇ ಓಡಾಡುವ ಗಂಡಸನ್ನು ನೋಡಿದರೆ ಕೊಟ್ಟಿಗೆಯಲ್ಲಿ ಕಟ್ಟಿದ ಹಸು ಬೆಳಗ್ಗೆ ಹುಲ್ಲು ಮೇಯಲು ಹೊರಗೆ ಹೋಗಿ ಸಂಜೆ ಬಂದು ಗೊಂತಿಗೆ ಕತ್ತು ಕೊಡುವ ನೆನಪಾಗುತ್ತದೆ. ಮದುವೆಯ ದಿನ ತಾಳಿ ಕಟ್ಟಿಸಿಕೊಳ್ಳುಕ್ಕೆ ಒಂದು ಸಲ ಕತ್ತು ಬಗ್ಗಿಸಿದವಳು ಮುಂದೆ ಜೀವನವಿಡೀ ನಿಮ್ಮ ಕತ್ತನ್ನು ಬಗ್ಗಿಸಿ ಗೊಂತಿನ ಹಗ್ಗ ಕಟ್ಟಿದರೆ... ಛೀ. ಛೀ... ಅದಕ್ಕೇ ಹೇಳಿದ್ದು ಗಂಡಾಗಿ ವರ್ತಿಸಿ ಅಂತ. ಆಫೀಸಿಗೆ ಹೋಗಿ, ಅಲ್ಲಿಂದ ಪೇಟೆ ಸುತ್ತಿ, ಅಲ್ಲೆಲ್ಲೋ ಶಾಂತಭವನದಲ್ಲಿ ದೋಸೆ, ಕಾಫಿ ಹಾಕಿಕೊಂಡು ಹಾಗೇ ಸ್ನೇಹಿತರ ಜೊತೆ ಕ್ಲಬ್ಬಿಗೆ ನುಗ್ಗಿ, ಇಸ್ಪೀಟು ಬಡಿದು ರಾತ್ರಿ ಯಥಾನುಶಕ್ತಿ ಮನೆಗೆ ಬನ್ನಿರಿ. ಮದುವೆಯಾದ ಹೊಸ ಬಿಸಿಯಲ್ಲಿ ಆಫೀಸಿನಿಂದ ಸೀದಾ ಮನೆಗೆ ಬಂದು, ಹೆಂಡತಿಯೊಡನೆ ಸಂಜೆ ಪೇಟೆಗೋ, ಪಾರ್ಕಿಗೋ ಗಾಳಿ ಸೇವನೆಗೆಂದೋ ಹೊರಡುವ ಅಭ್ಯಾಸ ಅಪ್ಪಿ ತಪ್ಪಿ ಶುರುಮಾಡಿಬಿಟ್ಟೀರಾ ! ಒಂದು ವರ್ಷದ ನಂತರ ನಿಮಗೆ ಕ್ಲಬ್ಬಿಗೆ ಹೋಗಬೇಕೆನಿಸಿದರೆ, ಅಥವಾ ಆಫೀಸಿನಲ್ಲೇ [illegible] ಕಾಲದ [illegible] ಮಾಡುತ್ತಾ [illegible] ಕಾದು ಕಾದು [illegible] ಮನೆಯಲ್ಲಿ [illegible] [illegible] Homing Bird [illegible] ನಿಮ್ಮ ಗ್ರಹಚಾರ ಕೆಟ್ಟಿತು ಅಂತಲೇ ಅನ್ನಬೇಕು. "[illegible] ಗೊಂತಿಗೆ [illegible] !..." [illegible] !!

ಕಾಗದದ ಕಥೆ

ಈ ತರಹ [illegible] ಬಂಡಾಟ ನಡೆಸಿದ್ದರೆ ನಿಮ್ಮಾಕೆ ಸಮಯ ಸಿಕ್ಕಾಗ [illegible] ಬಿಡುತ್ತದೆ. ನೀವು ಏನೇ ಹೇಳಿ, ಅವರು ಏನೇ



"ನಮ್ಮಂದೆ ಜಿಪುಣ ಅಂತ ಹೇಳ್ಬೇಡ. ಸಂಬಳ ಬಂದ ತಕ್ಷಣ ಎಲ್ಲಾ ದುಡ್ನೂ ನಮ್ ತಾಯಿ ಕೈಗೆ ಕೊಟ್ಬಿರ್ತಾರೆ, ನಾನೇ ನೋಡಿದೀನಿ."

ಗಲಾಟೆ ಮಾಡಲಿ ಎಷ್ಟೇ ಕಣ್ಣು ಕೆಂಪಗೆ ಮಾಡಲಿ, ಮನೆಯಾಕೆ ಮನೇಲಿದ್ದರೇ ಚೆನ್ನ, ಆಗಲೇ ನಿಮ್ಮ ಗುಂಡಾಟಕ್ಕೆ ಆಸ್ಪದ; ಇಲ್ಲದಿದ್ದರೆ ಹೀಗೆ ಬ್ರಹ್ಮಚಾರಿ ಜೀವನ ನಡೆಸುವುದರಲ್ಲಿ ಏನಿದೆ? ನೀರಸ. ಆದರೆ ನಿಮ್ಮಾಕೆ 'ಹಸು ಸರಿಯಾಗಿ ಗೊಂತಿಗೆ ಬರುತ್ತಿಲ್ಲಾ' ಅಂತಲೋ, ಅವಳ ಅಭ್ಯಾಸಗಳಿಗೆ ನೀವು ಜಗ್ಗುತ್ತಿಲ್ಲ ಅಂತಲೋ ಮುನಿಸಿಕೊಂಡು ತೌರುಮನೆಗೆ ಪದೇ ಪದೇ ಹೊರಟರೆ ನಿಮಗೆ ಕಂಟಕ ತಪ್ಪಿದ್ದಲ್ಲ... ತೌರುಮನೇಲಿ ಹೊಸದಾಗಿ ತರಪೇತಿ ತಗೊಂಡು ಬಂದರೆ ಆಮೇಲೆ ನಿಮಗಿರೋ ಕಿಂಚಿತ್ತು ಸ್ವಾತಂತ್ರ್ಯನೂ ಕಡಿದು ಹೋಗಿಬಿಟ್ಟೀತು ಜೋಕೆ! ಹೆಂಡತಿಯ ತೌರುಮನೆ ಟ್ರಿಪ್ ತಪ್ಪಿಸಲು ಅನೇಕರು ಅನೇಕ ಉಪಾಯ ಬಳಸುತ್ತಾರೆ. ಹೆಂಡತಿ ಊರಿಗೆ ಹೊರಟ ಸ್ವಲ್ಪ ದಿನದಲ್ಲೇ ಒಬ್ಬರು ಸ್ನೇಹಿತರು ಅವಳಿಗೆ ಒಂದು ಕಾಗದ ಬರೆದರು. "ನಾನೊಬ್ಬನೇ ಇಲ್ಲಿ ಊಟ ತಿಂಡಿಗೆ ಪಾಡು ಪಡುವದನ್ನು ತಿಳಿದು, ಊರಿನಿಂದ ಸೋದರಮಾವ ಮತ್ತು ಅವರ ಮಗಳು ಶಾಂತೂ ಜೊತೆ ಒಂದು ತಿಂಗಳು ಇಲ್ಲೇ ಬಂದಿರುತ್ತಾರಂತೆ. ಆದ್ದರಿಂದ ನೀನು ನಿಧಾನವಾಗಿ ಬಾ. ಪರವಾಗಿಲ್ಲ." ಮಾರನೇ ದಿನವೇ ಕಾಗದಕ್ಕೆ ಉತ್ತರದ ಬದಲು, ಅಮ್ಮಾವ್ರ ಸವಾರಿಯೇ ದಯಮಾಡಿಸಿತ್ತು. ತನ್ನ ಹಳೇ ಎದುರಾಳಿ ಶಾಂತಳ ಕಡೆ ಎಲ್ಲಿ ಗಂಡನ ಮನಸ್ಸು ಮತ್ತೊಮ್ಮೆ ಒಲಿದೀತೋ ಎಂದು ಹೆದರಿ ಸೋದರಮಾವನ ಸುಂದರ ಮಗಳು ಇಲ್ಲದಿರುವ ಇನ್ನೊಬ್ಬರು ತಾವೇ ಒಂದು ಕಾಗದ ಟೈಪ್ ಮಾಡಿ "ನಿನ್ನೆ ಅನ್ನ ಮಾಡಲು ಹೋಗಿ ಕೈಯೆಲ್ಲಾ ಸುಟ್ಟು ಬೊಬ್ಬೆ ಬಂದಿರುವುದರಿಂದ ಕಾಗದ ಬರೆಯಲಾಗುತ್ತಿಲ್ಲ. ಆದ್ದರಿಂದ ನನ್ನ ಸೆಕ್ರೆಟರಿಯ ಮೂಲಕ ಕಾಗದ ಟೈಪ್ ಮಾಡಿಸಿ ಕಳಿಸುತ್ತಿದ್ದೇನೆ,..." ಎಂದು ಬರೆದು ಕಳಿಸಿದರು. ನನ್ನಾಕೆ ಊರಿಗೆ ಹೋಗುವಾಗ ರೈಲಿನಲ್ಲಿ ಕೂತು ಟಾಟಾ ಬೈ ಬೈ ಹೇಳುತ್ತಾ "ಅಗಸಂಗೆ ಆರು ರೂಪಾಯಿ ಅರವತ್ತು ಪೈಸಾ ಕೊಡಬೇಕು. ಹಾಲಿನವನಿಗೆ... ಪಕ್ಕದ ಮನೆಯವಳು ಎರಡು ಲೋಟ ಸಕ್ಕರೆ ಸಾಲ ವಾಪಸ್ಸು ಮಾಡಬೇಕು... ಎಲ್ಲಾದಕ್ಕೂ ಕಾಗದ ಬರೀರಿ, ಮರೀಬೇಡಿ" ಎಂದು ನೂರಾರು ಸಣ್ಣಪುಟ್ಟ ವಿಚಾರ ನೆನಪು ಮಾಡಿರುತ್ತಾಳೆ. ಅವುಗಳ ಬಗ್ಗೆ ತಿಳಿಸಿ ಕಾಗದ ಬರೆಯದಿದ್ದರೆ, ಅವಳಿಗೆ ತೌರಿನಲ್ಲೂ ನಿದ್ದೆಯಿಲ್ಲ. ನನಗೇ ಇಲ್ಲಿ ನಿದ್ದೆಯಿಲ್ಲದಿರುವಾಗ ಅವಳಿಗ್ಯಾಕೆ ಎಂದು ನಾನು ಕಾಗದದ ಗೊಡವೆಗೇ ಹೋಗುವುದಿಲ್ಲ. 'ಕಾಗದ ಬರಲಿಲ್ಲವಲ್ಲ, ಎಲ್ಲರಿಗೂ ಸರಿಯಾಗಿ ದುಡ್ಡು ಕೊಟ್ಟಿರೋ ಇಲ್ಲವೋ? ನಿಮಗೆ ಆರೋಗ್ಯ ಇದೆಯೋ ಇಲ್ಲವೋ ಅಂತ ಗಾಬರಿಗೊಂಡು ಬಂದೆ' ಎಂದು ವಾರದಲ್ಲೇ ವಾಪಸ್ಸಾಗುತ್ತಾಳೆ. ಒಂದು ಪಕ್ಷ ನಿಮ್ಮಾಕೆ ಯಾವುದೋ ಸಂಶಯದ ಮೇಲೆ ತೌರಿಗೆ ಹೋಗದೆ ನಿಮ್ಮ ಹೆಜ್ಜೆ ಹೆಜ್ಜೆಗೂ ಶರಲಾಕ್ ಹೋಮ್ಸನ ತರಹ ಹಿಂಬಾಲಿಸುತ್ತಿದ್ದರೆ ಆಗ ಈಕೆ ತೌರಿಗಾದರೂ

ಯಾಕೆ ಒಂದು ತಿಂಗಳು ಹೋಗಿ ಬರಬಾರದು ಅನ್ನಿಸುವುದು ಸ್ವಾಭಾವಿಕವೇ ಸರಿ. ಆದರೆ ಆ ರೀತಿ ಹೇಳಿದರೆ ಅವಳ ಸಂಶಯ ಇಮ್ಮಡಿ-ಯಾಗುತ್ತದೆ. ಇಲ್ಲೂ ನಾಲ್ಕಾರು ಉಪಾಯ ಮಾಡಬಹುದು. ನಿಮ್ಮ ಗೌರವವನ್ನು ಹೆಚ್ಚಿಸುವ ಒಂದು ಉಪಾಯವೆಂದರೆ. ಎಲ್ಲರೂ ರಜೆಕ್ಕೆ ಅವಳ ತೌರಿಗೆ ಹೋಗೋಣವೆಂದು ತಿಂಗಳ ಮುಂಚೆಯೇ ರೈಲಿನಲ್ಲಿ 'ಸರ್ವೇಶನ್' ಎಲ್ಲಾ ಮಾಡಿಸಿ, ಎಲ್ಲ ರೀತಿಯ ತಯಾರಿ ಮಾಡಿಸುವುದು. ಪ್ರಯಾಣದ ಹಿಂದಿನ ದಿನ ಆಫೀಸಿನಿಂದ ಬಂದವರೇ ತಲೆಯ ಮೇಲೆ ಕೈಹಾಕಿ. ಮಾತಾಡಿಸಿದರೂ ಮಾತಾಡದೆ ಕೂರುವುದು. ಬಹಳ ಒತ್ತಾಯದ ಮೇಲೆ ನೊಂದ ವದನಂತೆ "ಇವತ್ತು ಬಹಳ ಅರ್ಜೆಂಟ್ ಕೆಲಸ ಬಂದು ಬಿಟ್ಟಿತು. ಎಲ್ಲಾ ಬಿಟ್ಟು ನಮ್ಮ ಬಾಸ್‌ಗೆ ನಾನೇ ಬೇಕೆ! ನನ್ನನ್ನು ಕರೆದು 'ನೀ ಇಲ್ಲದಿದ್ದರೆ, ಈ ಕೆಲಸ ಆಗೋದೇ ಇಲ್ಲ ಇನ್ನೊಂದು ಹದಿನೈದು ದಿನ ಈ ಕೆಲಸ ಆಗುವವರೆಗೂ ನೀನಿಲ್ಲಿ ಇರಲೇ ಬೇಕು. ನಿನ್ನಲ್ಲೇ ನಂಗೆ ಬಹಳ ವಿಶ್ವಾಸ,' ಅಂದು ಬಿಟ್ಟರು. ಏನು ಮಾಡಲಿ ಅರ್ಥ ಆಗ್ತಾ ಇಲ್ಲ..." ಎಂದು ಗಾಡಿ ಬಿಡಬೇಕು. ಬಾಸ್ ಹೇಳಿದ್ದ ಘನಾಂಧಾರಿ ಕೆಲಸ ಅಂದರೆ ಕ್ಲಬ್‌ನಲ್ಲಿ ಅವರ ಜೊತೆ ಬ್ರಿಡ್ಜ್ ಟೂರ್ನಮೆಂಟ್ ಆಡುವುದು! ಪಾಪ, ನಿಮ್ಮಾಕೆ ನಿರ್ವಾಹವಿಲ್ಲದೆ ಒಬ್ಬರೆ ಹೋಗುತ್ತಾರೆ– ತೌರಿನಲ್ಲಿ ಜಂಭದಿಂದ ನಿಮ್ಮ ದೊಡ್ಡ ಕೆಲಸದ ಬಗ್ಗೆ ಜಂಭ ಕೊಚ್ಚಿಕೊಳ್ಳುತ್ತಾರೆ.

ಘರಮಾಯಿಶಿ

ನಿಷ್ಪ್ರಯೋಜಕರು, ಕೆಲಸಕ್ಕೆ ಬಾರದವರು, ಮರಗುಳಿ ಎಂದು ಏನೇನೋ ನಿಮಗೆ ನಿಮ್ಮಾಕೆ ನಿಮ್ಮ ಮುಂದೆ ಛೀಮಾರಿ ಹಾಕಿದ ತಕ್ಷಣ ಎದೆ ಗುಂದಬೇಡಿ. ನಿಮ್ಮ ಗಂಡಸುತನವನ್ನು ಉಳಿಸಿಕೊಳ್ಳುವಕ್ಕೆ ನೀವು ತೋರಿದ ಎಲ್ಲಾ ಲಕ್ಷಣಗಳನ್ನೂ ಎದುರಿಗೆ ಬೈದಂತೆ ಮಾಡಿದರೂ ಯಾವ ಹೆಣ್ಣೂ ತನ್ನ ಗಂಡನ ಗಂಡಸುತನವನ್ನು ನಿಜವಾಗಿಯೂ ಹೃದಯಪೂರ್ವಕವಾಗಿಯೂ ಬೈಯುವುದಿಲ್ಲ. ಇದನ್ನು ತಿಳಿಯಬೇಕಾದರೆ ಆಕೆ ಪಕ್ಕದ ಮನೆಯಾಕೆಯೊಡನೆ ನಡೆಸುವ ಸಂಭಾಷಣೆಯನ್ನು ಕದ್ದು ಕೇಳಬೇಕು. ಇಲ್ಲಿದೆ ನೋಡಿ ಆ ರೀತಿ ಕದ್ದು ಕೇಳಿದ ಕೆಲವು ತುಣುಕುಗಳು. "ಅಯ್ಯೋ ನಮ್ಮ ಯಜಮಾನ್ರು ಬಹಳ ಕಟ್ಟುನಿಟ್ಟಪ್ಪ. ಬೆಳಿಗ್ಗೆ ಮಾಡಿದ್ದನ್ನು ರಾತ್ರಿ ಮೂಸಿ ಸಹಿತ ನೋಡುಲ್ಲ. ಎಲ್ಲಾ ಅಡಿಗೆ ಬಿಸಿಬಿಸಿಯಾಗಿರಬೇಕು" (ದಿನವೂ ರೆಫ್ರಿಜರೇಟರ್‌ನಿಂದ ತೆಗೆದು ಪಾರದ ಅಡಿಗೆ ಬಡಿಸಿದ್ದ ಬಡಿಸಿದ್ದು) "ನಾನಿಲ್ಲದೆ ಇದ್ದರೆ ಅವರಿಗೆ ಬಹಳ ಕಷ್ಟ. ಪಾಪ ಅವರಿಗೆ ಒಂದು ಲೋಟ ಕಾಪಿ ಬಿಸಿಮಾಡಿಕೊಳ್ಳುಕ್ಕೂ ಬರುಲ್ಲ. ಎಂದೂ ಒಂದು ಕಡ್ಡಿ ಆ ಕಡೆಯಿಂದ ಈ ಕಡೆ ಇಟ್ಟವರಲ್ಲ" (ಸಂಜೆ ಯಾವರೆ ಪಾತ್ರೆ ತೊಳೆಯುವುದು ಗಂಡನೇ) "ನಮ್ಮ ಯಜಮಾನ್ರು ಬೆಳಿಗ್ಗೆ ಬೆಡ್‌ಕಾಫಿ ಇಲ್ಲದಿದ್ದರೆ ಕಣ್ಣೆ ಬಿಡುಲ್ಲ" (ಪಾಪ, ಆ ಬೆಡ್‌ಕಾಫಿ ಮಾಡಿ ಹೆಂಡತಿಗೆ ಕೊಟ್ಟು, ತಾನೂ ಅವಳ ಜೊತೆ ಹಾಸಿಗೆಯ ಮೇಲೆ ಕುಡಿಯುತ್ತಾನೆ ಆ ಬಡ ಪ್ರಾಣಿ) "ಅಬ್ಬ; ಇವರಿಗಂತೂ ಎಲ್ಲಾ ಅದರದರ ಸ್ಥಳದಲ್ಲಿ ಸರಿಯಾಗಿ ಒಪ್ಪವಾಗಿ ಓರಣವಾಗಿ ಜೋಡಿಸಿಟ್ಟಿರಬೇಕು: ಎಲ್ಲಾದರೂ ಒಂದು ಕೂದಲು ವ್ಯತ್ಯಾಸವಾದರೂ ಸಿಟ್ಟೇ ಬಂದು ಬಿಡುತ್ತೆ" (ಅವನು ಕೊಳಕು ಬಟ್ಟೆ, ಬರೆ, ಸಾಮಾನುಗಳನ್ನು ಎಲ್ಲೆಡೆಯೂ ಎಸೆದಿದ್ದನ್ನು ಹೆಂಡತಿ ಸರಿಯಾಗಿ ಇಡುವುದರಲ್ಲಿ ಸುಸ್ತೋ ಸುಸ್ತು) ಹೀಗೆ ಗಂಡನಾಗಿ ಗಂಡಸುತನ ತೋರಿ, ಎದುರಿಗೇ ಹೆಂಡತಿಯಿಂದ ರೇಗಿಸಿಕೊಂಡರೂ ಅವರ ಹೃದಯದಲ್ಲಿನ ಮೆಚ್ಚಿಗೆ ಗಳಿಸುವುದೇ ನಮಗೆ ನಿಮಗೆ ಎಲ್ಲಾ ಗಂಡಸರಿಗೆ ಹೆಮ್ಮೆಯಲ್ಲವೆ? ಅಥವಾ ದಿನವಿಡೀ ಹೆನ್‌ಪೆಕ್ಡ್ ಅನ್ನಿಸಿಕೊಂಡು, ಅವಳು ಹೇಳಿದ ರೀತಿ ನಡೆದು, ಅವಳ ಗುಲಾಮನಾಗಿ, ಕೊನೆಗೆ ಅವಳ ಹೃದಯಕ್ಕೂ ನಿಕೃಷ್ಟವಾಗಿ ಕಂಡು 'ಹೆಂಡತಿಯ ಗುಲಾಮ'ನಾಗಿ ಬಾಳುವುದು ನಿಮಗೆ ಸರಿಬೀಳುವುದೋ? ಈ ವಿಚಾರ ಯೋಚಿಸಿ ಸರಿಯಾದ ಮಾರ್ಗ ನೀವೇ ರೂಪಿಸಿಕೊಳ್ಳಿ.

(ಅಲ್ಲಿ ಇಲ್ಲಿ ಕೇಳಿದ್ದು, ಸ್ವಂತ ಅನುಭವದ್ದು, ಕಲ್ಪನೆಗೆ ಸಿಕ್ಕಿದ್ದು, ಎಲ್ಲದರ ಸಂಗ್ರಹ.)



ಸುಪರ್ 777

ಕೊಳೆಗೆ ಆಪತ್ತು, ಬಿಳುಪಿನ ತಾಕತ್ತು



ಭಾರತದ ಲಕ್ಷಾಂತರ ಗೃಹಿಣಿಯರ ಮೆಚ್ಚಿನ
ಸುಪರ್ 777 ಡಿಟರ್ಜೆಂಟ್ ಒಗೆಯುವ ಬಾರ್.

ಹಣ ಉಳಿಸಿರಿ, ಬಿಳುಪು ಹೆಚ್ಚಿಸಿರಿ

ಶಬ್ದಾರ್ಥ ಚಿಂತಾಮಣಿ

-೨-

ಯಾವೊಂದು ವಿಷಯದಲ್ಲಿ ಚತುರನಾಗಿರುವವನನ್ನು **ಕುಶಲ** ಎಂದು ನಿರ್ದೇಶಿಸುವುದುಂಟು. ಕಾರ್ಯಕುಶಲ, ವಾದಕುಶಲ ಇತ್ಯಾದಿ. ಇದು ಎಲ್ಲಿಂದ ಬಂತು? ಬಹುಶಃ ಸಂಸ್ಕೃತದ **ಕುಶ**ದಿಂದ. ಈ ಶಬ್ದಕ್ಕೆ ಎರಡು ಅರ್ಥಗಳು. ಒಂದು ಆರ್ಯಧರ್ಮದಲ್ಲಿ ಪವಿತ್ರವೆನಿಸುವ ದರ್ಭೆಯೆಂಬ ಹುಲ್ಲು. ಇನ್ನೊಂದು, ನೇಗಿಲಿನ ಮೊನೆ. ಕುಶ ಹುಲ್ಲಿನ ತುದಿಯೂ ಬಹಳ ಮೊನೆಯೇ. ಆದ್ದರಿಂದ ಹರಿತವಾದ ಬುದ್ಧಿಯುಳ್ಳವನನ್ನು **ಕುಶಾಗ್ರಮತಿ** ಅಂದರೆ ದರ್ಭೆಯ ತುದಿಯಂತೆ ತೀಕ್ಷ್ಣವಾದ ಮಿದುಳುಳ್ಳವ ಎನ್ನುವ ರೂಢಿ ಇದೆ. ಅಥವಾ **ನೇಗಿಲ ಮೊನೆ**ಯಂತೆ ಕಠಿಣವಾದ ವಿಷಯಗಳನ್ನು ಕತ್ತರಿಸಬಲ್ಲದ್ದು ಎಂದೂ ಹೇಳಬಹುದು. ಆದರೆ ಆರ್ಯರಿಗೆ ನೇಗಿಲ ಮೊನೆಗಿಂತ ಹಿಂದೆಯೇ ಕುಶತೃಣದ ಪರಿಚಯ ಇತ್ತೆಂದು ತೋರುತ್ತದೆ. ಕುಶದ ಪ್ರಸ್ತಾಪ ಋಗ್ವೇದದಲ್ಲೇ ಬರುತ್ತದೆ.

ಕುಶಲಕ್ಕೆ ಇನ್ನೊಂದು ಅರ್ಥವೂ ಇದೆ. ಕ್ಷೇಮ, ಸುಖ, ಮಂಗಲ ಇತ್ಯಾದಿ. ಇದು ಕುಶಲದ ಮೇಲೆ ಹೇಳಿದ ಅರ್ಥದ್ದೇ ವಿಸ್ತರಣೆ ಆಗಿರಬಹುದು. ಚತುರನಾಗಿದ್ದವನಿಗೆ ಕ್ಷೇಮ ಇರುತ್ತದೆ ಅಲ್ಲವೆ? ಆದರೆ ಇದು ಬೇರೆಯೇ ಮೂಲದಿಂದ ಬಂದಿದ್ದರೂ ಇರಬಹುದು. ಹಿಂದುಸ್ಥಾನಿಯಿಂದ ಕನ್ನಡದಲ್ಲಿಯೂ ನುಸುಳಿಕೊಂಡ **ಖುಶ್** (ಸುಖ, ಸಂತೋಷ) ಎಂಬ ಪಾರಸೀಕ ಶಬ್ದವೊಂದುಂಟು. ಪಾರಸೀಕ ಮತ್ತು ಸಂಸ್ಕೃತ ಭಾಷೆಗಳು ಸೋದರ ಭಾಷೆಗಳೆಂದು ಇಲ್ಲಿ ನೆನೆದುಕೊಳ್ಳಬಹುದು.

ಕುಶಾಲು ಎನ್ನುವ ಇನ್ನೊಂದು ಶಬ್ದ ಕನ್ನಡದಲ್ಲಿ ಬಳಕೆಗೆ ಬಂದಿದೆ. ವಿನೋದ, ಆನಂದ ಎಂಬರ್ಥ ಅದಕ್ಕೆ ಇದೆ. **ಖುಶಾಲು** ಎಂಬ ಮಹಾಪ್ರಾಣಯುಕ್ತ ರೂಪವೂ ಅದಕ್ಕೆ ಇದೆ. ಕುಶಾಲಿಗೆ ಹೇಳಿದೆ—ಅಂದರೆ ವಿನೋದಕ್ಕಾಗಿ ಹೇಳಿದೆ. ಗಂಭೀರವಾಗಿ ಅಲ್ಲ. **ಕುಶಾಲಾಗಿ** ಇದ್ದಾನೆ ಅಂದರೆ ಯಾವ ಚಿಂತೆಯೂ ಇಲ್ಲ, ಸುಖವಾಗಿದ್ದಾನೆ. **ಕುಶಾಲ್ ತೋಪು** ಎಂದರೆ ಗೌರವ ಅಥವಾ ಸಂತೋಷ ಪ್ರದರ್ಶನಕ್ಕೆ ಹಾರಿಸಿದ ಫಿರಂಗಿ. ಇದು ಹಿಂದುಸ್ತಾನಿ ಮೂಲಕ ಬಂದ ಪಾರಸೀಕ **ಖುಶ್-ಹಾಲ್** (ಸಂತೋಷ ಸ್ಥಿತಿ) ಶಬ್ದ. ಈ ಶಬ್ದ ಕ್ರಿ. ಶ. ೧೮೦೦ ರಷ್ಟು ಹಿಂದೆಯೇ ಜೈನಭಾರತವೆಂಬ ಕಾವ್ಯದಲ್ಲಿ ಪ್ರಯೋಗವಾದದ್ದು ಕಾಣುತ್ತದೆ.

ನಮ್ಮ ಪೂರ್ವಿಕರು ಶಬ್ದಗಳ ವಿಷಯದಲ್ಲಿ ಮಡಿವಂತರಾಗಿರಲಿಲ್ಲ ಎಂಬುದಕ್ಕೆ ಇನ್ನೊಂದು ಉದಾಹರಣೆ ತಕ್ಕಡಿಯೆಂಬರ್ಥದ **ತ್ರಾಸು** ಎಂಬ ಪದ. ಇದು ೧೨ ನೇ ಶತಮಾನದಷ್ಟು ಹಿಂದೆಯೇ ಕನ್ನಡ ಕಾವ್ಯದಲ್ಲಿ ಕಂಡುಬರುತ್ತದೆ. **ತ್ರಾಸಿನೊಳಿಟ್ಟು** ತೂಗುವ ಮಾತು ಅಲ್ಲಿದೆ. ಇದು ಹೊರನೋಟಕ್ಕೆ ಸಂಸ್ಕೃತವೆಂದೇ ತೋರೀತು. ಆದರೆ ಅದರ ಮೂಲ ಪಾರಸೀಕ **ತರಾಜೂ**. ಸಂಸ್ಕೃತದ ತ್ರಾಸದಿಂದ ಕನ್ನಡಕ್ಕೆ ಬಂದ **ತ್ರಾಸು** ಎಂಬುದು ಕಷ್ಟ, ಒತ್ತಡ ಎಂಬರ್ಥದ್ದು.

ತ್ರಾಸು ಇಸ್ಲಾಮಿ ವಿಸ್ತರಣೆಯ ಪ್ರಭಾವದಿಂದ ಬಂದಿರದೆ ವಿದೇಶಗಳೊಡನೆ ಪ್ರಾಚೀನದಿಂದ ಕರ್ನಾಟಕದ ವ್ಯಾಪಾರದೊಡನೆ ಬಂದದ್ದು. ಆದರೆ **ಫೌಜು** ಅಥವಾ **ಪೌಜು** ಎಂಬುದು ಇಸ್ಲಾಮಿ ಮಿಲಿಟರಿ ಪ್ರಭಾವದಿಂದ ಕನ್ನಡಕ್ಕೆ ಸಾಕಷ್ಟು ಹಿಂದಿನ ಕಾಲದಲ್ಲೇ ಬಂದ ಅರಬೀ ಪದ. ಅದರ ಅರ್ಥ ಸೈನ್ಯ ಅಥವಾ ದಂಡು. ಕ್ರಿ. ಶ. ೧೬೦೦ ರವನಿರಬೇಕೆಂದು ತರ್ಕಿಸಲಾದ ಲಕ್ಷ್ಮೀಶ ಕವಿ ತನ್ನ ಜೈಮಿನಿ ಭಾರತದಲ್ಲಿ ಅದನ್ನು ತುರುಕರದೆಂಬ ಯಾವ ಶಂಕೆಯೂ ಇಲ್ಲದೆ ಪ್ರಯೋಗಿಸುತ್ತಾನೆ. ಸೈನ್ಯಾಧಿಕಾರಿ ಎಂಬರ್ಥವುಳ್ಳ **ಫೌಜದಾರ**ವನ್ನು ಸ್ವಲ್ಪ ಅರ್ಥವಿಸ್ತಾರಮಾಡಿ ಪೋಲೀಸ್ ಪಡೆಯ ಅಧಿಕಾರಿ ಎಂಬರ್ಥದಲ್ಲಿ ಉತ್ತರ ಕರ್ನಾಟಕದಲ್ಲಿ ಬಳಸುತ್ತಾರೆ.

ಪಾವೆಂ

ಗಣಿತದ ಕಥೆ

ಗುರುವೇ ಶಿಷ್ಯನಾದ

ಸಂಖ್ಯಾಪ್ರಿಯ

ಮೇಸ್ಟ್ರು ತರಗತಿಗಳಲ್ಲಿ ಬೋಧಿಸುವಾಗ, ತಾವೇ ವಿದ್ಯಾರ್ಥಿಗಳಿಂದ ಕಲಿಯುವ ಸಂದರ್ಭಗಳು ಸಹ ಉಂಟು ಎಂಬುದಕ್ಕೆ ಈ ಪ್ರಕರಣವೇ ನಿದರ್ಶನ. ಒಮ್ಮೆ ತರಗತಿಯಲ್ಲಿ ಒಬ್ಬ ಗಣಿತದ ಮೇಸ್ಟ್ರು ಹೇಳಿದರು. "ನೋಡಿ, ನಿಮ್ಮ ಪುಸ್ತಕಗಳನ್ನು ಮುಚ್ಚಿಟ್ಟು ಬಿಡಿ. ಯಾರೂ ಏನೂ ಬರೆಯಬೇಡಿ. ನಾನು ಬೋರ್ಡಿನ ಮೇಲೆ ಏನು ಬರೆಯುತ್ತೇನೋ ಅದನ್ನು ಗಮನವಿಟ್ಟು ನೋಡಿ. ಅಷ್ಟು ಮಾಡಿದರೆ ಸಾಕು. ನಿಮಗೆ ಅರ್ಥವಾಗದಿದ್ದರೆ ಪ್ರಶ್ನೆಗಳನ್ನು ಕೇಳಿ. ಉತ್ತರವನ್ನು ಕೊಡುತ್ತೇನೆ. ಈಗ ನಾನು ಬರೆಯುವುದು ನಿಮ್ಮ ಪಠ್ಯ ವಿಷಯಗಳಿಗೆ ಸಂಬಂಧಪಟ್ಟದ್ದಲ್ಲ. ಗಣಿತದಲ್ಲಿ ಒಂದು ವಿಚಿತ್ರವನ್ನು ತೋರಿಸುತ್ತೇನೆ. ಅತಿ ಸುಲಭವಾದದ್ದು ಮತ್ತು ಅತ್ಯಂತ ಕುತೂಹಲವಾದದ್ದು. ಈಗ ಹೇಳಿ. ಎರಡು ಅಂಕಗಳುಳ್ಳ ಒಂದು ಸಂಖ್ಯೆಯನ್ನು ಬರೆದು ಅದನ್ನು ಅದಲು ಬದಲು ಮಾಡಿ; ಮೊದಲಿನ ಸಂಖ್ಯೆಗೆ ಸೇರಿಸಿದರೆ ಬರುವ ಮೊತ್ತವು ಹನ್ನೊಂದರಿಂದ ನಿಃಶೇಷವಾಗಿ ಭಾಗವಾಗುತ್ತದೆ. ಉದಾಹರಣೆಗೆ ೩೨ ಎನ್ನುವುದು ಒಂದು ಸಂಖ್ಯೆ. ಇದನ್ನು ಅದಲು ಬದಲು ಮಾಡಿದರೆ ೨೩ ಆಗುತ್ತದೆ. ೩೨ ಮತ್ತು ೨೩ ಅನ್ನು ಕೂಡಿದರೆ ೫೫ ಬರುತ್ತದೆ. ಈ ಸಂಖ್ಯೆಯು ೧೧ರಿಂದ ನಿಃಶೇಷವಾಗಿ ಭಾಗವಾಗುತ್ತದೆ. ಮತ್ತೊಂದು ಉದಾಹರಣೆ. ೩೮ ಅನ್ನು ಅದಲುಬದಲು ಮಾಡಿದರೆ ೮೩ ಬರುತ್ತದೆ. ಎರಡನ್ನೂ ಕೂಡಿದರೆ ೧೨೧ ಬರುತ್ತದೆ. ೧೨೧ನ್ನು ೧೧ ರಿಂದ ಭಾಗಿಸಿದರೆ ೧೧ ಬರುತ್ತದೆ."

ಈ ವಿಷಯ ವಿದ್ಯಾರ್ಥಿಗಳಲ್ಲಿ ಸಾಕಷ್ಟು ಕುತೂಹಲವನ್ನು ಕೆರಳಿಸಿತು. ಒಬ್ಬನು ಮೇಸ್ಟ್ರಿಗೆ ಕಾಣದಂತೆ ತನ್ನ ಪುಸ್ತಕದಲ್ಲಿ ಒಂದು ಲೆಕ್ಕ ಮಾಡಿ ಮೇಸ್ಟ್ರು ಮಾಡಿದ್ದು ಮತ್ತು ಹೇಳಿದ್ದು ಸರಿ ಎಂದು ಮನಸ್ಸಿಗೆ ಖಚಿತ ಪಡಿಸಿಕೊಂಡ. ಇದೇ ರೀತಿ ಇನ್ನೊಬ್ಬನು ಲೆಕ್ಕ ಮಾಡಲು ಪ್ರಾರಂಭಿಸಿದ. ಕೇವಲ ೧೦ ನಿಮಿಷಗಳಲ್ಲಿ ಇಡೀ ತರಗತಿಯೇ ಲೆಕ್ಕ ಮಾಡಲು ತೊಡಗಿಬಿಟ್ಟಿತು. ವಿದ್ಯಾರ್ಥಿಗಳ ಮುಖ್ಯ ಉದ್ದೇಶ, ಮೇಸ್ಟ್ರ ಮಾತು ಎಷ್ಟು ಸತ್ಯ ಎಂದು ಕಂಡುಹಿಡಿಯುವದು. ಇಡೀ ತರಗತಿಯಲ್ಲಿ ನಿಃಶಬ್ದ. ಎಲ್ಲರೂ ಲೆಕ್ಕ ಮಾಡುವವರೇ. ಕೆಲವರಂತೂ ಪುಟಗಟ್ಟಲೇ ಲೆಕ್ಕ ಮಾಡಿದರು. ಮಾಡಿ

ದಷ್ಟೂ ಕುತೂಹಲವು ಅಧಿಕವಾಗುತ್ತಿತ್ತು. ಯಾವ ಸಂದರ್ಭದಲ್ಲೂ ಮೇಷ್ಟ್ರ ಮಾತು ಸುಳ್ಳು ಎಂದು ತೋರಿಸಲು ಸಾಧ್ಯವಾಗಲಿಲ್ಲ.

ಮೇಷ್ಟ್ರಿಗೆ ಚೆನ್ನಾಗಿ ಗೊತ್ತಿತ್ತು, ಅದು ಸುಳ್ಳಾಗುವುದಿಲ್ಲವೆಂದು. ಮತ್ತೊಂದು ಭಿನ್ನವಾದ ಉದಾಹರಣೆಯನ್ನು ಕೊಟ್ಟರು. ೫೦ ಅನ್ನು ಅದಲು-ಬದಲು ಮಾಡಿದರೆ ೦೫ ಆಗುತ್ತದೆ (ಇಲ್ಲಿ ತಪ್ಪು ಮಾಡುವ ಸಂದರ್ಭ ಉಂಟು). ೫೦ ಮತ್ತು ೦೫ ಅನ್ನು ಕೂಡಿಸಿದರೆ ೫೫ ಬರುತ್ತದೆ. ಇದೂ ಸಹ ನಿಯಮದ ಪ್ರಕಾರ ೧೧ ರಿಂದ ನಿಃಶೇಷವಾಗಿ ಭಾಗವಾಗುತ್ತದೆ. ವಿದ್ಯಾರ್ಥಿಗಳೆಲ್ಲರೂ ಪೂರ್ಣವಾಗಿ ಭಾಗವಹಿಸಿ, ಎಲ್ಲರೂ ಸಂತೋಷದಿಂದ ಹಿಗ್ಗುತ್ತಿದ್ದರು. ಮೇಷ್ಟ್ರಿಗಂತೂ ಹಿಗ್ಗಿ ಹಿರಿಯದಾದಷ್ಟು ಆನಂದ.

ಈ ರಸಮಯ ಸನ್ನಿವೇಶದಲ್ಲಿ ಕೊನೇ ಬೆಂಚಿನಲ್ಲಿ ಕೂತಿದ್ದ ಒಬ್ಬ ವಿದ್ಯಾರ್ಥಿ "ಸಾರ್" ಅಂತ ಅಂದ.

ಮೇಷ್ಟ್ರು, "ಏನಪ್ಪಾ ಅದು?" ಅಂತ ಅಂದರು.

"ಸಾರ್, ನೀವು ಹೇಳಿದ ಲೆಕ್ಕಾನ ಬೋರ್ಡ್ ಮೇಲೆ ಮಾಡಬೇಕು ಎನ್ನುವ ಆಸೆ, ಸಾರ್" ಅಂತ ಅಂದ.

"ಆಗಬಹುದು, ಲೆಕ್ಕ ಮಾಡು, ಬಾ," ಅಂದರು.

ಆ ವಿದ್ಯಾರ್ಥಿಯು ಬೋರ್ಡ್ ಹತ್ತಿರ ಬಂದು ೧೮ ಅಂತ ಬರೆದು ಅದನ್ನು ಅದಲುಬದಲು ಮಾಡಿ ೮೧ ಅನ್ನುವುದನ್ನು ೧೮ರ ಕೆಳಗೆ ಬರೆಯುವದಕ್ಕೆ ಬದಲಾಗಿ ಅದರ ಪಕ್ಕದಲ್ಲಿ ಬರೆದ.

ಆಗ ಮೇಷ್ಟ್ರು "ಅದರ ಪಕ್ಕದಲ್ಲಿ ಬರೆಯಬೇಡ. ಕೆಳಗಡೆ ಬರೆದು ಕೊಡು" ಅಂದ್ರು.

"ಪಕ್ಕದಲ್ಲೇ ಬರೆದರೆ ಏನಾಗುತ್ತದೆ, ಸಾರ್" ಹುಡುಗ ಪ್ರಶ್ನೆ ಮಾಡಿದ.

ತಾನು ಹೇಳಿದ ಹಾಗೆ ಮಾಡಲಿಲ್ಲವೆಂದು ಮೇಸ್ಟ್ರು ಭಾವಿಸಿ ತಮ್ಮ ಸಹನೆಯನ್ನು ಕಳೆದುಕೊಂಡರು. ಆ ಪ್ರಶ್ನೆಗೆ ಉತ್ತರವಾಗಿ, "ನಿನ್ನ ತಲೆ ಆಗುತ್ತೆ" ಎಂದು ಹೇಳಿ ಒಂದು ಸಾರಿ ಅವನ ಬೆನ್ನಿನ ಮೇಲೆ ಗುದ್ದಿದರು.

ಹುಡುಗ ತಾಳ್ಮೆಯಿಂದಲೇ ಉತ್ತರಿಸಿದ: "ಯಾತಕ್ಕೆ ಸಾರ್, ಕೋಪಮಾಡಿಕೊಳ್ಳುತ್ತೀರಿ. ಅದಲು ಬದಲು ಮಾಡಿದ ಸಂಖ್ಯೆಯನ್ನು ಪಕ್ಕದಲ್ಲಿ ಬರೆದರೆ ಏನಾಗುತ್ತದೆ ಎಂದು ಕೇಳಿದ್ದಕ್ಕೆ, ನಿಮಗೆ ಗೊತ್ತಿಲ್ಲದಿದ್ದರೆ, ಗೊತ್ತಿಲ್ಲ ಅಂತ ಹೇಳಿ ಸಾರ್. ನನಗೆ ಗೊತ್ತು, ನಾನು ಹೇಳ್ತೀನಿ. ಆ ಸಂಖ್ಯೆಯೂ ಸಹ ೧೧ ರಿಂದ ನಿಃಶೇಷವಾಗಿ ಭಾಗವಾಗುತ್ತೆ."

ಈ ಮಾತನ್ನು ಕೇಳಿ ಬಹಳ ಆಶ್ಚರ್ಯದಿಂದ ಮೇಸ್ಟ್ರು, "ಹೌದೇನಯ್ಯ!" ಕೇಳಿದರು.

"ಮಾಡಿ ನೋಡಿ ಸಾರ್" ಅಂದ.

ಮೇಸ್ಟ್ರು ಮಾಡಿದರು. ೧೫ ಅಂತ ಬೋರ್ಡ್ ಮೇಲೆ ಬರೆದರು. ಅದಲುಬದಲು ಮಾಡಿ, ತಾವು ಮಾಮೂಲಾಗಿ ಕೆಳಗೆ ಬರೆದು ಕೊಡುವುದನ್ನು ಬಿಟ್ಟು ಹುಡುಗ ಹೇಳಿದಂತೆ ಪಕ್ಕದಲ್ಲಿ ಬರೆದರು. ಆ ಸಂಖ್ಯೆಯು ೧೫೫೧ ಆಯಿತು. ಇದು ನಿಃಶೇಷವಾಗಿ ೧೧ ರಿಂದ ಭಾಗಿಸಲ್ಪಡುತ್ತದೆಯೇ ಎಂದು ನೋಡಿದರು. ೧೫೫೧ ಅನ್ನು ೧೧ ರಿಂದ ಭಾಗಿಸಿದರೆ ೧೪೧ ಭಾಗಲಬ್ಧ ಬರುವದು. ಇತರ ಸಂದರ್ಭಗಳಲ್ಲೂ ಇದು ಸತ್ಯವೇ ಎಂದು ತಿಳಿಯುವುದಕ್ಕೋಸ್ಕರ ಇನ್ನೆರಡು ಉದಾಹರಣೆಗಳನ್ನು ಮಾಡಿ ನೋಡಿದರು. ಹುಡುಗನು ಹೇಳಿದ ಮಾತು ಸತ್ಯವಾಗಿತ್ತು. ಅವರಿಗೆ ಏಕಕಾಲಕ್ಕೆ ಕುತೂಹಲ ಮತ್ತು ನಾಚಿಕೆಯುಂಟಾಯಿತು.

"ನಿನಗೆ ಮೊದಲೇ ಗೊತ್ತಿತ್ತೇನೋ?" ಎಂದು ಹುಡುಗನನ್ನು ಕೇಳಿದರು.

"ಇಲ್ಲಾ ಸಾರ್. ನೀವು ಕೆಳಗೆ ಬರೆದು ಕೂಡುತ್ತಿದ್ದಾಗ, ಕುತೂಹಲದಿಂದ ಪಕ್ಕದಲ್ಲಿ ಬರೆದು ೧೧ ರಿಂದ ನಿಃಶೇಷವಾಗಿ ಭಾಗವಾಗುತ್ತದೆಯೋ ಇಲ್ಲವೋ ಎಂಬುದನ್ನು ನೋಡಿದೆ. ಅದು ನಿಃಶೇಷವಾಗಿ ಭಾಗವಾಯಿತು. ಈ ವಿಷಯವನ್ನು ನೀವು ನಮಗೆಲ್ಲರಿಗೂ ತಿಳಿಸುತ್ತೀರೆಂದು ಬಹಳ ಹೊತ್ತು ಕಾದೆ. ನೀವು ಆ ವಿಷಯ ಹೇಳಲೇ ಇಲ್ಲ. ನಿಮಗೆ ಇದನ್ನು ತಿಳಿಸಬೇಕೆಂಬ ಆಸೆಯಿಂದ ನಿಮ್ಮ ಮುಂದೆ ಬಂದು ನಿಮ್ಮ ಕೈಲಿ ಏಟು ತಿಂದು ಈ ರೀತಿ ನಿಮಗೆ ತಿಳಿಸಬೇಕಾಯ್ತು" ಅಂದ.

ಅವನನ್ನು ಮೇಸ್ಟ್ರು ಹೊಗಳಿ, ತನಗೆ ಆ ವಿಷಯ ಗೊತ್ತಿರಲಿಲ್ಲವೆಂದು ಒಪ್ಪಿಕೊಂಡರು. ಶಿಷ್ಯನಾದ ಅವನಿಂದ ಗುರುವು ಕಲಿತ ಪ್ರಸಂಗವನ್ನು ಎಂದಿಗೂ ಮರೆಯಲಿಲ್ಲ. ಅಂದಿನಿಂದ ಈ ಅಂಕಣಕ್ಕೆ ಸಂಬಂಧಪಟ್ಟ ಪ್ರಮೇಯವನ್ನು ಈ ರೀತಿ ಹೇಳುತ್ತಿದ್ದರಂತೆ. ಎರಡು ಅಂಕಗಳುಳ್ಳ ಒಂದು ಸಂಖ್ಯೆಯನ್ನು ಅದಲುಬದಲು ಮಾಡಿ, ಮೊದಲಿನ ಸಂಖ್ಯೆಯ (ಕ) ಕೆಳಗೆ ಬರೆದು ಕೂಡಿದರೂ; (ಖ) ಮೇಲೆ

ಬರೆದು ಕೂಡಿದರೂ; (ಗ) ಬಲಪಕ್ಕದಲ್ಲಿ ಬರೆದರೂ; (ಘ) ಎಡಪಕ್ಕದಲ್ಲಿ ಬರೆದರೂ, ಈ ಎಲ್ಲಾ ಸಂದರ್ಭಗಳಲ್ಲಿ ಆ ಸಂಖ್ಯೆಯು ೧೧ ರಿಂದ ನಿಃಶೇಷವಾಗಿ
7 ಭಾಗವಾಗುತ್ತದೆ.

ಉದಾಹರಣೆಗೆ:— ೨೩ ಒಂದು ಸಂಖ್ಯೆ. ಅದಲು ಬದಲುಮಾಡಿದರೆ ೩೨ ಆಗುತ್ತದೆ.

(ಕ) ಕೆಳಗೆ ಬರೆದು ಕೂಡಿದೆ ೨೩
೩೨ ೫೫ ಅನ್ನು ೧೧ ರಿಂದ ಭಾಗಿಸಿದರೆ ೫ ಭಾಗಲಬ್ಧ ಬರುತ್ತದೆ.

(ಖ) ಮೇಲೆ ಬರೆದು ಕೂಡಿದೆ ೩೨
೨೩
೫೫

(ಗ) ಬಲಪಕ್ಕದಲ್ಲಿ ಬರೆದಿದೆ. ೨೩೩೨ ಆಗುತ್ತದೆ. ೧೧ ರಿಂದ ಭಾಗಿಸಿದಾಗ, ೨೧೨ ಭಾಗಲಬ್ಧ ಬರುತ್ತದೆ.

(ಘ) ಎಡಪಕ್ಕದಲ್ಲಿ ಬರೆದಿದೆ. ೩೨೨೩ ಆಗುತ್ತದೆ. ೧೧ ರಿಂದ ಭಾಗಿಸಿದಾಗ, ೨೯೩ ಭಾಗಲಬ್ಧ ಬರುತ್ತದೆ.

✡



ಕೋರ್ಟಿನ ಮೆಟ್ಟಿಲು ಹತ್ತಿದ "ಕೈಚೀಲ"

ಹುಲ್ಲು ಜೊಂಡುಗಳಿಂದ ತಯಾರಿಸಿದ ಕೈಚೀಲಗಳಿಗೆ ಇಂಗ್ಲಂಡಿನಲ್ಲಿ ಭಾರೀ ಬೇಡಿಕೆ. ಅದರಲ್ಲೂ ಸ್ತ್ರೀಯರು ಹೆಚ್ಚು ಬೆಲೆಯನ್ನೂ ಲಕ್ಷಿಸದೇ ಮಾರಾಟಗಾರರು ಹೇಳಿದಷ್ಟು ಹಣ ತೆತ್ತು ಕೊಳ್ಳುವರು. ಇಂತಹ ಅಧಿಕ ಗಿರಾಕಿಗಳಿಂದಾಗಿ, ಬೇಡಿಕೆಯಿಂದಾಗಿ ಮಾರಾಟಗಾರರು ತಮ್ಮ ಕೈಚೀಲಗಳ ಬೆಲೆಯನ್ನು ಒಮ್ಮೆ ಏರಿಸಿದರು.

ಕ್ರಮೇಣ ಕೈಚೀಲಗಳ ಬೆಲೆಯನ್ನು ಮಾರಾಟಗಾರು ಸಿಕ್ಕಾಪಟ್ಟೆ ತಮ್ಮ ಲಾಭಕ್ಕಾಗಿ ಏರಿಸಿದ ವಿಷಯ ಅಂತ ಅಲ್ಲಿಯ ಸ್ತ್ರೀಯರು ಕೈಚೀಲಗಳ ಬೆಲೆ ಏರುತ್ತಿರುವುದರ ವಿರುದ್ಧ ಪ್ರತಿಭಟಿಸಿದರು.

ಸ್ತ್ರೀಯರ ಇಂತಹ ಪ್ರತಿಭಟನೆಗೆ ಸುಲಭದಲ್ಲಿ ಜಗ್ಗದ ಓರ್ವ ಆಮದು ವ್ಯಾಪಾರಿ, "ಸರ್ಕಾರದ ತೆರಿಗೆ ನೀತಿಯಿಂದ ತಮ್ಮ ಕೈಚೀಲಗಳ ಬೆಲೆ ಏರಿಸಬೇಕಾಗಿದೆ. ಆಮದಾದ ಕೈಚೀಲಗಳಿಗೆ ಶೇಕಡಾ ೨೦ ರಷ್ಟು ತೆರಿಗೆ ವಿಧಿಸಲಾಗಿದೆ. ಆದರೆ ಸುಂಕದ ಅಧಿಕಾರಿಗಳು ಹುಲಿನ ಕೈಚೀಲವನ್ನು ಬುಟ್ಟಿಯೆಂದು ಪರಿಗಣಿಸಿ ಶೇಕಡಾ ೩೦ ರಷ್ಟು ಸುಂಕ ವಿಧಿಸಿದ್ದಾರೆ. ಆದರಿಂದಾಗಿ ಬೆಲೆ ಹೆಚ್ಚಿಸಬೇಕಾಯಿತು. 'ಕೈಚೀಲ'ದ ಸರಿಯಾದ ವ್ಯಾಖ್ಯೆಯನ್ನು ನ್ಯಾಯಾಲಯ ನೀಡಬೇಕು" ಎಂದು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ.

ಎರಡೂ ಪಕ್ಷಗಳ ವಾದ-ವಿವಾದವನ್ನು ಕೇಳಿದ ನಂತರ ನ್ಯಾಯಾಧಿಪತಿಗಳು: "ಮನೆಯಿಂದ ಖಾಲಿಯಾಗಿ ತೆಗೆದುಕೊಂಡು ಹೋಗಿ, ಬರುವಾಗ ತುಂಬಿಕೊಂಡು ಬರುವದು ಬುಟ್ಟಿ, ಹೋಗುವಾಗ ತುಂಬಿಕೊಂಡು ಹೋಗಿ ಬರುವಾಗ ಖಾಲಿಯಾಗಿ ತರುವದು ಕೈಚೀಲ" ಎಂದು ವಿವರಣೆ ನೀಡಿದರು.

ನ್ಯಾಯಾಲಯ ಈ ವಿವರಣೆ ನೀಡಿದ ನಂತರ ಕೈಚೀಲಗಳ ಬೆಲೆ ಕಡಿಮೆಯಾಯಿತು, ಹೆಂಗಸರಿಗೆ ಸಮಾಧಾನವಾಯಿತು

-"ನಾಗ" ಶಿರಾಲಿ

'ಅಗ್ನಿಹಂಸ' ಎಂದರೇನು?

ಗುಂಡ್ಮಿ ಚಂದ್ರಶೇಖರ ಐತಾಳ

ಬೆಂಗಳೂರಿನಲ್ಲಿ ೧೯೭೯ರ ಜನವರಿ ೧೧, ೧೨, ೧೩ ರಂದು ಮೂರು ದಿನಗಳಲ್ಲಿ "ಡಾ. ಕುವೆಂಪು, ೭೫: ಸಮಾರಂಭ" ನಡೆಯಿತು. ಅದನ್ನು ಅಲ್ಲಿಯ ಒಕ್ಕಲಿಗರ ಸಂಘ ವಿಜೃಂಭಣೆಯಿಂದ ಹಬ್ಬವೆಂಬಂತೆ ಆಚರಿಸಿತು. ಆ ಮೂರು ದಿನಗಳಲ್ಲಿ ನಾಲ್ಕಾರು ಕುವೆಂಪು ಸಾಹಿತ್ಯಗೋಷ್ಠಿಗಳು ನಡೆದವು. ಅವುಗಳಲ್ಲಿ ಮೊತ್ತಮೊದಲು ನಡೆದುದು ಕಾವ್ಯಗೋಷ್ಠಿ: ಅದಕ್ಕೆ ಅಧ್ಯಕ್ಷರು ಡಾ. ಜಿ. ಎಸ್. ಶಿವರುದ್ರಪ್ಪನವರು. ಆ ಗೋಷ್ಠಿಯಲ್ಲಿ "ಕುವೆಂಪು ಅವರ ಅಧ್ಯಾತ್ಮಗೀತಗಳು" ಎಂಬ ಪ್ರಬಂಧವನ್ನು ನಾನು ಮಂಡಿಸಬೇಕಾಗಿತ್ತು. ಅದಕ್ಕಾಗಿ ನಾನು ಡಿಸೆಂಬರ್, ೧೯೭೮ರಿಂದಲೇ ಸಿದ್ಧತೆಯನ್ನು ಮಾಡುತ್ತಿದ್ದೆ. ಡಾ. ಕುವೆಂಪು ಅವರ 'ಅಗ್ನಿಹಂಸ' ಎಂಬ ಕವನ ಸಂಕಲನವನ್ನು ಓದುತ್ತಿದ್ದಾಗ 'ಅಗ್ನಿಹಂಸ' ಎಂದರೇನೆಂಬ ಜಿಜ್ಞಾಸೆಗೆ ಒಳಗಾದೆ. ಅನಿರೀಕ್ಷಿತವಾಗಿ. ೧೯೭೯ರ ಜನವರಿ ತಿಂಗಳ 'ಕಸ್ತೂರಿ'ಯಲ್ಲಿ 'ಅಗ್ನಿಹಂಸ' ಎಂಬೊಂದು ಲೇಖನ ಪ್ರಕಟವಾಗಿತ್ತು. ಅದನ್ನು ಶ್ರೀ ಗೌರೀಶ ಕಾಯ್ಕಿಣಿಯವರು ಬರೆದಿದ್ದರು. ನಾನು ಅರಸುತ್ತಿದ್ದುದೂ, ನನಗೆ ದೊರೆತುದೂ ಒಂದೇ ಆಗಿದ್ದುದರಿಂದ ನನಗೆ ಪರಮಾನಂದವಾಯಿತು. ಆದರೆ ಆ ಲೇಖನವನ್ನು ಓದಿದ ಮೇಲೆ ಅಷ್ಟೇ ನಿರಾಶೆಯಾಯಿತು. ಶ್ರೀ ಕಾಯ್ಕಿಣಿಯವರು 'ಅಗ್ನಿಹಂಸ' ಎಂಬ ಅಪೂರ್ವ ಶಬ್ದವನ್ನು ಕುವೆಂಪು ಸೃಷ್ಟಿಸಿ ಲೋಕಕ್ಕೆ ಕೊಟ್ಟರು: ಅದೊಂದು ಅಪೂರ್ವವಾದ ಕೊಡುಗೆ, ಅಲ್ಲ ತೊಡುಗೆ ಎಂದು ಹೇಳಿದರೂ ಅವರು ನಿರ್ಣಯಿಸಿದ ಅರ್ಥ ಸಮರ್ಪಕ ಎಂದು ನನ್ನ ಅಂತರಂಗ ಒಪ್ಪಲಿಲ್ಲ. ಅದಕ್ಕಾಗಿ ಹತ್ತೂಕಡೆ ಕಣ್ಣು ಹೊರಳಿಸಿದೆ. ಎಲ್ಲಿಯೂ ನನಗೆ ಬೆಳಕು ಕಾಣಲಿಲ್ಲ.

೨

ಆ ಲೇಖನದಲ್ಲಿ ಶ್ರೀ ಕಾಯ್ಕಿಣಿಯವರ ವಾದದ ಸಾರವಿಷ್ಟು: ಇಂಗ್ಲೀಷಿನ Swan Song ಎಂಬುದನ್ನು 'ಹಂಸಗೀತೆ' ಎಂದು ಅನುವಾದಿಸಿದಂತೆ, 'ಅಗ್ನಿಹಂಸ' ಎಂಬ ಪದ ಸೃಷ್ಟಿಯಾಗಿದೆ. ಹಂಸ ಎಂಬುದು ಆತ್ಮದ ಪ್ರತೀಕ. ಇದು ಶ್ವೇತಾಶ್ವತರ, ಛಾಂದೋಗ್ಯ ಮೊದಲಾದ ಉಪನಿಷತ್ತುಗಳಲ್ಲಿ ಪ್ರಯೋಗವಾಗಿದೆ. 'ಪರಮಹಂಸ' ಎಂಬ ಶಬ್ದಕ್ಕೆ ಇದೇ ಅರ್ಥವ್ಯಾಪ್ತಿ ಇದೆ. ಗ್ರೀಕ್ ಪುರಾಣದಲ್ಲಿ ಬರುವ 'ಫೀನಿಕ್ಸ್' (Phoenix) ಎಂಬ ಪಕ್ಷಿ ತನ್ನನ್ನು ತಾನೇ ಬೆಂಕಿಯಲ್ಲಿ ಬೀಳಿಸಿಕೊಂಡು ಸುಟ್ಟುಕೊಂಡು ಆ ಬೂದಿಯಿಂದಲೇ ಮತ್ತೆ ಹುಟ್ಟಿ ಬರುತ್ತದೆಯಂತೆ. ನಮ್ಮ ಉಪನಿಷತ್ತುಗಳ ಹಂಸ, ಗ್ರೀಕ್ ಪುರಾಣದ 'ಫೀನಿಕ್ಸ್' ಎರಡೂ ಸೇರಿ ಕುವೆಂಪು ಅವರ ಮಹಾಪ್ರಭೆಯಲ್ಲಿ 'ಅಗ್ನಿಹಂಸ'

ಸೃಷ್ಟಿಯಾಗಿದೆ ಎಂದು ಶ್ರೀ ಕಾಯ್ಕಿಣಿಯವರು ಹೇಳಿದ್ದಾರೆ.

೩

ಆದರೆ ಕುವೆಂಪು ಅವರು ಹೀಗೆ ಆ ಪದವನ್ನು ಸೃಷ್ಟಿಸಲಿಲ್ಲ ಎಂಬುದು ಅವರ ಈ ಕೆಳಗಿನ ಪ್ರಯೋಗಗಳನ್ನು ನೋಡಿದರೆ ತಿಳಿಯುತ್ತದೆ:

೧. ಸಚ್ಚಿತ್ತನಾಂ ಸಮಾಧಿಗೆ:
ತಟಿಚ್ಚರಣದಗ್ನಿಹಂಸ ಕೃಪಾಂಬೋಧಿಗೆ
—ಪಕ್ಷಿಕಾಶಿ: ಪು. ೬೩; ೧೯೫೪

೨. ಅಲ್ಲಿ ಭಾವದ ಬೆಂಕಿಹಕ್ಕಿಯು
ಮಿಂಚು ರೆಕ್ಕೆಯನೇರುವೆ;
ಧರಣಿ, ದಿನಮಣಿ, ತಾರೆ,
ನೀಹಾರಿಕೆಯು ನೇಮಿಯು ಮೀರುವೆ;
ಕಾಲದಾಚೆಗೆ, ದೇಶದಾಚೆಗೆ,
ಚಿಂತೆಯಾಚೆಗೆ ಹಾರುವೆ;
ಕಾವ್ಯಕನ್ಯಾ ಶ್ರಾವ್ಯ ಕಂಠದೊಳಾತ್ಮ
ಭೂತಿಯು ಸಾರುವೆ !
—ಪಕ್ಷಿಕಾಶಿ: ಪು. ೬೮; ೧೯೫೪

೩. ಹೃದಯ ಪದ್ಮ ತಾನರಳೆ ಕರೆವೆ,
ಬಾರಮ್ಮ, ಬಾ, ಇಳಿದು ಬಾ!
*
ಅಗ್ನಿಹಂಸ ಗರಿಗೆದರೆ ಕರೆವೆ, ಬಾ ತಾಯಿ,
ಬಾ, ಇಳಿದು ಬಾ!
ಚೈತನ್ಯ ಪುರುಷ ಯಜ್ಞಕ್ಕೆ ನೀನೇ
ಅಧ್ವರ್ಯು, ಬಾ, ಇಳಿದು ಬಾ!
—ಅಗ್ನಿಹಂಸ: ಪು. ೯೮; ೧೯೫೬

೪. ಬಾನೆಡೆಗೇರು, ಓ ಆತ್ಮಪಕ್ಷಿ !
—ಕಿಂಕಿಣಿ: ಪುಟ. ೩೧; ೧೯೬೪

೫. ಎಚ್ಚರಿಸು ಬಾ, ಗುರುವೆ, ಚಿಚ್ಚರಣ
ಕಿರಣದಲಿ
ಜಿಜ್ಞಾಸಾವಂತೆನ್ನ ಹೃದಯಪಕ್ಷಿ;
ಚರಿಸು ಬಾ ಚೇತನದಿ ನರಿಗೆದರಿವಂತೆನ್ನ
ಪ್ರಾಣ ಚಂಚುವಿನಗ್ನಿಪಕ್ಷಿ;
ಮಿಂಚಿ ಬಾ ಮನದಲಿ ತಮದ ಘನತಿಮಿರ
ತ್ರಾ
ಪರಿದು ದರ್ಶನವೀಯೆ ಗುಹ್ಯಸಾಕ್ಷಿ !
—ಅನಿಕೇತನ: ಪು. ೫೪; ೧೯೬೩

೬. ಅಗ್ನಿಗಂಗೆಯು ಧರಿಸೆ ಧೂರ್ಜಟಿಯು
ವ್ಯೋಮಕೇಶ,
ಉಸಿರೆಳೆದೆ ಹಸುರ ಮೋದಂದು ಕವಿ
ಪ್ರಾಣಕೋಶ !
—ಕದರಡಕೆ: ಪು. ೬೯; ೧೯೬೭

೭. ಪಾದಯಾತ್ರೆಯೊಳಿರುವ ಶ್ರೀ ವಿನೋಬನ
ಅಮರ ಅಗ್ನಿಶೀತ ಚರಣ !
—ಪ್ರೇತ-ಕ್ಯೂ: ಪು. ೨೩; ೧೯೬೭

ಮೇಲಿನ ಪ್ರಯೋಗಗಳಲ್ಲೆಲ್ಲ 'ಅಗ್ನಿ' ಎಂಬುದನ್ನು ಕುವೆಂಪು ಬೆಂಕಿ ಎಂಬ ಅರ್ಥದಲ್ಲಿಯೇ ಬಳಸಿದ್ದಾರೆ. ಅದಕ್ಕೆ 'ಫೀನಿಕ್ಸ್' ಪಕ್ಷಿ ಎಂಬುವ ಅರ್ಥ ತಗಲದು. 'ಅಗ್ನಿಹಂಸ' ಎಂದರೆ 'ಬೆಂಕಿಹಕ್ಕಿ' ಎಂದರೆ 'ಆತ್ಮಪಕ್ಷಿ' ಎಂಬ ಅರ್ಥ ಎಂದು ಮೇಲಿನ ಪ್ರಯೋಗಗಳಿಂದ ತಿಳಿಯುತ್ತದೆ. ಹೃದಯಪಕ್ಷಿ, ಆತ್ಮಪಕ್ಷಿ, ಅಗ್ನಿಪಕ್ಷಿ, ಬೆಂಕಿಹಕ್ಕಿ ಎಂಬ ಮೇಲಿನ ಪ್ರಯೋಗಗಳು ಈ ಅರ್ಥವನ್ನು ಸಮರ್ಥಿಸುತ್ತವೆ. 'ಅಗ್ನಿಗಂಗೆ' ಎಂಬುದೂ ಕುವೆಂಪು ಅವರ ವಿಶಿಷ್ಟ ಪ್ರಯೋಗ. ಅದಕ್ಕೆ ಅಗ್ನಿಯನ್ನೂ, ಗಂಗೆಯನ್ನೂ ಧರಿಸಿದ ವ್ಯೋಮಕೇಶ ಎಂದು ಅರ್ಥ. 'ಅಗ್ನಿಶೀತ' ಎಂಬಲ್ಲಿ ಅಗ್ನಿಯೂ, ಶೀತವೂ ಆದ ಚರಣ ಎಂಬ ಅರ್ಥ. 'ಅಗ್ನಿಹಂಸ' ಎಂಬುದು ಮಹಾಕವಿ ಪ್ರಯೋಗ. ಅದಕ್ಕೆ ಅಗ್ನಿ ಎಂಬ ಹಂಸ ಎಂಬ ಸೀಮಿತವಾದ ರೂಪಕಾರ್ಥವನ್ನು ಮಾಡಬಾರದು. 'ಹಂಸ' ಎಂಬುದು ಆತ್ಮವನ್ನೂ ಪಕ್ಷಿಯನ್ನೂ ನಿರ್ದೇಶಿಸುವುದು. 'ಅಗ್ನಿ' ಎಂಬುದು ಪಾವಿತ್ರ್ಯಕ್ಕೂ ಅವಿನಾಶತೆಗೂ ಸಂಕೇತ. ಆದುದರಿಂದ 'ಅಗ್ನಿಹಂಸ' ಎಂದರೆ ಅವಿನಾಶಿಯಾದ ಪವಿತ್ರವಾದ ಆತ್ಮಪಕ್ಷಿ. ಅದು 'ಫೀನಿಕ್ಸ್'ನಿಂದ ಬಂದುದಲ್ಲ. ನಮ್ಮ ವೇದೋಪನಿಷತ್ತುಗಳನ್ನು ಓದಿಕೊಂಡು ಮೂಡಿದ ಸಂಸ್ಕೃತಿಯ ಪ್ರತಿಭೆಯಿಂದ ಜನಿಸಿದುದು ಎಂದು ನನಗೆ ತೋರುತ್ತದೆ.

೪

ಹೀಗೆಂದು ನಾನು ನನ್ನ ಪ್ರಬಂಧದಲ್ಲಿ ಬರೆದು ಆ ಸಮಾರಂಭದಲ್ಲಿ ಮಂಡಿಸಿದೆ. ಡಾ. ಜಿ. ಎಸ್. ಶಿವರುದ್ರಪ್ಪನವರು ಅಗ್ನಿಹಂಸ ಎಂದರೆ 'ಫೀನಿಕ್ಸ್' ಪಕ್ಷಿಯಲ್ಲ ಎಂದು ತಮ್ಮ ಅಧ್ಯಕ್ಷ ಭಾಷಣದಲ್ಲಿ ಹೇಳಿದರು. ನಾನು ಸಮಾರಂಭಕ್ಕೆ ಹೋಗುವ ಮೊದಲು, ಡಾ. ಕುವೆಂಪು ಅವರಿಗೆ ಒಂದು ಪತ್ರ ಬರೆದು ಮೇಲೆ ಕಂಡಂತೆ ನನ್ನ ಅರ್ಥವನ್ನು ಸೂಚಿಸಿ, ಶ್ರೀ ಕಾಯ್ಕಿಣಿಯವರ ಲೇಖನದ ಸಾರಾಂಶವನ್ನೂ ಬರೆದು ರವಾನಿಸಿದೆ. ನಾನು ಬೆಂಗಳೂರಿನಿಂದ ಹಿಂದಿರುಗಿದಾಗ ನನಗೆ ಅವರ ಪತ್ರ ಕಾದಿತ್ತು. ಅದರಲ್ಲಿ ಅವರು ಅಗ್ನಿಹಂಸದ ಬಗೆಗೆ ಹೀಗೆ ಬರೆದಿದ್ದಾರೆ.

"ನಾನು ಜನವರಿ ೧೯೭೪ರ 'ಕಸ್ತೂರಿ'ಯನ್ನು ಇನ್ನೂ ನೋಡಿಲ್ಲ. ಆದ್ದರಿಂದ ಗೌರೀಶ ಕಾಯ್ಕಿಣಿಯವರು ಏನು ಬರೆದಿದ್ದಾರೊ ತಿಳಿಯದು. ನೀವು ಬರೆದಿರುವಂತೆ ಅವರು 'ಅಗ್ನಿಹಂಸ' ಎಂಬುದನ್ನು ನಾನು 'ಫೀನಿಕ್ಸ್' ಎಂಬುದಕ್ಕೆ ಮಾಡಿದ ಅನುವಾದ ಎಂಬುದಂತೂ ಅತ್ಯಂತ ಹಾಸ್ಯಾಸ್ಪದ! ಏಕೆಂದರೆ ನನಗೆ ಫೀನಿಕ್ಸ್ ಗೊತ್ತಿಲ್ಲ! ಕೆಲವರಿಗೆ ಒಂದು ತರ ಹದ ಭ್ರಾಂತಿ–ನಾವು ಮಾಡುವುದೆಲ್ಲ ಅನುವಾದ ಎಂದು!

ಆದರೆ ಅಗ್ನಿಹಂಸಕ್ಕೆ ಏನಾದರೂ ಅರ್ಥ ಸೂಚನೆ ಬೇಕಾದರೆ, ನೀವು ಕೊಟ್ಟಿರುವ ವ್ಯಾಖ್ಯಾನಕ್ಕೆ ಅದು ಹತ್ತಿರವಾಗುತ್ತದೆ... ಆದ್ದರಿಂದ ನಮ್ಮ ವೇದೋಪನಿಷತ್ ದರ್ಶನದ ಬೆಳಕಿನಲ್ಲಿ 'ಅಗ್ನಿಹಂಸ'ಕ್ಕೆ ಊರ್ಧ್ವಗಾಮೀ ತೇಜಃಪುಂಜ ಅಪಾಪವಿದ್ಧ ಅಭೀಪ್ಸೆ ಎಂಬ ಧ್ವನಿ ಅರ್ಥ ಸೂಚಿತವಾಗುತ್ತದೆ. –A fiery white radiant aspiration towards the ultimate! Phoenix ಅಂತೂ ಖಂಡಿತ ಅಲ್ಲ! ಅಥವಾ ಫೀನಿಕ್ಸ್‌ಗೂ ಮೇಲೆ ಹೇಳಿರುವ 'ಧ್ವನಿ–ಅರ್ಥ' ಇರುವ ಪಕ್ಷದಲ್ಲಿ ನನ್ನ ಅಭ್ಯಂತರವಿಲ್ಲ.

ನೀವು ಸೂಚಿಸಿರುವ ವ್ಯಾಖ್ಯಾನ ಹಿಡಿದು ಹೊರಟರೆ ಸರಿಯಾದ ಗುರಿಗೆ ತಲುಪುತ್ತೀರಿ ಎಂದು ಭಾವಿಸುತ್ತೇನೆ... ಕುವೆಂಪು."

ಶ್ರೀ ಕಾಯ್ಕಿಣಿಯವರ ಲೇಖನವು 'ಅಗ್ನಿಹಂಸ' ಎಂಬ ಶಬ್ದದ ಅರ್ಥವನ್ನು ಹುಡುಕಲು ನನ್ನನ್ನು ಪ್ರೇರೇಪಿಸಿತು. ಡಾ. ಕುವೆಂಪು ಅವರು ಅದರ ಅರ್ಥವನ್ನು ಸಂಶಯ ಮೂಡದಂತೆ ಸ್ಪಷ್ಟವಾಗಿ ಹೇಳಿದ್ದಾರೆ.

೫

ಈ ಶಬ್ದದ ಬಗೆಗೆ ನಾನು ಡಾ. ಕುವೆಂಪು ಅವರನ್ನು ಪ್ರಶ್ನಿಸುವ ಮೊದಲು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ–ಕನ್ನಡ ನಿಘಂಟುವಿನಲ್ಲಿ ಆ ಶಬ್ದಕ್ಕೆ ಏನೆಂದು ಅರ್ಥ ಕೊಡಲಾಗಿದೆ ಎಂದು ತುಂಬ ಕುತೂಹಲದಿಂದ ನೋಡಿದೆ. ಅರ್ಥ ಹಾಗಿರಲಿ, ಶಬ್ದವೇ ಸಿಕ್ಕಲಿಲ್ಲ! ಆದರೆ 'ಗ್ರಂಥಸೂಚಿ'ಯನ್ನು ನೋಡಿದಾಗ ಅಲ್ಲಿ ಆ ಗ್ರಂಥದಿಂದ ಶಬ್ದಸಂಗ್ರಹ ಮಾಡಲಾಗಿದೆ ಎಂದಿತ್ತು. 'ಅಗ್ನಿಹಂಸ' ಎಂಬ ಕವನ ಸಂಗ್ರಹ ೧೯೪೬ರಲ್ಲಿ ಪ್ರಕಟವಾಗಿತ್ತು. ಕನ್ನಡ–ಕನ್ನಡ ನಿಘಂಟುವಿನ ಮೊದಲ ಸಂಪುಟದ ಪ್ರಕಟಣೆ ೧೯೭೦ರಲ್ಲಾಗಿತ್ತು. ಆದರೂ 'ಅಗ್ನಿಹಂಸ' ಎಂಬ ಮಾತು, ಕನ್ನಡದ ಮಹಾಕವಿಯೊಬ್ಬರ ವಿಶಿಷ್ಟ ಪ್ರಯೋಗ, ಒಂದು ವಿಶಿಷ್ಟ ಕವನಸಂಕಲನದ ಹೆಸರು ಕನ್ನಡ–ಕನ್ನಡ ನಿಘಂಟುವಿನಲ್ಲಿ ಸೇರಲಿಲ್ಲ ಎಂಬುದು ವಿಷಾದಕರ ಎಂದು ನಾನು ಆ ಸಭೆಯಲ್ಲಿ ಘೋಷಿಸಿದೆ.

'ಅಗ್ನಿಹಂಸ' ಎಂಬುದು ಒಂದು ರೂಪಕವಾದುದರಿಂದಲೂ, ನಿಘಂಟುವಿನಲ್ಲಿ ರೂಪಕಗಳನ್ನು ಕೊಡುವುದಿಲ್ಲವೆಂದೂ ಯಾರಾದರೂ ನಿಘಂಟು ಕಾರ್ಯವನ್ನು ಸಮರ್ಥಿಸಬಹುದು. ಆದರೆ ಅಗ್ನಿಹಂಸ ಎಂಬುದು ರೂಪಕವಲ್ಲ. ಅಗ್ನಿ ಎಂಬ ಹಂಸ ಎಂದು ಅದನ್ನು ವಿವರಿಸಿದರೆ ಮಾತ್ರ ಅದು ರೂಪಕವಾಗುತ್ತದೆ. ಅದರಿಂದ ಕವಿ ಉದ್ದೇಶಿಸಿದ ಅರ್ಥ ಬರುವುದಿಲ್ಲ. ಕವಿ ಕೊಟ್ಟ ಅರ್ಥದಲ್ಲಿ ಯಾವ ರೂಪಕದ ಸುಳಿವೂ ಇಲ್ಲ. 'ಅಗ್ನಿಹಂಸ' ಎಂಬುದು 'ಕೀರ್ತಿಶನಿ' 'ಗಗನ ಗುರು' ಎಂಬಂತೆ ಅದೇ ಕವಿಯ ಪ್ರಯೋಗಗಳಂತೆ ರೂಪಕವಲ್ಲ. 'ಅಗ್ನಿಹಂಸ' ಎಂಬ ಶಬ್ದ ಕುವೆಂಪು ಅವರೇ ಸೂಚಿಸಿದಂತೆ ವಿಶ್ವವ್ಯಾಪಕವಾದ ಧ್ವನಿ ಅರ್ಥದಿಂದ ಕೂಡಿದ ಸಂಕೇತಗಳು. 'ಅಗ್ನಿ' ಊರ್ಧ್ವಗಾಮಿ ಶಕ್ತಿ;


ಅದು ವಿಶ್ವವ್ಯಾಪಕವಾದುದು. ಅದು ಪಾವಕ. 'ಹಂಸ' ಎಂಬುದು ಆತ್ಮಕ್ಕೆ ಸಂಕೇತ. ಅದು ಶುಭ್ರ, ಮೇಲಕ್ಕೆ ಹಾರುವಂಥದು; ಪರಿಶುದ್ಧ ಆತ್ಮದ ಪ್ರತೀಕ. 'ಪರಮಹಂಸ' ಎಂದರೆ ಪರಮಾತ್ಮ. ವಿರಾಟ್ ಶಕ್ತಿಯ ಪ್ರಪ್ರಥಮ ವ್ಯಕ್ತ ಸ್ವರೂಪವೇ ಅಗ್ನಿ. ಸೂರ್ಯ ಅದರ ಒಂದು ಅಂಶ ಅಷ್ಟೆ. ಅಗ್ನಿಗೆ 'ಕವಿಕ್ರತುಃ' ಎಂಬ ಪರ್ಯಾಯನಾಮವೂ ಇದೆ.

ಅಗ್ನಿರ್ಹೋತಾ ಕವಿಕ್ರತುಃ
ಸತ್ಯಶ್ಚಿತ್ರಶ್ರವಸ್ತಮಃ
ದೇವೋ ದೇವೇಭಿರಾಗಮತ್ ||

-ಋಗ್ವೇದ: ೧-೧-೫

ಈ ಅಗ್ನಿ ಸತ್ಯ ಮತ್ತು ಆನಂದಗಳತ್ತ ಕ್ರಮಬದ್ಧವಾದ ಅಭಿವ್ಯಕ್ತಿಯಿಂದ ಮೇಲೆ ಮೇಲಕ್ಕೆ ಕರೆದೊಯ್ಯುತ್ತದೆ. (ನೋಡಿ: ಶ್ರೀ ಕುವೆಂಪು ಸಂದರ್ಶನ: ಕೋ ಚೆನ್ನಬಸಪ್ಪ: ಪು. ೭: ಅಡಿಟಿಪ್ಪಣಿ; ೧೯೫೭.) ಆದುದರಿಂದ 'ಅಗ್ನಿಹಂಸ' ಎಂಬುದು ಪರಿಮಿತ ಅರ್ಥವುಳ್ಳ ರೂಪಕ ಎಂಬುದಂತೂ ಖಂಡಿತ ಸರಿಯಲ್ಲ. ಅದೊಂದು ಭಾವ ಪ್ರಪಂಚವನ್ನೇ ಅಡಗಿಸಿಕೊಂಡಿರುವ ಕಾವ್ಯ ಪ್ರತಿಮೆ. ಆ ಕಾರಣಕ್ಕಾಗಿ 'ಅಗ್ನಿಹಂಸ'ವನ್ನು ನಮ್ಮ ನಿಘಂಟುವಿನಲ್ಲಿ ಸೇರಿಸದಿರುವುದು ಕನ್ನಡಿಗರ ದೌರ್ಭಾಗ್ಯ; ಕನ್ನಡದ ವಿದ್ವತ್ತಿನ ದಾರಿದ್ರ್ಯ. ಇನ್ನಾದರೂ ಇಂಥ ಅಮೂಲ್ಯ ಪದಸಂಪತ್ತನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಕನ್ನಡ ಸಾಹಿತ್ಯ ಪರಿಷತ್ತು ಮಾಡಲಿ ಎಂದು ಹಾರೈಸೋಣವೇ?

❀



ಅದೇ ದಾರಿ

ಸೈರಾಕ್ಯೂಸ್‌ನ ನಿರಂಕುಶ ದೊರೆ ಮೊದಲನೆಯ ಡಯೋನಿಸಿಯಸ್ಸನ ಕವಿತೆಗಳನ್ನು ಕಟುವಾಗಿ ವಿಮರ್ಶಿಸಿದ್ದಕ್ಕಾಗಿ ಕವಿ ಫಿಲೋಕ್ಸೇನಸ್ ಕಲ್ಲಿನ ಗಣಿಯಲ್ಲಿ ಕೆಲಸ ಮಾಡುವ ಶಿಕ್ಷೆ ಅನುಭವಿಸಬೇಕಾಯಿತು.

ಹೀಗೆಯೇ ಕೆಲ ದಿನಗಳು ಉರುಳಿದವು. ಪ್ರಜಾಪೀಡಕ ರಾಜ ಫಿಲೋಕ್ಸೇನಸ್‌ನನ್ನು ಮತ್ತೆ ಅರಮನೆಗೆ ಬರಮಾಡಿಕೊಂಡು ತನ್ನ ಕವಿತೆಗಳನ್ನು ಮತ್ತೊಮ್ಮೆ ಕೇಳಲು ಆತನಿಗೆ ಸೂಚಿಸಿದ. ಸ್ವಲ್ಪ ಹೊತ್ತಿನವರೆಗೂ ಆ ಕವಿ ಮೌನವಾಗಿ ಆ ಕವಿತೆಗಳನ್ನು ಮತ್ತೊಮ್ಮೆ ಕೇಳುತ್ತಿದ್ದು ನಂತರ, ಇದ್ದಕ್ಕಿದ್ದ ಹಾಗೆ, ಸದ್ದಿಲ್ಲದೆ ತಾನು ಕುಳಿತಿದ್ದ ಕುರ್ಚಿಯಿರದ ಮೇಲಕ್ಕೆದ್ದು ಬಾಗಿಲ ಬಳಿ ಹೋಗಲಾರಂಭಿಸಿದ. ಆತ ಬಾಗಿಲವರೆಗೂ ತಲುಪಿರಬೇಕು. ಅಷ್ಟರಲ್ಲಿ ಆ ಕ್ರೂರ ನಿರಂಕುಶ ರಾಜ ಅವನ ಈ ಚರ್ಯೆಯಿಂದ ಕೋಪಗೊಂಡು "ಎಲ್ಲಿಗೆ ಹೋಗುತ್ತಿದ್ದೀಯೆ?" ಎಂದು ಗುಡುಗಿದ: "ವಾಪಸ್ಸು ಕಲ್ಲು ಗಣಿಗೆ!" ಕವಿ ಫಿಲೋಕ್ಸೇನಸ್ ಉತ್ತರಿಸಿದ.

– ಎಸ್. ವಿಶ್ವನಾಥ

ನಿಮ್ಮ ಶಬ್ದಭಾಂಡಾರ ಬೆಳೆಸಿರಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳೂ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಗುರುತಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. ತೋರ

(ಅ) ಕಣ್ಣಿಗೆ ಕಾಣುವ (ಆ) ದಪ್ಪ (ಇ) ತೂಕವುಳ್ಳ (ಈ) ಗಡಿಬಿಡಿ

೨. ಅಪಮೌಲ್ಯನ

(ಅ) ಧಿಕ್ಕಾರ (ಆ) ಬಂಡವಾಳವಿಲ್ಲದ್ದು (ಇ) ಬೇರು ಸಹಿತ ಕೀಳುವುದು (ಈ) ಬೆಲೆ ಕಡಿಮೆ ಮಾಡುವುದು

೩. ಉನ್ಮೂಲನ

(ಅ) ಬೇರು ಸಹಿತ ಕೀಳುವುದು (ಆ) ತೆರೆಯುವುದು (ಇ) ಅರಳುವಿಕೆ (ಈ) ಬೇರೂರುವುದು

೪. ಕರಂಡಕ

(ಅ) ಒಂದು ಹುಳಿ ಹಣ್ಣು (ಆ) ಕರಡಿಗೆ (ಇ) ತೆಂಗಿನ ಚಿಪ್ಪು (ಈ) ಅಸ್ಥಿಪಂಜರ

೫. ಗತಿಸು

(ಅ) ಮುಗಿದು ಹೋಗು (ಆ) ಓಡು (ಇ) ಕೊಲ್ಲು (ಈ) ಮಾಳಿಕಟ್ಟು

೬. ಅಪಥ್ಯ

(ಅ) ತಪ್ಪು ತಿಳಿವಳಿಕೆ (ಆ) ಹೆಡ್ಡತನ (ಇ) ದುರ್ಗತಿ (ಈ) ಅಹಿತ

೭. ಉನ್ಮಾರ್ಗ

(ಅ) ಪರುದಾರಿ (ಆ) ಜಾರುದಾರಿ (ಇ) ಕೆಟ್ಟ ದಾರಿ ಹಿಡಿದವ (ಈ) ಬೇಟೆಯ ಒಂದು ಕ್ರಮ

೮. ಅಮಾತ್ಯ

(ಅ) ಮಂತ್ರಿ (ಆ) ತಬ್ಬಲಿ (ಇ) ತಲೆ ಕೆಟ್ಟವ (ಈ) ಚುರುಕು

೯. ಗಂಡುಮೆಟ್ಟು

(ಅ) ಗಂಡಸರ ಪೀಠ (ಆ) ಅಪಾಯದ ಕೆಲಸ (ಇ) ವೀರರ ಭೂಮಿ (ಈ) ಯುದ್ಧ

೧೦. ಜಟಿತ

(ಅ) ಮಿತಿ ಮೀರಿ ತಿನ್ನುವುದು (ಆ) ಜೋಡಿಸಿದ (ಇ) ಅರ್ಥವಾಗದ (ಈ) ಬಲು ಕ್ಲಿಷ್ಟ

೧೧. ಧುರೀಣ

(ಅ) ಉಪಾಯ (ಆ) ಗಟ್ಟಿಮುಟ್ಟು (ಇ) ರೀತಿ (ಈ) ಮುಂದಾಳು

೧೨. ರಣರಂಪ

(ಅ) ಮೀನಿನ ಬಲೆ (ಆ) ಕೇಡಿ (ಇ) ಕೋಲಾಹಲ (ಈ) ರಾಜವೈಭವ

‘ಶಬ್ದ ಭಾಂಡಾರ’ದ ಸರಿಯಾದ ಅರ್ಥಗಳು

೧. **ತೋರ** (ಅ) ದಪ್ಪ, ಸ್ಥೂಲ, ಗುಂಡಾದ, ದೊಡ್ಡ. ಉದಾ:— ತೋರ ಪೊಲೆ; ತೋರ ಮುತ್ತು [ಮರಾಠಿ ಥೋರ]

೨. **ಅಪಮೌಲ್ಯನ** (ಈ) ಬೆಲೆ ಇಳಿಸುವುದು; (ವಿಶೇಷವಾಗಿ) ನಾಣ್ಯದ ಬೆಲೆ ಇಳಿಸುವುದು. ಉದಾ:— ರೂಪಾಯಿಯ ಅಪಮೌಲ್ಯನ = ಬೇರೆ ದೇಶಗಳ ನಾಣ್ಯಗಳ ಹೋಲಿಕೆಯಲ್ಲಿ ರೂಪಾಯಿಯ ಬೆಲೆ ಇಳಿಸುವುದು. [ಸಂ, ಅಪ=ವಿರುದ್ಧ, ಮೌಲ್ಯ = ಬೆಲೆ]

೩. **ಉನ್ಮೂಲನ** (ಅ) ಬೇರು ಸಹಿತ ಕೀಳುವುದು; ಪೂರ್ತಿ ನಾಶ ಮಾಡುವುದು, ಉದಾ:— ಶತ್ರು ವಂಶವನ್ನು ಉನ್ಮೂಲನ ಮಾಡಿದನು. [ಸಂ. ಉತ = ಮೇಲೆ, ಮೂಲ = ಬೇರು]

೪. **ಕರಂಡಕ** (ಅ) ಕರಡಿಗೆ, ಮುಚ್ಚಳವುಳ್ಳ ಸಣ್ಣ ಪಾತ್ರ. ಭರಣಿ. ಉದಾ:— ಸುವರ್ಣ ಕರಂಡಕ. [ಸಂ]

೫. **ಗತಿಸು** (ಅ) ಮುಗಿದುಹೋಗು, ತೀರಿಹೋಗು, ಮರಣ ಹೊಂದು; ಉದಾ:— ಗತಿಸಿದ ವರ್ಷ; ಗತಿಸಿದ ಮಹಾಪುರುಷ. [ಸಂ. ಗತಿ = ಹೋಗುವಿಕೆ]

೬. **ಅಪಥ್ಯ** (ಈ) ಅಹಿತ, ಒಳ್ಳೆಯುದಲ್ಲದ್ದು; (ವಿಶೇಷವಾಗಿ) ರೋಗಿಗೆ ಅಹಿತವಾದದ್ದು. ಉದಾ:— ಅಪಥ್ಯದಿಂದ ರೋಗ ಉಲ್ಬಣಿಸಿತು. [ಸಂ. ಅ = ಅಲ್ಲ; ಪಥ್ಯ, ಪಥ—ದಾರಿ = ಒಳ್ಳೇ ದಾರಿ ಎಂಬುದರಿಂದ]

೭. **ಉನ್ಮಾರ್ಗ** (ಇ) ಕೆಟ್ಟ ದಾರಿ, ತಪ್ಪು ದಾರಿ. ಕೆಟ್ಟ ದಾರಿ ಹಿಡಿದವ. ಉದಾ:— ರಾಜಪುತ್ರ ಉನ್ಮಾರ್ಗನಾಗಿದ್ದ. [ಸಂ. ಉತ್ = ಮೀರಿದ, ಮಾರ್ಗ = ದಾರಿ]

೮. **ಅಮಾತ್ಯ** (ಅ) ಮಂತ್ರಿ, ಸಲಹೆ ಕೊಡುವವ, ಹತ್ತಿರದವ. ಉದಾ:— ಅಮಾತ್ಯನು ರಾಜನಿಗೆ ಒಳ್ಳೆಯ ಸಲಹೆ ಕೊಡಬೇಕು. [ಸಂ. ಅಮಾ = ಸಮೀಪ,—ದಿಂದ]

೯. **ಗಂಡುಮೆಟ್ಟು** (ಇ) ವೀರರ ಸ್ಥಾನ, ಪರಾಕ್ರಮಿಗಳ ಭೂಮಿ, ಸತ್ವವುಳ್ಳವರ ಸ್ಥಳ, ಉದಾ:— ಕನ್ನಡದ ಗಂಡುಮೆಟ್ಟು. [ಕನ್ನಡ, ಗಂಡು = ಪೌರುಷದ, ಮೆಟ್ಟು = ಹೆಜ್ಜೆ, ನೆಲೆ]

೧೦. **ಜಡಿತ** (ಅ) ಜೋಡಿಸಿದ, ಕುಂದಣ ಕಟ್ಟಿದ ಉದಾ:— ರತ್ನ ಜಡಿತ ಕಿರೀಟ. [ಸಂ.]

೧೧. **ಧುರೀಣ** (ಈ) ಮುಂದಾಳು, ಜವಾಬ್ದಾರಿ ಹೊತ್ತವ, ನಾಯಕ. ಉದಾ:— ವರ್ತಕರ ಧುರೀಣ, [ಸಂ. ಧುರ = ಭಾರ, ನೊಗ—ದಿಂದ]

೧೨. **ರಣರಂಪ** (ಇ) ಕೋಲಾಹಲ, ಅತಿಶಯವಾದ ಗಲಾಟೆ. ಉದಾ:— ಸಭೆಯಲ್ಲಿ ರಣರಂಪವಾಯಿತು. [ಸಂ. ರಣ = ಯುದ್ಧ, ರಭಸ್ = ಗಡಿಬಿಡಿ (?)]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಯನ್ನು ತಿಳಿಯಿರಿ.

೬—೮ ಸರಿಯಿದ್ದರೆ	...	ಸಾಧಾರಣ
೯—೧೦ ”	...	ಉತ್ತಮ
೧೧—೧೨ ”	...	ಅತ್ಯುತ್ತಮ

ತನ್ನ ಮೋಸವನ್ನು ತಾನೇ
ಬಯಲಿಗೆಳೆದರೂ ಪ್ರಯೋಜನವಾಗಲಿಲ್ಲ

ಹೆಸರುಗಳ್ಳ ಕಲಾವಿದ ಮಾಗರೆನ್

ಡಾ. ವಿ. ಎ. ಶೆಣೈ

ನಂದಳಿಕೆಯ ನಾರ್ಣಪ್ಪಯ್ಯನವರು 'ಶ್ರೀರಾಮ ಪಟ್ಟಾಭಿಷೇಕ'ವನ್ನು ಬರೆದು ಅದರ ಕರ್ತೃತ್ವವನ್ನು ಮುದ್ದಣ್ಣನೆಂಬ ಕಾಲ್ಪನಿಕ ಕವಿಗೆ ಕೊಟ್ಟು ಮೈಸೂರಿನ ಒಬ್ಬ ಪ್ರಕಾಶಕರಿಗೆ ಕಳುಹಿಸಿ ಕೊಟ್ಟದ್ದು ಸರ್ವವಿದಿತ. ಅದನ್ನು ತಾವೇ ಬರೆದುದೆಂದು ಹೇಳಿದರೆ ಪ್ರಕಾಶಕರು ಅದರ ಪ್ರಕಟನಕಾರ್ಯವನ್ನು ಕೈಕೊಳ್ಳಲಾರರೆಂಬ ಭಯ ಅವರಿಗಿದ್ದಿತು. ಅನಂತರ ಜನರಿಗೆ ನಿಜಸ್ಥಿತಿಯು ತಿಳಿದಾಗ ಪ್ರಕಾಶಕರು ಅದನ್ನು ಮೊದಲು ನಂಬಲಿಲ್ಲವಂತೆ. ಅಂತೂ 'ಶ್ರೀರಾಮ ಪಟ್ಟಾಭಿಷೇಕ'ದ ಕರ್ತೃತ್ವ ನಾರ್ಣಪ್ಪಯ್ಯನವರಿಗೇ ಸೇರಿತು.

ಐರೋಪ್ಯ ಚಿತ್ರಕಲಾರಂಗದಲ್ಲಿ ಇದಕ್ಕೆ ವ್ಯತಿರಿಕ್ತವಾದ ಪ್ರಸಂಗವೊಂದು ಸಂಭವಿಸಿತ್ತು. ನಾರ್ಣಪ್ಪಯ್ಯನವರು ತಮ್ಮ ಕೃತಿಯು ಪ್ರಕಟಗೊಳ್ಳಲಿ ಎಂಬುದೊಂದೆ ಇಚ್ಛೆಯಿಂದ ಮುದ್ದಣ ಕವಿಯನ್ನು ಸೃಜಿಸಿದುದಾದರೆ, ಐರೋಪ್ಯ ಚಿತ್ರಕಾರನೊಬ್ಬನು ಶ್ರೇಷ್ಠನಾದ ಇನ್ನೊಬ್ಬ ಚಿತ್ರಕಾರನ ಹೆಸರಿನಲ್ಲಿ ಚಿತ್ರಗಳನ್ನು ಬರೆದು ಹೇರಳ ಹಣ ಗಳಿಸಿದನು. ಕೊನೆಗವನು ನಿಜಸ್ಥಿತಿಯನ್ನು ಒಪ್ಪಿಕೊಂಡರೂ ಆತನ ಸಮಕಾಲೀನ ಚಿತ್ರಕಲಾತಜ್ಞರು ಮಾತ್ರ ಒಪ್ಪಲಿಲ್ಲ. ಈ ಚಿತ್ರಕಾರನ ಕತೆ ರೋಮಾಂಚಕವಾಗಿದೆ.

ಹೆನ್ಸ್‌ವೆನ್ ಮಾಗರೆನ್ ಎಂಬವನು ೧೮೮೯ರಲ್ಲಿ ಹಾಲೆಂಡಿನಲ್ಲಿ ಜನಿಸಿದನು. ಆತನಿಗೆ ಬಾಲ್ಯದಿಂದಲೂ ಹಸ್ತಕಲೆಯಲ್ಲಿ ಆಸಕ್ತಿಯಿತ್ತು. ಶಾಲೆಯಲ್ಲಿ ಶತಮಾನಗಳ ಹಿಂದಿನ ಹಾಲೆಂಡಿನ ಚಿತ್ರಕಲೆಯನ್ನು ಅಭ್ಯಸಿಸಿ, ಅದರಲ್ಲಿ ದಕ್ಷನಾದನು. ಅವನ ಸಮಕಾಲೀನರೂ ಜಗತ್ತಿನ ಇತರ ಅನೇಕ ಕಲಾಕಾರರೂ 'ಆಧುನಿಕ' ಶೈಲಿಗೆ ಮುಗ್ಧರಾಗಿದ್ದು ಕಲಾಕ್ಷೇತ್ರದಲ್ಲಿ ನವ ಆಂದೋಲನವನ್ನೆಬ್ಬಿಸುತ್ತಿದ್ದ ಆ ಕಾಲದಲ್ಲಿ ಮಾಗರೆನನು ಪ್ರಾಚೀನ ಕಲೆಯನ್ನು ತನ್ನದಾಗಿಸಿದನು.

[illegible] ಅವನು ಅದನ್ನು ಕಾರ್ಯರೂಪಕ್ಕೆ ಇಳಿಸಿದುದರ ಫಲವಾಗಿ ಮುಂದಿನ ಮೂರು ದಶಕಗಳಲ್ಲಿ ಕಲೆಯ ಮತ್ತು ವಿಜ್ಞಾನದ ರಂಗಗಳಲ್ಲಿ ಗಲಭೆಯೇ ಗಲಭೆ. ಅಂದು ಚಿತ್ರಕಲಾತಜ್ಞರು ಶ್ರೇಷ್ಠ ಕಲಾಕಾರರ

ಕೃತಿಗಳನ್ನೆ ಹೊಗಳುವ ಹವ್ಯಾಸಕ್ಕೆ ಪೊರೆ ಹೋಗುತ್ತಿದ್ದರೇ ವಿನಾ ಒಂದು ಕಲಾಕೃತಿಯ ಆಂತರಿಕ ಪೌಲ್ಯವೆಷ್ಟು ಎಂಬುದರ ಗೊಡವೆಗೆ ಹೋಗುತ್ತಿರಲಿಲ್ಲ. ಇಂಥ ತಜ್ಞರಿಗೆ ಬುದ್ಧಿ ಕಲಿಸಲಿಕ್ಕೂ ತನ್ಮೂಲಕ ಹೇರಳ ಹಣ ಸಂಪಾದಿಸಲಿಕ್ಕೂ ಮಾಗರೆನ್ ಮುಂದಾದನು. ಕೂಡಲೆ ಹಾಲೆಂಡಿನ ಶ್ರೇಷ್ಠ ಕಲಾವಿದ ವರ್ಮೂರ್ (೧೬೩೨–೧೬೭೫) ಎಂಬವನು ಅವನ ಕಣ್ಣ ಮುಂದೆ ಸುಳಿದನು. ಆತನ ಚಿತ್ರಗಳನ್ನೂ ಆತನ ಕಲಾಶೈಲಿಯನ್ನೂ ಶಾಲೆಯಲ್ಲೆ ಅಭ್ಯಸಿಸಿದ ಮಾಗರೆನನು ತಾನೆ ಚಿತ್ರಗಳನ್ನು ಬಿಡಿಸಿ ಅವುಗಳಿಗೆ ಆತನ ಹೆಸರನ್ನು ಕೊಟ್ಟಲ್ಲಿ, ಅವುಗಳನ್ನು ಮಾರಿ ಲಕ್ಷಾಂತರ ರೂಪಾಯಿಗಳಷ್ಟು ಧನವನ್ನು ಸಂಗ್ರಹಿಸಲು ಸಾಧ್ಯವಿದೆ ಎಂಬ ತೀರ್ಮಾನಕ್ಕೆ ಬಂದನು. ಆದರೆ ಅದರ ಸಮರ್ಥನೆಗೆ ಕಲಾತಜ್ಞರ ಸಹಾಯ ಬೇಕೇಬೇಕು. ಆತನ ಸುದೈವದಿಂದ ಡಾ. ಅಬ್ರಹಾಮ್ ಬ್ರೇಡಿಯುಸ್ ಎಂಬ ಶ್ರೇಷ್ಠ ಚಿತ್ರಕಲಾತಜ್ಞನು ಅವನಿಗೆ ನೆರವಾಗಲು ಮುಂದೆ ಬಂದನು. ಇನ್ನು ಹೇಳಬೇಕೆ? ಹದಿನೇಳನೆಯ ಶತಮಾನದಷ್ಟು ಹಿಂದಿನ ಕೆಲಿಕೋವನ್ನು (ಹತ್ತಿ ಬಟ್ಟೆಯನ್ನು) ಎಲ್ಲಿಂದಲೊ ತಂದು, ಆಧುನಿಕ ಕಾಲದ ಸೀಸದ ಬಣ್ಣವನ್ನು (Lead paint) ಖರೀದಿಸಿ ಮಾಗರೆನನು ಚಿತ್ರಗಳನ್ನು ಬಿಡಿಸತೊಡಗಿದನು. 'ಎಮ್ಮೊಸಿನಲ್ಲಿ ಶಿಷ್ಯರೊಡನಿದ್ದ ಯೇಸು ಕ್ರಿಸ್ತ' ಎಂಬುದೊಂದು ಕೃತಿಯು ನಿರ್ಮಾಣವಾಯಿತು. ೧೯೩೭ರಲ್ಲಿ ಮಾಗರೆನನು ವರ್ಮೂರನ ಶ್ರೇಷ್ಠ ಕೃತಿಯನ್ನು ಹುಡುಕಿ ತೆಗೆದನೆಂಬುದನ್ನು ಡಾ॥ ಬ್ರೇಡಿಯುಸ್ ಸಾರಿದನು. ಅದನ್ನು (ಹಾಲೆಂಡಿನ) ರೋಟರ್‌ಡೇಮ್ ನಗರದ ಬೊಯ್ಮನ್ ವಸ್ತು ಸಂಗ್ರಹಾಲಯವು ಖರೀದಿಸಿತು. ಮಾಗರೆನನು ಇನ್ನೂ ಕೆಲವು ಚಿತ್ರಗಳನ್ನು ಬಿಡಿಸಿ, ವರ್ಮೂರನ ಹೆಸರಿನಲ್ಲಿ ಮಾರಿ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಹಣ ಗಳಿಸಿದನು. ಆತನ ಸಮಕಾಲೀನ ಕಲಾತಜ್ಞರು, ಈ ಕಲಾಕೃತಿಗಳನ್ನು ಹೊಗಳಿ ಪ್ರಶಂಸಿಸಿದರು.


ಕಲಾಜಗತ್ತೆಲ್ಲ ಮಾಗರೆನನ ಚಿತ್ರಗಳು ವರ್ಮೂರನ ಚಿತ್ರಗಳೆಂದೆ ಭ್ರಮಿಸುತ್ತ, ಅವುಗಳನ್ನು ನೋಡಿ ನೋಡಿ ಆನಂದಿಸುತ್ತಿದ್ದಾಗ ಬೆಲ್ಜಿಯಮ್ಮಿನ ಪೋಲ್ ಜಿ. ಕೊರ್ಮನ್ಸ್ ಎಂಬ ರಸಾಯನಶಾಸ್ತ್ರಜ್ಞನು ಮೊತ್ತ ಮೊದಲ ಸಂದೇಹದ ಬೀಜವನ್ನು ಬಿತ್ತಿದನು. ಆ ಚಿತ್ರಗಳಲ್ಲಿ ಮೋಸವಿದೆ ಎಂದು ಅವನು ಸಾರಿದನು. ಆದರೆ ಆತನನ್ನು ಕೇಳುವವರಾರು? ಕಲಾತಜ್ಞರ ಅಭಿಪ್ರಾಯದ ಮೇರೆಗೆ ಆ ಚಿತ್ರಗಳೆಲ್ಲ ವರ್ಮೂರನ ಕೃತಿಗಳೆಂದು ಸಿದ್ಧವಾಗಿ ಮಾಗರೆನನ ಗುಟ್ಟು ರಟ್ಟಾಗದೆ ಉಳಿಯಿತು.

ಮುಂದೆ ೧೯೩೯ರಲ್ಲಿ ಪ್ರಾರಂಭವಾದ ದ್ವಿತೀಯ ಜಾಗತಿಕ ಮಹಾಯುದ್ಧವು ೧೯೪೫ರಲ್ಲಿ ಮುಕ್ತಾಯಗೊಂಡಾಗ, ಮಾಗರೆನನು ಜರ್ಮನಿಯ ನಾಝಿಗಳೊಂದಿಗೆ ಸಹಕರಿಸಿದ್ದನೆಂಬ ಆಪಾದನೆಯ ಮೇಲೆ ಅವನನ್ನು ಬಂಧಿಸಲಾಯಿತು. ಕಾರಾಗೃಹದಲ್ಲಿದ್ದ ಅವನು ಪಶ್ಚಾತ್ತಾಪಪಟ್ಟು, ತಾನೆಸಗಿದ ಮೋಸ ಕೃತ್ಯಗಳನ್ನು ಬಹಿರಂಗವಾಗಿ ಒಪ್ಪಿಕೊಂಡು, ಆ ಎಲ್ಲ ಚಿತ್ರಕೃತಿಗಳನ್ನು ತಾನೇ ಬಿಡಿಸಿದ್ದೇನೆಂದೂ ಅವು ವರ್ಮೂರನ ಕೃತಿಗಳಲ್ಲ ಎಂದೂ ಸಾರಿದನು. ಆದರೆ ಅಂದಿನ ಚಿತ್ರಕಲಾತಜ್ಞರು ಒಪ್ಪಬೇಕಲ್ಲ ? ಅವೆಲ್ಲ ನಿಜವಾಗಿಯೂ ವರ್ಮೂರನ ಚಿತ್ರಗಳೇ ಆಗಿವೆಯೆಂದೂ ಮಾಗರೆನನು ಸುಳ್ಳುಗಾರನೆಂದೂ ಅವರೆಲ್ಲ ಏಕಕಂಠದಿಂದ ಘೋಷಿಸಿದರು. ಮಾಗರೆನನಾದರೂ ಏನು ಮಾಡಿಯಾನು? ಅವನು ತಾನೆಸಗಿದ ಮೋಸ ಕೃತ್ಯವನ್ನು ಒಪ್ಪಿಕೊಂಡರೂ ಆತನಿಗೆ ಆ ಕೃತಿಗಳ ಕರ್ತೃತ್ವ ಸಿಕ್ಕದೇ ಹೋಯಿತು. ಕೊನೆಗವನು ೧೯೪೭ರಲ್ಲಿ ಅತಿ ಬಡವನಾಗಿ ತೀರಿಹೋದನು.

ಇಪ್ಪತ್ತೊಂದು ವರ್ಷಗಳು ಸಂದುವು. ಅನಂತರವೆ ಆ ಚಿತ್ರಗಳ ನಿಜವಾದ ಕರ್ತೃತ್ವದ ನಿಷ್ಕರ್ಷೆಯಾಗಿ ಅವುಗಳನ್ನು ಮಾಗರೆನನೆ ಬಿಡಿಸಿದ್ದನೆಂಬುದು ಸಿದ್ಧವಾಯಿತು. ಅಂದು ಆತನ ಮೋಸದ ಬಲೆಯು ಹರಿಯಲ್ಪಟ್ಟು ನಿಜ ಸ್ಥಿತಿಯು ಹೊರಗೆ ಬಿದ್ದಿತು. ಆದರೆ ಅದನ್ನು ಅರಿಯಲು ಮಾಗರೆನನು ಉಳಿಯಲಿಲ್ಲ. ೧೯೬೮ರಲ್ಲಿ ಅಮೇರಿಕದ ಮೆಲ್ಲನ್ ಇನ್‌ಸ್ಟಿಟ್ಯೂಟಿನ ಬರ್ನಾರ್ಡ್ ಕೈಲ್ ಎಂಬವನು ರೇಡಿಯೊ ರಸಾಯನಶಾಸ್ತ್ರದ (Radio chemistry)

ಆಧಾರದಿಂದ ನಿಜಸ್ಥಿತಿಯನ್ನು ಬಯಲಿಗೆಳೆದನು. ಮಾಗರೆನನು ಚಿತ್ರಗಳನ್ನು ಬಿಡಿಸುವಾಗ ಬಹು ಜಾಗ್ರತೆಯಿಂದ ವರ್ಮಾರನ ಕಾಲದ ಬಟ್ಟೆಯನ್ನು ಉಪಯೋಗಿಸಿದ್ದರೂ ಇಂದಿನ ಕಾಲದ ಸೀಸದ ಬಣ್ಣವನ್ನು ಬಳಸಿದ್ದುರಿಂದ ಇದು ಸಾಧ್ಯವಾಯಿತು.

ನಿಸರ್ಗದಲ್ಲಿ ಸಿಕ್ಕುವ ಸೀಸದ ಅದುರಿನಲ್ಲಿ ರದಕ್ರಿಯಾತ್ಮಕ (Radioactive) ಧಾತುವಾದ ಯುರೇನಿಯುಮ್ ಇರುತ್ತದೆ. ಈ ಧಾತುವು ತನ್ನಷ್ಟಕ್ಕೆ ವಿಶ್ಲೇಷಣೆಹೊಂದಿ, ಥೋರಿಯಮ್, ರೇಡಿಯುಮ್, ರದಕ್ರಿಯಾತ್ಮಕ ಸೀಸ, ಬಿಸ್ಮತ್, ರದಕ್ರಿಯಾತ್ಮಕವಲ್ಲದ ಸೀಸ ಮೊದಲಾದ ಅನೇಕ ಧಾತುಗಳಾಗಿ ಪರಿವರ್ತಿಸಲ್ಪಡುತ್ತದೆ. ಈ ವಿವಿಧ ಬದಲಾವಣೆಗಳಿಗೆ ನಿರ್ದಿಷ್ಟವಾದ ಕಾಲ ಬೇಕಾಗುತ್ತದೆ. ಅಂತೂ ಸೀಸದಲ್ಲಿ ರೇಡಿಯಮ್ ಮತ್ತು ರದಕ್ರಿಯಾತ್ಮಕ ಸೀಸಗಳು ಒಂದು ನಿರ್ದಿಷ್ಟ ಪ್ರಮಾಣದಲ್ಲಿರುತ್ತವೆ. ಆದರೆ ಸೀಸದ ಅದುರನ್ನು ಪರಿಶುದ್ಧಗೊಳಿಸಿ, ಅದರಿಂದ ಬಣ್ಣವನ್ನು ತಯಾರಿಸುವಾಗ ಅದರಲ್ಲಿನ ರೇಡಿಯುಮ್ಮಿನ ಬಹು ದೊಡ್ಡ ಅಂಶ ಪ್ರತ್ಯೇಕಿಸಲ್ಪಡುತ್ತದೆ. ಇದರಲ್ಲಿ ಬಾಕಿ ಉಳಿದ ರೇಡಿಯುಮ್ ಮತ್ತು ರದಕ್ರಿಯಾತ್ಮಕ ಸೀಸಗಳು ಒಂದು ನಿರ್ದಿಷ್ಟ ಪ್ರಮಾಣದಲ್ಲಿರುತ್ತವೆ. ಆದರೆ ಅವುಗಳಿಗೆ ಈ ಪ್ರಮಾಣದಲ್ಲಿರಲು ೧೫೦ ವರ್ಷಗಳು ತಗಲುತ್ತವೆ. ವರ್ಮಾರನು ೧೬೫೦ರಲ್ಲಿ ಆ ಚಿತ್ರಗಳನ್ನು ರಚಿಸಿದ್ದು ಹಾದರೆ ೧೯೬೦ರಲ್ಲಿ ರೇಡಿಯುಮ್ ರದಕ್ರಿಯಾತ್ಮಕ ಸೀಸಗಳೊಳಗಣ ನಿರ್ದಿಷ್ಟ ಪ್ರಮಾಣವು ಮುಟ್ಟಲಾಗುತ್ತಿತ್ತು. ಆದರೆ ಈ ಎರಡು ಧಾತುಗಳು ನಿಜವಾಗಿಯೂ ಮಾಗರೆನನು ಬಿಡಿಸಿದ ಚಿತ್ರಗಳಲ್ಲಿ ಈ ಪ್ರಮಾಣದಲ್ಲಿಲ್ಲ ಎಂಬುದನ್ನು ಬರ್ನಾಡ್ ಕ್ರಿಪ್ ಕಂಡುಹಿಡಿದನು. ಆದ್ದರಿಂದ ಈ ಬಣ್ಣಕ್ಕೆ ೩೦೦ ವರ್ಷಗಳಾಗಿಲ್ಲ ಎಂಬುದು ಸಿದ್ಧವಾಯಿತು. ಅಷ್ಟೇ ಅಲ್ಲ, ಈ ಎರಡು ಧಾತುಗಳೊಳಗಣ ಪ್ರಮಾಣವು, ಆ ಬಣ್ಣ ಇಂದಿನ ಕಾಲದ್ದೆ ಆಗಿದೆ ಎಂಬುದನ್ನೂ ತೋರಿಸಿ ಕೊಟ್ಟಿತು. ಈ ಪುರಾವೆಯ ಮೇರೆಗೆ ಆ ಚಿತ್ರಗಳೆಲ್ಲ ಮಾಗರೆನನವೇ ಎಂಬುದು ನಿಸ್ಸಂಶಯವಾಗಿ ಸಿದ್ಧವಾಯಿತು. ಅಂದಿನ ಚಿತ್ರಕಲಾತಜ್ಞರು ಇಂದೂ ಉಳಿದುಕೊಂಡಿದ್ದರೆ, ಅವರು ಏನು ಹೇಳುತ್ತಿದ್ದರೊ! ಒಂದು ವೇಳೆ ಮಾಗರೆನನು ವರ್ಮಾರನ ಕಾಲದ ಬಣ್ಣವನ್ನು ಬಳಸಿದ್ದರೆ, ಅವನು ರಸಾಯನಶಾಸ್ತ್ರಕ್ಕೂ ಮೋಸ ಮಾಡಬಹುದಿತ್ತು. ಅವನಿಗೆ ಅಂದಿನ ಕಾಲದ ಬಣ್ಣ ಸಿಕ್ಕಲಿಲ್ಲವೊ ಅಥವಾ ಅವನ ಲಕ್ಷ್ಯ ಈ ಕಡೆಗೆ ಹರಿಯಲಿಲ್ಲವೊ ಅಂತೂ ಅವನ ಗುಟ್ಟು ರಟ್ಟಾಯಿತು. ✿



ಆ ಶ್ರೀಮಂತ ದಂತಚಿಕಿತ್ಸಾಲಯದೊಳಗಿಂದ ಗಲ್ಲ ಹಿಡಿದುಕೊಂಡು, ಮುಖ ಕಿವಿಚಿಕೊಂಡು ಹೊರಬಂದು ನೋಡುತ್ತಾನೆ. ತನ್ನ ಕಾರಿಗೆ ಮತ್ತೊಂದು ಕಾರು ಡಿಕ್ಕಿ ಹೊಡೆದಿದೆ! ಆ ಕಾರಿನ ಬಳಿ ಹಣೆ, ಕೈ-ಮೈಗಳಿಗೆ ಗಾಯಮಾಡಿಕೊಂಡು ನಿಂತಿದ್ದಾಳೆ ಓರ್ವ ಮಹಿಳೆ.

"ಕ್ಷಮಿಸಿ, ನೀವು ಬಂದದ್ದು ಸಂತೋಷ," ಮಹಿಳೆ ಹೇಳತೊಡಗಿದಳು. "ನೀವು ಬಂದಮೇಲೆ ಕ್ಷಮೆ ಯಾಚಿಸಿ ಹೋಗಬೇಕು ಅಂತ ಕಾದಿದ್ದೆ. ಕ್ಷಮಿಸಿ," ಎನ್ನುತ್ತಲೇ ಆಕೆ ಕಾರು ಏರಿ ಸ್ಟಾರ್ಟರ್ ಒತ್ತಿದಳು.

ಶ್ರೀಮಂತ ರೆಪ್ಪೆ ಬಡಿಯುವುದರೊಳಗೇ ಕಾರು ಆ ರಸ್ತೆಯ ತಿರುವು ದಾಟಿತ್ತು.

ಅವು ಪ್ರಥಮತಃ
ಬಾಹ್ಯಾಂತರಿಕ್ಷದಿಂದ ಭೂಮಿಗೆ ಬಂದವೆ ?

ರೋಗಾಣುಗಳ ಮೂಲವೆಲ್ಲಿ ?

ಕೋನ್‌ಸ್ತಾಂತಿನ್ ರಜಿನ್

ಶಿಲಾಪ್ರತಿಲೆಗಳ ಅಧ್ಯಯನವೂ ಸೇರಿದಂತೆ ಬೇರೆ ಬೇರೆ ಸಂಶೋಧನೆಗಳ ನಂತರ ವಿಜ್ಞಾನಿಗಳು ಪೃಥ್ವಿಯ ಸುಮಾರು ೪೦೦ ಕೋಟಿ ವರ್ಷಗಳ ಹಿಂದೆ ರೂಪಗೊಂಡಿರಬಹುದೆಂಬ ತೀರ್ಮಾನಕ್ಕೆ ಬಂದಿದ್ದಾರೆ. ಹಾಗಾದರೆ ಭೂಮಿಯ ಮೇಲೆ ಜೀವಿಗಳು ಅಸ್ತಿತ್ವಕ್ಕೆ ಬಂದಿದ್ದು ಯಾವಾಗ? ಇದಕ್ಕೆ ಉತ್ತರಗಳು ಅನೇಕ.

ದಕ್ಷಿಣ ಯುಕ್ರೇನಿನ ಅನಾಸ್ಯೇವ್ ಗಣಿಕ್ಷೇತ್ರಗಳಲ್ಲಿ ಕಬ್ಬಿಣ ಅದಿರಿನ ರಾಶಿಯಲ್ಲಿ ಸುಮಾರು ೨.೮೦ಕೋಟಿ ವರ್ಷಗಳಷ್ಟು ಹಿಂದಿನ ಬ್ಯಾಕ್ಟೀರಿಯ ಮತ್ತು ಪಾಚಿಯ ಗುರುತುಗಳನ್ನು ಅಲ್ಲಿನ ಭೂವಿಜ್ಞಾನಿಗಳು ಕಂಡುಕೊಂಡ ವರದಿಯೊಂದು ಕೆಲ ಕಾಲದ ಹಿಂದೆ ಸೋವಿಯೆತ್ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಇದು, ಭೂಮಿಯ ಮೇಲೆ ಮೊದಲ ಜೀವಿಗಳು ಅಸ್ತಿತ್ವಕ್ಕೆ ಬಂದ ಅವಧಿಯನ್ನು ಇನ್ನೂ ಹತ್ತಾರು ಕೋಟಿ ವರ್ಷಗಳಷ್ಟು ಹಿಂದಕ್ಕೆ ತಳ್ಳುತ್ತದೆ.

ಆ ವಿಜ್ಞಾನಿಗಳು ಇಲೆಕ್ಟ್ರಾನ್ ಮೈಕ್ರೊಸ್ಕೋಪಿನ ಸಹಾಯದಿಂದ ಶಿಲೆಗಳನ್ನು ಅತ್ಯಂತ ಕೂಲಂಕಷವಾಗಿ ಪರೀಕ್ಷಿಸಿ ಈಗಿನವುಗಳನ್ನು ಹೋಲುವಂಥ ಏಕಾಣುಜೀವಿಗಳು ಅಷ್ಟೊಂದು ಕಾಲದ ಹಿಂದೆಯೇ ಅಸ್ತಿತ್ವದಲ್ಲಿ ಇದ್ದವೆಂಬುದನ್ನು ತೋರುವ ಗುರುತುಗಳ ಛಾಯಾಚಿತ್ರಗಳನ್ನು ತೆಗೆದುಕೊಂಡರು.

ಆದರೆ ಅದುವೇ ಜೀವಿಗಳು ಮೊದಲು ಅಸ್ತಿತ್ವಕ್ಕೆ ಬಂದಂಥ ಕಾಲವಲ್ಲ. ಮೊದಲ ಜೀವಿಗಳು ಸುಮಾರು. ೩೫೦–೪೦೦ ಕೋಟಿ ವರ್ಷಗಳಷ್ಟು ಹಿಂದೆಯೇ ಅಸ್ತಿತ್ವದಲ್ಲಿದ್ದವೆಂದು ಅನೇಕ ವಿಜ್ಞಾನಿಗಳು ಭಾವಿಸಿದ್ದಾರೆ. ಇದನ್ನು ದೃಢಪಡಿಸುವ ಎರಡು ಸಂಗತಿಗಳು ಅವುಗಳಲ್ಲಿ ಒಂದು ಪೃಥ್ವಿಗೆ ಸಂಬಂಧಿಸಿದ್ದರೆ ಇನ್ನೊಂದು ಬಾಹ್ಯಾಂತರಿಕ್ಷಕ್ಕೆ ಸಂಬಂಧಿಸಿದೆ. ಇವು ಇತ್ತೀಚೆ ಲಭ್ಯವಾಗಿದೆ.

ಅಮೇರಿಕದ ಇಲಿನಾಯ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಸ್ವತಂತ್ರರೂಪದ (ಪ್ರಾ...

ವಾಯು)ರಹಿತ ಬಿಸಿ ನೀರು ಬುಗ್ಗೆಯ ಕುದಿಯುವ ನೀರಿನಲ್ಲಿ ಈ ವರೆಗೂ ಗೊತ್ತಿರದಂಥ ಅತಿ ಸೂಕ್ಷ್ಮ ಜೀವಿಗಳನ್ನು ಪತ್ತೆ ಹಚ್ಚಿದ್ದಾರೆ. ಈ ಸೂಕ್ಷ್ಮ ಜೀವಿಗಳು ಇಂಗಾಲಾಮ್ಲವನ್ನು ಹೀರಿಕೊಳ್ಳುತ್ತವೆ. ಮಿಥೇನನ್ನು ಸೃಜಿಸುತ್ತವೆ. ಅವು ಪ್ರಾಣವಾಯುವನ್ನು ಸಹಿಸಿಕೊಳ್ಳಲಾರವು.

ಇಂದು ಭೂಮಿಯ ವಾತಾವರಣದಲ್ಲಿ ಶೇಕಡಾ ೭೮.೧ ರಷ್ಟು ಸಾರಜನಕವಿದ್ದರೆ ಶೇಕಡಾ ೨೦.೯ ರಷ್ಟು ಪ್ರಾಣವಾಯುವಿದೆ. ಉಳಿದ ಭಾಗ ಇಂಗಾಲಾಮ್ಲವೂ ಸೇರಿದಂತೆ ಇತರ ಅನೇಕ ರಾಸಾಯನಿಕಗಳಿಂದ ಸಂಯೋಜಿತವಾಗಿದೆ.

ಆದರೆ ಕೋಟ್ಯಂತರ ವರ್ಷಗಳಷ್ಟು ಹಿಂದೆ ಭೂಮಿಯ ಮೇಲಿನ ಸ್ಥಿತಿ ಈಗಿನದ್ದಕ್ಕಿಂತ ತೀರ ಭಿನ್ನವಾಗಿತ್ತು. ಆಗ ವಾತಾವರಣದಲ್ಲಿ ಹೆಚ್ಚಾಗಿ ಅಮೋನಿಯಾ, ಮಿಥೇನ್, ಇಂಗಾಲಾಮ್ಲ ಮತ್ತು ನೀರಿನ ಆವಿಗಳೇ ಅಧಿಕ ಪ್ರಮಾಣದಲ್ಲಿ ಇದ್ದುವು. ಇದನ್ನೇ ಬೇರೆ ಮಾತಿನಲ್ಲಿ ಹೇಳುವುದಾದರೆ ಈಗ ಪತ್ತೆ ಹಚ್ಚಲಾಗಿರುವ ಸೂಕ್ಷ್ಮ ಜೀವಿಗಳ ಅಸ್ತಿತ್ವಕ್ಕೆ ಅಗತ್ಯವಾದುದೆಲ್ಲವೂ ಆಗ ಇತ್ತು. ಅವು ಸೂಕ್ಷ್ಮ ಜೀವಾಣು ಮೈಕ್ರೋಬ್‌ಗಳಿಗಿಂತ ಸರಳ ರೂಪದವಾಗಿವೆ. ಹೀಗಾಗಿ ಅವುಗಳನ್ನು ಸೂಕ್ಷ್ಮ ಜೀವಾಣುಗಳ 'ಪೂರ್ವಜ'ರೆಂದುಕೂಡ ಭಾವಿಸಬಹುದು.

ಇದಕ್ಕೂ ಬಾಹ್ಯಾಂತರಿಕ್ಷ ಪರಿಶೋಧನೆಗಳಿಗೂ ಸಂಬಂಧವಿದೆ.

ಭೂಮಿಯ ಮೇಲೆ ಜೀವಿಗಳು ಅಸ್ತಿತ್ವಕ್ಕೆ ಬಂದದ್ದು ಯಾವಾಗ? ಈ ಪ್ರಶ್ನೆಗೆ ಉತ್ತರ ಕಂಡು ಹಿಡಿಯುವ ಪ್ರಯತ್ನಗಳು ಅನೇಕ ವರ್ಷಗಳಿಂದ ನಡೆದೇ ಇವೆ. ಈಗ ಜೀವವಿಜ್ಞಾನಿಗಳು, ರಸಾಯನಶಾಸ್ತ್ರಜ್ಞರು, ಭೂವಿಜ್ಞಾನಿಗಳು, ಖಗೋಳ ವಿಜ್ಞಾನಿಗಳು ಈ ಪ್ರಯತ್ನದಲ್ಲಿ ಸೇರಿಕೊಂಡಿದ್ದಾರೆ. ಫಲವಾಗಿ ಭೂಮಿಯ ಮೇಲೆ ಜೀವಿಗಳು ಅಸ್ತಿತ್ವಕ್ಕೆ ಬಂದದ್ದು ಒಂದು ಕಾಕತಾಳೀಯ ಘಟನೆ ಎಂಬ ಕಲ್ಪನೆಯನ್ನು ಈಗ ಕೈಬಿಡಲಾಗುತ್ತಿದೆ. ವಿಶ್ವದಲ್ಲಿ ಪೃಥ್ವಿಯು ಜೀವಿಗಳ ವಿಕಾಸಕ್ಕೆ ಕೇವಲ ಒಂದು ಅನುಕೂಲಕರ ಸ್ಥಳ ಮಾತ್ರ ಆಗಿತ್ತೆಂದು ವಿಜ್ಞಾನಿಗಳು ಭಾವಿಸಿದ್ದಾರೆ.

ಇದು, ಜೀವಿಗಳ ಮುಖ್ಯ ಅಂಶಗಳು ಅಂದರೆ ನಾನಾ ಬಗೆಯ ಜೈವಿಕ ಸಂಯೋಜನೆಗಳು ಮೂಲತಃ ಬಾಹ್ಯಾಂತರಿಕ್ಷದಲ್ಲಿ ಇದ್ದವೆಂಬ ಕಲ್ಪನೆಗೆ ಪೂರಕವಾಯಿತು. ಅವುಗಳನ್ನು ಸಂಯೋಜಿಸುವುದು ಮನುಷ್ಯನಿಗೆ ತಿಳಿದಿದೆ. ಹೀಗಾಗಿ, ನಾವು ಈಗ ಕೃತಕವಾಗಿ ಪ್ರೋಟೀನನ್ನು ತಯಾರಿಸುವ ಸ್ಥಿತಿಯಲ್ಲಿದ್ದೇವೆ. ಅಂದರೆ, ಇಂದು ಮನುಷ್ಯನು ಪ್ರಯೋಗಾಲಯದಲ್ಲಿ ತಯಾರಿಸಬಲ್ಲಂಥ ವಸ್ತುಗಳು ವಿಶ್ವದ ವಿಶಾಲ ಕ್ರಿಯೆಯಲ್ಲಿ ಯಾವುದೋ ಒಂದು ಕಾಲಾವಧಿಯಲ್ಲಿ ಅಸ್ತಿತ್ವಕ್ಕೆ ಬಂದಿರಬಹುದು.

ಅತ್ಯಂತ ವಿನೂತನವಾದ ಕಲ್ಪನೆಯನ್ನು ಇದರ ಆಧಾರದ ಮೇಲೆ ರಷ್ಯದ ವಿಜ್ಞಾನ ಅಕಾಡೆಮಿಯ ವಿಟಾಲಿ ಗೋಲ್ಡಾನ್‌ಸ್ಕಿಯವರು ಮಂಡಿಸಿದ್ದಾರೆ. ಹೊಸ ನಕ್ಷತ್ರಗಳ ಮತ್ತು ಗ್ರಹಗಳ



“ಮತ್ತೇನಿಲ್ಲ, ನಮ್ಮಿಬ್ಬರೊಡನೆ ಪೌರುಷ ಮತ್ತು ಹೇಡಿತನದ ವ್ಯತ್ಯಾಸ ತಿಳಿಸಲು ಹೇಳಿದರು ನಾನು ತಲೆತಗ್ಗಿಸಿ ನಿಂತೆ. ಆತ ಅವರ ಕೆನ್ನೆಗೆ ಒಂದೇಟು ಬಿಗಿದ.”


ಜನನದ ಸಮಯದಲ್ಲಿ ಸಂಕೀರ್ಣ ಜೈವಿಕ ಕಣಗಳು ಸರಳ ರೂಪದ ಜೀವಿಗಳಾಗಿ ವಿಕಾಸಗೊಂಡಿರಬಹುದು ಹಾಗೂ ಸೂರ್ಯ ಎಳೆಯ ನಕ್ಷತ್ರವಾಗಿರಬಹುದು ಎಂದು.

ನೀರ್ಗಲ್ಲ ಆಕಾಶಕಾಯಗಳು ಬಾಹ್ಯಾಂತರಿಕ್ಷದಲ್ಲಿ ಮೂಲ ಜೀವಿಗಳು ಇರುವುದಕ್ಕೆ ಆಧಾರವಾಗಿದ್ದಿರಬೇಕೆಂದು ಕೆಲವರು ಬ್ರಿಟಿಷ್ ವಿಜ್ಞಾನಿಗಳು ಭಾವಿಸುತ್ತಾರೆ. ಈ ಆಕಾಶಕಾಯಗಳು ಸುಮಾರು, ೪೦೦ ಕೋಟಿ ವರ್ಷಗಳಷ್ಟು ಹಿಂದೆ ಭೂಮಿಗೆ ಜೀವಿಗಳನ್ನು ರವಾನಿಸಿರಬಹುದು. ಅದುವೆ ಇಲ್ಲಿ ಪೃಥ್ವಿಯ ಮೇಲೆ ಒಂದೊಂದು ಕಾಲಕ್ಕೆ ಒಂದೊಂದು ಬಗೆಯ ಸಾಂಕ್ರಾಮಿಕ ರೋಗ ಬೆಳೆಯಲು ಕಾರಣವಾಗಿರಬಹುದು.

ಪ್ಲೇಗ್ ಮಾದರಿಯ ಮಾರಕ ರೋಗಗಳು ಮತ್ತು ಇತರ ಸಾಂಕ್ರಾಮಿಕಗಳು ಹಠಾತ್ತನೇ ಹರಡಿದಂಥ ಘಟನೆಗಳು ಸಂಭವಿಸಿದ ಉದಾಹರಣೆಗಳಿವೆ. ೧೯೧೮–೧೯೧೯ರಲ್ಲಿ ಹರಡಿದ್ದ ಸ್ಪ್ಯಾನಿಷ್ ಫ್ಲು ಇವುಗಳಲ್ಲಿ ಇತ್ತೀಚಿನ ಕಾಲದ ಒಂದು ಉದಾಹರಣೆ; ಸುಮಾರು ೩ ಕೋಟಿ ಮಂದಿ ಈ ರೋಗದಿಂದ ಮೃತಪಟ್ಟರು. ಈ ಸಾಂಕ್ರಾಮಿಕಗಳಲ್ಲಿ ಯಾವುದೂ ನಿರ್ದಿಷ್ಟವಾಗಿ ಒಂದೇ ಬಗೆಯುವಾಗಿರಲಿಲ್ಲ. ಅವು ಹಠಾತ್ತನೆ ಕಾಣಿಸಿಕೊಂಡು ಕ್ಷಿಪ್ರಗತಿಯಲ್ಲಿ ಜಗತ್ತಿನಾದ್ಯಂತವೂ ಹರಡಿದ್ದುಂಟು. ಅವು ಅಷ್ಟೊಂದು ವೇಗದಿಂದ ಹೇಗೆ ಹರಡಿಕೊಳ್ಳುತ್ತಿದ್ದವೆಂದು ಹೇಳುವುದು ಕಷ್ಟ. ಏಕೆಂದರೆ ಸೋಂಕು ರೋಗ ಮನುಷ್ಯನಿಂದ ಮನುಷ್ಯನಿಗೆ, ಅಥವಾ ಕೀಟ ಅಥವಾ ಪ್ರಾಣಿಗಳಿಂದ ಮನುಷ್ಯನಿಗೆ ತಗಲುತ್ತದೆ. ಆಗಿನ ಕಾಲದಲ್ಲಿ ವಿಮಾನ ಸಾರಿಗೆ ವ್ಯವಸ್ಥೆ ಕೂಡ ಇರಲಿಲ್ಲ. ಹಾಗೂ ಅಷ್ಟೊಂದು ವೇಗದಲ್ಲಿ ಪ್ರವಾಸ ಮಾಡಲು ಮನುಷ್ಯ ಶಕ್ತನಾಗಿರಲಿಲ್ಲ.

ಇದು ಕೇವಲ ಒಂದು ಕಲ್ಪನೆ ಅಷ್ಟೆ. ಇದರ ಬಗ್ಗೆ ಇನ್ನೂ ಬಹಳಷ್ಟು ಅಧ್ಯಯನ ನಡೆಸಬೇಕಾಗಿದೆ. ಜೀವಕ್ಕೆ ಅನೇಕ ಮುಖಗಳಿವೆ. ಅದು ಎಂಥೆಂಥ ಸ್ಥಿತಿಗತಿಗಳಲ್ಲಿ ಇರುವ ಸಾಮರ್ಥ್ಯವನ್ನು ಹೊಂದಿದೆ ಎಂಬುದನ್ನು ಹೇಳುವುದು ಕಷ್ಟ. ಭೂಮ್ಯೇತರ ಜೀವಿಗಳು ಮತ್ತು ಅವುಗಳ ವಿಕಾಸದ ಬಗೆಗಿನ ಅಧ್ಯಯನವು ಜೀವಿಗಳು ಹೇಗೆ ಅಸ್ತಿತ್ವಕ್ಕೆ ಬಂದವೆಂಬುದರ ಮೇಲೆ ಸಾಕಷ್ಟು ಬೆಳಕನ್ನು ಚೆಲ್ಲುತ್ತವೆ. ಹಾಗೂ ಜೀವದ ಮೂಲಸತ್ತ್ವವನ್ನು ಕಂಡು ಹಿಡಿಯಲು ಸಹಾಯಕವಾಗುತ್ತದೆ. ಇದು ಗೊತ್ತಾದರೆ ಮನುಷ್ಯನು ಜೀವದ ಪ್ರಕ್ರಿಯೆಗಳನ್ನು ನಿಯಂತ್ರಿಸುವುದಕ್ಕೆ ಅವಕಾಶ ಪಡೆಯುತ್ತಾನೆ. ಆಗ ನಮಗೆ ಬೇಕಾದಾಗ ಬೇಕಷ್ಟು ಆಹಾರವನ್ನೂ ಉಪಯುಕ್ತ ಸಸ್ಯಗಳನ್ನೂ ಪಡೆಯಲು ಮತ್ತು ರೋಗಗಳನ್ನು ತೊಡೆದು ಹಾಕಲು ಸಾಧ್ಯವಾಗುತ್ತದೆ. ✡

(ಸೋವಿಯತ್ ವಾರ್ತಾ ಸಂಸ್ಥೆಯ ಕೃಪೆ)



ನ್ಯೂಯಾರ್ಕಿನ ನಾಪಿತರ ಶಾಲೆಯ ವಿದ್ಯಾರ್ಥಿಗಳಿಗೆ ಇರುವ ವಾರ್ಷಿಕ ಪರೀಕ್ಷೆಯ ಮೊದಲ ಹಂತ ಎಂದರೆ, ವಿದ್ಯಾರ್ಥಿ ಬಲೂನಿನಲ್ಲಿ ಮಾಡಿದ ಮುಖದ ಮೇಲಿರುವ ಮುಸಿಯನ್ನು ರೇಝರಿನಿಂದ ಹೆರೆಯಬೇಕು. ಬಲೂನು ಒಡೆಯಬಾರದು. ಸ್ವಲ್ಪವೂ ಮುಸಿ ಉಳಿಯಬಾರದು. ಹಾಗೇನಾದರೂ ಆದರೆ ಆ ವಿದ್ಯಾರ್ಥಿ ಮುಂದಿನ ಹಂತಕ್ಕೆ ಎಂದರೆ ಮನುಷ್ಯನ ಮುಖಕ್ಷೌರದ ಪರೀಕ್ಷೆಗೆ ಅನರ್ಹ. ಮತ್ತೆ ಆರು ತಿಂಗಳುಗಳ ವರೆಗೆ ಆತ ಅಭ್ಯಾಸ ಮಾಡಬೇಕಾಗುವುದು.

ಈಕೆಯಿಂದಲೇ ಮಹಾಭಾರತ

ದ್ರೌಪದಿ

ಲಲಿತಾ ಕಿನ್ನಾಳ

ಮಹಾಭಾರತಕ್ಕೆ ನಾಯಕನು ಯಾರೆಂಬ ವಿಚಾರ ದೃಷ್ಟಿಭೇದದಿಂದ ಉತ್ತರವೂ ಭಿನ್ನವಾಗಬಹುದು; ಆದರೆ ನಾಯಿಕೆ ದ್ರೌಪದಿ ಎನ್ನುವ ವಿಚಾರದಲ್ಲಿ ಸಂಶಯವು ಹುಟ್ಟುವುದಿಲ್ಲ. ದ್ರೌಪದಿಯೇ ಭಾರತದ ಕ್ರಿಯಾಶಕ್ತಿ" (ತೀ. ನಂ. ಶ್ರೀ)

ತನ್ನ ಐವರು ಪತಿಗಳ ಮನೋಧರ್ಮವನ್ನು ಅರಿತು, ಅವರಿಗೆ ತಕ್ಕುದಾದ ರೀತಿಯಲ್ಲಿ ನಡೆಯುತ್ತಾ, ರೋಷ, ಪೌರುಷಗಳನ್ನು ಹೊಡೆದೆಬ್ಬಿಸಿದ ಅಸಾಧಾರಣ ಸ್ತ್ರೀ, ದ್ರೌಪದಿ. ದ್ರುಪದ ಏರ್ಪಡಿಸಿದ್ದ ಸ್ವಯಂವರದ ಮೂಲಕ ಮಹಾಭಾರತದ ಕಥೆಯಲ್ಲಿ ಕಾಲಿಡುತ್ತಾಳೀಕೆ. ತಾಯಿ ಕುಂತಿಗೆ ಅರ್ಜುನ, ತಾನು ಹೆಣ್ಣನ್ನು ಗೆದ್ದು ತಂದಿದ್ದೇನೆ ಎಂದು ಹೇಳಿದಾಗ, ಐವರೂ ಸಮಾನರಾಗಿ ಹಂಚಿಕೊಳ್ಳಿ ಎಂದು ಹೇಳುತ್ತಾಳೆ. ಎಂಥ ವಿಪರ್ಯಾಸ! ಒಂದು ಹೆಣ್ಣನ್ನು ಐದು ಜನ ಭೋಗಿಸುವುದೆ? ಈ ವಿಪರ್ಯಾಸವನ್ನು ತಡೆಗಟ್ಟಲು ಕವಿ ಅವಳ ಹಿಂದಿನ ಜನ್ಮದ ಕಾರಣವನ್ನು ಮುಂದೊಡ್ಡುತ್ತಾನೆ. ಕಾರಣವೇನೇ ಇರಲಿ, ಇವಳ ಪರಿಚಯವೇ ವಿಶಿಷ್ಟ ರೀತಿಯಲ್ಲಿ ಆಗುತ್ತದೆ. ಪಂಚಪಾಂಡವರನ್ನು ವರಿಸಿದ ಮೇಲೆ ಧರ್ಮರಾಯ ದ್ರೌಪದಿಯನ್ನು ಕುರಿತು. ತಾಯಿಯ ಆಜ್ಞೆಯಂತೆ ಐವರೂ ನಿನ್ನನ್ನು ವರಿಸಿದ್ದೇವೆ. ಆದರೆ ನೀನು ಅರ್ಜುನನು ಗೆದ್ದತಂದ ವಸ್ತುವಾದ್ದರಿಂದ ಅವನಿಗೇ ಭೋಗ್ಯಳು, ಎಂದಾಗ ದ್ರೌಪದಿ, "ನಾನು ಅಗ್ನಿ ಸಾಕ್ಷಿಯಾಗಿ ಐವರನ್ನು ವರಿಸಿದ್ದೇನೆ. ನನ್ನ ದೃಷ್ಟಿಯಲ್ಲಿ ಐವರೂ ಸಮಾನರು" ಎನ್ನುತ್ತಾಳೆ. ಈ ಸಂದಿಗ್ಧ ಸನ್ನಿವೇಶವನ್ನು ಅವಳು ಬಗೆಹರಿಸಿಕೊಂಡ ರೀತಿಯಲ್ಲಿ ಧರ್ಮಸೂಕ್ಷ್ಮತೆ, ತಾರ್ಕಿಕ ಶಕ್ತಿ ವ್ಯಕ್ತವಾಗುತ್ತದೆ. ಕೇವಲ ಅರ್ಜುನನೊಬ್ಬನಿಗೆ ದ್ರೌಪದಿ ಮಡದಿಯಾಗಿದ್ದರೆ ಮುಂದೆ ಧರ್ಮರಾಯ ಅವಳನ್ನು ಪಣವಾಗಿಟ್ಟುಕೊಂಡು ಸೋಲುವ ಪ್ರಸಂಗ. ಭೀಮನ ಪ್ರತಿಜ್ಞೆಯಂತಾದ ಯಾವ ಘಟನೆಗಳು ನಡೆಯದೇ ಮಹಾಭಾರತದ ಕಥೆ ಮತ್ತೇನೋ ಆಗಬಹುದಿತ್ತು. ದ್ರೌಪದಿ ಮಹಾಭಾರತದ ಯುದ್ಧಕ್ಕೆ, ಕಥೆಗೆ ಮೂಲ ಬೀಜವಿದ್ದಂತೆ.

ಈ ಸೌಮ್ಯ ಭಯಂಕರ ಸ್ತ್ರೀಯ ಸಮಯೋಯೋಚಿತವಾದ ಮಾತಿನ ಚಾತುರ್ಯ, ಧೈರ್ಯ–ಸ್ಥೈರ್ಯ ಇವು ಕಂಡು ಬರುವುದು ಸಭಾಪರ್ವ ಮತ್ತು ವಿರಾಟ ಪರ್ವದಲ್ಲಿ. ಸಭಾಪರ್ವ ಮಹಾಭಾರತದ ಕಥೆಯ ದೃಷ್ಟಿಯಿಂದಲೂ ಮುಖ್ಯವಾದದ್ದು. ದ್ರೌಪದಿಯ ಮಾನಭಂಗ, ಭೀಮನ ಊರುಭಂಗ ಪ್ರತಿಜ್ಞೆ, ರಾಜ್ಯಕೋಶ ಸಮಸ್ತವನ್ನು ಕಳೆದುಕೊಂಡು ಪಾಂಡವರು ವನವಾಸಕ್ಕೆ ಹೊರಡುವುದು–ಇಷ್ಟೆಲ್ಲ ಘಟನೆಗಳು ನಡೆಯುವುದು ಈ ಪರ್ವದಲ್ಲೇ.

ಧರ್ಮರಾಜ ದುರ್ಯೋಧನನ ತಂತ್ರಕ್ಕೆ ಬಲಿಯಾಗಿ ರಾಜ್ಯಕೋಶ ಸಮಸ್ತವನ್ನು. ಅನುಜರನ್ನು, ದ್ರೌಪದಿಯನ್ನು ಪಣವಾಗಿ ಒಡ್ಡಿ ಸೋತಿದ್ದಾನೆ. ಧರ್ಮಜ ಪಣದಲ್ಲಿ ಅವಳನ್ನು ಸೋತ ಮೇಲೆ

ಅವಳು ಕೌರವನ ಸೊತ್ತು. ಅವಳನ್ನು ಕರೆತರಲು ಅತ ಪ್ರತಿಕಾಮಿಕನನ್ನು ಕಳುಹಿಸುತ್ತಾನೆ. ಪ್ರತಿ-ಕಾಮಿಕ ದ್ರೌಪದಿಗೆ ಧರ್ಮರಾಜನ ಸೋಲನ್ನು ಅರುಹಿ. ಕೌರವ ಅವಳನ್ನು ಕರೆತರಲು ಆಜ್ಞಾಪಿಸಿದುದನ್ನು. ಬಿನ್ನವಿಸುತ್ತಾನೆ. ಒಂದು ಕ್ಷಣ ದ್ರೌಪದಿಯ ಮನಸ್ಸು ಸೂರ್ಯಕಿರಣದ ಸೋಂಕಿಗೆ ಬಾಡುವ ಕನ್ನೈದಿಲೆಯಂತೆ ಬಾಡಿತು. ಹೀಗೆ ಮನಸ್ಸಿನ ಸ್ತಿಮಿತವನ್ನು ಕಾಯ್ದುಕೊಂಡು ಸೋತ ಬಗೆಯನ್ನು ವಿವರಿಸು ಎನ್ನುತ್ತಾಳೆ. ಮೊದಲು ಧನ, ಅಶ್ವ. ಆನೆ. ಇತ್ಯಾದಿಗಳನ್ನು ಸೋತ ನಂತರ ಅನುಜರನ್ನು, ನಂತರ ತನ್ನನ್ನು. ನಂತರ ದ್ರೌಪದಿಯನ್ನು ಪಣವಾಗಿಟ್ಟು ಸೋತುದನ್ನು ವಿವರಿಸುತ್ತಾನೆ. ಧರ್ಮರಾಜ ಸೋತ ರೀತಿಯನು ಯೋಚಿಸಿ, ಧರ್ಮ ಸೂಕ್ಷ್ಮದ ಪ್ರಶ್ನೆಯನ್ನು ಎತ್ತುತ್ತಾಳೆ. ಮೊದಲು ಧರ್ಮರಾಜ ತನ್ನನ್ನು ಸೋತ ಮೇಲೆ, ಬೇರೊಬ್ಬರನ್ನು ಪಣವಾಗಿಡುವ ಹಕ್ಕನ್ನು ಕಳೆದುಕೊಂಡಿದ್ದಾನೆ. ಈ ಧರ್ಮಸೂಕ್ಷ್ಮದ ನ್ಯಾಯವನ್ನು ಸಭೆಗೆ ತಿಳಿಸು ಅನಂತರ ಬರುತ್ತೇನೆ ಎನ್ನುತ್ತಾಳೆ. ದುರ್ಯೋಧನ ಅವಿವೇಕಿ, ಈ ಅವಿವೇಕಿಗಳ ಆಡಳಿತದ ತರ್ಕ ತನ್ನನ್ನು ರಕ್ಷಿಸುತ್ತದೆಯೆಂದು ಭ್ರಮಿಸುತ್ತಾಳಾಕೆ.

ದುರ್ಯೋಧನನಿಗೆ ದ್ರೌಪದಿಯ ಮಾತುಗಳನ್ನು ಕೇಳಿ ಕಾದ ಕಬ್ಬಿಣವನ್ನು ಮುಟ್ಟಿದಂತಾಯಿತು. ಅವಳನ್ನು ಎಳೆತರಲು ದುಶ್ಶಾಸನನನ್ನು ಕಳುಹಿಸಿದನು. ದುಶ್ಶಾಸನ ಗರ್ವದ ಮಾತುಗಳನ್ನಾಡುತ್ತ ಅವಳ ಸೀರಿಮುಡಿಗೆ ಕೈಹಾಕಿದನು. ಮುಡಿ ಬಿಚ್ಚಿ ಹೋಯಿತು. ಈ ಬಿಚ್ಚಿ ಹೋದ ಮುಡಿಯನ್ನು ದುಶ್ಶಾಸನನ ಕರುಳನ್ನು ಭೀಮ ತೆಗೆದು ಹಾರವಾಗಿ ಮುಡಿಸುವವರೆಗೂ ಕಟ್ಟುವುದಿಲ್ಲ. ಕೆಣಕಿದ ಸರ್ಪದಂತಾಗುತ್ತಾಳೆ. ಕೌರವ ದ್ರೌಪದಿಗೆ ಆಭರಣಗಳನ್ನು ತೆಗೆಯಲು ಹೇಳುತ್ತಾನೆ, ದುಶ್ಶಾಸನ ಸೆರಗಿಗೆ ಕೈ ಹಾಕುತ್ತಾನೆ. ದ್ರೌಪದಿ ತನ್ನ ಗಂಡಂದಿರ ಮುಖವನ್ನು ದೀನವಾಗಿ ನೋಡುತ್ತಾಳೆ. ಆ ನೋಟವನ್ನು ನೋಡಲಾರದೆ ಪಾಂಡವರೈವರ ಮುಖಗಳು ಅವಮಾನದಿಂದ ತಗ್ಗುತ್ತವೆ. ಕೈಹಿಡಿದ ಪತಿಗಳ ಎದುರಿನಲ್ಲೆ ಮಾನಭಂಗವನ್ನು ಸಹಿಸಿಕೊಂಡು ಸುಮ್ಮನಿರುವುದನ್ನು ಕಂಡು ಕೆರಳಿ ನುಡಿಯುತ್ತಾಳೆ–ಭೀಮಾರ್ಜುನಾದಿಗಳು ರೊಚ್ಚಿಗೇಳುವುದನ್ನು ಕಂಡ ಧರ್ಮರಾಜ ತಾಳ್ಮೆ ಕಳೆದುಕೊಳ್ಳದಂತೆ ಕಣ್ಸನ್ನೆ ಮಾಡುತ್ತಾನೆ. ಅದನ್ನು ಕಂಡ ದ್ರೌಪದಿ ಕೋಪದಿಂದ ಕುದಿಯುತ್ತಾಳೆ.ಮುಂದೆ ಭೀಮನ ಗದಗದಿಸುವ ಬೆಂಕಿಗೆ ತುಪ್ಪವನ್ನೆರದಂತೆ ಅವನಿಂದ ತನ್ನ ಅಪಮಾನದ ಸೇಡನ್ನು ತೀರಿಸಿಕೊಳ್ಳಲು ಬಯಸುತ್ತಾಳೆ. ಭೀಮನಿಂದ ಪ್ರತಿಜ್ಞೆ ಮಾಡಿಸುವುದರ ಮೂಲಕ ಅಧರ್ಮದ, ಅನ್ಯಾಯದ ವಿನಾಶಕ್ಕೆ ಕಾರಣಳಾಗುತ್ತಾಳೆ.ಸೌಮ್ಯ ಪ್ರಕೃತಿ ಮುನಿದಾಗ ತನ್ನ ಪ್ರಚಂಡ ಭಯಂಕರ ಸ್ವರೂಪವನ್ನು ತೋರಿಸುವಂತಿದೆ . ದ್ರೌಪದಿಯ ಸ್ವಭಾವ.

ವಿರಾಟ ಪರ್ವದಲ್ಲಿ ಬಂದು ಕೀಚಕನ ವಧೆಯ ಪ್ರಸಂಗ ಪಾಂಡವರ ಜೀವನದಲ್ಲಿ ಮುಖ್ಯವಾದ ಸಂಗತಿ. ಧರ್ಮರಾಜನ ಅನುಜ್ಞೆಯಿಲ್ಲದೆ ಯಾವ ಕಾರ್ಯವನ್ನು ಮಾಡದ ಭೀಮನಿಂದ ಕೀಚಕನ ವಧೆಯನ್ನು ಮಾಡಿಸುತ್ತಾಳೆ.

ಪಾಂಡವರು ಒಂದು ವರ್ಷದ ಅಜ್ಞಾತವಾಸವನ್ನು ಕಳೆಯಲು ವಿವಿಧ ವೇಷಗಳನ್ನು ತೊಟ್ಟು ವಿರಾಟನ ಆಸ್ಥಾನಕ್ಕೆ ಬರುತ್ತಾರೆ. ದ್ರೌಪದಿ ಸೈರಂಧ್ರಿಯ ವೇಷತೊಟ್ಟು ಸುದೇಷ್ಣೆಯ ಬಳಿ ಬೀಡು ಬಿಡುತ್ತಾಳೆ. ಸುದೇಷ್ಣೆಯ ತಮ್ಮ ಕೀಚಕನ ದೃಷ್ಟಿಗೆ ಸೈರಂಧ್ರಿಯ ರೂಪ ತಾರಾಸಮೂಹದಲ್ಲಿ ರೋಹಿಣಿಯನ್ನು ಕಂಡಂತೆ ಆಗುತ್ತದೆ. ಕಾಮ-ಶರದಿಂದ ಅವಳನ್ನು ಸನ್ನೆಡೆಗೆಳೆಯಲು ಪ್ರಯತ್ನಿಸುತ್ತಾನೆ. ನಿಸ್ಸಹಾಯಕಳಾಗಿ ದ್ರೌಪದಿ ವಿರಾಟನ ಆಸ್ಥಾನಕ್ಕೆ ನುಗ್ಗಿ ಅವನಲ್ಲಿ ರಕ್ಷಣೆ ಕೇಳುತ್ತಾಳೆ. ಧರ್ಮರಾಜ ರೊಚ್ಚಿಗೆದ್ದ ತನ್ನ ತಮ್ಮಂದಿರನ್ನು ಸುಮ್ಮನಿರಿಸಿ, ಅದು ಸ್ತ್ರೀಯ ಕರ್ಮ ವಿಪಾಕವಾದುದರಿಂದ ಅನುಭವಿಸಲು ಹೇಳುತ್ತಾನೆ. ಅಂದು ಸೂರ್ಯದೇವ ಅದೃಶ್ಯನಾಗಿ ಬಂದು ಕೀಚಕನನ್ನು ಒದೆದು ಕಾಟವನ್ನು ತಪ್ಪಿಸುತ್ತಾದೆ.

ತನ್ನ ಈ ಮಾನಹಾನಿಯ ಸಂಕಟವನ್ನು ಯಾರಿಗೆ ಹೇಳುವುದು? ಧರ್ಮರಾಜನಿಗೆ ಧರ್ಮದ ಗರ ಹೊಡೆದಿರುವುದು. ಅರ್ಜುನನಿಗೆ ಮಮತೆಯಿದ್ದರೂ

ತಮ್ಮಣ್ಣನ ಆಜ್ಞೆಯ ನೆನಪಿದೆ. ಇನ್ನು ಮುಂದೆ
ಭೀಮನೆ ಸರಿ. ಅವನೂ ಇದಕ್ಕೆ ಕರೆಗೊಡದಿದ್ದರೆ
ವಿಷಪಾನ ತನಗೆ ಗತಿಯೆಂದು ನಿಶ್ಚಯಿಸಿ, ಆ ದಿನ
ರಾತ್ರಿ ದ್ರೌಪದಿ ಬಾಣಸನ ಮನೆಗೆ [illegible]
ದಿನದ ಆಯಾಸದಿಂದಾಗಿ ಬಳಲಿ ನಿದ್ರೆಯಲ್ಲಿರು
ತ್ತಾನೆ ಭೀಮ. ದ್ರೌಪದಿ ಅವನನ್ನು [illegible]
[illegible] ತನ್ನ ಮನದ [illegible]
ಕೊಳ್ಳುತ್ತಾಳೆ. [illegible]
[illegible] ಅವಳಿಗೆ ಕಷ್ಟ ಬರುತ್ತಿರುವದೆಂದು
ಅವನು ದ್ರೌಪದಿಗೆ ಆಶ್ವಾಸನೆಯೀಯುತ್ತಾನೆ.
ಅವನ ರೀತಿಯನ್ನು ಕಂಡು ಮನಸ್ಸು ರೋಸಿ
ಹೋಗಿ. "ನೀವು ಐದು ಜನ ಒಬ್ಬಳಾದ ನನ್ನನ್ನು
ಆಳಲಾರಿರಿ, ಅಪಕೀರ್ತಿಗೆ ಅಳುಕಲಾರಿರಿ, ವ್ಯರ್ಥ
ಕೂಳಿಗಾಗಿ ಒಡಲನ್ನು ಹೊರೆಯುತ್ತಿರುವಿರಿ.
ಸಾಯುವ ನಾನು ನಿಮಗಂಜಲೇಕೆ?" ಎಂದ
ರಚುತ್ತಾಳೆ. ಇಷ್ಟಾದರೂ ಭೀಮ ಯಾವ ಪ್ರತಿ
ಕ್ರಿಯೆಯನ್ನು ತೋರಿಸುತ್ತಿಲ್ಲ. ಕಲ್ಲಿದೆಯು ಅವನ
ಮನವನ್ನು ಯಾವ ಎಳೆಯಿಂದ ಕರಗಿಸಲಿ ಎಂದು
ಯೋಚಿಸಿ, "ಭೀಮ ಸಾವಿನ, ಅಣತಿಯನ್ನು
ಕೊಟ್ಟು ಬಿಡು, ನಿಮ್ಮಣ್ಣನ ಆಜ್ಞೆಯಲ್ಲಿ ನೀವು
ಆರಾಮವಾಗಿ ಬದುಕಿ. ಸಿಟ್ಟಿನಿಂದ ನಾನು ನುಡಿ
ದಿರುವದನ್ನು ಮರೆತು ಬಿಡು." ಎಂದು ಅವನ
ಚರಣಗಳಿಗೆ ಎರಗಿದಳು. ದ್ರೌಪದಿಯ ಒಂದೊಂದು
ಮಾತು ಭೀಮನ ರೋಷದ ಕಿಡಿಯನ್ನು ಹೊತ್ತಿ
ಸುತ್ತಿದೆ. ದುರ್ಯೋಧನನ ಊರುಭಂಗ, ದುಶ್ಶಾ
ಸನನ ಕರುಳನ್ನು ಬಗೆಯುವ ಪ್ರತಿಜ್ಞೆಯನ್ನು
ಪ್ರಚೋದಿಸಿದಂತೆ, ಕೀಚಕನ ವಧೆಗೆ ದ್ರೌಪದಿ
ಪ್ರಚೋದನೆ ಕೊಡುತ್ತಾಳೆ. ಮಾನರಕ್ಷಣೆಗಾಗಿ
ಬಂದ ತನ್ನ ತರುಣಿಯನ್ನು ಹಿಡಿದೆತ್ತಿ, ಕಂಬನಿ
ಒರೆಸಿ ಇಂದು ಧರ್ಮಜನ ಅನುಜ್ಞೆಯನ್ನು
ಮೀರುತ್ತೇನೆ ಎಂದು ದ್ರೌಪದಿಗೆ ಮಾತುಕೊಟ್ಟು
ಕೀಚಕ ಸಂಹಾರ ಮಾಡುತ್ತಾನೆ ಭೀಮ.

ಇಷ್ಟು ಕಠೋರವಾಗಿ, [illegible] ಸ್ತ್ರೀ-
ಯಾಗಿ ಬರುವ ದ್ರೌಪದಿ ಅರಣ್ಯ ವಾಸದಲ್ಲಿ
ಬರುವ ದೂರ್ವಾಸ ಮುನಿಯ ಆತಿಥ್ಯ ಪ್ರಸಂಗದಲ್ಲಿ
ಅವಳು ನಡೆದುಕೊಳ್ಳುವ ರೀತಿ. ಧರ್ಮಜನಿಗೆ
ಸಲಹೆಕೊಡುವ ಬಗೆಯನ್ನು ಗಮನಿಸಿದರೆ ಈ
ದ್ರೌಪದಿ ವಿನಯಶೀಲೆ. ಕಷ್ಟಗಳು ಎದುರಾದಾಗ
ನಿಭಾಯಿಸುತ್ತ ಕೂಡುವ ಸ್ತ್ರೀಯಲ್ಲಿ [illegible] ಅಂತ
ಹೊಳೆಯುತ್ತದೆ.

ಸಮಗ್ರ ಮಹಾಭಾರತದ ಕಥೆಯ [illegible]
ಪ್ರಚೋದಕ ಶಕ್ತಿಯಾಗಿರುವ ದ್ರೌಪದಿ [illegible]-
[illegible], ರಾಜಕುಮಾರಿ, ಕ್ಷಾತ್ರಕನ್ಯೆ, [illegible].
ಈ ಕ್ಷಾತ್ರ ಕನ್ಯೆಯ ಸಮಯೋಚಿತವಾದ ಮಾತು
ನಡವಳಿಕೆ ಮಹಾಭಾರತದ ಕಥೆಯ [illegible]
ಬದಲಿಸುತ್ತದೆ. ಸಂದರ್ಭಕ್ಕೆ ತಕ್ಕುದಾದ ರೀತಿಯಲ್ಲಿ
ತನ್ನನ್ನು ತಾನು ಹಿಗ್ಗಿಸಿಕೊಂಡು ನಡೆಯುತ್ತ
ಬರುವ ದ್ರೌಪದಿಯ ಪಾತ್ರ ಹಿರಿಯದು. ಮಹಾ
ಭಾರತದ ಕಥಾಪ್ರವಾಹದಲ್ಲಿ ಅನೇಕಾನೇಕ ಪಾತ್ರ
ಗಳಿದ್ದರೂ ದ್ರೌಪದಿಯ ಹೆಸರು ಅವಿಸ್ಮರಣೀಯ
ವಾಗಿ ಉಳಿದು ಬಂದಿರುವುದಕ್ಕೆ ಕಾರಣ ಅವಳ
ಈ ವೈಶಿಷ್ಟ್ಯವೆ. ✡

**ಒಂದು ಕಾಡು. ಆ ಕಾಡಿನಲ್ಲಿ ವಾಸಿಸುತ್ತಿದ್ದ ಋಷಿಯೊಬ್ಬ, ವಿಪರೀತ ಮಾತ-
ನಾಡುವ ಗಿಳಿಯೊಂದನ್ನು ಸಾಕಿಕೊಂಡಿದ್ದ. ಋಷಿಗಳು ಜನಗಳಿಗೆ ಕೊಡುತ್ತಿದ್ದ
ಉಪದೇಶಗಳನ್ನೆಲ್ಲಾ ಗಿಳಿ ಉರುಹಚ್ಚಿಕೊಂಡಿತ್ತು. ಋಷಿಗಳು ಆಶ್ರಮದಲ್ಲಿಲ್ಲದಿದ್ದಾಗ
ಬಂದ ಜನಗಳಿಗೆ, ಗಿಳಿ ತಾನು ಋಷಿಗಳಿಂದ ಕಲಿತ ಬಾಯಿಪಾಠವನ್ನು ಒಪ್ಪಿಸು
ತ್ತಿತ್ತು. ತನ್ನ ಸ್ವಂತಿಕೆಯ ಏನನ್ನೂ ಹೇಳದ ಈ ಗಿಳಿಗೆ ಅದು ಏಕೋ ದುರಹಂಕಾರವು
ಹೆಚ್ಚಿ, ತಾನೊಬ್ಬ ಮೇಧಾವಿ, ಗುರುಗಳಿಗಿಂತಲೂ ಉತ್ತಮವಾದ ಬುದ್ಧಿಜೀವಿ,
ಎಂದು ಬಂದವರ ಹತ್ತಿರ ಹೇಳಹತ್ತಿತು. ಗಿಳಿಯ ಅಹಂಕಾರದ ನುಡಿಗಳನ್ನು ಕೇಳಿ
ಕೋಪಗೊಂಡ ಋಷಿಯು, "ಬಂದವರೆಲ್ಲರಿಗೂ ಹೇಳಿದ್ದನ್ನೆ ಹೇಳುತ್ತಿರುವ ಕಿಸು
ಬಾಯಿ ಗಿಳಿಯೆ, ಹಾಳಾಗಿ, ಎಲ್ಲಿಯಾದರೂ, ಯಾವುದಾದರೂ ಕಾಲೇಜಿನ ಅಧ್ಯಾಪಕ
ನಾಗು ಹೋಗು," ಎಂದು ಶಾಪವಿತ್ತ !**

-ಭರತ

ಹಾಂ! ದೇವಿ ದೊಡ್ಡಾಕೆ



ನೀ. ಕೃ. ರಾಮಶೇಷ

ಜಿ[illegible] ಒಂದು ಕಡಲ ಗರ್ಭದಲ್ಲಿ ತನ್ನ ಗುರಿ ತಲುಪಲು ಸೋತಿತ್ತು! 'ಕಿನಾಬಾಲು ಸಾಟು' ನೌಕೆಯಲ್ಲಿ. ತೊಂದರೆ ಕಾಣಿಸಿದ್ದು [illegible]ರ ಅಕ್ಟೋಬರ್ ಸೋಮವಾರ ೨೭ ರಂದು. ಭಾರವಾದ ದಿಮ್ಮಿ, ಇತರ ಮರ-ಮುಟ್ಟುಗಳನ್ನು ಹೊತ್ತ ಆ ನಾವೆ ಉತ್ತರ ಬೋರ್ನಿಯೋದಿಂದ ಸಾಬಾಕ್ಕೆ ಹೋಗಬೇಕಿತ್ತು: ಹಡಗಿನಲ್ಲಿ ಒಟ್ಟು ಸರಕಿನ ತೂಕ ೬.೨೫೫ ಟನ್‌ಗಳಷ್ಟು. ಕಡಲ ನಡುವೆ ನೌಕೆ, ಇದ್ದಕ್ಕಿದ್ದಂತೆ, ಸ್ವಲ್ಪ ಬಲ ಪಕ್ಕಕ್ಕೆ ವಾಲಿಬಿಟ್ಟಿತು! ಮೂವತ್ತಾರು ವರ್ಷ ಪ್ರಾಯದ ಕ್ಯಾಪ್ಟನ್ ಫುಟೊ-ವಾಷ್ ಕೂಡಲೆ ತನ್ನವರಿಗೆ ಆಣತಿ ಮಾಡಿದ—"ನಿಲುಭಾರ ಹಾಕಿರಿ, ಮೊದಲು ನಾವೆ ಸುಸ್ಥಿರ ಆಗಲಿ...ಒಂದಿಷ್ಟು ಮರವನ್ನು ಸಮುದ್ರಕ್ಕೆ ಎಸೆದುಬಿಡಿರಿ, ತೂಕ ಸ್ವಲ್ಪ ಕಡಿಮೆ ಆದರೆ, ಒಳಿತಾದೀತು." ಎಂದು. ಸುತ್ತ ಮುತ್ತ ಬಂದು ಮೊರೆವ ನೀಲ ಕಡಲು! ಅಪ್ಪಳಿಸಿ ಬರುತ್ತಲಿದ್ದ ಘೀಂಕೃತಿ! ಮಧ್ಯ ತೋರಬೇಕೆ ಈ ಕುತ್ತು? ಈ ಎಚ್ಚರಿಕೆಯ ಕ್ರಮಗಳಿಂದಲಾದರೂ ಹಡಗು ತನ್ನ ಸಮತೋಲ ಸ್ಥಿತಿಗೆ ಬಂದೀತೆಂದು ಕಪ್ತಾನನ ಎಣಿಕೆ. ಅದು ಸಹ ತಪ್ಪೆಂದು ಕ್ಷಿಪ್ರದಲ್ಲಿಯೇ ಅವನಿಗರಿವಾಯಿತು. ಹಡಗಿನ ಸಿಬ್ಬಂದಿಯವರ ಯಾವುದೇ ಪ್ರಯತ್ನವೂ ಆ ದಿಸೆಯಲ್ಲಿ ಸಾರ್ಥಕ ಆಗಲಿಲ್ಲ. ಮರುದಿನ ಮುಂಜಾನೆಯ ವೇಳೆಗೆ ಪರಿಸ್ಥಿತಿ ಇನ್ನೂ ಹದಗೆಟ್ಟಿತು. ಹಡಗು ೧೦ ಅಂಶಗಳಷ್ಟು ಎಡ ಪಕ್ಕಕ್ಕೆ ವಾಲುವ ಹಾಗೆ ತೋರಿ ಬಂದಿತು. ಈಗಾಗಲೇ ಹಡಗು ಕಡಲೊಳಕ್ಕಿಳಿಯುತ್ತಿತ್ತು...!- ಇದರ ಜೊತೆಗೇ ಹಡಗನ್ನು ಮತ್ತೂ ಕೆಳಕ್ಕೆ ದಬ್ಬುವಂಥ ಆಗ್ನೇಯ ದಿಕ್ಕಿನ ಕಡಲ ಚಂಡಮಾರುತ 'ಫ್ಲಾಸೀ' ಬೇರೆ! ಅದರ ಹೊಡೆತ, ನೌಕೆಯನ್ನು ಕಡಲ - ತಳಕ್ಕೆ ನೂಕುವಂತಿತ್ತು! ಹಡಗು ಅತ್ತಿತ್ತ ತೂಗುತ್ತಿತ್ತು!

ಹಡಗಿನ [illegible] ಟ್ರಿ[illegible]ಲಿಂಗ್ [illegible] ತ್ರಲಿ [illegible] ಅಧಿಕಾರಿಯಾದ ಚಾನ್ [illegible] ಹನ್ನನನ್ನೆ ಹಿಂಬಾಲಿಸುತ್ತ ಕಪ್ತಾನನ ಕ್ಯಾಬಿನ್ನಿನೊಳಹೊಕ್ಕು, ಒಂದು ತುರ್ತು ಎಸ್. ಓ. ಎಸ್. (Save Our Soul ಕಷ್ಟ ಸ್ಥಿತಿಯಲ್ಲಿ ಸಹಾಯವನ್ನು ಕೋರುವ ಸಂದೇಶ) ಕಳಿಸಬೇಕೆಂದು [illegible] ಪ್ರೇರೇಪಿಸಿದ. ಹಡಗಿನ ಒಡೆಯನ ಹತ್ತಿರ ಈ ಪರಿಸ್ಥಿತಿಯನ್ನು ತಿಳಿಸುವುದೆಂತು? [illegible] ವಿಚಾರವೆ. ಅವನ [illegible] ಪ್ರದಿರಲಿ. ಒಲಿಸುವುದೆಂತು? ಆದರೆ, ಅವನ ಇತರ ಸಂಗಡಿಗರನ್ನು, ಜೀವಸಹಿತ ಕರೆದೊಯ್ಯುವ ಹೊಣೆ! ಅದನ್ನು ಚಾನ್, ಕಪ್ತಾನನಿಗೆ [illegible] ನಿವೇದಿಸಿದ. ಕಪ್ತಾನನ ಉತ್ತರ ನಿರೀಕ್ಷೆಗೂ ಮೀರಿ ಗಡಸಾಗಿತ್ತು. "ನಾನು ಈ ಹಡಗಿನ ಕ್ಯಾಪ್ಟನ್ ತಿಳಿಯಿತೇನು? ಯಾವಾಗ ಎಸ್. ಓ. ಎಸ್. ಅವಶ್ಯಕವೆಂಬುದನ್ನು ನಾನು ನಿರ್ಧರಿಸುತ್ತೇನೆ." ಇದನ್ನು ಕೇಳಿಸಿಕೊಂಡ ತರುಣ ಪಿಂಗ್ ಮರಳಿದ, ತನ್ನ ಪುಟ್ಟ ಕೋಣೆಗೆ. [illegible] ಗಿ. ಅದರತ್ತ ಗಮನವಿತ್ತು. [illegible] ವಹಿಸುವುದನ್ನು ತಪ್ಪಿಸಲಿಲ್ಲ.

ಒಂದು ಗಂಟೆಗೆ ೬೫ ಕಿಲೋಮೀಟರಿನ ವೇಗದಲ್ಲಿ ಬಲವಾದ ಫ್ಲಾಸಿ ಚಂಡಮಾರುತ ಬಂದು ಮತ್ತೆ ಅಪ್ಪಳಿಸಿದಾಗ ಸುಮಾರು ೧೦ ಘಂಟೆ ಸಮಯ. ಆ ಬಿರುಗಾಳಿಯ [illegible] ವೇಗಕ್ಕೆ 'ಕಿನಾಬಾಲು ಸಾಟು' ಮುಳುಗಲಾರಂಭಿಸಿತು. ೧೨ ಮೀಟರಿನಷ್ಟು ಎತ್ತರದ ತೆರೆಗಳು ಅಪ್ಪಳಿಸಿದವು. ಆ ತೆರೆಗಳ ದೈತ್ಯಶಕ್ತಿಗೆ ಸಿಕ್ಕ, ಹಡಗು ಮತ್ತೆ ತೂಗಾಡಿತು. ಬಲಭಾಗಕ್ಕೆ ೨೫ ಅಂಶಗಳಷ್ಟು ಮತ್ತೂ ವಾಲಿತು. ಹಡಗಿನಲ್ಲಿದ್ದ ಭಾರದ ಮರದ ದಿಮ್ಮಿಗಳು, ಕೊರಡು, ಇನ್ನೂ ವಾಲಿದುವು. ಕ್ಯಾಪ್ಟನ್ 'ಫು' ಗೆ ಇದೀಗ ಗಾಬರಿ ತೋರಿತು! ಅದು ಅವನೊಬ್ಬನಿಗೋಸುಗ ಮಾತ್ರವಲ್ಲ, ಉಳಿದ ಅವನ [illegible]! ಕೂಡಲೆ ಅವನು ಹಾಂಗ್‌ಕಾಂಗ್ ನಗರದ, ಅವನ ಏಜಂಟನಿಗೆ ರೇಡಿಯೊ ವರದಿ ಕಳಿಸಿದ: "ಕಿನಾಬಾಲು ಸಾಟು ಅಪಾಯದಲ್ಲಿದೆ!!" ಕಂಪನಿಯ ಸಹಾಯದಿಂದ ತಕ್ಷಣವೇ ಹಡಗುಗಳನ್ನೆಳೆಯುವ ಒಂದು ಬಲವಾದ ಅಪಿದೋಣಿಯನ್ನು ಹಾದಿಗೆ [illegible] ಕೊಂಡು ಅಪಾಯ [illegible] ಇದ್ದ [illegible] ತಿರುಗಿಸಲಾಯಿತು. ಕಡಲ ಗರ್ಭದಲ್ಲಿ [illegible] 'ಕಿನಾಬಾಲು ಸಾಟು'ವಿನ ಸುತ್ತಮುತ್ತಣ ಪರಿಸರದಲ್ಲಿ ಪಯಣಿಸುತ್ತಿದ್ದ ಇತರ ನೌಕೆಗಳಿಗೂ ಏಜಂಟನು ವರದಿ ಕಳಿಸಿದ —"ಕಡಲ ನಡುವೆ 'ಕಿನಾಬಾಲು ಸಾಟು' ಅಪಾಯದ ಹಾತ [illegible]

ಬಿಟ್ಟೆ. ದಯವಿಟ್ಟು ಅದರ ನೆರವಿಗೆ ಕೂಡಲೆ ಧಾವಿಸಬೇಕು" ಎಂದು.

ಗಂಟೆ ೧೭–೩೫ರ ಸಮಯ. ಕಪ್ತಾನ ಫು ತನ್ನ ಇಪ್ಪತ್ತೊಂಭತ್ತು ನೌಕಾ ಸಿಬ್ಬಂದಿಯ ವರ್ಗಕ್ಕೆ ಅಪ್ಪಣೆ ಮಾಡಿದ. "ಎಲ್ಲರೂ ಹಡಗಿನ ಬಲಪಕ್ಕದಲ್ಲಿರುವ ದೋಣಿಗೇರಿರಿ," ಅವರಲ್ಲಿ ೧೩ ಜನ ಚೀನೀಯರು, ೧೬ ಜನ ಫಿಲಿಪೀನರು...... ನಾವಿಕ ನೌಕರರೆಲ್ಲರೂ, ಒಬ್ಬೊಬ್ಬರಂತೆ, ಸುಮಾರು ೪.೫ ಮೀಟರ್ ಇದ್ದ ಲೈಫ್‌ಬೋಟ್‌ಗೇರಿದರು. 'ಕಿನಾಬಾಲು ಸಾಟು' ಕಡಲಾಳದ ಗೋರಿಗಿಳಿಯಿತು.

ಭೋರ್ಗರೆಯುವ ನೀಲ ಕಡಲು! ಎತ್ತರದ ತೆರೆ ಸಾಲು! ಅವರ ಆ ದೋಣಿಯತ್ತ ಅಪ್ಪಳಿಸಿ ಚೂರು ಚೂರು ಮಾಡುವಂತೆ ತೋರುತ್ತಿತ್ತು. 'ಫೊಂಗ್–ಯುಯ್–ಮಿನ್' ಎಂಬಾತ, ಒಬ್ಬ ಇಂಜನೀಯರ್, ಬೀಸುತ್ತಿದ್ದ ಗಾಳಿಯತ್ತ ದೋಣಿಯನ್ನು ಅತಿ ಪ್ರಯಾಸದಿಂದ ತಿರುಗಿಸಲು ಪ್ರಯತ್ನಪಟ್ಟ. ಕ್ಯಾಪ್ಟನ್ ಫು ಪುನಃ ಒಂದು ತುರ್ತು ತಂತಿ ಸಂದೇಶವನ್ನು ಕಳಿಸಿದ. ಆದರೆ ರೇಡಿಯೊ ವರದಿಗಾರನಿಗೋ ಆ ಸುದ್ದಿ ತಲುಪಲೇ ಇಲ್ಲ! ಫು ಮತ್ತೆ ಮರಳಿ ಕೇಳಿಸಿದ, ದೋಣಿಯ ರೇಡಿಯೊ ಯಂತ್ರದ ಅಕ್ಷದಲ್ಲಿ ಅದರ ಸಮು ಕೋನಕ್ಕೆ ಹಾಗುವ 'ಹ್ಯಾಂಡಲ್'ಅನ್ನು ತಿರುಗಿಸಿ ತಿರುಗಿ.. ಆಸ್ತಾಗಲೂ ಒಡೆದು. ಸಡಿಲಾದುದನ್ನು ಫು ನ ಎಲ್ಲ ಯತ್ನವೂ ನಿಷ್ಫಲವಾಯಿತು!

ಕಡಲಗರ್ಭ ಸೇರಿದ 'ಕಿನಾಬಾಲು ಸಾಟು'ವನ್ನು ತೊರೆದು. ಹಾಗೂ ಹೀಗೂ ಸಾಗುತ್ತಿದ್ದ ದೋಣಿಯ ಇಂಜಿನ್ನಿನಲ್ಲಿ ಕೂಡ ಡೀಸೆಲ್ ಎಣ್ಣೆ ಮುಗಿದು ಹೋಗಬೇಕ? ಇದೂ ಒಂದು ದುರ್ದೈವ ಅವರ ಪಾಲಿಗೆ! ಇನ್ನು ಆ ಅನಿರೋಧಿತ ನಿದ್ದರೂ, ಕಡಲ ಮುಂಜಾ–ಚಂಡಮಾರುತ ದೈವದ ಇಚ್ಛೆಗೆ ಬಿಟ್ಟದ್ದು, ಅಷ್ಟೆ!! ದೋಣಿಯಲ್ಲಿನ ನೀರನ್ನು ಎತ್ತಿ ಹಾಕುವ ಕೆಲಸ ಅಂಥದೇನೂ ನಂಬಿಕೆ ತರುವಂಥದಾಗಲಿಲ್ಲ. ಜೀವ ಉಳಿಯುವ ಆಶೆ–ನಂಬುಕೆಗಳು ಸಡಿಲಾದುವು. ರಾತ್ರಿಯ ಕಪ್ಪು ಸೆರಗು ಸರಿಯುತ್ತಿದ್ದಂತೆ ದೈತ್ಯಾಕಾರದ ತೆರೆಯೊಂದು ಎದ್ದು ಆ ದೋಣಿಯ ಅಷ್ಟಗಲಕ್ಕೂ ವ್ಯಾಪಕವಾಗಿ ಬಡಿಯಿತು. ದೋಣಿಯು ತಲೆಕೆಳಗಾಯಿತು. ಒಂದು ಕ್ಷಣ! ಆಗ ಕಿನ್‌ಮಿಂಗ್ ದೇಗೋ ಪ್ರಯತ್ನಿಸಿ ಬಹು ಕಷ್ಟದಿಂದ, ತಲೆಕೆಳಗಾದ ದೋಣಿಯ ಒಂದು ಭಾಗವನ್ನು ಒಂದು ಕೈಯಿಂದ ಶಕ್ತಿಯಿದ್ದಷ್ಟೂ ಬಲವಾಗಿ ಹಿಡಿದುಕೊಂಡ. ಮತ್ತೊಂದು ಕೈಯಿಂದ, ತನ್ನ ಆಪ್ತನಾದ, ಮುಖ್ಯಾಧಿಕಾರಿ ಜಾನ್‌ನನ್ನು ಹಿಡಿದುಕೊಂಡ.

ದೀರ್ಘವಾದ ಆ ರಾತ್ರಿ, ಭಯಾನಕ ಆಯಿತು ಅವರ ಪಾಲಿಗೆ! ರಾತ್ರಿ ಪೂರ್ತಿ ಕಿನ್‌ಮಿಂಗ್, ತನ್ನ ಮನಸ್ಸಿನ ದೃಢತೆ, ಶರೀರದ ಶಕ್ತಿಯನ್ನೆಲ್ಲ ಉಪಯೋಗಿಸಿ ಹಾಗೆಯೇ ಕಳೆದ. ಮುಂಜಾವಿನ ಮಸುಕು ಬೆಳಕು ತೋರುತ್ತಿದ್ದಂತೆ ಅವನಿಗೆ ತನ್ನ ಮಗ್ಗುಲಲ್ಲೆ ತೇಲುವ ಹೆಣ ಕಂಡಿತು! ಅದು ಎಂಜಿನೀಯರ್ ಫೊಂಗ್‌ನ ಜರ್ಜರಿತ ಶರೀರ! ಹಾಗೂ ಹೀಗೂ, ಹಡಗಿನ ನೌಕರ ವರ್ಗದ ಪೈಕಿ, ಇನ್ನೂ ಹದಿನೇಳು ಜನ ಮರೆಯಾಗಿದ್ದರು. ಕ್ಯಾಪ್ಟನ್ ಫು ನಾಪತ್ತೆಯಾಗಿದ್ದ



" ಎಷ್ಟು ಸಾರಿ......ಕೇಳ್ತಾ ಇರಿ...... ಎರಡು ಘಂಟೆಯಿಂದ ಹೇಳ್ತಾನೇ...... ಇದ್ದೀನಲ್ರೀ...ಮೂರು ಘಂಟೆಗೆ ಬರೋ ಬಸ್ಸು ಐದು ನಿಮಿಷದಲ್ಲಿ ಬರುತ್ತೆ ಅಂತ..."

೯ ಘಂಟೆಯ ವೇಳೆಗೆ ಜಾನ್, ತನ್ನ ಉಳಿದ ಇತರ ಸಂಗಡಿಗರಿಗೆ ದೋಣಿಯನ್ನು ಮತ್ತೆ ಸರಿ [illegible] ಸ್ಥಿತಿಗೆ [illegible]. ಅವ ರೆಲ್ಲ ತುಂಬ ಸಾಹಸದಿಂದ ಪುನಃ ಪ್ರಯತ್ನಿಸಿ ದರು. ಇನ್ನೂ ಆ ಪ್ರಯತ್ನದ ಆಸೆಯನ್ನು ಇನ್ನೇನು ಬಿಟ್ಟು ಬಿಡಬೇಕು ಎನ್ನುವಷ್ಟರಲ್ಲಿಯೇ ಬೇರೊಂದೆಡೆಯಿಂದೆದ್ದು ಬಂದ ದೊಡ್ಡ ತರೆ ಯೊಂದು ಅವರ ಸಹಾಯಕ್ಕ ಬಂತು! ಅಪ್ಪಳಿಸಿ ದೋಣಿಯನ್ನು ಮತ್ತೆ ಅದರ ಸಮತೋಲ ಸ್ಥಿತಿಗೆ ತಂದುಬಿಟ್ಟಿತು! ಆಗ ಉಳಿದಿದ್ದವರು ಹದಿನೈದು ಜನ ಮಾತ್ರ! ಅವರುಗಳೇ ಹೇಗೋ [illegible] ಹೋಗಿದು, ಅಚೆ ಚೆಲ್ಲುವ ಕಾರ್ಯದಲ್ಲಿ ತೊಡಗಿದರು. ಇನ್ನು ಕೆಲವರು, ಆ ಅಪಿದೋಣಿ ಯ ಆಹಾರಸಂಗ್ರಹ ಮಾಡುವ ಸಣ್ಣ ಒಳ ಕೋಣೆಗಳನ್ನು ಹುಡುಕಿದರು, ತಿನ್ನಲು ಏನಾ ದರೂ ದೊರೆತೀತೆ ಎಂಬಾಸೆಯಿಂದ. ಅವರ ಆಶೆ ಫಲಿಸಿತು! ಆ ಒಳಕೋಣೆಗಳಲ್ಲಿ ಅವರಿಗೆ ೨೦ ಟಿನ್ ಭರ್ತಿ ಕುಡಿಯುವ ನೀರು, ಒಂದು ದೊಡ್ಡ ಡಬ್ಬದ ತುಂಬ ಬಿಸ್ಕಿಟ್, ಎರಡು ಟಿನ್ನು ಗಳಷ್ಟು ಸಕ್ಕರೆ ಮಿಠಾಯಿ ದೊರಕಿತು!! ಜೀವ [illegible] ಅವು ಸ್ವಲ್ಪ ಶಮನ ಮಾಡಿದವು. ಮತ್ತೆ ಆರಂಭ ಆಯಿತು, [illegible] ಭಯಂಕರ [illegible]!! [illegible] ಮೇಲಕ್ಕೆ [illegible]! [illegible] ೧೦೦ ಕಿ. ಮೀ. [illegible]! [illegible] ಮಿಂಗ್ ಹಾಗೂ ಹೀಗೂ ತನ್ನ ಶಕ್ತಿಯನ್ನೆಲ್ಲ ಉಪಯೋಗಿಸಿ. [illegible] ಯೊಳಗಡೆಯ ನಿಂತಿದ್ದ. ಒಂದು ನಿಮಿಷ ಉತ್ತರ ದಿಂದ ದೋಣಿಯನ್ನು ಹೊರಳಿಸುವಂಥ ಬಿರು ಗಾಳಿ! [illegible] ದಿಸೆಯಿಂದ ಬರುವ ಬಿರುಗಾಳಿಯ ಭೋರ್ರ್ರೋ... ...ಎಂಬ ಮೊರೆತ! ದೋಣಿಯಲ್ಲಿಯೂ ನಡು ಮಟ್ಟ ನೀರಿನಲ್ಲೇ ನಾವಿಕ ನೌಕರರು ಕುಳಿತಿ ದ್ದುದು! ಒಂದೊಂದು ಸಾರಿ ಜೋರಾಗಿ ಕುಲುಕಿ ದಾಗಲೂ, ಬೀಳುವ ಪೆಟ್ಟು ಬೇರೆ! ಅಲ್ಲಲ್ಲಿ [illegible] ಗಾಯಗಳು! [illegible]

ಅಪ್ಪಳಿಸುತ್ತಿದ್ದ ಕಡಲ ಉಪ್ಪುನೀರು ಆ ಗಾಯ ಗಳಿಗೆ ಬಡಿದು ಮತ್ತೂ ಕೆರಳಿಸುತ್ತಿತ್ತು!! ಇನ್ನು ಸಹಿಸುವ ಧೈರ್ಯ, ಮನಸ್ಸು ಬಂದೀತೆ! ಸನ್ನಿವೇಶ ಸ್ವಲ್ಪವೂ ಅನುಕೂಲ ಆಗಿರಲಿಲ್ಲ ಆ ಹತಭಾಗ್ಯರಿಗೆ!

ಅಂತೂ ಇಂತೂ ಆ ಅಪಿದೋಣಿಯಲ್ಲೆ, ನಾಲ್ಕು ದಿನಗಳನ್ನು ಅತಿ ಪ್ರಯಾಸದಿಂದ [illegible]. ಅಕ್ಟೋಬರ್ ೨೫ ರ ಶನಿವಾರ, ಸಂಜೆಯ ವೇಳೆಗೆ ಬಿರುಗಾಳಿಯೂ ಇಳಿಮುಖವಾಯಿತು. ಇದ್ದಕ್ಕಿ ದ್ದಹಾಗೆ, [illegible] ಕಿರುಚಿದ– "ಅದೋ ಅಲ್ಲಿ ! ಆ ಚಪ್ಪಟೆ ಕಾಣು [illegible]! [illegible] ಕೂಡಲೆ ಉಳಿದೆಲ್ಲ ನೌಕರರೂ ತಮ್ಮಲ್ಲಿದ್ದ [illegible] ಉನ್ಮತ್ತರಾಗಿ ಅಪಿಗೆಯವನೊಬ್ಬ ರೇಡಿಯೋದಿನ ಉಳಿದಿದ್ದೊಂದು ಹ್ಯಾಂಡಲ್ ಅನ್ನು ಗಟ್ಟಿಯಾಗಿ ತಿರುಗಿಸಿದ–ವಿದ್ಯುತ್ ಏನಾದರೂ ಉತ್ಪನ್ನವಾಗಿ, ಸಂದೇಶ ಕಳುಹಲಾದೀತೆ ಎಂದು ಪರೀಕ್ಷಿಸ ಲೋಸುಗ–ವಿಧಿಯ ವಿಡಂಬನ! ಅವನ ಎಲ್ಲ ರೀತಿಯ ಶ್ರಮವೂ ವಿಫಲವಾಗುವುದಿರಲಿ, ರೇಡಿ ಯೋವೇ ಅವು ತಪ್ಪಿ ಅವನ ಕೈಗಳಿಂದ ಜಾರಿ, ಕಡಲ ತಳ ಸೇರಿತು!

ಈ ಘಟನೆಯಿಂದ, ಹಡಗಿನಲ್ಲಿದ್ದ ಧಾಂಡಿಗ ಬಡಗಿಯೊಬ್ಬ ಹುಚ್ಚಾದ. ಅವನು ತನ್ನ ಮನಃ [illegible] ಹತೋಟಿಗೆ ತಂದುಕೊಳ್ಳುವಷ್ಟ [illegible] ಇಬ್ಬರನ್ನು ಹಾಗೂ ಆ ನಿರ್ಭಾಗ್ಯ [illegible] ಸಮುದ್ರಕ್ಕೆ ನೂಕಿದಾಗಿತ್ತು!! [illegible] ಗಳಲ್ಲಿ ಕಣ್ಮರೆಯಾದರು! ಪುನಃ [illegible] ಈಸಿ ಬರುವಷ್ಟು ತ್ರಾಣ [illegible] ಬಡಗಿಯ ಉನ್ಮತ್ತತೆಯೂ ಬಂದಂತೆಯೆ ತಗ್ಗಿ [illegible] ಅವ ತನ್ನಷ್ಟಕ್ಕೆ ತಾನೇ [illegible] ಗಾಜಿನಂತಾಗಿದ್ದ ತನ್ನ ದುರ್ಬಲ ಕಣ್ಣುಗಳ[illegible] ದುರುಗುಟ್ಟಿಕೊಂಡು ನೋಡುತ್ತ, [illegible] ಕುಸಿದು ಬಿಟ್ಟ!

ಆ ಎರಡು ದೋ[illegible] ಕಂಡುದೆ ನಿಜ [illegible]! ಅಂತೂ ಅವು ಪುನಃ [illegible]

ಗಳಿಲ್ಲದ ಜೀವಚ್ಛವದ ಹಾಗೆ ಕಾಣುತ್ತಿತ್ತು. ಅವನಿಗೆ ಗೊತ್ತು. ತಾನು ಪ್ರಜ್ಞೆಗೆಟ್ಟವನಾಗಿದ್ದೇನೆ ಎಂಬುದು. ತನ್ನ ಸನಿಹದಲ್ಲೆ ಹಡಗುಗಳು ತನ್ನ ದೃಷ್ಟಿಗೆ ಬಿದ್ದರೂ [illegible] ಹೋದಂತೆ ಅನಿಸುತ್ತಿತ್ತು. ಕೊನೆಗೆ ಅವನು [illegible] [illegible] [illegible] [illegible]! ಸೀಟಿಯ ಸಿಳ್ಳೆ ಕಡಲ ಕತ್ತಲ ಗರ್ಭದಲ್ಲಿ ಕರಗಿ ಹೋಗುತ್ತಿತ್ತು.

ಆನಂತರ ಒಂದು ಸಂತೋಷದ ಘಳಿಗೆ ಬಂದಿತವರಿಗೆ! ಅಗ್ಗೆ ತುರ್ತು ಪರಿಸ್ಥಿತಿಗೆ ಬೇಕಾಗಿದ್ದ ಅಗತ್ಯ ಸಲಕರಣೆಗಳನ್ನು ಹುಡುಕುವುದರಲ್ಲಿ ನಿರತನಾಗಿದ್ದ ಬೋಟ್ಸ್‌ವೆಯಿನ್ ಬಿಯೆನ್ [illegible] [illegible] [illegible] [illegible] [illegible] [illegible] ಹಾಲಿನ ಡಬ್ಬದ ಪೆಟ್ಟಿಗೆಯೇ ಕಂಡು ಬಂದಿತು. ಖುಷಿಯೇ ಖುಷಿ!! ಅಲ್ಲಿದ್ದ ಒಂದು ದೋಣಿ ಹುಟ್ಟಿನಿಂದಲೇ ಆ ಪೆಟ್ಟಿಗೆಯ ಮುಚ್ಚಳವನ್ನು ಹೆಕ್ಕಿ ತೆಗೆದ! ಪೆಟ್ಟಿಗೆ ತುಂಬ ಹಾಲಿನ ಡಬ್ಬಗಳು! ಅಲ್ಲಿದ್ದವರೆಲ್ಲರೂ ಆ ಡಬ್ಬಗಳನ್ನು [illegible] [illegible], [illegible] [illegible] ವಾಗಿದ್ದ ಆ ಹಾಲನ್ನು ಹೀರಿದರು. ಆದರೂ ಅವರಿಗೆ ನೀರಡಿಕೆಯೇನೂ ಹಿಂಗಲಿಲ್ಲ.

ಭಾನುವಾರ ಬೆಳಗ್ಗೆ ಕಿನ್‌ಮಿಂಗನಿಗೆ ತಿಳಿದು ಬಂದಿತು ಅಧಿಕಾರಿ ಚಾನ್ ನಾಪತ್ತೆಯಾಗಿರುವುದು! [illegible] [illegible] ಕತ್ತಲಲ್ಲಿ, ಹಾಗೆಯೇ ಆತ ಕಣ್ಮರೆಯಾಗಿದ್ದ. ಇನ್ನೊಬ್ಬ ಅಧಿಕಾರಿಯೂ ಪ್ರಜ್ಞೆ ಕಳೆದುಕೊಂಡು [illegible], ಒಂದು [illegible] ತೆರೆ ಆತನನ್ನು ನೀರಲ್ಲಿ ಕೊಚ್ಚಿಕೊಂಡು ಹೋಯಿತು.

[illegible] ಕಳೆಯಿತು. ಕಡಲಿನ ಅಬ್ಬರ [illegible] [illegible]ವಾಗಿದ್ದರೂ, ಸೂರ್ಯನು ಪೋಡ [illegible]. ತನ್ನ ಪ್ರಖರ ಕಿರಣಗಳನ್ನು ಬೀರಿ, [illegible]. ಈಗ, ಜೀವದೊಂದಿಗೆ ಉಳಿದವರು [illegible] [illegible] ಮಾತ್ರ. ಮಧ್ಯಾಹ್ನದ ವೇಳೆಗೆ [illegible]. [illegible] [illegible] ಹೊತ್ತು ಕಳೆಯುವುದರೊಳಗೆ ಇನ್ನಿಬ್ಬರು, ಹೀಗೆ ಮೂವರು ಅಸು ತೊರೆದರು.

ಸ್ವಲ್ಪ ಹೊತ್ತು ಕಳೆದ ನಂತರ, ಹಡಗಿನ ಮುಖ್ಯ ಪರಿಚಾರಕನಾದ 'ಮಾ' ಎದ್ದ, ಕಡಲ ಪಯಣದಲ್ಲಿ. ಆತ ಹತ್ತು ವರ್ಷಗಳಷ್ಟು ಅನುಭವ ಉಳ್ಳವ. ಆತ ನಿಧಾನವಾಗಿ ಎದ್ದು, ಕಿನ್‌ಮಿಂಗನಿಗೆ [illegible] [illegible] [illegible] [illegible] ತ್ತೇನಪ್ಪ" ಎನ್ನುತ್ತಾ ಕಡಲಿನೊಳಗೆ ಜಿಗಿದ.

ಉಳಿದವರು ಆರು ಜನ! ನಿಧಾನವಾಗಿ, ಹೇಗೊ ಪ್ರಯಾಸದಿಂದ ದೋಣಿಯನ್ನು ನಡೆಸುತ್ತ ಆ ರಾತ್ರಿಯನ್ನು ಕಳೆದರು. ಕಡಲು ಮತ್ತೆ ಪ್ರಸನ್ನ-ವಾಗತೊಡಗಿತ್ತು. ಕಿನ್‌ಮಿಂಗನು ಆಯಾಸದಿಂದ ಹಸಿವಿನಿಂದ, ಹಾಗೆಯೇ ಬಳಲಿದವನು, ಮೊದಲ ಬಾರಿಗೆ ದೀರ್ಘ ನಿದ್ರೆ ಮಾಡಿದ. ಹಲವು ದಿನಗಳಲ್ಲಿ ಇದು ಮೊದಲ ಸಲ! ಅಕ್ಟೋಬರ್ ೨೭. ಸೋಮವಾರ. ಮುಂಜಾನೆಯ ಮಂಜು ಅವನನ್ನು ಎಚ್ಚರಿಸಿದಾಗ, ಅವನು ಕಂಡ ಮೊದಲ ದೃಶ್ಯ, ದೋಣಿಯಲ್ಲಿನ ಇನ್ನೂ ಇಬ್ಬರು ಸತ್ತಿದ್ದು. ಅಡುಗೆಯಾಳು ಲ್ಯಾಮ್, ಸತ್ತುಬಿದ್ದಿದ್ದ. ಈಗ ಕೇವಲ ಮೂರು ಜನ ಮಾತ್ರ ಉಳಿದರು. ನಯವಾಗಿ ಜೇನ್ನಿನಂತೆ ಮಾತಾಡುವಾತ ಫ್ರೊರೆಂಟೆನೊ [illegible]. [illegible] [illegible] [illegible] ದವನು; ಇನ್ನೊಬ್ಬ ನಾವಿಕ, ೨೪ ವರ್ಷ ಪ್ರಾಯದ [illegible] [illegible]. [illegible] ಕಿನ್‌ಮಿಂಗ್ ಈ ಮೂವರು ಮಾತ್ರ.

[illegible] [illegible]. [illegible]! ಸೂರ್ಯನ ಪ್ರಖರ ಕಿರಣಗಳ ಝಳ ಇವರ ಮೇಲೆ ಚೆನ್ನಾಗಿ ಬಡಿಯಿತು. ಹರಕು ಮುರುಕು ಕ್ಯಾನ್ವಾಸ್ ಬಟ್ಟೆಯಿಂದಲೇ ಕಿನ್‌ಮಿಂಗ್, ತನ್ನ [illegible] ಸೂರ್ಯನ ಕಿರಣಗಳಿಂದ ಮುಚ್ಚಿಕೊಳ್ಳುತ್ತಿದ್ದ. ತನ್ನ [illegible] [illegible] ತಲೆಗೆ [illegible] ಮಾಡಿಕೊಂಡ. ಏನೇ ಆದರೂ ಒಡೆದ ಗಾಯಗಳು, ಬಿರುಗಾಳಿಯಿಂದಾದ ಚರ್ಮ [illegible]–ಅವರ ನೋವು, ಬಿಸಿಲು ಏರಿದಂತ, ಇನ್ನೂ [illegible] ಲಾರಂಭಿಸಿತು. ಅವನ ತುಟಿಗಳು ಊದಿಕೊಂಡವು. ಕಡಲಿನ ಮೇಲೆ ಸೂರ್ಯನ ಕಿರಣಗಳು ಬಿದ್ದು [illegible] [illegible] [illegible] [illegible] [illegible] ಗಳೂ ಊದಿಕೊಂಡವು. ಬಿಟ್ಟು ಬಿಟ್ಟು [illegible] ತ್ತಿದ್ದ ಬಿರುಗಾಳಿ ಬೇರೆ! ಇದರ ಜೊತೆಗೆ ನೀರಡಿಕೆ ಅವರನ್ನು ನಾಶಗೊಳಿಸುವಂತೆ ತೋರಿತು! ಬೇಸತ್ತ ಅವರು. ಮತ್ತೆ ಡಬ್ಬಿಯ ಹಾಲನ್ನು ಕಡಲ ನೀರಿನೊಂದಿಗೆ ಬೆರೆಸಿ ಕುಡಿದರು. ಆದರೆ ಅವರ

ಹೊಟ್ಟೆ ಮಾತ್ರ ಅದನ್ನೊಪ್ಪಲಿಲ್ಲ. ತಳಮಳವಾಗತೊಡಗಿತು'.

ಮಧ್ಯಾಹ್ನ ಸರಿಯುತ್ತಿತ್ತು. ಮಾರಿಯಾನೋ ಕಡಲಿನತ್ತ ಬೆರಳು ತೋರಿ, ತಮ್ಮತ್ತ ಮತ್ತೆ ತೋರಿಕೊಳ್ಳುತ್ತ, ಸಂಕೇತ ಮಾಡುತ್ತ ಒಂದೇ ಸಮನೆ ಅರಚಿಕೊಳ್ಳಲಾರಂಭಿಸಿದ. ಹೊಳೆ ಹೊಳೆಯುವ ಎತ್ತರದ ತೆರೆಗಳಾಚೆ, ಕಿನ್‌ಮಿಂಗನಿಗೆ ಒಂದು ಸರಕುಗಳನ್ನೊಯ್ಯುವ ಹಡಗು ಗೋಚರಿಸಿತು. ಅದು ಕಡಲಲ್ಲಿ ಅಳಿದುಳಿದ ಇವರುಗಳನ್ನೇ ಅರಸುವಂತಿತ್ತು. ೨೦ ನಿಮಿಷಗಳು ಹಾಗೆಯೇ ಕಳೆದವು. ಅನಂತರ ಅದು ಮತ್ತೆ ನಿಧಾನವಾಗಿ ಬೇರೆಡೆಗೆ ಸರಿಯಿತು. ಇಷ್ಟಾದರೂ, ಕಿನ್‌ಮಿಂಗನಿಗೆ ಧೈರ್ಯ!! ಅವನಿಗೆ, ತಾವು ದಕ್ಷಿಣ ಚೀನದ ಕಡಲ ನಾವೆಗಳ ಜಲಮಾರ್ಗದ ಸನಿಹದಲ್ಲೆ ಬಂದಿದ್ದೇವೆ ಎಂದು ಅನ್ನಿಸಿತು.

ಮತ್ತೆ ಆ ದಿನವೇ, ಅವರಿಗೆ ದೂರದಲ್ಲಿ, ಇನ್ನೊಂದು ಹಡಗು ಕಂಡಿತು. ಅದು ಕೂಡ ಕಡಲ ಗರ್ಭದಲ್ಲಿ ಎತ್ತ ಹೋಯಿತೋ!

ಇವರಿಗೆ ತಿಳಿಯದೆ ಇದ್ದ ಸಮಾಚಾರವೆಂದರೆ 'ಕಿನಾಬಾಲು ಸಾಟು' ಮುಳುಗುವ ಸುದ್ದಿಯು ಬರುತ್ತಿದ್ದಂತೆಯೆ, ಹಾಂಗ್‌ಕಾಂಗ್‌ನ ನೌಕಾ ಸಂಸ್ಥೆಯ ಅಧಿಕಾರಿಗಳು, ಕಡಲಿನಲ್ಲಿ ಅದನ್ನು ಹುಡುಕಲಾರಂಭಿಸಿದರು. 'ಕಿನಾಬಾಲು ಸಾಟು'ವಿನೊಂದಿಗೇ ಮತ್ತೊಂದು, ಭಾರದ ಮರದ ದಿಮ್ಮಿಗಳನ್ನು ಕೊಂಡೊಯ್ಯುತ್ತಿದ್ದ 'ಮಿಂಗ್ ಸಿಂಗ್' ಎಂಬ ಹಡಗು ಕೂಡ ಅಪಾಯದಂಚಿನಲ್ಲಿದೆಯೆಂದು, ತುರ್ತು ಸಹಾಯಕ್ಕೆ ಬರಬೇಕೆಂಬ ಸುದ್ದಿ ಬಂದಿತ್ತು. ಕಡಲ ಬಿರುಗಾಳಿಗೆ ಅದು ಸಿಲುಕಿದೆ ಎಂದು ರೇಡಿಯೊ ವರದಿ ಬಂದಿತ್ತು. ಎಚ್. ಎಮ್. ಎಸ್. ಚೆಸ್ಟನ್ ನೌಕಾ ಸಂಸ್ಥೆಯ ಆಶ್ರಯದಲ್ಲಿ ಎಂಟು ವ್ಯಾಪಾರಿ ನಾವೆಗಳು ಕಡಲಿನಲ್ಲಿ ಕಳೆದು ಹೋದವರ ತಪಾಸಣೆ ನಡೆಸಲಾರಂಭಿಸಿದ್ದುವು. ಅವರು ಕಡಲಿನಲ್ಲಿ ಶೋಧನೆ ನಡೆಸಿದಾಗ ಕಂಡು ಬಂದದ್ದು–'ಕಿನಾಬಾಲು ಸಾಟು' ವಿನ ಅಳಿದುಳಿದ ಅವಶೇಷ ಮಾತ್ರ! ಎರಡು ದಿನ ಕಳೆದ ನಂತರ ಹವೆ ಬಹಳ ವಾಗಿ ಕೆಟ್ಟುಹೋದ ಪ್ರಯುಕ್ತ ಹುಡುಕುವಿಕೆಯನ್ನು ನಿಲ್ಲಿಸಬೇಕಾಯಿತು.

'ಕಿನಾಬಾಲು ಸಾಟು' ಮುಳುಗಿ ಎಂಟು ದಿನ ಕಳೆಯಿತು. ದೋಣಿಯಲ್ಲಿದ್ದ ಕಿನ್‌ಮಿಂಗನಿಗೆ ಎದ್ದು, ಚಲಿಸುವಷ್ಟು ಆಗದಂತಾಯಿತು. ಅವನು ಸತ್ತನೆಂದು ಎಂದುಕೊಂಡ ಉಳಿದ ಅವನ ಸ್ನೇಹಿತರು ಅವನನ್ನು ಮೇಲಕ್ಕೆ ಎತ್ತಲು ಯತ್ನಿಸಿದರು. ಕಿನ್‌ಮಿಂಗ್ ಕಿರುಚಿದ,– "ಲೇ! ನಾನಿನ್ನೂ ಬದು



"ಹೊಸ ರೇಡಿಯೋ ಸ್ವಾಮಿ, ರಿಪೇರಿಗೆ ಒಯ್ಯುತ್ತಿದ್ದೇನೆ. ಬೆಂಗಳೂರು, ಭದ್ರಾವತಿ ಸಿಕ್ಕುತ್ತೆ; ಆದರೆ ಏನು ದೋಷವೊ, ಮಧ್ಯೆ ಇರೋ ಬೀರೂರು, ಅರಸೀಕೇರೆ, ತುಮಕೂರು ಯಾವುದೂ ಸಿಗ್ತಾಯಿಲ್ಲ."

ಕಿದೇನೆಯೊ !" ಅವನ ಗೆಳೆಯರಿಬ್ಬರೂ ಓಡಿ, [illegible] ಮೂಲೆಯೊಳಗಾಗ್ಗ [illegible].

ಕಿನ್‌ಮಿಂಗ್‌ನಿಗೆ [illegible]. [illegible] ಹೆಚ್ಚು ದಿನ ಉಳಿಯುವುದಿಲ್ಲದೆಂಬುದು. ಅವನ ಯೋಚನಾಲಹರಿ ಎಲ್ಲೆಲ್ಲೊ! ಗೆಳೆಯರು, ಮುಖ್ಯಾಧಿಕಾರಿ—ಅಳಿದ ಚಾನ್, ಅಡುಗೆಯಾಳು, ಅವನು ಕಡಲಿಗೇ ನೆಗೆದದ್ದು, ಎಲ್ಲವೂ ಮನಸ್ಸಿನಲ್ಲಿ [illegible] ಯಿತು. ಅವನು ಹಾಗೂ ಹೀಗೂ ನಿಧಾನವಾಗಿ [illegible] ಕಡಲಿಗೆ ಜಿಗಿದುಬಿಟ್ಟ......"

ಉಪ್ಪು ನೀರು, ಅವನಿಗೆ ಬಿಸಿಲಿನಿಂದಾದ ಸುಟ್ಟ ಗಾಯಗಳನ್ನು ಮತ್ತೂ ಚುಚ್ಚಿ ನೋಯಿ [illegible]. [illegible]! [illegible] ಮನಸ್ಸು ಮಾತ್ರ ಈಗ ತಿಳಿಯಾಯಿತು. "ನನಗೆ ನೋವಿನ ಅನುಭವ ಆಗುತ್ತಿದೆ. ಅಂದ ಮೇಲೆ ಇನ್ನೂ ನನ್ನಲ್ಲಿ ಸ್ವಲ್ಪ ಶಕ್ತಿ ಇರಬೇಕು"ಎಂದಾಲೋಚಿಸಿದನಾತ. ಐವತ್ತಾರು ವಯಸ್ಸಿನ ಅವನ ತಾಯಿ, ಮನಸ್ಸನ್ನು ಸುಳಿದಳು. ಇಳಿಯವಯಸ್ಸಿನಲ್ಲಿ ಮಗನನ್ನು ಕಳೆದುಕೊಂಡು ಮುದುಕಿ, ಹೇಗೆ ಬದುಕಿಯಾನು!?-ಬಾಳು ಸಾಗಿಸುವುದಾದರೂ ಹೇಗೆ? ಅವನ ಅಣ್ಣ. ಹಾಗೂ ಇವನು, ಇಬ್ಬರೇ ಕುಟುಂಬಕ್ಕೆ ಆಧಾರ. ಅವರ ದುಡಿಮೆಯೆ ಮನೆಗೆ ಆಧಾರ. [illegible] ವರುಷದ ತಮ್ಮನೊಬ್ಬ ಅವನು ಇನ್ನೂ ಶಾಲೆಯಲ್ಲಿ ಕಲಿಯುತ್ತಿದ್ದ. ಸ್ವಲ್ಪ ದಿನಗಳಲ್ಲಿಯೆ ಅಣ್ಣನ ಮದುವೆ ಆಗುವುದಿತ್ತು. ತಮ್ಮನ ಓದು ಇನ್ನೂ ಸಾಗಬೇಕು! ಕಿನ್‌ಮಿಂಗನು ಹೇಗೋ ಅತಿ ಪ್ರಯಾಸದಿಂದ, ಮತ್ತೆ ದೋಣಿಯತ್ತಲೇ ಈಸಿಕೊಂಡು ಬಂದ. ಹಾಗೂ ಹೀಗೂ ದೋಣಿಯೊಳಗ ನುಸುಳಿಕೊಂಡ. ದೋಣಿಯ ಮೂಲೆಯಲ್ಲೇ ಇದ್ದ ಅವನ ಇಬ್ಬರು ಗೆಳೆಯರೂ ಇದನ್ನೆಲ್ಲ ಮೌನವಾಗಿಯೆ ಗಮನಿಸುತ್ತಿದ್ದರು.

ಆಯಾಸ, ಹಸಿವು. ನೀರಡಿಕೆ, ನೋವು, ಕಿನ್‌ಮಿಂಗನಿಗೆ ಮತ್ತೆ ತೂಕಡಿಕೆ! ಇರುವ ತ್ರಾಣ ಹೇಗೋ ಉಳಿದಿದ್ದರೆ ಸಾಕು ಎಂಬುದು ಅವನ ಇಚ್ಛೆ. ಸಂಜೆ, ಐದರ ವೇಳೆಗೆ ಮತ್ತೆ ಅವನ ಗೆಳೆಯ ಕಿರುಚಿಕೊಂಡಿದ್ದು ಕೇಳಿಸಿತಷ್ಟೆ. ಅವನು ಆ ಕಡಲಿನತ್ತ ದೃಷ್ಟಿ ಹೊರಳಿಸಿದ. ಹಡಗೊಂದು ಅವರ ಕಡೆಯೇ ಬರುತ್ತಿತ್ತಷ್ಟೆ. ತನ್ನಲ್ಲಿನ ಎಲ್ಲ ಶಕ್ತಿಯನ್ನು ಒಟ್ಟುಗೂಡಿಸಿ, ಕಿನ್‌ಮಿಂಗ್ ತನ್ನ ಸೀಟಿಯನ್ನು ಜೋರಾಗಿ ಊದಲಾರಂಭಿಸಿದ. ಇನ್ನಿಬ್ಬರು "ಹೋ ಹೋ!!" ಎಂದು ಜೋರಾಗಿ ಕಿರುಚಿಕೊಂಡರು.

ಅವರತ್ತಲೇ ಬರುತ್ತಿದ್ದ ಹಡಗು 'ಮಿಂಗ್ ರೆನ್' [illegible] ಒಂದು ಹಡಗು. ಅದು ತನ್ನದೆ [illegible] 'ಮಿಂಗ್‌ಸಿಂಗ್' [illegible] [illegible]. ಆ ಹಡಗಿನವರೇ 'ಕಿನಾಬಾಲು [illegible]' ಕೊನೆಯ ರೇಡಿಯೊ ವರದಿ ಬಂದ ಸ್ಥಳದಿಂದ [illegible] ಕಿ.ಮೀ. ನೈರುತ್ಯದ ದಿಸೆಯಲ್ಲಿ ಹುಡುಕುತ್ತಿದ್ದರು.

ಅಂತೂ ಕೊನೆಗೂ ಹಡಗು ಸಹಾಯಕ್ಕೆ ಬಂತು! ನೌಕೆಯಿಂದಲೇ ದಪ್ಪ ದಪ್ಪ ಹಗ್ಗಗಳನ್ನು ಎಸೆದರು. ದೋಣಿಯತ್ತ. [illegible] ಇತರ ಇಬ್ಬರ ಸೊಂಟಕ್ಕೆ ಹಗ್ಗ ಕಟ್ಟಿ ಭದ್ರಪಡಿಸಿಕೊಂಡನಂತರ ನೌಕೆಯ ಮೇಲಕ್ಕೆ ಎಳೆದು ಎಳೆದುಕೊಳ್ಳಲಾಯಿತು. ನೀರು ಬೆರೆಸಿ ಸ್ವಲ್ಪ ದುರ್ಬಲಗೊಳಿಸಿದ ಮದ್ಯಸಾರವನ್ನು ಸೇವಿಸಲು ಕೊಟ್ಟರು. ರಕ್ತ ಪರೀಕ್ಷೆ ಜಾಗ್ರತ ಆಗಲೆಂದು ಅನಂತರ ಬಿಸಿನೀರು, ಹಾಗೂ ಪಾಂಪ್ ಗಂಜಿಯನ್ನು ಕೊಟ್ಟರು. ಸುಮಾರು ೭೦ ಘಂಟೆಗಳ ಕಾಲ ಅವರಿಗೆ ಬಿರುಕು ಗಾಯ. ಸುಟ್ಟಗಾಯಗಳಿಗೆ ಆರೈಕೆ ಮಾಡಿದರು. ಅನಂತರ ಸುದ್ದಿ ಕಳಿಸಲಾಯ್ತು: "ಕಡಲ ಪಾಲಾದ 'ಕಿನಾಬಾಲು ಸಾಟ' ದಿನ ಇನ್ನೂ ಮೂವರು ಬದುಕುಳಿದಿದ್ದಾರೆ" ಎಂದು ಚೀನಾ ವಾಯು ಪಡೆಯ ಒಂದು ಹೆಲಿಕಾಪ್ಟರ್ ಕಿನ್‌ಮಿಂಗ್ ಗೆಳೆಯರನ್ನು ಹಾಂಗ್‌ಕಾಂಗೆ ಒಯ್ದಿತು.

ಹಾಗೂ ಹೀಗೂ ಬದುಕಿ, ಜೀವದೊಂದಿಗೆ ಉಳಿದ ಆ ಮೂವರಿಗೂ ಅದ ಗಾಯಗಳು ಮಾಯಲು ಒಂದು ತಿಂಗಳು ಹಿಡಿಯಿತು. "ಹೇಗೋ ಬದುಕಿ ಪಾರವಾದಲ್ಲಾ! ಅದೇ ಎಲ್ಲರಿಗೂ ಅಚ್ಚರಿ! ಕಿನ್‌ಮಿಂಗ್ ಟಿನ್‌ಹಾವ್ರೊ ದೇವತೆಯನ್ನು ಮನಮುಟ್ಟಿ, ಪ್ರಾರ್ಥಿಸಿದ – ಹಂಬಲ ಹಾಗೂ ಶ್ರದ್ಧೆಗಳಿಂದ. ✿

ಒಂದು ಸಂಜೆಯ ಕಥೆ

ಮೂಲ ಹಿಂದಿ : **ಚಂದ್ರಕಾಂತ ಬಕ್ಷಿ**

ಕನ್ನಡಕ್ಕೆ : **ಸುಶೀಲಾ ಕೃಷ್ಣಮೂರ್ತಿ**

ಡಿಸೆಂಬರ್ ತಿಂಗಳಲ್ಲಿ ನಾವು ಮನೆಯನ್ನು ಬದಲಾಯಿಸಿ ಬೇರೆ ಮನೆಗೆ ಬಂದೆವು. ಅದರಲ್ಲಿ ಎರಡು ಕೋಣೆಗಳು; ಅಡಿಗೆ ಮನೆ ಮತ್ತು ಬಚ್ಚಲು ಮನೆ ಇತ್ತು. ಹೊರಗಡೆ ಚಿಕ್ಕದಾದ ಅಂಗಳವಿತ್ತು. ಅದರ ಸುತ್ತ ಎತ್ತರವಾದ ಕಾಂಪೌಂಡ್ ಇತ್ತು. ಅದಕ್ಕೆ ಹೊಸದಾಗಿ ವೈಟ್ ವಾಷ್ ಮಾಡಲಾಗಿತ್ತು. ಕಾಂಪೌಂಡ್ ಒಳಗೆ ನಿಂತರೆ ಹೊರಗಡೆಯ ದೊಡ್ಡ ಮರಗಳು ಚಿಕ್ಕ ಮನೆಗಳ ಛಾವಣಿ ಮತ್ತು ಆಕಾಶ ಮಾತ್ರ ಕಾಣಿಸುತ್ತಿತ್ತು.

ನಮ್ಮ ಮನೆಯ ಪಕ್ಕದ ಮೇಲೆ ಮನೆಯ ಮಾಲಿಕ ಶಂಕರ ತನ್ನ ಹೆಂಡತಿ ಮತ್ತು ಮೂರು ಮಕ್ಕಳೊಂದಿಗೆ ವಾಸವಾಗಿದ್ದ. ಅವನು ಒಂದು ಗೌರ್ನಮೆಂಟ್ ಆಫೀಸಿನಲ್ಲಿ ಕೆಲಸಮಾಡುತ್ತಿದ್ದ. [illegible] ನಗುತ್ತಿರುತ್ತಿದ್ದಳು. ಸಂಜೆ ಹೊತ್ತು ಹೂಗಿಡಗಳ ಮಧ್ಯೆ ತಿರುಗಾಡುತ್ತಾ ಇರುತ್ತಿದ್ದಳು. ಮೂರು ಮಕ್ಕಳು ಹೈಸ್ಕೂಲಿನಲ್ಲಿ ಓದುತ್ತಿದ್ದರು.

ಮನೆ ಹುಡುಕಲು ಸ್ನೇಹಿತನ ಜೊತೆ ಬಂದಾಗ ಜಯಳೊಂದಿಗೆ ನನ್ನ ಮೊದಲ ಭೇಟಿಯಾಗಿತ್ತು. ಹಳೆಯ ಮನೆ. ಆದರೆ ವೈಟ್‌ವಾಷ್ ಮಾಡಲಾಗಿತ್ತು. ಸ್ನೇಹಿತ ನನ್ನನ್ನು ಹೊರಗೆ ನಿಲ್ಲಿಸಿ ಒಳಗೆ ಹೋಗಿ ಮಾತಾಡಿ ಬಂದು ನನ್ನನ್ನು ಒಳಗೆ ಕರೆದುಕೊಂಡು ಹೋದನು. ಮನೆಗೆ ಡಿಸ್ಟೆಂಪರ್ ಹೊಡೆಸುತ್ತಿದ್ದರು. ಮನೆ ಖಾಲಿಯಾಗಿದ್ದುದರಿಂದ ರೂಮು ಬಹಳ ದೊಡ್ಡದಾಗಿ ಕಾಣುತ್ತಿತ್ತು. ಮನೆಯೆಲ್ಲಾ ಡಿಸ್ಟೆಂಪರ್ ವಾಸನೆಯಿಂದ ತುಂಬಿತ್ತು. ಒಬ್ಬರಿಗೊಬ್ಬರು ನಮಸ್ಕಾರ ಹೇಳಿದ ಮೇಲೆ ಅವಳು ಕೇಳಿದಳು– "ನಿಮಗೆ ಮನೆ ಬೇಕೆ ?"

"ಹೌದು."

"ನೀವಿಬ್ಬರೆ ಇರುವಿರಾ ?"

"ಹೌದು." ಮಧ್ಯದಲ್ಲೇ ನನ್ನ ಸ್ನೇಹಿತ ಹೇಳಿದ, "ಗಂಡ, ಹೆಂಡತಿ ಇಬ್ಬರೇ ಇರುವುದು. ಬೇರೆ ಯಾರೂ ಇಲ್ಲ. ನಿಮಗೆ ಯಾವ ತೊಂದರೆಯೂ ಆಗುವುದಿಲ್ಲ. ಬಹಳ ಒಳ್ಳೆ ಮನುಷ್ಯ."

ನಾನು ಸುಮ್ಮನೆ ಹೊರಗಡೆ ಅಂಗಳ ನೋಡ್ತಾ ಇದ್ದೆ. ಜಯ ನನ್ನನ್ನು ನೋಡುತ್ತಿರುವುದು ನನಗೆ ಅರಿವಾಯಿತು.



ಸ್ಥಳ ನಮಗೆ ಚೆನ್ನಾಗಿತ್ತು. ಒಂದು ಒಳ್ಳೆಯ ದಿನದಲ್ಲಿ ಮನೆಗೆ ಬಂದೆವು.

ನಾನು ಪ್ರತಿನಿತ್ಯ ಬೆಳಗ್ಗೆ ೮ ಘಂಟೆಗೆ ಸ್ನಾನಮಾಡಿ ಉಪಾಹಾರ ಮುಗಿಸಿ ಹೊರಡುತ್ತಿದ್ದೆ. ಮಧ್ಯಾಹ್ನ ಒಂದು ಘಂಟೆಗೆ ಬಂದು ಊಟ ಮಾಡಿ ವಿಶ್ರಾಂತಿ ಪಡೆದು ಪುನಃ ಹೊರಟು ಹೋಗುತ್ತಿದ್ದೆ. ರಾತ್ರಿ ನಾನು ಬರುವ ಹೊತ್ತಿಗೆ ೯॥ ಘಂಟೆಯಾಗಿರುತ್ತಿತ್ತು. ಪುನಃ ಊಟ ಮಾಡಿ ಸಾಧ್ಯವಾದರೆ ನನ್ನ ಹೆಂಡತಿ ಹತ್ತಿರ ಸ್ವಲ್ಪ ಜಗಳಮಾಡಿ ಮಲಗುತ್ತಿದ್ದೆ.

ನಾನು ಜಯಳನ್ನು ಭೇಟಿಯಾಗುತ್ತಿದ್ದುದು ಬಹಳ ಕಡಿಮೆ. ಆದರೆ ನಾನು ಹೋಗುವ, ಬರುವ ಸಮಯ ಅವಳಿಗೆ ಚೆನ್ನಾಗಿ ಗೊತ್ತಿರುತ್ತಿತ್ತು. ಒಂದು ಭಾನುವಾರ ನಾನು ಮಂಚದ ಮೇಲೆ ಮಲಗಿ ಯಾವುದೊ ಪುಸ್ತಕ ಓದುತ್ತಿದ್ದೆ. ಆಗ ಅವಳು ಕಿಟಕಿ ಹತ್ತಿರ ಬಂದು ಕೇಳಿದಳು– "ನಿಮಗೆ ಹೂವು ಕಂಡರೆ ಪ್ರೇಮವೆ?"

ನಾನು ಬೆಚ್ಚಿ ಬಿದ್ದೆ. ಪುಸ್ತಕವನ್ನು ಕೆಳಗಿಟ್ಟು ಕುಳಿತುಕೊಂಡೆ. ಅಡಿಗೆ ಮನೆಯಲ್ಲಿ ಸ್ಟೋವ್‌ನ ಶಬ್ದ ಕೇಳಿಸುತ್ತಿತ್ತು. ರತ್ನ ಅಡಿಗೆ ಮನೆಯಲ್ಲಿದ್ದಳು. "ಅಷ್ಟೇನೂ ಇಲ್ಲ..." ನಾನೆಂದೆ. ಅವಳು ನಕ್ಕಳು. "ನಿಮ್ಮ ಶ್ರೀಮತಿಯವರಿಗೆ ಬಹಳ ಇಷ್ಟ. ಪ್ರತಿನಿತ್ಯ ನನ್ನ ಹತ್ತಿರ ಸ್ವಲ್ಪ ಹೂವನ್ನು ತೆಗೆದುಕೊಳ್ಳುತ್ತಾರೆ." ಅಷ್ಟರಲ್ಲಿ ಅಡಿಗೆ ಮನೆಯಿಂದ ರತ್ನಳ ಧ್ವನಿ ಕೇಳಿತು. ಜಯ ಕಿಟಕಿಯಿಂದ ಸರಿದಳು. ನಾನು ಎದ್ದು ನಿಂತೆ. ಕಣ್ಣು ಮುಚ್ಚಿ ಬಿಡುವಷ್ಟು ಸಮಯದಲ್ಲಿ ಇಷ್ಟೂ ನಡೆಯಿತು.

ನಾನು ಜಯಳೊಂದಿಗೆ ಭೇಟಿಯಾಗುತ್ತಿದ್ದುದು ಬಹಳ ಕಡಿಮೆ. ಭಾನುವಾರ ಬಿಟ್ಟು ಉಳಿದೆಲ್ಲ ದಿನಗಳಲ್ಲಿ ನಾನು ಅಂಗಡಿಯಲ್ಲಿ ಇರುತ್ತಿದ್ದೆ. ಮಧ್ಯಾಹ್ನದ ಸ್ವಲ್ಪ ವಿಶ್ರಾಂತಿಯನ್ನು ಬಿಟ್ಟರೆ ನಾನು ಬೆಳಗ್ಗೆ ೮ ಘಂಟೆಯಿಂದ ರಾತ್ರಿ ೯॥ ಘಂಟೆಯವರೆಗೆ ಹೊರಗಡೆ ಇರುತ್ತಿದ್ದೆ.

ನಾನು ಹೋದ ನಂತರ ಜಯ ಕೆಳಗಿಳಿದು ಬಂದು ರತ್ನಳ ಹತ್ತಿರ ಮಾತಾಡುತ್ತಿದ್ದಳು. ರಾತ್ರಿ ರತ್ನ ಪ್ರತಿನಿತ್ಯದ ಮಾತಿನ ರಿಪೋರ್ಟ್ ಮಾಡುತ್ತಿದ್ದಳು. ನಾನು ಅನ್ಯಮನಸ್ಕನಾಗಿ ಕೇಳುತ್ತಿದ್ದೆ.

ಈ ರೀತಿ ಕೆಲವು ದಿನಗಳು ಕಳೆದ ನಂತರ ಜಯಳ ಕಡೆಗೆ ಆಕರ್ಷಿತನಾಗುತ್ತಿರುವೆ ಎನಿಸಿತು. ನನಗೆ ಇದೇನೂ ಅಸ್ವಾಭಾವಿಕವಾಗಿರಲಿಲ್ಲ. ಆದರೆ ಇದನ್ನು ಸ್ಪಷ್ಟವಾಗಿ ಸ್ವೀಕರಿಸಲು ನಾನು ಸಿದ್ಧನಾಗಿರಲಿಲ್ಲ. ಜಯಳ ಬಣ್ಣ ಕಪ್ಪು. ವಯಸ್ಕಳು. ಮೇಲಾಗಿ ಮೂರು ಮಕ್ಕಳ ತಾಯಿ. ನಾನು ಹೀಗೆ ವಿಚಾರದಲ್ಲಿ ಮುಳುಗುತ್ತಿದ್ದೆ. ಆದರೆ ನಿಜವಾಗಿ ಅವಳಲ್ಲಿ ಆಕರ್ಷಣೆ ಇತ್ತು. ಮೂರು ಮಕ್ಕಳ ತಾಯಿಯಾದರೂ ಸಹ ಅವಳ ಶರೀರದಲ್ಲಿ ರತ್ನಳಿಗಿಂತ ಹೆಚ್ಚು ಆಕರ್ಷಣೆ ಇತ್ತು. ಅವಳದು ಯಾವಾಗಲೂ ನಗುಮುಖ. ಹಾಸ್ಯ ಪ್ರವೃತ್ತಿ. ದೃಢವಾದ ದೇಹ. ಅವಳ ಉನ್ನತ ಎದೆಯ ಮೇಲಿಂದ ಪ್ರಯತ್ನಪಟ್ಟು ನಾನು ನನ್ನ ದೃಷ್ಟಿಯನ್ನು ತಕ್ಷಣ ಬದಲಾಯಿಸುತ್ತಿದ್ದೆ. ಆಗ ನಾನು ಅಪರಾಧ ಮಾಡಿದೆ ಅನ್ನಿಸುತ್ತಿತ್ತು. ಒಂದೊಂದು ಸಲ ನನಗನ್ನಿಸುತ್ತಿತ್ತು, ಎಂದಾದರೂ ರತ್ನ ಇಲ್ಲದಿದ್ದಾಗ ಇವಳು ನನ್ನ ಕೋಣೆಗೆ ಬರಬಹುದು. ಕಿಟಕಿ ಮುಚ್ಚಿ ಸಾಯಂಕಾಲ ಇಲ್ಲೇ ಇದ್ದು... ನಾನು ಪ್ರಯತ್ನಪೂರ್ವಕವಾಗಿ ಈ ವಿಚಾರವನ್ನು ತಡೆಯುತ್ತಿದ್ದೆ. ನಾನು ಈ ವಿಷಯವನ್ನು ರತ್ನಳಿಗೆ ಹೇಳಲಿಲ್ಲ. ಅವಳು ಜಯಳ ವಿಷಯವಾಗಿ ಹೇಳುವಾಗ ಅನ್ಯಮನಸ್ಕನಾಗಿರುವಂತೆ ನಟಿಸಿ ಅವಳ ವಿಷಯವನ್ನು ಆಸಕ್ತಿಯಿಂದ ಕೇಳುತ್ತಿದ್ದೆ.

ಮೇಲೆ ಇರುವುದರಿಂದ ನನಗೆ ಇಲ್ಲಿ ಯಾವ ಹೆದರಿಕೆಯೂ ಇಲ್ಲ."

"ಹೌದು, ಅವಳೊಂದು ಹುಲಿ ಇದ್ದಂತೆ. ಅವಳಿರುವಾಗ ಹೆದರುವ ಅಥವಾ ಗಾಬರಿಯಾಗುವ ಕಾರಣವೇ ಇಲ್ಲ."

"ಯಾರು ಎಷ್ಟು ಹೊತ್ತಿಗೆ ಬಂದರು, ಯಾವಾಗ ಬಂದರು, ಎಲ್ಲಾ ವಿಷಯ ಅವಳಿಗೆ ಗೊತ್ತಿರುತ್ತೆ. ನೀವು ಯಾವ ಬಸ್ಸಿನಲ್ಲಿ ಹೋಗ್ತೀರಿ, ಹೋದ ಭಾನುವಾರ ನೀವು ಯಾವ ಬಟ್ಟೆ ಹಾಕಿದ್ದಿರಿ, ಈ ವಿಷಯಗಳೂ ಕೂಡ ಅವಳಿಗೆ ತಿಳಿದಿರುತ್ತೆ."

"ಹಾಗೇನು?... ನನ್ನ ಹತ್ತಿರ ಹೇಳುತ್ತಾಳೇನು?"

"ಹೌದು, ರತ್ನ, ನೀನು ಒಳ್ಳೆ ಹುಡುಗನನ್ನು ಆರಿಸಿದ್ದೀಯ ಎನ್ನುತ್ತಾಳೆ...!"

ನಾನು ರತ್ನಳನ್ನು ದೃಷ್ಟಿಸಿ ನೋಡಿದೆ. ದೃಷ್ಟಿಗಳು ಸೇರುತ್ತಿದ್ದಂತೆ ಅವಳು ನಾಚಿ ನಕ್ಕಳು.

"ಅವಳ ಮಾತು ನಿಜ." ನಾನು ಹೇಳಿದೆ. "ನೀನು ನಿಜವಾಗಲೂ ಸುಂದರವಾದ ಹುಡುಗನನ್ನೇ ಆರಿಸಿದ್ದೀಯ."

"ಹೋಗಲಿ ಬಿಡ್ರಿ. ಆ ವಿಷಯ, ಮದುವೆ ಆಗೋದಿಕ್ಕೆ ನಿಮಗೆ ಆತುರವಾಗಿತ್ತು. ನಾನು ಮೊದಲು ಬೇಡವೆಂದೆ ಹೇಳಿದ್ದೆ...!"

"... ಆ ಮೇಲೆ ಹೆಚ್ಚು ಎಳೆದಾಡಿದರೆ ಕೈಬಿಟ್ಟುಹೋದೀತೆಂದು ಒಪ್ಪಿಕೊಂಡುಬಿಟ್ಟೆ!" ನಾನು ಹೇಳಿದೆ.

ಎದುರಿಗೆ ಬಂದ ಆಟೋ ನಿಲ್ಲಿಸಿ ಅದರಲ್ಲಿ ನಾವಿಬ್ಬರೂ ಕುಳಿತೆವು.

*

ರತ್ನ ಮತ್ತು ನಾನು ಶನಿವಾರ ರಾತ್ರಿ ಅಥವಾ ಭಾನುವಾರ ಬೆಳಿಗ್ಗೆ ಸಿನೆಮಾಕ್ಕೆ ಹೋಗುತ್ತಿದ್ದೆವು. ನಾವು ಹೊರಗೆ ಹೋಗುವಾಗ ಸಾಮಾನ್ಯವಾಗಿ ಅವಳು ಕಿಟಕಿಯ ಬಳಿ ಕುಳಿತಿರುತ್ತಿದ್ದಳು. ರತ್ನಳ ಹತ್ತಿರ ನನ್ನ ಪ್ರಶಂಸೆ ಮಾಡುತ್ತಿದ್ದಳು. ರತ್ನ ಎಲ್ಲವನ್ನೂ ನನಗೆ ಹೇಳುತ್ತಿದ್ದಳು. ಒಂದು ದಿನ ಸಿನಿಮಾಕ್ಕೆ ಹೋಗುವಾಗ ದಾರಿಯಲ್ಲಿ ರತ್ನ ಹೇಳಿದಳು– "ಜಯ ಬಹಳ ಬುದ್ಧಿವಂತೆ. ಅವಳು

ದಿನಕಳೆಯುತ್ತಿತ್ತು. ಒಂದೊಂದು ದಿನ ನಾನು ಅಂಗಡಿಗೆ ಹೋಗಲು ಹೊರಗೆ ಬರುತ್ತಿದ್ದಾಗ ಜಯ ಅಂಗಳದಲ್ಲಿ ನಿಂತು ನನ್ನನ್ನು ನೋಡುತ್ತಿದ್ದಳು. ರತ್ನ ಇದ್ದಾಗಲೂ ಅವಳು ನನ್ನ ಹತ್ತಿರ ನಗುತ್ತಾ ಮಾತಾಡುತ್ತಿದ್ದಳು.

ಶಂಕರರೊಂದಿಗೆ ನಾನು ಹೆಚ್ಚಾಗಿ ಮಾತಾಡುತ್ತಿರಲಿಲ್ಲ. ಆಫೀಸಿನ ಸಮಯ ಬಿಟ್ಟು ಉಳಿದೆಲ್ಲ ಸಮಯವನ್ನು ಆ ಮನುಷ್ಯ ಮನೆ

ಯಲ್ಲೇ ಕಳೆಯುತ್ತಿದ್ದ. ಯಾವಾಗಾದರೂ ಮೇಲಿಂದ ವಾಹನ ಹತ್ತು ಬರುತ್ತಿತ್ತು. ಅಥವಾ ತರಕಾರಿ ಪೇಟೆಗೆ ಹೋದಾಗ ಅವನನ್ನು ನೋಡು ತ್ತಿದ್ದೆ.

ರತ್ನ ಒಂದು ದಿನ ನನ್ನ ಹತ್ತಿರ ಹೇಳಿದಳು– "ಆತನಿಗೆ ಏನೂ ಕೆಲಸವಿಲ್ಲಾಂತ ಕಾಣುತ್ತೆ. ದಿನವೆಲ್ಲಾ ಮನೆಯಲ್ಲೇ ಕೂತು ಕಳೆಯುತ್ತಾನೆ."

"ಎಲ್ಲೋ ನೌಕರಿ ಮಾಡುತ್ತಾನೆ. ಜೊತೆಗೆ ನಮ್ಮ ಬಾಡಿಗೆ ಸ್ವಲ್ಪ ಸಿಗುತ್ತದೆ. ಹೇಗೂ ರಥ ಸಾಗುತ್ತೆ. ಆದರೆ ಮನುಷ್ಯ ಬಹಳ ಶಾಂತ ಸ್ವಭಾವದವನು."

"ಆದರೆ ಇವರಿಬ್ಬರಿಗೂ ಹೇಗೆ ಜೋಡಿ ಯಾಯಿತೊ? ಜಯಳ ತಂದೆ ಹಣವಂತ. ಒಡವೆ ಗಳ ಅಂಗಡಿ ಇಟ್ಟಿದ್ದಾನೆ. ಇವಳು ಮೊದಲಿ ನಿಂದಲೂ ಕಾನ್ವೆಂಟಿನಲ್ಲೇ ಓದಿದವಳು."

"ಪಾಪ, ಕಾನ್ವೆಂಟಿನಿಂದ ಈ ಬಂದೀಖಾನೆಗೆ ಸೇರಿದಳು"–ನಾನು ಹೇಳಿದೆ.

"ಬಂದೀಖಾನೆಯಲ್ಲಿ ಅವಳು ಬಂದಿಯಲ್ಲ"– ರತ್ನ ಹೇಳಿದಳು. "ಅವಳು ಗಂಡನನ್ನು ಬಂದಿ ಯಾಗಿಸಿದ್ದಾಳೆ"–ನಾವಿಬ್ಬರೂ ನಕ್ಕೆವು.

"ನನಗೆ ಗೊತ್ತೆ, ಅವಳೆ ನಮ್ಮ ಮನೆಗೆ ಸುಣ್ಣ ಬಣ್ಣ ಎಲ್ಲಾ ಸ್ವತಃ ನಿಂತು ಮಾಡಿಸಿದ್ದಾಳೆ. ಅವಳು ಪಕ್ಕಾ ಬಿಸಿನೆಸ್ ವುಮನ್. ಇಂತಹ ಹೆಂಗಸರು ಭಾಗ್ಯವಶಾತ್ ಸಿಕ್ಕುತ್ತಾರೆ."

ರತ್ನ ಉತ್ತರ ಕೊಡಲಿಲ್ಲ. ಅವಳೇನೂ ಯೋಚನೆ ಮಾಡುತ್ತಿರಲಿಲ್ಲ.

*

ದಿನಕಳೆಯುತ್ತಾ ನನ್ನ ಮನಸ್ಸಿನಲ್ಲಿ ಅವಳ ವಿಚಾರವೇ ತುಂಬಿರುತ್ತಿತ್ತು. ನನ್ನ ಹತ್ತಿರ ಮಾತನಾಡಲು ಅವಳು ಸಮಯ ಕಾಯು ತ್ತಿದ್ದುದು ನನಗೆ ಗೊತ್ತಾಯಿತು. ಆದರೆ ಅವ ಳೇನು ಮೂರ್ಖಳಲ್ಲ. ಅವಳು ಹೂವು ಕೀಳಲು ಕೆಳಗೆ ಬಂದಾಗ ಅವಳ ಕಣ್ಣಲ್ಲಿ ಅವಳ ಆಸೆ ಯನ್ನು ನಾನು ಕಾಣುತ್ತಿದ್ದೆ. ರತ್ನ ಯಾವಾ ಗಲೂ ಮನೆಯಲ್ಲಿರುತ್ತಿದ್ದಳು. ಜಯಳಿಗೆ ಮಕ್ಕ ಳಿಂದಾಗಿ ಸಮಯ ಸಿಗುತ್ತಿರಲಿಲ್ಲ. ನಾನು ಹೆಚ್ಚು ಸಮಯವನ್ನು ಅಂಗಡಿಯಲ್ಲೇ ಕಳೆಯುತ್ತಿದ್ದೆ.

ಒಂದು ದಿನ ಅವಳು ಬೇಗ ನನಗೆ ಹೇಳಿ ದಳು–"ನೀವು ಬಹಳ ಕಷ್ಟಪಡುತ್ತೀರಿ ಮಿಸ್ಟರ್ ಮೂರ್ತಿ."

"ಏನು ಮಾಡಲಿ?"–ನಾನು ಹೇಳಿದೆ. "ಭಾಗ್ಯ ದಲ್ಲಿ ಏನು ಬರೆದಿದೆಯೋ ಅದನ್ನು…

"ನಿಮ್ಮಂಥವರು ಹೀಗೆ ಅನುಭವಿಸುವದು…" ರಹಸ್ಯ ತುಂಬಿದ ನಗುವಿನೊಂದಿಗೆ ಅವಳು ಹೇಳಿ ದಳು– "ಬಹಳ ಕಡಿಮೆ." ನಾನು ನಕ್ಕೆ.

"ನಾನು ಒಂದು ಸಲ ನಿಮ್ಮ ಅಂಗಡಿಗೆ ಬರ ಬೇಕು"–ಅವಳು ಹೇಳಿದಳು.

ನಾನು ಗಾಬರಿಯಾದೆ. ಅಂಗಡಿಯವರೆಗೆ ಅವ ಳನ್ನು ಬಿಡುವುದು ನನಗೆ ಇಷ್ಟವಿರಲಿಲ್ಲ. ನಾನು ತಕ್ಷಣ ಹೇಳಿದೆ– "ನಿಮಗೇನಾದರೂ ಬೇಕಾದರೆ ನನಗೆ ಹೇಳಿದರೆ, ಬರುವಾಗ ನಾನೇ ತರುತ್ತೇನೆ. ದಿನಕ್ಕೆ ನಾಲ್ಕು ಸಲ ಓಡಾಡುತ್ತೇನೆ. ನೀವೇಕೆ ಅಷ್ಟು ದೂರ ಬರುವ ತೊಂದರೆ ತೆಗೆದುಕೊಳ್ಳುತ್ತೀರಿ? ಅದೂ ಅಲ್ಲದೆ ಒಂದು ವೇಳೆ ನಾನು ಅಲ್ಲಿ ಸಿಗದಿದ್ದರೆ…!"

ಜಯ ಎದುರಿಗೆ ನೋಡುತ್ತಾ ನಿಂತಿದ್ದಳು. ರತ್ನ ಇರುವಾಗ ನಾನು ಜಯಳ ಜೊತೆ ಮಾತಾಡುವುದನ್ನು ಕಡಿಮೆ ಮಾಡಿದ್ದೆ. ಅವಳೂ ಅದನ್ನು ತಿಳಿದು ರತ್ನ ಇದ್ದಾಗ ಹೆಚ್ಚು ಮಾತಾಡುತ್ತಿರ ಲಿಲ್ಲ. ರತ್ನಳೊಂದಿಗೆ ಅವಳಿಗೆ ಸ್ನೇಹವಿತ್ತು. ನಾನಿಲ್ಲ ದಿದ್ದಾಗ ಅವರಿಬ್ಬರೂ ಕೂಡಿ ಹರಟೆ ಕೊಚ್ಚು ತ್ತಿದ್ದರು. ನಾನು ಬಂದರೆ ಅವಳು ನಕ್ಕು ಹೇಳು ತ್ತಿದ್ದಳು, "ಸರಿ, ನಾನಿನ್ನು ಹೋಗ್ತೀನಿ. ನೀವಿ–ಬ್ಬರೂ ಮಾತಾಡಿ…" ತಕ್ಷಣ ಹೊರಟು ಹೋಗು ತ್ತಿದ್ದಳು.

*

ಬಹಳ ದಿನಗಳು ಕಳೆದು ಹೋಯಿತು. ಜಯ ಹತ್ತಿರವಿದ್ದಳು. ಆದರೆ ಎಷ್ಟೊಂದು ದೂರವಿ ದ್ದಳು. ಅವಳೊಂದಿಗೆ ಮನ ಬಿಚ್ಚಿ ಮಾತಾಡಲು ನನಗೆ ಸಮಯ ಸಿಗುತ್ತಿರಲಿಲ್ಲ. ಅವಳು ನನ್ನೊಡನೆ ಸೇರಲು ಎಷ್ಟೋ ಪ್ರಯತ್ನ ಪಡುತ್ತಿದ್ದಳು. ಆದರೆ ಮನೆಯಲ್ಲಿ ಏಕಾಂತ ಸಮಯ ಸಿಗುತ್ತಿರಲಿಲ್ಲ. ರತ್ನ ಯಾವಾಗಲೂ ಮನೆಯಲ್ಲಿರುತ್ತಿದ್ದಳು. ಆಕಸ್ಮಾತ್ ರತ್ನ ಹೊರಗಡೆ ಹೋಗಿ ನಾನೊಬ್ಬನೆ

ಮನೆಯಲ್ಲಿದ್ದರೆ...? ನಾನು ಕೇವಲ ಇದರ ಕಲ್ಪನೆ ಮಾತ್ರದಿಂದಲೆ ಆನಂದತುಂದಿಲನಾಗುತ್ತಿದ್ದೆ. ಜಯಳ ಕಲ್ಪನೆಯಲ್ಲೇ ನಾನು ಬಿಸಿಯಾಗುತ್ತಿದ್ದೆ. ಆದರೆ ಈ ಮನೆಯಲ್ಲಿ ಎಂದಿಗೂ ಏಕಾಂತತೆಗೆ ಅವಕಾಶವಿಲ್ಲ ಎಂದು ನಿರಾಶನಾಗುತ್ತಿದ್ದೆ. ನನಗೆ ಎಷ್ಟೆಷ್ಟು ನಿರಾಸೆಯಾಗುತ್ತಿತ್ತೊ ಅಷ್ಟು ಆಸೆ ಪ್ರಬಲವಾಗುತ್ತಿತ್ತು. ಜಯಳ ಮುಖದಲ್ಲಿ ಯೌವನದ ಬಿಸಿ ಸ್ವಲ್ಪವೂ ಆರಿರಲಿಲ್ಲ.

ಸಂಜೆಯಾದಂತೆಲ್ಲಾ ನಾನು ಉದಾಸೀನನಾಗಿರುತ್ತಿದ್ದೆ. ಅರೆತಲೆನೋವು ಶುರುವಾಗುತ್ತಿತ್ತು. ಒಂದೊಂದು ಸಲ ಮನೆಗೆ ಬರೋಣವೆನಿಸುತ್ತಿತ್ತು. ಅಂಗಡಿಯಿಂದ ಹೊರಟು ಯಾವುದಾದರೂ ಏರ್ ಕಂಡಿಶನ್ಡ್ ಹೋಟೆಲಿಗೆ ಹೋಗಿ ಕಾಫಿ ಕುಡಿಯುತ್ತಿದ್ದೆ.

ಒಂದು ದಿನ ಬಹಳ ಬೇಸರವಾಗಿ ಸಾಯಂಕಾಲವೇ ಮನೆಗೆ ಬಂದೆ. ರತ್ನ ತರಕಾರಿ ತರಲು ಹೋಗಿದ್ದಳು. ನಾನು ಬಾಗಿಲು ಹಾಕಿಕೊಂಡು ಮಂಚದ ಮೇಲೆ ಮಲಗುವಷ್ಟರಲ್ಲಿ ಕಾಲಿಂಗ್ ಬೆಲ್ ಬಾರಿಸಿತು. ರತ್ನ ಬಂದಳೆಂದು ಎದ್ದು ಬಾಗಿಲು ತೆಗೆದೆ. ಎದುರಿಗೆ ಜಯ ಇದ್ದಳು.

"ನೀವು ಈ ದಿನ ಬಹಳ ಬೇಗ ಬಂದಿದ್ದೀರಿ"–ಅವಳು ಹೇಳಿದಳು.

"ಹೌದು. ಹುಷಾರಿರಲಿಲ್ಲ."

"ರತ್ನ ಇನ್ನೂ ಈಗ ತರಕಾರಿ ತರಲು ಹೋಗಿದ್ದಾಳೆ. ಅವಳು ಬರಲು ಇನ್ನೂ ಅರ್ಧಘಂಟೆ ಬೇಕಾಗುತ್ತೆ. ನೀವು ಬರುವುದನ್ನು ನೋಡಿ ಮಾತಾಡೋಣವೆನ್ನಿಸಿತು. ನಿಮಗೆ ಹುಷಾರಿಲ್ಲವೇನೊ ಎನ್ನಿಸಿತು..."

"ಒಳಗೆ ಬನ್ನಿ"–ನಾನು ಹೇಳಿದೆ. ನನ್ನ ಕಿವಿಯೆಲ್ಲಾ ಕೆಂಪಾಗಿದ್ದವು. ಅವಳು ಒಳಗೆ ಬಂದು ಬಾಗಿಲು ಹಾಕಿದಳು. ನಾವಿಬ್ಬರೂ ಒಬ್ಬರಿಗೊಬ್ಬರು ಅರ್ಥಮಾಡಿಕೊಂಡಿದ್ದೆವು. ಅನಾಯಾಸವಾಗಿ ನನಗೆ ಸಮಯ ಸಿಕ್ಕಿತ್ತು.

ನಾವಿಬ್ಬರೂ ಮಧ್ಯದ ಕೋಣೆಗೆ ಬಂದೆವು. ನನ್ನ ಎದೆ ಡವಗುಟ್ಟುತ್ತಿತ್ತು. ಜಯ ಎದುರಿಗಿದ್ದಳು. ರತ್ನ ಬರಲು ಅರ್ಧ ಘಂಟೆ ಸಮಯವಿತ್ತು.

"ನಿಮ್ಮ ಹತ್ತಿರ ಬಂದು ಪ್ರೈವೇಟ್ ವಿಷಯ ಮಾತಾಡಬೇಕಿತ್ತು." ಅವಳು ಹೇಳಿದಳು.

"ಒಳಗೆ ಹೋಗಿ" ನಾನು ಹೇಳಿದೆ. ನಾವಿಬ್ಬರೂ ಒಂದು ಕೋಣೆಗೆ ಬಂದೆವು. ಸಂಜೆಯಾಗಿತ್ತು. ಕತ್ತಲೆ ಕವಿದಿತ್ತು. ನಾನು ದೀಪ ಹಾಕಲಿಲ್ಲ.

"ಇಲ್ಲಿ ಯಾರೂ ಇಲ್ಲವೆ?" ಅವಳು ಮೆಲ್ಲಗೆ ಕೇಳಿದಳು.

"ಇಲ್ಲ. ಈಗ ಈ ಮನೆಯಲ್ಲಿ ನಾವಿಬ್ಬರೇ."

ಅವಳು ಸ್ವಲ್ಪ ಮುಂದೆ ಬಂದು ಮಧ್ಯದ ಕೊಠಡಿಯ ಬಾಗಿಲು ಹಾಕುತ್ತಾ ಹೇಳಿದಳು–"ಎದುರು ಮನೆಯವರು ನಮ್ಮನ್ನು ನೋಡುವುದು ನನಗೆ ಇಷ್ಟವಿಲ್ಲ."

ಕೊಠಡಿಯಲ್ಲಿ ನಿಶ್ಶಬ್ದತೆ ಆವರಿಸಿತು.

ಅವಳು ನನ್ನನ್ನು ಹತ್ತಿರ ಬರುವಂತೆ ಸನ್ನೆ ಮಾಡಿದಳು. ನಾನು ಅವಳ ಹತ್ತಿರ ಸರಿದೆ. ನನ್ನ ಶರೀರವೆಲ್ಲಾ ನಡುಗುವಂತಾಯಿತು. ನನ್ನ ಕಣ್ಣಲ್ಲಿ ಕಣ್ಣು ಸೇರಿಸಿ ಅವಳು ಹೇಳಿದಳು–"ನಾನು ಒಂದು ವಿಷಯ ಹೇಳಲು ಬಂದಿದ್ದೇನೆ... ಕೇಳಿ... ಪ್ರತಿ ನಿತ್ಯ ಸಾಯಂಕಾಲ ಸುಮಾರು ಆರುಘಂಟೆಗೆ ಒಬ್ಬ ಮನುಷ್ಯ ನಿಮ್ಮ ಹೆಂಡತಿಯನ್ನು ಸಂಧಿಸಲು ಬರುತ್ತಾನೆ. ನಿಮಗೆ ಗೊತ್ತೆ?"

ನಾನು ನಡುಗಿ ಹೋದೆ. ●



ಮದುವೆಯಾದ ಕೆಲ ದಿನಗಳ ಮೇಲೆ ಪ್ರತಿ ಗಂಡನಿಗೂ ತನ್ನ ಹೆಂಡತಿಗಿಂತ ಉಳಿದವರ ಹೆಂಡಂದಿರೇ ಸುಂದರಿಯರಾಗಿ ಕಾಣುತ್ತಾರೆ. ಹಾಗೆಯೇ ಹೆಂಡತಿಗೂ ಉಳಿದವಳ ಗಂಡಂದಿರೇ ಸುಂದರ-ಸದೃಢ ಶ್ರೀಮಂತ-ಸುಸ್ವಭಾವಿಯರಾಗಿ ಕಾಣುತ್ತಾರೆ.

ಸ್ವತಂತ್ರ ಭಾರತದ
ಇತಿಹಾಸದ ಒಂದು
ಪುಟದ ಮೇಲೆ ಬೆಳಕು

ಲಾಯುಕ ಅಲಿ ತಲೆತಪ್ಪಿಸಿಕೊಂಡದ್ದೆಂತು?

ಗುರುನಾಥ ಅ. ಬಿಜ್ಜರಗಿ

ಭಾರತ ಸ್ವತಂತ್ರವಾಗ ಭಾರತದಲ್ಲಿಯ ಅನೇಕ ಚಿಕ್ಕಪುಟ್ಟ ಸಂಸ್ಥಾನಗಳು ಭಾರತದ ಒಕ್ಕೂಟದಲ್ಲಿ ವಿಲೀನವಾಗುವಾಗ ಹೈದರಾಬಾದ ನಿಜಾಮ ಮತ್ತು ಅವನ ಹಿಂಬಾಲಕರು ತಮ್ಮ ರಾಜ್ಯ ಸ್ವತಂತ್ರವಾಗಿರಬೇಕೆಂದು ಬಯಸುತ್ತಿದ್ದರು. ಇದು ಭಾರತ ಸರಕಾರಕ್ಕೆ ಒಂದು ಕಠಿಣ ಸಮಸ್ಯೆಯಾಗಿತ್ತು. ಆಗ ಮೀರ ಲಾಯುಕ ಅಲಿ ಹೈದರಾಬಾದಿನ ಪ್ರಧಾನಮಂತ್ರಿಗಳಾಗಿದ್ದರು.

'ಉಕ್ಕಿನ ಮನುಷ್ಯ' ಎಂದು ಪ್ರಸಿದ್ಧರಾದ ಸರದಾರ ವಲ್ಲಭಭಾಯಿ ಪಟೇಲರು ಭಾರತ ಸರಕಾರದ ಗೃಹಮಂತ್ರಿಯಾಗಿದ್ದರು.

ಹೈದರಾಬಾದನ್ನು ಸ್ನೇಹ ಹಾಗೂ ಶಾಂತಿಯಿಂದ ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸಬೇಕೆಂದು ಪಟೇಲರು ನಿರ್ಧರಿಸಿ ನಿಜಾಮನ ಜೊತೆ ದೀರ್ಘ ಸಮಯದವರೆಗೆ ಮಾತುಕತೆ ನಡೆಸಿ ಸಮಸ್ಯೆಯನ್ನು ಬಿಡಿಸಲು ಪ್ರಯತ್ನಿಸಿದರು. ಆದರೆ ಕೊನೆಗಳಿಗೆಯಲ್ಲಿ ಸಂಧಾನ ವಿಫಲಗೊಂಡಿತು. ಭಾರತ ಸರಕಾರ ನಿರುಪಾಯವಾಗಿ ಪೋಲೀಸ್ ಕಾರ್ಯಾಚರಣೆಯನ್ನು ಕೈಗೊಳ್ಳಬೇಕಾಯಿತು.

ದಂಗೆಯ ನಂತರ ಹೈದರಾಬಾದು ಭಾರತದ ಒಕ್ಕೂಟದಲ್ಲಿ ವಿಲೀನಗೊಂಡು ಅಲ್ಲಿ ಭಾರತದ ಆಡಳಿತ ಪ್ರಾರಂಭಗೊಂಡಿತು. ಹೈದರಾಬಾದಿನ ಪ್ರಧಾನಮಂತ್ರಿ ಮೀರ ಲಾಯುಕ ಅಲಿ ನಿಜಾಮರನ್ನು ಬಿಟ್ಟರೆ ಶಕ್ತಿಶಾಲಿ ವ್ಯಕ್ತಿ. ಇವರಲ್ಲಿ ಕೋಟ್ಯಂತರ ರೂಪಾಯಿ ಬೆಲೆಬಾಳುವ ಸಂಪತ್ತು ಇತ್ತು. ಪೋಲೀಸ್ ಕಾರ್ಯಾಚರಣೆಯ ನಂತರ ಭಾರತ ಸರಕಾರ ಮೀರ ಲಾಯುಕ ಅಲಿಯವರನ್ನು ಅವರ ಬೇಗಂಪೇಟ್ ಮಹಲಿನಲ್ಲಿ ಬಂಧನದಲ್ಲಿಟ್ಟಿತು. ಮಹಲಿನ ವರಾಂಡದವರೆಗೆ ಬರುವುದಕ್ಕೂ ಪರವಾನಿಗೆ ಇರದಂಥ ಗೃಹಬಂಧನದ ಶಿಕ್ಷೆ ವಿಧಿಸಲ್ಪಟ್ಟಿತ್ತು.

ಸಂಶಯ

ಡಿಸೆಂಬರ್ ೧೭, ೧೯೪೮ರಲ್ಲಿ ಹೈದರಾಬಾದಿನಲ್ಲಿ ಪೋಲೀಸ್ ಕಾರ್ಯಾಚರಣೆ ನಡೆಸಿದ ಜನರಲ್ ಚೌಧರಿ, ಹೈದರಾಬಾದ್ ಪೋಲೀಸ್ ಇನ್ಸ್‌ಪೆಕ್ಟರ್

(ಹಿಂದಿಯಿಂದ ಅನುವಾದ)

ಜನರಲ್ ಪಾತ್ರೂ ಅವರನ್ನು ತಮ್ಮ ಕಾರ್ಯಾಲಯಕ್ಕೆ ಬರಮಾಡಿಕೊಂಡು ಮೀರ ಲಾಯಕ ಅಲಿ ಯಾವುದೋ ಸಂಚಿನ ರೂಪರೇಷೆಯಲ್ಲಿ ತೊಡಗಿದ್ದಾರೆ ಎಂಬ ಅನುಮಾನವನ್ನು ವ್ಯಕ್ತಪಡಿಸಿದಾಗ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್, "ಯಾವ ಸಂಚು?" ಎಂದು ಕೇಳಿದರು.

"ಬಂಧನದಿಂದ ಓಡಿ ಹೋಗುವ ಸಂಚು."

"ನೀವು ಅವರ ಮೇಲಿನ ಕಾವಲನ್ನು ಬಿಗಿಗೊಳಿಸಿ ಮತ್ತು ಮಹಲಿನ ಒಳಗೆ ನಮ್ಮ ಆದೇಶವಿಲ್ಲದೆ ಪ್ರವೇಶ ನಿಷೇಧಿಸಿ!" ಎಂದು ಚೌಧುರಿ ಹೇಳಿದರು.

ಜನರಲ್ ಚೌಧುರಿಯವರ ಅಪ್ಪಣೆಯ ಮೇರೆಗೆ ಅವರು ಪಾತ್ರೂ ಕೆಲವು ನಿರ್ಬಂಧಗಳನ್ನು ವಿಧಿಸಿದರು.

೧) ಹೈದರಾಬಾದಿನ ಮಾಜಿ ಪ್ರಧಾನಮಂತ್ರಿ ಮೀರ ಲಾಯಕ ಅಲಿ ವಾಸಿಸುವ ಮಹಲಿನಲ್ಲಿ ನನ್ನ ಲಿಖಿತ ಆದೇಶವಿಲ್ಲದೆ ಯಾರೂ ಹೋಗಕೂಡದು,

೨) ನನ್ನ ಅಪ್ಪಣೆಯಿಲ್ಲದೆ ಮೀರ ಲಾಯಕ ಅಲಿ ತಮ್ಮ ನಿವಾಸದಿಂದ ಪತ್ರವ್ಯವಹಾರ ಮಾಡಕೂಡದು,

೩) ನನ್ನ ಆಜ್ಞಾನುಸಾರ ಯಾವುದೇ ವ್ಯಕ್ತಿಯಾಗಲಿ ಅವರ ನಿವಾಸದಿಂದ ಹೊರಗೆ ಹೋಗುವಾಗ ಅಲ್ಲಿ ಉಪಸ್ಥಿತನಿರುವ ಹೆಡ್‌ಕಾನ್‌ಸ್ಟೇಬಲ್ ಅವರನ್ನು ತಪಾಸಣೆ ಮಾಡಿ ಹೊರಗೆ ಬಿಡಬೇಕು.

೪) ನನ್ನ ಅನುಮತಿಯಿಂದ ಮನೆಯೊಳಗೆ ಪ್ರವೇಶಮಾಡುವ ಮುಂಚೆ ಆ ವ್ಯಕ್ತಿಯನ್ನು ತಪಾಸಣೆ ಮಾಡಿ ಬಿಡಬೇಕು.

ಈ ನಿಯಮಗಳು ಕಠಿಣವಾಗಿದ್ದು ಇವುಗಳನ್ನು ಉಲ್ಲಂಘನೆ ಮಾಡುವುದು ಮೀರ ಲಾಯಕ ಅಲಿ ಅವರಿಂದ ಆಗಲಾರದು ಎಂದು ಕೆಲವು ಅಧಿಕಾರಿಗಳು ಭಾವಿಸಿದರು. ಪತ್ರವ್ಯವಹಾರದ ಮೇಲೆ ನಿರ್ಬಂಧವಿಧಿಸಿದ ಮೇಲೆ ಮೀರ ಲಾಯಕ ಅಲಿ ಅವರ ಪತ್ರವ್ಯವಹಾರ ನಿಂತುಹೋಯಿತು.

ಆಶ್ಚರ್ಯ

೧೯೫೦ ರ ಮಾರ್ಚ್ ೬ ರಂದು ಬೇಗಂಪೇಟದ ಮಹಲಿನ ಮೂರನೆಯ ಅಂತಸ್ತಿನ ಒಂದು ಕೋಣೆಯಲ್ಲಿ ಮೀರ ಲಾಯಕ ಅಲಿಯವರ ಮಲಗುವ ಕೋಣೆಯಲ್ಲಿ ದವಾಲದಾರ ಕೃಷ್ಣಪ್ಪ ಪ್ರವೇಶಿಸಿದ. ಅಲಿಯವರು ತಲೆಯವರೆಗೆ ಚಾದರವನ್ನು ಹೊದ್ದುಕೊಂಡು ಇನ್ನೂ ಮಲಗಿದ್ದರು.

ಆಗ ಸಮಯ ಬೆಳಗಿನ ೯ ಗಂಟೆ. ಅವರು ಮಲಗಿರುವುದನ್ನು ನೋಡಿದರೆ ಕೃಷ್ಣಪ್ಪನಿಗೆ ಆಶ್ಚರ್ಯವಾಯಿತು. ಅವರಿಗೆ ಯಾವಾಗಲೂ ಮುಂಜಾವಿನ ೫ ಅಥವಾ ೫–೩೦ಕ್ಕೆ ಎಚ್ಚರವಾಗುತ್ತಿತ್ತು.

ಕೃಷ್ಣಪ್ಪ ಸ್ವಲ್ಪ ಅನುಮಾನದಿಂದ ಮಂಚವನ್ನು ಸಮೀಪಿಸಿ ಮುಖದ ಹತ್ತಿರ ಬಾಗಿ, "ಹುಜೂರ್! ಹುಜೂರ್!" ಎಂದು ಕೂಗಿದ.

ಅವರಿಂದ ಯಾವ ಉತ್ತರವೂ ಬರಲಿಲ್ಲ. ಚಾದರವನ್ನು ತೆಗೆದುನೋಡಿದ ಕೃಷ್ಣಪ್ಪ ದಿಗ್ಭ್ರಾಂತನಾದ. ಮಂಚದ ಮೇಲೆ ಕೆಲವು ಬಟ್ಟೆಗಳಿದ್ದವು! ಭಯಗೊಂಡ ಕೃಷ್ಣಪ್ಪ ಕೆಳಗೆ ಒಂದೇ ಉಸುರಿನಲ್ಲಿ ಓಡಿದ.

ಹೆಡ್‌ಕಾನಾಸ್ಟೇಬಲ್ ಉಸ್ಮಾನ್ ಕೃಷ್ಣಪ್ಪನ ಅವಸ್ಥೆ ನೋಡಿ, "ಏನಾಯಿತು?" ಎಂದು ಕೇಳಿದ.

"ಮೀ...ರ ಲಾಯಕ ಅಲಿ ತಮ್ಮ ಕೋಣೆಯಲ್ಲಿಲ್ಲ," ಎಂದು ಕೃಷ್ಣಪ್ಪ ತಡವರಿಸಿದ.

ಕ್ಷಣಮಾತ್ರದಲ್ಲಿ ಮೀರ ಲಾಯಕ ಅಲಿ ಪರಾರಿಯಾದ ಸುದ್ದಿ ಹೈದರಾಬಾದಿನಲ್ಲಿ ಹರಡಿತು. ಕೂಡಲೇ ದಿಲ್ಲಿಯ ಗೃಹಮಂತ್ರಿಗಳ ಕಾರ್ಯಾಲಯಕ್ಕೆ ಈ ಸಮಾಚಾರವನ್ನು ತಲುಪಿಸಲಾಯಿತು.

ಕೋಲಾಹಲ

ಈ ಸುದ್ದಿ ದೇಶದ ತುಂಬ ಕೋಲಹಲವನ್ನೆಬ್ಬಿಸಿತು. ಕೆಲವರು ಈ ಸುದ್ದಿಯನ್ನೇ ನಂಬಲಿಲ್ಲ. ನಂಬಿದವರು ತಮ್ಮ ಬಾಯಿ ಮೇಲೆ ಬೆರಳಿಟ್ಟುಕೊಂಡರು. ಕೆಲವು ಜನ ಮೀರ ಲಾಯಕ ಅಲಿಯ ಬುದ್ಧಿಮತ್ತೆಯ ಪ್ರಶಂಸೆ ಮಾಡಿದರೆ ಇನ್ನೂ ಕೆಲವರು ಪೋಲೀಸ್ ಅಧಿಕಾರಿಗಳ ಅಲಕ್ಷ್ಯವೇ ಇದಕ್ಕೆ ಕಾರಣ ಎಂದರು. ಪೋಲೀಸ್ ಅಧಿಕಾರಿಗಳೇ ಮೀರ ಲಾಯಕ ಅಲಿಗೆ ಫರಾರಿಯಾಗಲು ಸಹಾಯಮಾಡಿರಬೇಕು! ಇಲ್ಲದಿದ್ದರೆ ಅವರು ಓಡಿಹೋಗಲು ಹೇಗೆ ಸಾಧ್ಯ? ಎಂದುಕೊಳ್ಳುವವರೂ ಇರದಿರಲಿಲ್ಲ.

ಇದೇ ಸಮಯದಲ್ಲಿಯೇ ಮೀರ ಲಾಯಕ ಅಲಿ

ಮತ್ತು ಅವರ ಸಮಸ್ತ ಪರಿವಾರ ಪಾಕಿಸ್ತಾನಕ್ಕೆ ಬಂದು ತಲುಪಿದ್ದಾರೆ ಎಂಬ ಆಶ್ಚರ್ಯಕರ ಸುದ್ದಿ ಭಾರತಕ್ಕೆ ಬಂತು.

ದೇಶದಲ್ಲಿ ಅದೇ ಮಾತು. ಅದೇ ಚರ್ಚೆ. ಅದರ ಕುರಿತೇ ಗುಜು ಗುಜು. ಮೀರ ಲಾಯಕ ಅಲಿ ಮತ್ತು ಅವರ ಪರಿವಾರದ ೧೨ ಜನ ಭಾರತದ ಗಡಿ ಹೇಗೆ ಸುರಕ್ಷಿತವಾಗಿ ದಾಟಿದರು? ಭಾರತದ ಗಡಿರಕ್ಷಕ ದಳ ಆಗ ಏನು ಮಾಡುತ್ತಿತ್ತು ? ಈ ಘಟನೆ ಭಾರತ ಸರಕಾರಕ್ಕೆ ಒಂದು ಕಳಂಕ ಎಂದು ಕೆಲವರು ಭಾವಿಸಿದರು.

೧೯೫೦ರ ಮಾರ್ಚ್ ೬ ರಂದು, ಮುಂಜಾನೆ ಹವಾಲದಾರ ಕೃಷ್ಣಪ್ಪನಿಗೆ ಮೀರ ಲಾಯಕ ಅಲಿ ಓಡಿಹೋಗಿದ್ದಾರೆ ಎಂದು ತಿಳಿಯಿತು. ಆದರೆ ವಾಸ್ತವಿಕವಾಗಿ ಮಾರ್ಚ್ ೩ ರಂದು. ಅಂದರೆ ಕೃಷ್ಣಪ್ಪನ ಗಮನಕ್ಕೆ ಬರುವುದಕ್ಕಿಂತ ಮೂರು ದಿನಗಳ ಮುಂಚೆಯೇ, ಅವರು ಹೈದರಾಬಾದನ್ನು ಬಿಟ್ಟಿದ್ದರು. ಆದರೆ ಮೂರು ದಿನ ಸುದ್ದಿ ಹೇಗೆ ಹರಡಲಿಲ್ಲ ?

ಆಗ ಹೋಳಿ ಹಬ್ಬ ಪ್ರಾರಂಭವಾಗಿತ್ತು. ಹೈದರಾಬಾದಿನಲ್ಲಿ ಹೋಳೀಹಬ್ಬ ಸಂಭ್ರಮದಿಂದ ಆಚರಿಸಲ್ಪಡುತ್ತಿತ್ತು. ಅಲ್ಲಿಯವರು ರಾಜರ ಹಾಗು ಶ್ರೀಮಂತರ ಮನೆಯ ಮುಂದೆ ನರ್ತಿಸಿ ಅವರನ್ನು ಸಂತೋಷಗೊಳಿಸಿ ಅವರಿಂದ ಬಹುಮಾನ ಪಡೆಯುವದು ವಾಡಿಕೆ. ಹೋಳಿಹಬ್ಬದ ಒಂದು ದಿನ ಬಣ್ಣ-ಬಣ್ಣದ ಬಟ್ಟೆ ಧರಿಸಿದ ನರ್ತಕ-ನರ್ತಕಿಯರ ತಂಡವೊಂದು ಮಹಲಿನ ಮುಂದೆ ಹಾಡಿ ಕುಣಿಯಲಾರಂಭಿಸಿತು.

ಮೀರ ಲಾಯಕ ಅಲಿಯವರನ್ನು ಕಾಯುತ್ತಿದ್ದ ಪೋಲೀಸು ಪಡೆ ಈ ಉತ್ಸವದಲ್ಲಿ ಪಾಲುಗೊಂಡಿತು. ನರ್ತಕಿಯರ ಗುಂಪು ಕುಣಿಯುತ್ತ ಗಾಳಿಯಲ್ಲಿ ಬಣ್ಣದ ಹುಡಿ ತೂರುತ್ತ ಮಹಲನ್ನು ಪ್ರವೇಶಿಸಿ ಸ್ವಲ್ಪ ಸಮಯದಲ್ಲೇ ಕೈಲಿ ನೋಟು ಹಿಡಿದು ಹೊರಗೆ ಬಂತು. ಈ ಸಂಭ್ರಮ ಮೂರು ದಿನ ಎಡಬಿಡದೆ ನಡೆಯಿತು.

ಮಾರ್ಚ್ ೬ ರಂದು ಮೀರ ಲಾಯಕ ಅಲಿ ತಮ್ಮ ಮಹಲಿನಿಂದ ಪರಾರಿಯಾಗಿದ್ದು, ಅವರ ಜೊತೆ ಅವರ ಪತ್ನಿ, ಮಗ ಮಹಮ್ಮದ ಆಜಂ, ಮಗಳು ಲಾಯಿಕ ಬಾನೂ, ಅಳಿಯ ಮಹಮ್ಮದ, ಎರಡನೆಯ ಅಳಿಯ ಮಹಮ್ಮದ ಅಲಿ ಮತ್ತು ಇನ್ನೂ ೬ ಜನ ಓಡಿಹೋಗಿದ್ದು ಬೆಳಕಿಗೆ ಬಂತು.

ತಂತ್ರ

ದಿಲ್ಲಿ, ಹೈದಾರಾಬಾದ ಮತ್ತು ಮುಂಬೈಯಲ್ಲಿ ಎಡಬಿಡದೆ ಅವರಿಗಾಗಿ ಅನ್ವೇಷಣೆ ನಡೆಯಿತು. ವಿಶ್ವಪ್ರಯತ್ನ ಮಾಡಿದರೂ ಅವರ ಸುಳಿವು ದೊರೆಯಲಿಲ್ಲ. ಆದರೆ ಭಾರತ ಸರಕಾರ ಅವರು ಪರಾರಿಯಾಗಲು ಹೂಡಿದ ತಂತ್ರವನ್ನು ಕಂಡು ಹಿಡಿಯುವಲ್ಲಿ ಯಶಸ್ವಿಯಾಯಿತು. ಅದು ಈ ಪ್ರಕಾರವಾಗಿತ್ತು:

ಮೇಯರ್ಸ್ ಒಬ್ಬ ಅಮೇರಿಕನ್ ಇಂಜಿನಿಯರ್. ಮೀರ ಲಾಯಕರ ಆಪ್ತ ಮಿತ್ರನೂ. ಹೌದು. ಈ ಇಂಜಿನಿಯರನಿಗೆ ಮೀರ ಲಾಯಕ ಅಲಿಯವರ ಸಂಬಂಧಿ ಒಂದು ಪತ್ರ ಬರೆದ. ಮೀರ ಲಾಯಕ ಅಲಿಯವರು ಈಗ ಭಾರತದಲ್ಲಿ ಕೈದಿಯಾಗಿ ಜೀವಿಸುತ್ತಿದ್ದಾರೆ. ಅವರಿಗೆ ನಿಮ್ಮ ಸಹಾಯ ಅವಶ್ಯವಾಗಿದೆ, ಎಂದು ತಿಳಿಸಿದ. ಪತ್ರ ಮುಟ್ಟಿದ ಕೂಡಲೇ ಮೇಯರ್ಸ್ ಭಾರತಕ್ಕೆ ಧಾವಿಸಿ ಬಂದ ೧೯೫೦ ರ ಫೆಬ್ರುವರಿ ೧೦ ರಂದು ಹೈದರಾಬಾದಿನ ವಿಮಾನ ನಿಲ್ದಾಣದಲ್ಲಿ ಮೀರ ಲಾಯಕರ ಎರಡನೆಯ ಅಳಿಯ ಮಹಮೂದ್ ಮೇಯರ್ಸ್‌ನನ್ನು ಸ್ವಾಗತಿಸಿದ.

ಮೀರ ಲಾಯಕ ಅಲಿಯವರನ್ನು ವಾರದಲ್ಲಿ ಒಂದು ಬಾರಿ ಸಂದರ್ಶಿಸಲು ಹೈದರಾಬಾದಿನ ಪೋಲೀಸ ಇನ್ಸ್‌ಪೆಕ್ಟರ್ ಜನರಲ್ ಪಾತರ್ಜಿ ಅವರಿಂದ ಅನುಮತಿ ಪತ್ರ ಪಡೆದನಲ್ಲದೆ ಅಲಿಯವರ ಅಳಿಯನನ್ನು ಪ್ರತಿದಿನ ಭೆಟ್ಟಿಯಾಗುತ್ತಿದ್ದ.

ಇದೆ ಸಮಯದಲ್ಲಿ ಭಾರತ ಸರಕಾರ ಮೀರ ಲಾಯಕ ಅಲಿಯವರ ಮೇಲಿನ ಕೆಲವು ನಿರ್ಬಂಧಗಳನ್ನು ಸಡಲಿಸಿತ್ತು.

೧) ಮೀರ ಲಾಯಕ ಅಲಿಯವರ ಮನೆಯ ಸ್ತ್ರೀಯರು ಯಾರ ಅಡೆ-ತಡೆಯಿಲ್ಲದೆ ಮಹಲಿನ ಒಳಗೆ ಅಥವಾ ಹೊರಗೆ ಓಡಾಡಬಹುದು.

೨) ಮೀರ ಲಾಯಕ ಅಲಿಯವರ ಸಂಬಂಧಿಕರು ಯಾವ ಅಧಿಕಾರಿಯ ಅಪ್ಪಣೆಯಿಲ್ಲದೆ ಅವರನ್ನು ಸಂದರ್ಶಿಸಬಹುದು. ಮತ್ತು,

೩) ಮೀರ ಲಾಯಕ ಅಲಿಯವರನ್ನು ಉಚ್ಚ ಅಧಿಕಾರವುಳ್ಳ ಪೋಲೀಸ್ ಅಧಿಕಾರಿ ಮಾತ್ರ ಪರೀಕ್ಷಿಸಬಹುದು.

ಮೆಯರ್ಸ್, ಮೀರ ಲಾಯಕ ಅಲಿಯವರನ್ನು ಕಂಡು ಮಾತುಕತೆ ನಡೆಸಿದರು. ಮೀರ ಲಾಯಕ ರಿಂದ ಒಂದು ಪತ್ರ ಪಡೆದರು. ಈ ಪತ್ರ ಹೈದರಾಬಾದಿನ ಮಾಜಿ ಹಣಕಾಸಿನ ಮಂತ್ರಿ ಮೊಹಿನಬಾಜ ಜಂಗ್ ಅವರ ಹೆಸರಿನಲ್ಲಿತ್ತು. ಆಗ ಇವರು ಪಾಕಿಸ್ತಾನದಲ್ಲಿ ವಾಸಿಸುತ್ತಿದ್ದರು. 'ನಾವು ಈಗ ಬಂಧನದಿಂದ ಮುಕ್ತರಾಗಿದ್ದೇವೆ. ನೀವು ನಮ್ಮನ್ನು ಪಾಕಿಸ್ತಾನಕ್ಕೆ ಕರೆದೊಯ್ಯಲು ಏರ್ಪಾಡು ಮಾಡಬೇಕು.' ಎಂದು ಆ ಪತ್ರದಲ್ಲಿ ಬರೆಯಲಾಗಿತ್ತು.

ಈ ಪತ್ರವನ್ನು ತೆಗೆದುಕೊಂಡು ಮೇಯರ್ಸ್ ಕರಾಚಿಗೆ ಹೋದ.

೧೫ ದಿನಗಳ ನಂತರ ಮೇಯರ್ಸ್ ಮತ್ತೆ ಹೈದರಾಬಾದಿನ ವಿಮಾನ ನಿಲ್ದಾಣದಲ್ಲಿಳಿದ. ಬರುವಾಗ ಜೊತೆಯಲ್ಲಿ ಜಾಕಿಲುದ್ದೀನ ಮತ್ತು ಮಹಮ್ಮದ ಅಲಿ ಎಂಬಿಬ್ಬರನ್ನು ಕರೆದುಕೊಂಡು ಬಂದ. ಮಹಮ್ಮದ ಅಲಿ ಮೀರ ಲಾಯಕನ ಸಂಬಂಧಿಕ. ಈ ವ್ಯಕ್ತಿಗಳು ಪಾಕಿಸ್ತಾನದ ವಿದೇಶ ವ್ಯವಹಾರ ಮಂತ್ರಿಗಳಿಂದ ಮೀರ ಲಾಯಕ ಅಲಿಯವರ ಹೆಸರಿನಲ್ಲಿ ಒಂದು ಪತ್ರ ತಂದಿದ್ದರು. 'ನಿಮ್ಮ ಸ್ವಾಗತಕ್ಕೆ ಪಾಕಿಸ್ತಾನ ಸಿದ್ಧವಾಗಿದೆ ಮತ್ತು ನಿಮ್ಮ ರಹದಾರಿ ಪತ್ರ ಪಡೆಯಲು ಮುಂಬೈಯ ರಹದಾರಿ ಪತ್ರ ಅಧಿಕಾರಿ ಫಯಾಜ ಹುಸೇನ್ ಅವರನ್ನು ಸಂಪರ್ಕಿಸಿ' ಎಂದು ಆ ಪತ್ರದಲ್ಲಿ ಬರೆಯಲಾಗಿತ್ತು.

ದಾರಿ ಸುಗಮ

ಫೆಬ್ರುವರಿ ೨೮ ರಂದು ಮೀರ ಲಾಯಕ ಅಲಿಯವರ ಒಂದು ಪತ್ರದೊಂದಿಗೆ ಜಾಕಿಲುದ್ದೀನ ಮುಂಬೈಗೆ ಹೋಗಿ ರಹದಾರಿ ಪತ್ರವನ್ನು ಪಡೆದುಕೊಂಡು ಟಿಕೆಟ್ಟನ್ನೂ ಕೊಂಡುಕೊಂಡ.

ಮೊಹೀನಬಾಜ ಜಂಗನ ಒಬ್ಬ ವರಿಷ್ಠ ಅಧಿಕಾರಿ. ಫೆಬ್ರುವರಿ ೨೩ ರಂದು, ಮುಂಬೈ ತಲುಪಿದ. ಮೀರ ಲಾಯಕ ಅಲಿಯವರು ತಮ್ಮ ಮಹಲಿನಿಂದ ಹೊರಟು, ಭಾರತದ ಗಡಿ ದಾಟುವವರೆಗೆ ಅವರನ್ನು ಎಲ್ಲಿ ತಡೆಯುವ ಸಂಭವವಿದೆ ಎಂಬುದನ್ನು ಅಭ್ಯಸಿಸುವದೇ ಅವನ ಉದ್ದೇಶವಾಗಿತ್ತು.

ಈ ವರಿಷ್ಠ ಅಧಿಕಾರಿ ೨೬ ರಂದು ಹೈದರಾಬಾದಿಗೆ ಬಂದಿಳಿದು ಮೀರ ಲಾಯಕ ಅಲಿಯ ತಂಗಿಗೆ ಒಂದು ಪತ್ರ ಬರೆದು 'ಹೈದರಾಬಾದಿನಿಂದ ಪಾಕಿಸ್ತಾನಕ್ಕೆ ಯಾವ ತೊಂದರೆಯಿಲ್ಲದೆ ಬರಬಹುದು. ಆದರೆ ಮೀರ ಲಾಯಕ ಅಲಿಯವರು ತಮ್ಮ ಮಹಲಿನ ಪಹರೆದಾರರಿಗೆ ಕಾಣದಂತೆ ಬೇಗಮಪೇಟದ ರೇಲ್ವೆ ಸ್ಟೇಷನ್ ತಲುಪಿದರೆ ಸಾಕು' ಎಂದು ತಿಳಿಸಿದ.

ಯೋಜನೆ ಸಿದ್ಧವಾದ ಕೂಡಲೇ ಮೀರ ಲಾಯಕ ಅಲಿ ಮೋಟಾರಿನಿಂದ ಬೇಗಂಪೇಟದ ರೇಲ್ವೆ ಸ್ಟೇಶನ್ ತಲುಪಿದರು. ಅವರ ಜೊತೆ ಅವರ ಪತ್ನಿ, ಮಗಳು ಲಾಯಕ ಬಾನೂ ಮತ್ತು ಮಗ ಮಹಮ್ಮದ ಅಜಂ ಇದ್ದಿರಬಹುದು. ಮಾರ್ಚ್ ೩ರಂದು ಇವರನ್ನು ಬೇಗಂಪೇಟದ ರೇಲ್ವೆ ಸ್ಟೇಶನ್ ತಲುಪಿಸಲು ಬಾಡಿಗೆ ಕಾರಿನ ವ್ಯವಸ್ಥೆ ಮಾಡಲಾಗಿತ್ತು.

ಮೀರ ಲಾಯಕ ಅಲಿ ಸ್ವತಃ ತಾವೇ ಪಾಕಿಸ್ತಾನಕ್ಕೆ ಹೋಗುವ ಮಾರ್ಗಗಳ ಬಗ್ಗ ಆಳವಾಗಿ ವಿಚಾರಿಸಿದರು. ಅವರು ಯೋಚಿಸಿದ ಮಾರ್ಗಗಳ ಪೈಕಿ ಒಂದು ಕಲಕತ್ತಾವನ್ನು ಬಳಸಿಕೊಂಡು ಪೂರ್ವ ಪಾಕಿಸ್ತಾನಕ್ಕೆ ಹೋಗುವುದು. ಎರಡನೆಯದು ಗೋವೆಯಿಂದ ಪಶ್ಚಿಮ ಪಾಕಿಸ್ತಾನ ತಲುಪುವುದು. ಮೂರನೆಯದು ಪಾಂಡಿಚೇರಿಯಿಂದ ಮತ್ತು ನಾಲ್ಕನೆಯದು ಮುಂಬೈ ಮುಖಾಂತರ ಪಾಕಿಸ್ತಾನ ಸೇರುವುದು. ಕೊನೆಗೆ ದೀರ್ಘವಾಗಿ ವಿಚಾರಮಾಡಿದ ನಂತರ, ಮುಂಬೈಯಿಂದ ಹೋಗುವುದೆಂದು ನಿರ್ಧಾರವಾಯಿತು. ಬೇಗಂಪೇಟದ ವಿಮಾನ ನಿಲ್ದಾಣದಿಂದ ಮುಂಬೈಗೆ ಹೋಗುವುದಾಗಿದ್ದರೆ ಯಾರಾದರೂ ಅವರನ್ನು ಬೇಗಂಪೇಟದಲ್ಲಿ ಗುರುತಿಸುವ ಸಂಭವವಿತ್ತು. ಆದ್ದರಿಂದ ಬೇಗಂಪೇಟದಿಂದ ಮುಂಬೈವರೆಗೆ ರಾತ್ರಿಯಲ್ಲಿ ಪ್ರಯಾಣಿಸಬೇಕೆಂದು ನಿರ್ಧರಿಸಲಾಯಿತು.

ದಪ್ಪಮುಪ್ಪ ದೇಹ, ಬಿಳಿಯ ಬಣ್ಣ, ಎತ್ತರವಾದ ಮೈಕಟ್ಟಿನ ಆಸಾಮಿ ಮೀರ ಲಾಯಕ ಅಲಿ. ಮೊದಲು ಮುಖದ ಮೇಲೆ ಮೀಸೆ, ದಾಡಿಯಾಗಲಿ ಬೆಳೆಸಿರಲಿಲ್ಲ. ಸ್ವಲ್ಪ ಮೈಯನ್ನು ಇಳಿಸಿ ಮುಖದ

ಮೇಲೆ ಪಾಡಿ ಮೀಸೆ ಬೆಳೆಸಿ ಯಾರೂ ತಮ್ಮನ್ನು ಸುಲಭವಾಗಿ ಗುರುತು ಹಿಡಿಯದಂತೆ ಮಾಡುವುದು ಅವರ ಯೋಜನೆಯಾಗಿತ್ತು.

ಮೀರ ಲಾಯಕ ಅಲಿಯವರಿಗೆ ತಮ್ಮ ಬ್ಯಾಂಕಿನಿಂದ ಒಂದು ತಿಂಗಳಿಗೆ ೧೫೦೦ ರೂ. ಮಾತ್ರ ತೆಗೆಯುವ ಪರವಾನಿಗೆಯಿತ್ತು. ಹೆಚ್ಚಿನ ಹಣ ಬೇಕಾದರೆ ಪೋಲೀಸ ಅಧಿಕಾರಿಗಳನ್ನು ಕೋರಬೇಕಾಗಿತ್ತು. ಅವರ ಪ್ರಯಾಣಕ್ಕೆ ಈ ಹಣ ಸಾಕಾಗುತ್ತಿರಲಿಲ್ಲ. ಸಮೀಪದ ಸಂಬಂಧಿಕರಾದ ಮಾಜಿ ಚೀಫ್ ಇಂಜನಿಯರ್ ಸಯ್ಯದ್ ಅವರು ಲಾಯಕ ಅಲಿಯವರ ಸೇವಕನ ಕೈಲಿ ಐವತ್ತು ಸಾವಿರ ರೂಪಾಯಿಗಳನ್ನು ಕಳಿಸಿ ಹಣದ ತೊಂದರೆಯನ್ನು ನೀಗಿಸಿದರು.

೧೯೫೦ರ ಮಾರ್ಚ್ ೧ರಂದು ಮೀರ ಅಲಿಯವರ ಸೇವಕ ಮೊಹಿಯುದ್ದೀನ ಹೈದರಾಬಾದಿನಿಂದ ಮುಂಬೈಗೆ ಮೊದಲನೆಯ ದರ್ಜೆಯ ನಾಲ್ಕು ಟಿಕೆಟ್ಟುಗಳನ್ನು ಕೊಂಡುಕೊಂಡ. ಟಿಕೆಟ್ಟುಗಳನ್ನು ಮಾರ್ಚ್ ೩ ರಂದು ಪ್ರಯಾಣ ಮಾಡಲು ತೆಗೆಸಿಯಾಗಿತ್ತು. ಆ ಸೇವಕ ಈ ಟಿಕೆಟ್ಟುಗಳನ್ನು ಅಲಿಯವರ ಮಗ ಮುಹಮ್ಮದ ಅಜಮನ ಕೈಗೆ ಕೊಟ್ಟ.

ಪಲಾಯನ

ಮಾರ್ಚ್ ೨ ರಂದು ಇಂಜನಿಯರ್ ಮೇಯರ್ಸ್ ಮೀರ ಲಾಯಕ ಅಲಿಯವರ ಒಂದು ಲಕೋಟೆಯೊಂದಿಗೆ ವಿಮಾನದಲ್ಲಿ ಮುಂಬೈಗೆ ಹಾರಿದ. ಅದೇ ದಿನ ಮೀರ ಲಾಯಕ ಅಲಿಯವರ ಮನೆಯಿಂದ ಒಂದು ಮೋಟಾರು ಹೊರಬಿತ್ತು. ಮೋಟಾರಿನ ಹಿಂದಿನ ಆಸನದಲ್ಲಿ ಕುಳಿತಿರುವವರ ಕಡೆಗೆ ಬೆಳಕು ಬೀಳದಂತೆ ಮೋಟಾರಿನ ಗಾಜಿನ ಮೇಲೆ ಬಣ್ಣದ ಬಟ್ಟೆಗಳನ್ನು ಮುಚ್ಚಲಾಗಿತ್ತು. ಮೀರ ಲಾಯಕರ ಸ್ತ್ರೀಯರು ಹೊರಗೆ ಹೋಗುವಾಗ ಇಂಥ ಮೋಟಾರನ್ನು ಉಪಯೋಗಿಸುತ್ತಿದ್ದರು. ಆದ್ದರಿಂದ ಕಾವಲುಗಾರರು ಈ ಮೋಟಾರನ್ನು ತಡೆಯದೆ ಬಿಟ್ಟರು.

ಹೀಗಾಗಿ ಸ್ವಾಭಾವಿಕವಾಗಿಯೆ ಪೋಲೀಸರಿಗೆ ಅದರಲ್ಲಿರುವವರು ಪುರುಷರೆಂದು ತಿಳಿಯಲಿಲ್ಲ. ಅವರಲ್ಲಿ ಮೀರ ಲಾಯಕ ಅಲಿಯವರ ಸಮೀಪದ ಸಂಬಂಧಿಗಳಾದ ಅಲಿ ಅಬ್ಬಾಸ್, ಮೀರ ಮಹಮದ, ಶಾಹೂದ್ದೀನ ಮತ್ತು ರಮಜಾನ ಅಲಿ ಅವರಿದ್ದರು.

ಹೋಳಿಯ ಹಬ್ಬದ ಸಂಭ್ರಮದಲ್ಲಿ ಇಡೀ ಹೈದರಾಬಾದು ಪಾಲುಗೊಂಡಿತ್ತು. ಆದರೆ ಮೀರ ಲಾಯಕ ಅಲಿಯವರ ಮಹಲಿನಲ್ಲಿ ಒಂದು ತರದ ಬಿಗುವಿನ ವಾತಾವರಣ ಆವರಿಸಿತ್ತು. ಆ ಸಮಯದಲ್ಲಿ ಉತ್ತರ ಪ್ರದೇಶದ ಒಂದು ಪೋಲೀಸಪಡೆ ಪಹರೆ ನಡೆಸುತ್ತಿತ್ತು.

ಬಲೆ ಬೀಸಿದರು

ಅದೇ ಸಮಯದಲ್ಲಿ ಮೀರಲಾಯಕ ಅಲಿ ತಮ್ಮ ಉದ್ಯಾನದಲ್ಲಿ ಎಡೆಬಿಡದೆ ತಿರುಗುತ್ತಿದ್ದರು. ಸಿಪಾಯಿ ರಾಮಜೀವನ ಪಾಂಡೆ ಪಹರೆ ನಡೆಸುತ್ತಿದ್ದ. ಮೀರ ಲಾಯಕ ಅಲಿಯವರನ್ನು ನೋಡಿ ಅವರ ಹತ್ತಿರ ಹೋಗಿ, "ನಮಸ್ಕಾರ ಸಾಹೇಬ !" ಎಂದ.

"ನಮಸ್ಕಾರ, ನಮಸ್ಕಾರ!" ಮೀರ ಲಾಯಕ ಅಲಿ ಮುಂದುವರೆದರು, "ಇವತ್ತು ಹೋಳಿ ಹಬ್ಬ ಅಲ್ಲವೆ?"

"ಹೌದು. ಸಾಹೇಬ್" ಎಂದ ಆತ ತಲೆ ತೂಗಿಸುತ್ತ. ಅನಂತರ ಕ್ಷಣಕಾಲ ತಡೆದು ನುಡಿದ, "ನೀವು ಹೋಳಿ ಆಡುವುದಿಲ್ಲವೆ?"

"ಏನು? ಒಬ್ಬ ಕೈದಿ ಹೋಳಿ ಆಡುವುದೆ ? ನೀವು ಆಡಿ ಹೋಗಿ. ಭಾಂಗ್* ಮುಂತಾದವು ಸಿದ್ಧವಿವೆ ತಾನೆ ?" ಎಂದರು ಮೀರ ಲಾಯಕ ಭಾರವಾದ ಧ್ವನಿಯಲ್ಲಿ.

ರಾಮಜೀವನ ತಲೆ ಕೆರೆಯುತ್ತಾ, "ಇಲ್ಲ ಸಾಹೇಬರೆ. ಹಾಲಿನ ಕೊರತೆ ತುಂಬಾ ಇದೆ" ಎಂದ.

"ಹಾಗೇನು! ಸರಿ ನಮ್ಮ ಎರಡು ಎಮ್ಮೆಯ ಹಾಲನ್ನು ನೀವೇ ತೆಗೆದುಕೊಳ್ಳಿ. ವರ್ಷದಲ್ಲಿ ಒಂದೇ ಬಾರಿ ಬರುವ ಹಬ್ಬವನ್ನು ಆಚರಿಸದೆ ಇರುತ್ತೀರಾ?" ಎಂದರು.

ರಾಮಜೀವನ ಪಾಂಡೆ ಒಪ್ಪಿಕೊಂಡ.

"ನಾವು ಈಗಲೇ ಹಾಲು ಕಳಿಸುತ್ತೇವೆ. ನೀವು ಸಿದ್ಧವಾಗಿ" ಎಂದು ಮೀರ ಲಾಯಕ ಹೇಳಿ ಹೊರಟುಹೋದರು. ಸ್ವಲ್ಪ ಸಮಯದ ನಂತರ

---

* ಹಾಲು, ಸಕ್ಕರೆ ಮತ್ತು ಬದಾಮಿಗಳ ಮಿಶ್ರಣದಿಂದ ಮಾಡುವ ಒಂದು ಮಾದಕ ಪೇಯ.

ಹಾಲು ಬಂತು. ಸೀಪಾಯಿಗಳು ಸಂತೋಷದಿಂದ ಕುಣಿದಾಡಿದರು.

ಸ್ವಲ್ಪ ಕತ್ತಲಾದಾಗ ಪೋಲೀಸು ಪಡೆ ಭಾಗಿನ ನಶೆಯಲ್ಲಿ ಪ್ರಜ್ಞಾಹೀನವಾಯಿತು. ಇದೇ ಸಮಯ ನೋಡಿಕೊಂಡು ಒಂದು ಕಾರು ಮಹಲಿನ ಹಿಂದಿನ ಬಾಗಿಲಿಗೆ ಬಂದು ನಿಂತಿತು. ಕಾರಿನಿಂದ ಇಳಿದ ಇಬ್ರಾಹಿಂ ನೇರವಾಗಿ ಮೀರ ಲಾಯಕ ಅಲಿಯವರ ಕೋಣೆಗೆ ನಡೆದ. ಆ ಸಮಯದಲ್ಲಿ ಕೋಣೆಯೊಳಗೆ ಮೀರ ಲಾಯಕ ಅಲಿ ಅವರ ಪತ್ನಿ, ಮಗ ಮತ್ತು ಮಗಳಿದ್ದರು. ಆಗ ಅವರ ಮುಖದ ಮೇಲೆ ಭಯದ ಛಾಯೆಯಿತ್ತು.

ಇಬ್ರಾಹಿಂ ಮೀರಲಾಯಕ ಅಲಿಯವರೆದುರು ಬಾಗಿ ನಮಸ್ಕರಿಸಿ, ಹಿಂದೆ ಸರಿದು ನಿಂತ.

"ಏನಾಯಿತು ?" ಎಂದು ಮೀರ ಲಾಯಕರು ಕ್ಷೀಣ ಸ್ವರದಲ್ಲಿ ಕೇಳಿದರು.

"ಎಲ್ಲವೂ ಸರಿಯಾಗಿದೆ ಪ್ರಭು. ಸಿಪಾಯಿಗಳು ಮೈಮೇಲೆ ಎಚ್ಚರವಿಲ್ಲದಂತೆ ಮಲಗಿದ್ದಾರೆ" ಎಂದ ಮೆಲ್ಲಗೆ.

ಮೀರ ಲಾಯಕ ಕೊನೆಯ ಸಾರೆ ತನ್ನ ಕೋಣೆಯನ್ನು ನೋಡಿ, "ಬೇಗ ಸಿದ್ಧವಾಗಿ, ಸಮಯ ತುಂಬಾ ಕಡಿಮೆ" ಎಂದರು.

ಪಯಣ

ಆಗ ಸಮಯ ರಾತ್ರಿಯ ೧ ಗಂಟೆ. ಎಲ್ಲರೂ ಸುರಕ್ಷಿತವಾಗಿ ಹಿಂಬಾಗಿಲಿನಿಂದ ಹೊರಗೆ ಬಂದ.

ಆ ಕಪ್ಪುಬಣ್ಣದ ಶೆವರ್ಲೆ ಕಾರಿನ ಒಳಗೆ ನುಗ್ಗಿದರು. ಅಲಿಯ ಪತ್ನಿ ಆ ಮೇಲೆ ಮಗಳು, ನಂತರ ಮಗ. ಲಾಯಕ ಅಲಿ ಅವರ ಕಾಲಿನ ಹತ್ತಿರ ಮಲಗಿಕೊಂಡರು.

ಇಬ್ರಾಹಿಂ ತನ್ನ ಒಡೆಯರಿಗೆ ಕೊನೆಯ ನಮಸ್ಕಾರ ಮಾಡುತ್ತ, "ದೇವರು ನಿಮಗೆ ಒಳ್ಳೆಯದು ಮಾಡಲಿ" ಎಂದು ಹಾರೈಸಿದ.

ಕಾರು ಅಲ್ಲಿಂದ ಹೊರಟಿತು. ಶಾವೂದ್ದೀನ ಕಾರನ್ನು ಚಲಾಯಿಸುತ್ತಿದ್ದ.

ಮೀರ ಲಾಯಕ ಅಲ್ಲಿಯವರ ಮಹಲಿನ ಪಕ್ಕದಲ್ಲೆ ಹೈದರಾಬಾದ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಪಾತರ್ೂ ಅವರ ಬಂಗಲೆ. ಇವರ ಬಂಗಲೆಯ ಪಕ್ಕದಲ್ಲಿ ಹೈದರಾಬಾದ ಶಾಸನದ ಮುಖ್ಯ ಸಚಿವರ ಬಂಗಲೆ. ಇಲ್ಲಿ ೨೪ ಗಂಟೆ ಪೋಲೀಸ್ ಪಹರೆ ನಡೆಯುತ್ತಿತ್ತು. ಆದರೂ ಆ ಕಪ್ಪು ಶವರ್ಲೆ ಕಾರು ಸರಳವಾಗಿ ಅಲ್ಲಿಂದ ಜಾರಿಕೊಂಡಿತು.

ಮೀರ ಲಾಯಕ್ ಅಲಿಯವರ ಸಮೀಪ ಒಬ್ಬ ಸಂಬಂಧಿಕ ನಜಿರೂದ್ದಿನ ಮಹಮೂದ ಗುಲಬರ್ಗಾದಲ್ಲಿ ವಾಸಿಸುತ್ತಿದ್ದರು. ಕೆಲವು ಗಂಟೆಗಳ ನಂತರ ಶವರ್ಲೆ ಕಾರು ನಜಿರೂದ್ದಿನ ಮಹಮೂದ ಅವರ ಮನೆಯ ಮುಂದೆ ನಿಂತಿತು. ಅಲ್ಲಿ ಅವರನ್ನು ತಲುಪಿಸಿ ಆ ಕಪ್ಪು ಶವರ್ಲೆ ಕಾರು ಮತ್ತೆ ತನ್ನ ಮಹಲನ್ನು ಸೇರಿತು.

ನಜರೂದ್ದಿನನ ಮನೆಯಲ್ಲಿ ಮೀರ ಲಾಯಕ್ ಅಲಿಯವರ ತಂಗಿ ಇದ್ದಳು.

ಮುಂಬೈಗೆ ಹೋಗುವ ಮೇಲು ಗುಲಬರ್ಗಾವನ್ನು ನಸುಕಿನ ೫ ಗಂಟೆಗೆ ಬಿಡುತ್ತಿತ್ತು. ತಮ್ಮ ಪಲಾಯನಕ್ಕೆ ಇದೇ ತಕ್ಕ ಸಮಯ ಎಂದು ಅರಿತಿದ್ದರು. ತಮ್ಮನ್ನು ಯಾರೂ ಸುಲಭವಾಗಿ ಗುರುತು ಹಿಡಿಯದಂತೆ ದಾಡಿ ಬೆಳೆಸಿ ಕಣ್ಣಿಗೆ ಅಗಲವಾದ ಕನ್ನಡಕ ಧರಿಸಿದ್ದರು.

ಮೇಲುಗಾಡಿಯನ್ನು ಹತ್ತುವ ಮೊದಲು ಸಮೀಪದ ಮಸೀದೆಗೆ ಹೋಗಿ ಪ್ರಾರ್ಥನೆ ಸಲ್ಲಿಸಿದರು.

ಮಾರ್ಚ್ ೪, ೧೯೫೦ ರಂದು ಅವರು ದಾದರ ಸ್ಟೇಶನ್ನಲ್ಲಿ ಇಳಿದಾಗ ಅಲ್ಲಿ ಇವರನ್ನು ಸ್ವಾಗತಿಸಲು ಶೇಖ ಇಬ್ರಾಹಿಮ ಬಂದಿದ್ದ. ಆತ ನಲ ಬಜಾರದ ಒಂದು ಚಿಕ್ಕ ಕೋಣೆಯಲ್ಲಿ ವಾಸವಾಗಿದ್ದ. ಅವನ ಆ ಚಿಕ್ಕ ಅಂಗಡಿಯಲ್ಲಿ ಹೈದರಾಬಾದಿನ ಮಾಜಿ ಪ್ರಧಾನ ಮಂತ್ರಿ ಮತ್ತು ಅವರ ಕುಟುಂಬದವರು ಒಂದು ರಾತ್ರಿಯನ್ನು ಕಳೆದರು.

ಮಾರ್ಚ್ ೫ ರಂದು ಸಾಂತಾಕ್ರೂಜ್ ವಿಮಾನ ನಿಲ್ದಾಣದಿಂದ ವಿಮಾನವೊಂದು ಮೀರ ಲಾಯಕ ಅಲಿ ಮತ್ತು ಕುಟುಂಬದವರನ್ನು ಹೊತ್ತುಕೊಂಡು ಕರಾಚಿಗೆ ಹಾರಿತು.

ಅಲ್ಲಿಯವರೆಗೆ ಕೈಲಿ ಜೀವ ಹಿಡಿದು ಕುಳಿತ ಅವರು ಒಬ್ಬ ಮುಖ ಒಬ್ಬರು ನೋಡಿ ಸಂತಸದ ಮುಗುಳುನಗೆ ನಕ್ಕರು.

'ಯಥಾಸ್ಥಿತಿ'

ಇತ್ತ ಬೇಗಂಪೇಟದ ಮಿರ ಲಾಯಕ್ ಅಲಿಯವರ ಮಹಲಿನಲ್ಲಿ ಎಲ್ಲವೂ ಯಥಾಪ್ರಕಾರ ನಡೆಯುತ್ತಿತ್ತು.

ಮೀರ ಲಾಯಕ್ ಅಲಿಯವರ ಪಲಾಯನದ ಸುಳಿವು ಸಿಗಬಾರದೆಂದು ಈ ಎಲ್ಲ ಕೆಲಸವನ್ನು ಅಲಿಯವರ ನಿಷ್ಠಾವಂತ ಸೇವಕರು ಮಾಡುತ್ತಿದ್ದರು. ಅಲಿಯವರು ಸುರಕ್ಷಿತವಾಗಿ ಪಾಕಿಸ್ತಾನ ತಲುಪಿದ ಸುದ್ದಿ ಬಂದೊಡನೆ ಅವರಲ್ಲಿ ಅನೇಕರು ಅಲ್ಲಿಂದ ಜಾರಿಕೊಳ್ಳಲಾರಂಭಿಸಿದರು. ಇದಕ್ಕಿಂತ ಮುಂಚೆಯೆ ಕೆಲವರು ಮಹಲಿನಿಂದ ಮಾಯವಾಗಿದ್ದರು.

ಹೈದರಾಬಾದಿನ ಪ್ರಸಿದ್ಧ ವಜ್ರವ್ಯಾಪಾರಿ ರತನ ಪ್ರಸಾದನಿಗೆ ಮಾರ್ಚ್ ೫ ರಂದು ಆಭರಣದೊಂದಿಗೆ ಮಹಲಿಗೆ ಬರಲು ಹೇಳಲಾಗಿತ್ತು. ಅದೇ ಪ್ರಕಾರ ಆತ ಬಂದ. ಬೇಗಂ ಅವನಿಂದ ಕೆಲವು ಉಂಗುರಗಳನ್ನು ಕೊಂಡುಕೊಂಡಳು!

೧೯೫೦ರ ಮಾರ್ಚ್ ೪ ರಂದು ಒಂದು ನರ್ತಕರ ತಂಡ ಮಹಲಿನ ಒಳಗೆ ಪ್ರವೇಶಿಸಿ ಬಹುಮಾನದೊಂದಿಗೆ ಹೊರಗೆ ಬಂತು. ಸಿಪಾಯಿಗಳು ಕೂಡ ಒಳಗೆ ಹೋದವರು ಎಷ್ಟು, ಹೊರಗೆ ಬಂದವರು ಎಷ್ಟು ಎಂದು ಎಣಿಸುವ ತೊಂದರೆ ತೆಗೆದುಕೊಳ್ಳಲಿಲ್ಲ. ಇದೇ ಪ್ರಕಾರ ಮಾರ್ಚ್ ೪ರಿಂದ ಮಾರ್ಚ್ ೬ರವರೆಗೆ ಮಹಲಿನ ಎಲ್ಲ ಸೇವಕರು ಮಾಯವಾಗಿದ್ದರು. ಮಾರ್ಚ್ ೬ ರಂದು ಮಹಲು ಬಿಕೋ ಎನ್ನುತ್ತಿತ್ತು.

ಬಿರುಗಾಳಿ

ಯಾವಾಗ ಈ ರಹಸ್ಯ ಸಿಡಿಯಿತೊ ಆಗ ದೇಶದಲ್ಲಿ ಬಿರುಗಾಳಿಯೇ ಬೀಸಿತು. ಈ ಪ್ರಕರಣದಲ್ಲಿ ಒಟ್ಟು ೨೬ ವ್ಯಕ್ತಿಗಳು ಪಾಲುಗೊಂಡಿದ್ದರು. ಇವರಲ್ಲಿ ಅಲಿಯವರ ಸಮೀಪದ ಸಂಬಂಧಿಕ ಸಯ್ಯದ ಅಲಾವುದ್ದೀನ್, ತಂಗಿ ಬೇಗಂ, ಹೈದರಾಬಾದಿನ ವಕೀಲ ಹಫೀಜ ಅಬ್ದುಲ ಕವಿ, ಇವನ ಹೆಸರಿನಲ್ಲಿ ಗುಲಬರ್ಗಾದಿಂದ ಮುಂಬೈಯವರೆಗೆ ಪ್ರಯಾಣ ಮಾಡಿದ್ದರು. ರಾಮಜೀವನ ಪಾಂಡೆಯ ಮತ್ತು ಆತನ ಏಳು ಜನ ಸಹಚರರಲ್ಲದೆ ಇನ್ನೂ ಕೆಲವು ವ್ಯಕ್ತಿಗಳ ಕೈವಾಡವಿತ್ತು. ೨೬ ವ್ಯಕ್ತಿಗಳಲ್ಲಿ ಒಟ್ಟು ೧೭ ವ್ಯಕ್ತಿಗಳನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಯಿತು. ಇನ್ನೂ ೯ ವ್ಯಕ್ತಿಗಳು ಫರಾರಿಯಾಗಿ ಬಿಟ್ಟಿದ್ದರು.

ಏಪ್ರಿಲ್ ೨೮ ರಂದು ಸಿಕಂದರಬಾದಿನ ವಿಶೇಷ ನ್ಯಾಯಾಧೀಶರ ಮುಂದೆ ಈ ಪ್ರಕರಣದ ವಿಚಾರಣೆ ನಡೆಯಿತು. ಪ್ರಕರಣದಲ್ಲಿ ಒಟ್ಟು ೮೦ ವ್ಯಕ್ತಿಗಳ ಸಾಕ್ಷ್ಯ ಪಡೆಯಲಾಯಿತು. ಆಪಾದಿತರು ದೇಶದ್ರೋಹಿಯಾದ ಕೈದಿಯ ಪಲಾಯನಕ್ಕೆ ಸಹಾಯ ಮಾಡಿದ್ದಾರೆ ಎಂದು ನ್ಯಾಯಾಲಯ ತೀರ್ಪು ಕೊಟ್ಟಿತು.

ಮಧ್ಯಪ್ರದೇಶದ ಒಬ್ಬ ಪೋಲೀಸ್ ವರಿಷ್ಠ ಅಧಿಕಾರಿ ಸಯ್ಯದ ಫಯಾಜ ಹುಸೇನನು ಅಪರಾಧಿ ಎಂದು ಘೋಷಿಸಲಾಯಿತು. ಆದರೆ ಅವರು ಆಗಲೆ ಪಾಕಿಸ್ತಾನಕ್ಕೆ ಓಡಿ ಹೋಗಿದ್ದರು. ✡



ಸಾಲ

ಶವದ
ಕಾರ್ನಿಯಾ ಕಿತ್ತು,
ಕುರುಡು ಜೀವಕಳವಡಿಸಿಟ್ಟು,
ಕರುಣಾಳು ಬಾ ಬೆಳಕೆ
ಎಂದು, ನಡುಬೀದಿಯಲಿ ಬಿಟ್ಟು
ಹರಸಿ, ಬಿರಿಸಿದ ನೆರವು!
ಅರಳಲೂ ಬಹುದು!
ಉರುಳಲೂ ಬಹುದು!

— "ಆನಂದಾಗರ" ಕಿನ್ನಿಗೋಳಿ

ಈಗಲ್ಲಿಯ ಪರಿಸ್ಥಿತಿ ಬದಲಾಗಿದೆ

ಇರಾಣ ಅಂದು—ಇಂದು

ಕೆ. ಎ. ಕುಬಣೂರಾಯ

ಇರಾಣದ ನಾಗರಿಕತೆ ಪ್ರಪಂಚದ ಪ್ರಾಚೀನ ನಾಗರಿಕತೆಗಳಲ್ಲೊಂದಾಗಿದ್ದು ಅಲ್ಲಿನ ಜನರಿಗೆ ತಮ್ಮ ಪ್ರಾಚೀನ ಸಂಸ್ಕೃತಿ, ಇತಿಹಾಸಗಳ ಮೇಲೆ ಅಪಾರ ಅಭಿಮಾನವಿದೆ. ಇಂದಿನ ಮೂರೂವರೆಕೋಟಿ ಇರಾನೀಯರಲ್ಲಿ ಹೆಚ್ಚಿನವರು ಮುಸಲ್ಮಾನರು. ಅವರಲ್ಲೂ ಮೂರನೆಯ ಎರಡಂಶ ಶಿಯಾ ಪಂಥಕ್ಕೆ ಸೇರಿದವರು. ಇವರ ಜನಾಂಗ ಮಧ್ಯ ಪ್ರಾಚ್ಯದ ರಾಷ್ಟ್ರಗಳ ಜನಾಂಗಕ್ಕಿಂತ ಭಿನ್ನವಾಗಿದೆ. ಇದೂ ಅಲ್ಲದೆ ಮಧ್ಯಪೂರ್ವದ ಅರಬ್ ರಾಷ್ಟ್ರಗಳಲ್ಲಿ ವ್ಯಾಪಿಸಿದ ಸಮಾಜವಾದ, ಮಾರ್ಕ್ಸ್‌ವಾದ, ಗೆರಿಲ್ಲಾ ಹೋರಾಟಗಳಿಗಿಂತ, ಇತ್ತೀಚಿನವರೆಗೆ ಇರಾಣ ತನ್ನನ್ನು ಹೆಚ್ಚಾಗಿ ದೂರವಿರಿಸಿ ಕೊಂಡಿದೆ. ೧೯೭೩ ರಿಂದ ತನ್ನ ಪೆಟ್ರೋಲಿಯಂ ಬೆಲೆಯನ್ನು ನಾಲ್ಕು ಪಟ್ಟು ಏರಿಸಿರುವುದರಿಂದ ಅಲ್ಲಿನ ಸಂಪತ್ತು ಕೂಡ ಹೆಚ್ಚಿದೆ. ಆದರೆ ಹೆಚ್ಚಿದ ಸಂಪತ್ತು ಸಮನಾಗಿ ಮತ್ತು ಸರಿಯಾಗಿ ಹಂಚಲ್ಪಡದೆ ದೇಶ ಒಂದು ರೀತಿಯಲ್ಲಿ ಆರ್ಥಿಕ ಅಜೀರ್ಣದ ತೊಂದರೆಗೀಡಾಗಿದೆ.

ಇಸ್ಲಾಮಿನ ಪ್ರಭಾವ

ಇಂದಿನ ಇರಾಣದ ಜನತೆಯಾಗಲಿ ಅರಸನಾಗಲಿ ಇಸ್ಲಾಮ್ ಧರ್ಮದ ಹಿನ್ನೆಲೆಯಿಂದ ಸಾಗುವುದರಿಂದ ಇಸ್ಲಾಂ ಇರಾಣದಲ್ಲಿ ಅರಸನಷ್ಟೇ ಪ್ರಬಲವಾದ ಶಕ್ತಿಯೆಂದು ತಿಳಿಯಬೇಕಾಗುತ್ತದೆ. ಕ್ರಿ. ಶ. ೬೩೭ ರಿಂದ ಇಸ್ಲಾಂ ಧರ್ಮ ಅಲ್ಲಿ ವ್ಯಾಪಿಸಿತು. ಇಸ್ಲಾಮೀ ಅರಸರಲ್ಲಿ ಒಬ್ಬನಾದ ನಾದಿರ ಶಾಹ ಭಾರತಕ್ಕೂ ದಾಳಿ ಇಟ್ಟಿದ್ದ. ಅವನೇ ಮೊಗಲರ ಮಯೂರ ಸಿಂಹಾಸನವನ್ನು ತನ್ನ ದೇಶಕ್ಕೆ ಕೊಂಡೊಯ್ದ. ಅದೇ ಸಿಂಹಾಸನದ ಮೇಲೆ ಮೊನ್ನೆ ಮೊನ್ನೆಯ ವರೆಗೆ ಇರಾಣದ ಶಾಹ ಕುಳಿತಿದ್ದರು.

ಇರಾಣದ ಅರಸರಿಗೆ ವಿರೋಧ ಬರುವುದು, ಬದಲಾವಣೆಗಳಾಗುವುದು ಹೊಸತಲ್ಲ. ಇಪ್ಪತ್ತನೆಯ ಶತಮಾನದ ಆದಿಯಿಂದಲೇ ಅಂದಿನ ಶಾಹನಿಗೂ [illegible]. ಅವರಲ್ಲೂ ಮುಖ್ಯವಾಗಿ [illegible]ಗಳಿಗೂ ವಿರಸ [illegible].

ಕೈಬಿಚ್ಚಿ ಖರ್ಚುಮಾಡುವುದರಲ್ಲಿ ಪಶ್ಚಿಮ ಏಶಿಯದ ಅರಸರು ಹೆಸರಾದವರು. ಸೌದಿ ಅರೇಬಿಯದ ಶಾಸಕರಾಗಲಿ ಈಜಿಪ್ಟಿನ ಫರೂಕರಾಗಲಿ ಇರಾಕಿನ ಖಲೀಫರಾಗಲಿ ದುಂದುಗಾರಿಕೆಯಲ್ಲೂ ವಿಲಾಸ ಜೀವನದಲ್ಲಿಯೂ ಒಬ್ಬರೊಡನೊಬ್ಬರು ಸ್ಪರ್ಧಿಸಿ ಮೀರಿಸುವವರು. ಇರಾಣದ ಶಾಹರೂ ಅದಕ್ಕೆ ಕಡಿಮೆಯವರಾಗಿರಲಿಲ್ಲ. ಬುದ್ಧಿಜೀವಿಗಳು ಜನತೆಯ ಹಣ ಹೀಗೆ ಪೋಲಾಗುವುದರಿಂದ ಕ್ರುದ್ಧರಾದರು. ಅದೂ ಅಲ್ಲದೆ ಆ ಕಾಲದಲ್ಲೂ ಯುರೋಪಿಯನ್ನರು ಖನಿಜ ತೈಲದ ನಿಧಿಯಾಗಿದ್ದ ಇರಾಣದ ಮೇಲೆ ಕಣ್ಣಿಟ್ಟುಕೊಂಡೇ ಇದ್ದರು. ಉತ್ತರದಲ್ಲಿ ಕ್ಯಾಸ್ಪಿಯನ್ ಸಮುದ್ರದಾಚೆಯಿಂದ ಸೋವಿಯತ್ ರಶಿಯ ಇರಾಣವನ್ನು ಕಬಳಿಸ ಬಯಸಿದರೆ ಇತರ ಭಾಗಗಳಲ್ಲಿ ಪ್ರಾಮುಖ್ಯ–ವಾಗಿ ದಕ್ಷಿಣದ ಕಡೆಯಿಂದ ಬ್ರಿಟಿಶರ ಒತ್ತಡ–ಪ್ರಬಲವಾಗಿತ್ತು. ಈಗಿನ ಪಾಕಿಸ್ತಾನವಂತೂ ಬ್ರಿಟಿಷ್ ಇಂಡಿಯಾ ಆಗಿತ್ತಷ್ಟೆ. ಅದು ಇರಾಣದ ಗಡಿ ಪ್ರದೇಶ. ಶಾಹನ ವಿರೋಧಿಗಳಿಗೆ ತಮ್ಮ ಅರಸನು ರಶಿಯ ಮತ್ತು ಇಂಗ್ಲಂಡಿನ ಒತ್ತಡಗಳಿಗೆ ಮಣಿಯುವನೆಂಬ ಸಹಜ ಭೀತಿ ಇತ್ತು. ಹಾಗಾಗುವುದು ಅಸಂಭವವೂ ಆಗಿರಲಿಲ್ಲ.

ಈ ಒಳಕುದಿತ ಸ್ಫೋಟವಾದುದು ೧೯೨೧ರಲ್ಲಿ. ಸೇನಾಧಿಕಾರಿಯಾಗಿದ್ದ ರೆಜಾಖಾನ್ ಸರಕಾರವನ್ನು ಉರುಳಿಸಿದ. ಮುಂದಿನ ಐದು ವರ್ಷಗಳ ಅವಧಿಯೊಳಗೆ ಅವನೇ ಇರಾಣದ ಶಹಾನೆಂದು ಘೋಷಿಸಲ್ಪಟ್ಟು. ಇರಾಣಿಯರು ಈತನನ್ನು ತಮ್ಮ ೨೫೦೦ ವರ್ಷಗಳಷ್ಟು ಹಿಂದಿನ ಶಾಹನ ಪರಂಪರೆಯವನೆಂದು ಒಪ್ಪಿಕೊಂಡರು.

ರೆಜಾಖಾನ್ ಅಂದಿನ ಇರಾಣದ ಬಯಕೆಯನ್ನು ಈಡೇರಿಸುವ ಪ್ರತೀಕವಾದ. ತನ್ನ ಪ್ರಗತಿಪರ ಧೋರಣೆಗಳಿಂದ ಜನಮಾನಸದಲ್ಲಿ ಸ್ಥಾನವನ್ನು ಪಡೆದ. ಹಿಂದಿನಿಂದಲೂ ನಡೆದುಕೊಂಡು ಬಂದಿದ್ದ ಹಲವು ಅಂಧಾನುಕರಣೆಗಳನ್ನು ಕಿತ್ತೆಸೆದ. ಇಂದಿನ ಇರಾಣದ ಶಾಹನೂ, ಮುಹಮ್ಮದ್ ರಜಾಖಾನ್ ಪಹಲವಿಯೂ ಕಟ್ಟುನಿಟ್ಟಾಗಿ ಅನುಸರಿಸಿದ ಧೋರಣೆಗಳನ್ನು ಕಾಣುವಾಗ, ಹಿಂದಿನ ಶಾಹ ಇರಾಣನ್ನು ಧಾರ್ಮಿಕ ಅಂಧಾನುಕರಣೆಯ ದಾರಿಯಿಂದ ತಿರುಗಿಸಿ ಕೊಂಡೊಯ್ಯಲು ಪ್ರಯತ್ನಿಸಿದ್ದರಲ್ಲಿ ಆಶ್ಚರ್ಯವೆನಿಸುವುದಿಲ್ಲ. ಆ ಮಟ್ಟಿಗೆ ತನ್ನ ತಂದೆಯ ಗುಣವನ್ನು ಮಗನು ಹೋಲುತ್ತಿದ್ದನೆನ್ನಬಹುದು.

ಆದರೆ ಎರಡನೆಯ ಮಹಾಯುದ್ಧ ಪ್ರಪಂಚವನ್ನು ವ್ಯಾಪಿಸಿತು. ಅದೇ ಸಂದರ್ಭದಲ್ಲಿ ರೆಜಾ–ಖಾನ್ ತನ್ನ ದೇಶದಲ್ಲಿ ಹೊಸ ಕೈಗಾರಿಕೆಗಳನ್ನು ಆರಂಭಿಸಲು ತೊಡಗಿದ. ಇರಾಣದಲ್ಲಿ ವಿವಿಧ ಕಾರಖಾನೆಗಳ ಸ್ಥಾಪನೆಯಾಗಿ ಅದು ಉದ್ಯಮೀಕರಣದ ಪಥದಲ್ಲಿ ಸಾಗುತ್ತಿತ್ತು. ಆಗ ಜಗತ್ತನ್ನು ನಡುಗಿಸಿದ್ದ ಜರ್ಮನ್ನರ ಪ್ರಭಾವಕ್ಕೆ ಶಾಹನು ಒಳಗಾದುದರಲ್ಲಿ ಆಶ್ಚರ್ಯವಿಲ್ಲ. ರಶಿಯ ಮತ್ತು ಬ್ರಿಟಿಶರ ಒತ್ತಡದಿಂದ ದೇಶವನ್ನು ಹೊರಗೆ ತಂದವನೂ ಆತನೆ. ಹೀಗಾಗಿ ಇರಾಣದ ಔದ್ಯಮೀಕರಣದಲ್ಲಿ ಜರ್ಮನಿ ನೆರವಾಯಿತು. ಜರ್ಮನ್ ತಂತ್ರಜ್ಞರು ಇರಾಣಕ್ಕೆ ಆಗಮಿಸಿದರು.

ಇದುವೇ ಶಾಹನಿಗೆ ಮುಳುವಾಯಿತು. ೧೯೪೧ ರಲ್ಲಿ ಶಾಹನು ಜರ್ಮನ್ನರೊಂದಿಗೆ ಗೆಳೆತನ ಬೆಳೆಸಿದ್ದು ಬ್ರಿಟಿಶರಿಗೂ ರಶಿಯನ್ನರಿಗೂ ಹಿಡಿಸಲಿಲ್ಲ. ಅವರು ಇರಾಣದ ಮೇಲೆ ಒತ್ತಡವನ್ನು ತಂದರು. ರಶಿಯವು ಪ್ರತ್ಯಕ್ಷವಾಗಿ ತನ್ನ ಗಡಿಯಲ್ಲಿದ್ದ ಇರಾಣದ ಪ್ರದೇಶಕ್ಕೆ ಸೈನ್ಯವನ್ನು ತಂದಿರಿಸಿದರೆ ಇಂಗ್ಲಂಡ್ ಅಪ್ರತ್ಯಕ್ಷವಾಗಿ ಒತ್ತಡ ಹೇರಿತು. ಜರ್ಮನಿಯ ಪ್ರಭಾವ ಅಫಗಾನಿಸ್ತಾನದ ದಾರಿಯಾಗಿ ಭಾರತಕ್ಕೆ ಬಂದರೆ? ಎಂಬ ಭಯ ಇಂಗ್ಲಿಷರಿಗೆ. ಸಿಂಹಾಸನ ತ್ಯಜಿಸುವಂತೆ ರೆಜಾಶಾಹನನ್ನು ಬಲವಂತಪಡಿಸಲಾಯಿತು. ಕೊನೆಗೆ ತನ್ನ ಮಗ ಮೊಹಮ್ಮದ್ ರೆಜಾಶಾಹ ಪಹಲವಿಗೆ ಸಿಂಹಾಸನವಿತ್ತು ಆತ ಅಧಿಕಾರ ತ್ಯಜಿಸಿದ. ಅಂದಿನಿಂದ ಮೊನ್ನೆ ಮೊನ್ನೆಯ ವರೆಗೆ ಮೂವತ್ತು ವರ್ಷಗಳವರೆಗೆ ಮೊಹಮ್ಮದ ರೆಜಾಶಾಹ ಪಹಲವಿ ಇರಾಣದ ಅರಸನಾಗಿದ್ದರು. ಈ ಕಾಲಾವಧಿಯಲ್ಲಿ ಅನೇಕ ಐತಿಹಾಸಿಕ ಮಹತ್ವದ ಘಟನೆಗಳು ಜರುಗಿದವು.

ಇರಾಣದಲ್ಲಿ ಸೈನ್ಯವಿರಿಸಿದ್ದ ರಶಿಯ ಅಲ್ಲಿಂದ ಅದನ್ನು ಹಿಂದೆಗೆಯಲು ಒಪ್ಪಲಿಲ್ಲ. ಆಗ ಇರಾಣ ಉಪಾಯಗಾಣದೆ ಸಂಯುಕ್ತರಾಷ್ಟ್ರಸಂಘಕ್ಕೆ ವಿವಾದವನ್ನೊಪ್ಪಿಸಿತು. ಇದು ನಡೆದುದು ೧೯೪೬ ರಲ್ಲಿ. ಆಗ ರಶಿಯವು ಎಲ್ಲರಿಗೂ ಅಚ್ಚರಿಯೆನಿ

ಸುವಂತೆ ತಂತಾನೆ ಸೈನ್ಯವನ್ನು ಹಿಂದೆಗೆಯಿತು.

ಇರಾಣದ ಪ್ರಧಾನ ಮಂತ್ರಿಗಳಲ್ಲಿ ಡಾಕ್ಟರ್ ಮುಹಮ್ಮದ್ ಮೊಸ್ಸಾದಿಕ್ ಪ್ರಮುಖರು. ಇಂದಿನ ಶಾಹ ವಿರೋಧಿಗಳಿಗೂ ಅವರ ನೆನಪು ಸ್ಫೂರ್ತಿ ಕೊಡುತ್ತದೆ. ಮೊಸ್ಸಾದಿಕ್ ಇರಾಣದ ರಾಷ್ಟ್ರೀಯತೆಗೆ ಹೆಚ್ಚು ಮಹತ್ವ ಕೊಟ್ಟು ಜನತೆಯ ಬಗೆಗೆ ಉದಾರ ನೀತಿಯನ್ನು ಅನುಸರಿಸಿದರೆನ್ನಬಹುದು. ೧೯೫೧ರಲ್ಲಿ ಅವರು ಮಾಡಿದ ಮಹತ್ಕಾರ್ಯವೆಂದರೆ ಆಂಗ್ಲೋ-ಇರಾಣಿಯನ್ ತೈಲ ಕಂಪನಿಯನ್ನು ರಾಷ್ಟ್ರೀಕರಣಗೊಳಿಸಿದ್ದು.

ಇರಾಣದ ಬಹುಮಂದಿ ಮುಸಲ್ಮಾನರಾಗಲಿ ಧಾರ್ಮಿಕ ಸಂಪ್ರದಾಯಗಳನ್ನು ಬದಿಗೊತ್ತಿ ಮುಂದುವರಿದ ಪ್ರಗತಿಪರ ಯುವಕರಾಗಲಿ ಪಾಶ್ಚಾತ್ಯ ಪ್ರಭಾವವನ್ನು ಮೆಚ್ಚಿದವರಲ್ಲ. ಧಾರ್ಮಿಕರಿಗೆ ಅದು ವಿಧರ್ಮಿ ಸಂಸ್ಕೃತಿ ಎಂಬ ತಿರಸ್ಕಾರವಿದ್ದರೆ, ಅಧಾರ್ಮಿಕರಾದ ಆಧುನಿಕರ ದೃಷ್ಟಿಯಲ್ಲಿ ಅದು ಸಾಮ್ರಾಜ್ಯವಾದದ, ಬೂರ್ಜ್ವಾ ಪದ್ಧತಿಯ ಪ್ರಚಾರವಾಗಿತ್ತು. ಡಾಕ್ಟರ್ ಮೊಸ್ಸಾದಿಕ್ ತೈಲ ಕಂಪನಿಯನ್ನು ರಾಷ್ಟ್ರೀಕರಿಸಿ ಅವರೆಲ್ಲರ ಮನವನ್ನು ಗೆದ್ದುಕೊಂಡರು. ಆದರೆ ಅವರು ಬಹುಬೇಗ ತಮ್ಮ ಗದ್ದುಗೆಯನ್ನು ಕಳೆದುಕೊಂಡರು.

ಪೆಟ್ರೋಲಿಯಂ ಕಂಪನಿಯಲ್ಲೇ ತನ್ನ ಹಿತಾಸಕ್ತಿಗಳನ್ನು ಇಟ್ಟಿದ್ದ ಇಂಗ್ಲಂಡ್ ಮೊಸ್ಸಾದಿಕರ ಚಾತುರ್ಯದಿಂದ ಖತಿಗೊಂಡಿತು. ಯಾರೂ ಇರಾಣದ ಖನಿಜ ತೈಲವನ್ನು ಕೊಳ್ಳದಂತೆ ಮಾಡಲು ಪ್ರಯತ್ನಿಸಿತು. ಅಮೇರಿಕದ ಬೆಂಬಲವಂತೂ ಅದಕ್ಕೆ ಇದ್ದೇ ಇತ್ತು. ಈ ತೈಲ ಬಹಿಷ್ಕಾರದಿಂದ ಇರಾಣದ ಆರ್ಥಿಕ ಸ್ಥಿತಿ ತತ್ತರಿಸಿತು. ಕೆಲವು ವದಂತಿಗಳನ್ನು ನಂಬುವುದಾದರೆ ಆಗ ಅಮೇರಿಕದ ಗುಪ್ತಚಾರ ಸಂಸ್ಥೆ ಡಾಕ್ಟರ್ ಮೊಸ್ಸಾದಿಕರನ್ನು ಉರುಳಿಸಲು ಸಂಚು ನಡೆಸಿತ್ತು. ದೇಶವು ಆರ್ಥಿಕ ಮುಗ್ಗಟ್ಟಿನಲ್ಲಿ ಸಿಲುಕಿದಾಗ ಎಂತಹ ಪ್ರಧಾನ ಮಂತ್ರಿಯ ಎದುರಿಗೂ ವಿರೋಧವನ್ನು ಹುಟ್ಟಿಸುವುದು ಸುಲಭ. ಅಂತೂ ಇರಾಣದಲ್ಲಿ ಸರಕಾರದ ವಿರುದ್ಧ ಬಂಡಾಯಗಳೂ ಪ್ರತಿ ಬಂಡಾಯಗಳು ನಡೆದವು. ಕೊನೆಗೆ ಡಾಕ್ಟರ್ ಮೊಸ್ಸಾದಿಕ್ ಅಧಿಕಾರ ತ್ಯಜಿಸಿ ಇರಾಕಿನಲ್ಲಿ ನೆಲೆಸಬೇಕಾಯಿತು. ಈಗ್ಗೆ ಹನ್ನೆರಡು ವರ್ಷಗಳ ಮೊದಲು, ಅಂದರೆ ೧೯೬೭ ರಲ್ಲಿ, ಅವರು ತೀರಿಕೊಂಡರು.

ಇರಾಣದ ಶಾಹರು ಮೊಸ್ಸಾದಿಕರ ಕಾಲದಲ್ಲೂ ಅರಸರಾಗಿದ್ದರು. ೧೯೫೪ರಲ್ಲಿ ತೈಲ ಕಂಪನಿಗಳೊಡನೆ ಒಂದು ಒಪ್ಪಂದಕ್ಕೆ ಬಂದುದರಿಂದ 'ತೈಲ ಬಹಿಷ್ಕಾರ' ತೆಗೆದುಹಾಕಲ್ಪಟ್ಟಿತು. ಆಗ ಸ್ವಾಭಾವಿಕವಾಗಿಯೆ ಪಶ್ಚಿಮ ಯುರೋಪಿನ ದೇಶಗಳೊಡನೆಯೂ ಅಮೇರಿಕದೊಡನೆಯೂ ಇರಾಣದ ಸಂಬಂಧ ಸುಧಾರಿಸಿತು. ಅಮೇರಿಕ ಇರಾಣಕ್ಕೆ ಆರ್ಥಿಕ ಸಹಾಯವನ್ನು ಒದಗಿಸಿದ್ದು ಮಾತ್ರವಲ್ಲದೆ ಶಸ್ತ್ರಾಸ್ತ್ರಗಳನ್ನೂ ಕೊಟ್ಟಿತು. ಮಧ್ಯಪೂರ್ವದಲ್ಲಿ ತೈಲದ ದೃಷ್ಟಿಯಿಂದಲೂ, ರಾಜಕೀಯ ವಿದ್ಯಮಾನಗಳ ನಿಟ್ಟಿನಿಂದಲೂ ಅಮೇರಿಕಕ್ಕೆ ಇರಾಣ ಬಹಳ ಮಹತ್ವದ ದೇಶ.

ಇದರೊಂದಿಗೆಯೇ ಇರಾಣ ಸೋವಿಯತ್ ರಶಿಯದೊಡನೆ ತನ್ನ ಸಂಬಂಧಗಳನ್ನು ಉತ್ತಮಪಡಿಸಿಕೊಂಡಿತು. ವಿದೇಶಿ ಸಂಬಂಧಗಳ ವಿರೋಧಾಭಾಸದಲ್ಲಿ ಇರಾಣದ ಪರಿಸ್ಥಿತಿ ಈಗಲೂ ಹಾಗೆಯೇ ಇದೆ. ದೇಶದ ಕಮ್ಯೂನಿಸ್ಟರನ್ನು ವಿರೋಧಿಸುವ ಶಾಹ ಕಳೆದ ವರ್ಷದ ಅಗಸ್ಟ್‌ನಲ್ಲಿ ಚೀನದ ಅಧ್ಯಕ್ಷ ಹುವಾ ಕುವಾ ಫೆಂಗರನ್ನು ಬರಮಾಡಿಕೊಂಡು ಸ್ವಾಗತಿಸಿದರು. ಹಾಗೆಂದು ಇರಾಣ ಭಾರತದಂತಹ ತಟಸ್ಥ ರಾಷ್ಟ್ರವೆಂದು ಹೇಳುವುದೂ ಕಠಿಣ.

೧೯೬೧ ರಲ್ಲಿ ಇರಾಣದ ಶಾಹ ಒಂದು ದಿಟ್ಟ ಹೆಜ್ಜೆಯನ್ನು ಮುಂದಿಟ್ಟರೆನ್ನಬಹುದು. ಇದ್ದಕ್ಕಿದ್ದಂತೆ ಅವರು ತಮ್ಮ ದೇಶದ ಪೆಟ್ರೋಲಿಯಂ ಕಂದಾಯದರವನ್ನು ಏರಿಸಿದರು. ಆದಾಯ ಹೆಚ್ಚಿಸಿಕೊಂಡು ದೇಶದ ಅಭಿವೃದ್ಧಿ ಕಾರ್ಯಗಳಿಗಾಗಿ ಅದನ್ನು ಖರ್ಚುಮಾಡುವ ಬೃಹತ್ ಯೋಜನೆಯೊಂದನ್ನು ಕಾರ್ಯರೂಪಕ್ಕಿಳಿಸಿದರು. ಇದು 'ಶ್ವೇತ ಕ್ರಾಂತಿ' ಎಂದು ಹೆಸರಾಯಿತು.

ಶ್ವೇತ ಕ್ರಾಂತಿಯ [illegible] ಎರಡು. ಇರಾಣದಲ್ಲಿ ಪ್ರಾಚೀನ [illegible] ಕೊಂಡು ಬಂದಿದ್ದ ಜೀತದಾಳು ಪದ್ಧತಿಯನ್ನು ನಿರ್ನಾಮ ಮಾಡುವುದು. ಭಾರತದಲ್ಲಿನ ಜಮೀನುದಾರಿ ಪದ್ಧತಿಯನ್ನು ಹೋಲುವ ಪರಿಸ್ಥಿತಿಯೊಂದು ಅಲ್ಲಿದ್ದದ್ದೆ ಇದಕ್ಕೆ ಮೂಲವಾಗಿತ್ತು.

ಶಾಹರ ಶ್ವೇತ ಕ್ರಾಂತಿ ಇಂತಹ ಭಾರೀ ಎಷ್ಟೋ ಟುಗಳನ್ನು ಅಂತ್ಯಗೊಳಿಸಿತು. ಕೃಷಿಕ್ಷೇತ್ರದ ಈ ಬದಲಾವಣೆಗಳೊಂದಿಗೇ ಇನ್ನೆರಡು ವಿಷಯ ಗಳಲ್ಲಿಯೂ ಶ್ವೇತ ಕ್ರಾಂತಿ ಬೃಹತ್ ಸಾಧನೆ ಯನ್ನು ಮಾಡಿತು.


ಅವುಗಳಲ್ಲಿ ಒಂದು ಸೈನ್ಯವನ್ನು ಆಧುನೀಕರಿಸಿದ್ದು; ಇನ್ನೊಂದು ಆಧುನಿಕ ಶಿಕ್ಷಣಕ್ಕಾಗಿ ಇರಾಣದಲ್ಲಿ ವ್ಯವಸ್ಥೆ ಮಾಡಿದ್ದು. ಇಂದು ಏಷಿಯದಲ್ಲಿ ಅತ್ಯಾಧುನಿಕ ಅಸ್ತ್ರ ಶಸ್ತ್ರಗಳಿಂದ ಸಜ್ಜಾಗಿರುವ ಸೈನ್ಯ ಗಳಲ್ಲಿ ಇರಾಣದ ಸೇನೆಯೂ ಒಂದು.

ಇರಾಣ ಹೀಗೆ ಶ್ವೇತ ಕ್ರಾಂತಿಯ ಮೂಲಕ ಮುಂದುವರಿದರೂ ಶಾಹರು ವಿರೋಧವನ್ನು ಎದುರಿಸಬೇಕಾಯಿತು. ದೇಶದ ಮೂರುಕೋಟಿ ಎರಡು ಲಕ್ಷ ಶಿಯಾ ಮುಸಲ್ಮಾನರು ಸುನ್ನಿ ಪಂಥಕ್ಕೆ ಸೇರಿದ ಅರಸನು ತಮ್ಮ ಧಾರ್ಮಿಕ ಕಟ್ಟುಕಟ್ಟಳೆ ಗಳನ್ನು ಕಡೆಗಣಿಸುತ್ತಿದ್ದಾನೆಂದು ಸಂದೇಹಿಸಿ ದರು. ಸಂಪ್ರದಾಯವಾದಿಗಳಿಗೆ ಅರಸನ ಸುಧಾ ರಣೆಗಳು ಇಸ್ಲಾಮೀ ಕಾನೂನಿನ ಉಲ್ಲಂಘನೆ ಯಾಗಿ ಕಂಡಿತು.

ಇರಾಣದಲ್ಲಿ ಅರಸನನ್ನು ವಿರೋಧಿಸುವುದರಲ್ಲಿ ಸಂಪ್ರದಾಯವಾದಿಗಳೂ ಪ್ರಗತಿಶೀಲರೂ ಒಟ್ಟಾಗಿ ಸೇರಿಕೊಂಡಿದ್ದರು ಎಂದು ಹೇಳು ವಾಗ ವಿರೋಧಾಭಾಸವೆನಿಸುತ್ತದೆ. ಧಾರ್ಮಿಕ ರಂತೆ ಪ್ರಗತಿಪರರೂ (ಇವರಲ್ಲಿ ಕಮ್ಯೂನಿಸ್ಟರೂ ಮಾರ್ಕ್ಸ್‌ವಾದಿಗಳೂ ಸೇರಿದ್ದಾರೆ) ಅರಸನನ್ನು ವಿರೋಧಿಸುತ್ತಾರೆ. ಆದರೆ ಇವರು ವಿರೋ ಧಿಸುವ ಕಾರಣ ಬೇರೆ. ಇರಾಣದ ಶಾಹ ಪ್ರಜಾ ಪ್ರಭುತ್ವ ರೀತಿಯ ಸರಕಾರವನ್ನು ಸ್ಥಾಪಿಸ ಬೇಕೆಂದು ಅವರ ವಾದ. ಹೀಗೆ ಪರಸ್ಪರ ವಿರೋಧ ತತ್ವಗಳಿಗೆ ಬದ್ಧರಾಗಿರುವ ಎರಡು ಗುಂಪುಗಳು ಒಟ್ಟಿಗೆ ಅರಸನನ್ನು ಎದುರಿಸುವುದರಿಂದ ಇರಾಣದಲ್ಲಿ ಇಸ್ಲಾಮೀ ಕಮ್ಯೂನಿಸ್ಟರು ಅರಸನಿಗೆ ಎದುರಾಗಿದ್ದಾರೆ ಎಂದು ಹೊರಗಿನವರು ಹೇಳುತ್ತಾರೆ. ವಾಸ್ತವ ವಾಗಿ ಇಸ್ಲಾಮಿಗೂ ಕಮ್ಯೂನಿಸಮ್ಮಿಗೂ ಎಣ್ಣೆ ಸೀಗೆಯ ಸಂಬಂಧ. ಆದರೆ ಇಂದು ಇರಾಣದ ಲ್ಲಿರುವ ವಿಚಿತ್ರ ಪರಿಸ್ಥಿತಿಯಿಂದಾಗಿ ಅವರಿಬ್ಬರೂ ಒಂದಾಗಿ ಒಂದೇ ದಾರಿಯಲ್ಲಿ ಸಾಗಲು ಪ್ರೇರೇಪಿಸುತ್ತಿವೆ. ಆಕಸ್ಮಾತ್ತಾಗಿ ಅಧಿಕಾರ ಅರಸನ ಕೈತಪ್ಪಿ ಧಾರ್ಮಿಕ ಮುಂದಾಳುಗಳ ಕೈಗೆ ಬಂದರೆ ಕಮ್ಯೂನಿಸ್ಟರಿಗೆ ಅದೇ ಕುಠಾರಾಘಾತ. ಅದರ ಬದಲು ಅರಸನ ಗದ್ದುಗೆ ಅಫಘಾನಿಸ್ತಾನದಲ್ಲಾ ದಂತೆ ಮಾರ್ಕ್ಸ್‌ವಾದಿಗಳ ಪಾಲಾದರೆ ಅದು ಧಾರ್ಮಿಕ ಮುಂದಾಳುಗಳಿಗೆ ಮೃತ್ಯುಪ್ರಾಯ. ಇಬ್ಬರೂ ಈಗ ತಮ್ಮ ಗುರಿಯ ಕಡೆಗೆ ಓಡುತ್ತಿದ್ದಾರೆ. ಗುರಿ ಮುಟ್ಟುವ ತನಕ ವಿರೋಧಿಗಳಾದರೂ, ಪ್ರತಿ ಸ್ಪರ್ಧಿಗಳಾದರೂ ಗೆಳೆಯರು. ಅನಂತರ ಅವ ರಿಬ್ಬರೂ ಮತ್ತೆ ಮೊದಲಿನ ಹಾಗೆ ವೈರಿಗಳು. ಇರಾಣದ ಇತಿಹಾಸದಲ್ಲಿ ಇದಕ್ಕಿಂತ ಕುತೂಹಲ ಕರವಾದ ವಿರೋಧಾಭಾಸ ಇನ್ನೊಂದಿಲ್ಲ.

೧೯೦೬ರಲ್ಲಿ ಜಾರಿಗೆ ಬಂದ, ಆದರೆ ಕೇವಲ ತತ್ವದಲ್ಲಿ ಮಾತ್ರ ಕಾರ್ಯರೂಪದಲ್ಲಿರುವ ಒಂದು ಸಂವಿಧಾನ ಇರಾಣಕ್ಕಿದೆ. ಅದನ್ನು ಸರಿಯಾಗಿ ಕಾರ್ಯ- ಗತಗೊಳಿಸಬೇಕೆಂಬುದು ವಿರೋಧಿಗಳ ಹಂಬಲ. ಸಂವಿಧಾನವನ್ನು ಜಾರಿಗೊಳಿಸಿದ್ದೇ ಆದರೆ ಅರ ಸನ ಅಧಿಕಾರ ಬಹಳಷ್ಟು ಕಡಿಮೆಯಾಗುತ್ತದೆ. ಜನತಾಂತ್ರಿಕ ರಾಷ್ಟ್ರಗಳಂತೆ ಚುನಾಯಿತ ಪ್ರತಿ ನಿಧಿಗಳಿಗೆ ಅಧಿಕಾರ ಬರುತ್ತದೆ. ಪ್ರಗತಿಪರರಿಗೆ ಅದು ಬೇಕು. ಆ ಸಂವಿಧಾನ ಜಾರಿಗೆ ಬಂದರೆ ಇಸ್ಲಾಮೀ ಮುಖಂಡರಿಗೆ ಒಂದು ವಿಶೇಷಾಧಿ ಕಾರ ಲಭಿಸುತ್ತದೆ. ಐದು ಧಾರ್ಮಿಕ ಮುಖ್ಯಾಧಿ ಕಾರಿಗಳಿಗೆ ಪಾರ್ಲಿಮೆಂಟಿನ ಯಾವುದೇ ಕಾನೂ ನನ್ನು ಗೊತ್ತುವಳಿಯನ್ನು ತೊಡೆದು ಹಾಕುವ ಅಧಿಕಾರ ಬರುತ್ತವೆ.

ಇರಾಣದ ಶಾಹರು ತಮ್ಮ ದೇಶದ ಅಸ್ಥಿರ ಸ್ಥಿತಿಯನ್ನು ಸ್ಥಿಮಿತಕ್ಕೆ ತರಲು ಪ್ರಯತ್ನ ಗೈದರು. ಶ್ವೇತ ಕ್ರಾಂತಿಯ ಮೂಲಕ ದೇಶದಲ್ಲಿ ಸ್ಥಿರತೆ, ಸಮಾನತೆ ಮತ್ತು ಆರ್ಥಿಕ ಸಂಪನ್ನತೆ ಯನ್ನು ತರಲು ಪ್ರಯತ್ನಿಸಿದಾಗ ಧರ್ಮಾಂಧರು ಮತ್ತು ಕಮ್ಯೂನಿಸ್ಟರು ಸೇರಿ ಶಾಹರು ಎಲ್ಲ ವನ್ನೂ ಬುಡಮೇಲು ಮಾಡಲು ಹವಣಿಸು ತ್ತಿದ್ದಾರೆಂದು ಸಿಡಿಮಿಡಿಗೊಂಡರು. ಇತ್ತೀಚೆಗೆ ಪ್ರಜಾತಂತ್ರದ ಮಾದರಿಯಲ್ಲಿ ದೇಶವನ್ನು ಮುಂದೆ ತರಲು ಕೆಲವು ಬದಲಾವಣೆಗಳನ್ನು ಅವರು ಮಾಡಿದುದು ನಿಜ. ವಿರೋಧಿಗಳಿಗೆ ಟೀಕಿಸುವ ಸ್ವಾತಂತ್ರ್ಯ, ವರ್ತಮಾನ ಪತ್ರಿಕೆಗಳ



ಜನರಲ್ ಅಝಾರಿಯವರ ಸೈನಿಕ ಸರಕಾರಕ್ಕೆ, ಸರಕಾರದ ಬಗೆಗೆ ದೇಶದ ಜನತೆಯಿಂದ ಉಂಟಾದ ಕ್ಷೋಭೆಯನ್ನು ನಿವಾರಿಸಲಾಗಲಿ ದೇಶದಲ್ಲಿ ಶಾಂತಿ, ಸುವ್ಯವಸ್ಥೆಗಳನ್ನು ಕಾಯ್ದುಕೊಳ್ಳಲಾಗಲಿ ಸಾಧ್ಯವಾಗದಿದ್ದರಿಂದ ಇರಾಣದ ಶಾಹರು ವಿರೋಧಿ ಧುರೀಣರಲ್ಲಿ ಅಗ್ರಗಣ್ಯರಾದ ಡಾ. ಶಕೂರ್ ಬಖ್ತಿಯಾರರನ್ನು ಸರಕಾರ ರಚಿಸಲು ಆಹ್ವಾನಿಸಿದ್ದರೆಂಬ ಸುದ್ದಿ ಈ ಲೇಖನ ಅಚ್ಚಾಗುತ್ತಿದ್ದಂತೆ ಬಂದಿದೆ. ತಮ್ಮ ಅಧಿಕಾರವನ್ನು ಹೊಸ ಸರಕಾರಕ್ಕೆ ನೀಡಿದ ನಂತರ ಶಾಹರು ವಿಶ್ರಾಂತಿಗಾಗಿ ಕೆಲ ಸಮಯದ ವರೆಗೆ ಅಮೇರಿಕಕ್ಕೆ ಹೋಗುವುದಾಗಿ ಪ್ರಕಟಿಸಿದ್ದಾರೆ. ಅವರು 'ಹೀಗೆ ವಿಶ್ರಾಂತಿ ಪಡೆಯುವುದು' ರಾಜಕೀಯವಾಗಿ ಪ್ರೇರಿತವಾದದ್ದು ಎನ್ನುವುದರಲ್ಲಿ ಸಂಶಯವಿಲ್ಲ. ಶಾಹರು ಕೊನೆಯವರೆಗೂ ವಿದೇಶದಲ್ಲಿಯೇ ಉಳಿಯಬಹುದು ಅಥವಾ ಅಧಿಕಾರ ಸೂತ್ರಗಳನ್ನು ಮತ್ತೊಮ್ಮೆ ಹಸ್ತಗತಗೊಳಿಸಿಕೊಳ್ಳುವ ಸಂದರ್ಭವೊದಗಿದರೆ ಮತ್ತೆ ಸ್ವದೇಶಕ್ಕೆ ಮರಳಲೂಬಹುದು. ಸದ್ಯದ ಪರಿಸ್ಥಿತಿಯನ್ನು ಅನುಲಕ್ಷಿಸಿದರೆ ಅಂತಹ ಸಂಭವ ತೀರಾ ಕಡಿಮೆ. ಎಡ ಹಾಗೂ ಬಲ ಪಂಥದವರಲ್ಲಿ ಎಷ್ಟು ಮಟ್ಟಿಗೆ ಸಮತೋಲವನ್ನು ಕಾಯ್ದುಕೊಳ್ಳಬಹುದೆಂಬುದರ ಮೇಲೆ ಈ ಹೊಸ ಸರಕಾರದ ಅಸ್ತಿತ್ವ ಹಾಗೂ ಯಶಸ್ಸುಗಳು ಅವಲಂಬಿಸಿವೆ. ಹಾಗಾಗದೇ ಹೋದರೆ ದೇಶದ ಪರಿಸ್ಥಿತಿ ಮತ್ತೆ ಡೋಲಾಯಮಾನವಾಗಿ ಆಡಳಿತ ಸೂತ್ರಗಳು ಎಡ ಅಥವಾ ಬಲ ಪಂಥೀಯ ಉಗ್ರಗಾಮಿಗಳ ಕೈಲಿ ಬರಬಹುದು. ಫಲವಾಗಿ ಅಮೇರಿಕನ್ ಹಾಗೂ ರಶಿಯನ್ ಕೂಟತಜ್ಞರು ಆ ಪ್ರದೇಶದಲ್ಲಿ ಶಕ್ತಿಸಮತೋಲವನ್ನು ಕಾಯ್ದುಕೊಳ್ಳಲು ಹೊಸದಾಗಿಯೇ ಯೋಜನೆಗಳನ್ನು ರೂಪಿಸಬೇಕಾಗುವುದು. ಅದೇನೇ ಇರಲಿ, ಈ ದೇಶದ ಭವಿಷ್ಯವನ್ನು ಕಾಲರಾಯನೇ ನಿರ್ಧರಿಸಬೇಕು.

— ಸಂಪಾದಕ

ಮೇಲೆ ಸಡಿಲು ಧೋರಣೆ, ಕ್ರೂರತನಕ್ಕೆ ಹೆಸರಾದ 'ಸಾವಾಕ್' ಗುಪ್ತಚರ ಸಂಸ್ಥೆಯ ಅಧಿಕಾರಿಗಳಲ್ಲಿ ತಬ್ದೀಲಿ– ಇತ್ಯಾದಿಗಳು ಆಗಿವೆ. ಆದರೆ, ಇದರಿಂದ ವಿರೋಧಿಗಳು ತೃಪ್ತರಾಗಲಿಲ್ಲ. ಸಂಪೂರ್ಣವಾಗಿ ಆರ್ಥಿಕ, ಸಾಮಾಜಿಕ ಉನ್ನತಿ ಒಮ್ಮಿಂದೊಮ್ಮೆ ಸಾಧ್ಯವಿಲ್ಲವೆಂದು ಅರಸರ ವಾದವಾದರೆ ಈಗಾಗಲೇ ಜನತೆಗೆ ಸಂಪೂರ್ಣ ಅಧಿಕಾರ ಬೇಕೆಂದು ವಿರೋಧಿಗಳ ಅವಸರ.

ಈ ಅವಸರಕ್ಕೆ ಒಂದು ಕಾರಣವಿದೆ. ಶಾಹರು ತನ್ನ ಹದಿನೆಂಟರ ಹರೆಯದ ಯುವರಾಜನನ್ನು ತಮ್ಮ ಪಟ್ಟದಲ್ಲಿ ಭದ್ರವಾಗಿ ಕುಳ್ಳಿರಿಸುವ ಆಶೆ ಇಟ್ಟುಕೊಂಡಿದ್ದರು. ಅದಕ್ಕೆ ಬೇಕಾದಂತಹ ತಯಾರಿಯಾಗಿ, ದೇಶದಲ್ಲಿ ತನ್ನ ಸ್ವಹಿತಕ್ಕೆ ಧಕ್ಕೆ ಬಾರದಂತೆ ಆಧುನೀಕರಣಗೊಳ್ಳಲೆಂದು ಅವರ ಆಶಯವಿತ್ತು. ಆದರೆ ಇದಕ್ಕಾಗಿ ಸಮಯ ಹಾಳಾಗಿ, ಜನತೆಯನ್ನು ಹಿಡಿತದಲ್ಲಿ ದಬ್ಬಾಳಿಕೆಯಡಿಯಲ್ಲಿರಿಸುವುದು ವಿರೋಧಿಗಳಿಗೆ ಇಷ್ಟವಿರಲಿಲ್ಲ. ೧೯೭೩ರಲ್ಲಿ ಪೆಟ್ರೋಲಿಯಂ ಕ್ರಯ ನಾಲ್ಕು ಪಟ್ಟು ಏರಿಸಿದುದರಿಂದ ಇರಾಣಕ್ಕೆ ಅಪಾರ ಆರ್ಥಿಕ ಆದಾಯವಾಗಿದೆ. ಆದರೆ ಈ ಆದಾಯದ ವಿತರಣೆ ಸರಿಯಾಗದೆ ಆರ್ಥಿಕ ಅಸಮಾನತೆ ಹೆಚ್ಚಿದೆ. ಔದ್ಯೋಗಿಕ ರಾಷ್ಟ್ರವಾಗಿ ಮೆರೆಯಲು ಇರಾಣಕ್ಕೆ ಅವಶ್ಯವಿರುವಷ್ಟು ತಂತ್ರಜ್ಞರು ಆ ದೇಶದಲ್ಲಿಲ್ಲ. ಪರದೇಶಿಯರು ಹೆಚ್ಚಾಗಿ ಅಲ್ಲಿ ಬರುತ್ತಿರುವುದು ರಾಷ್ಟ್ರವಾದಿಗಳಿಗೆ ಹಿಡಿಸುತ್ತಿಲ್ಲ. ಇಂದು ಇರಾಣದ ಜನಸಾಮಾನ್ಯರಲ್ಲಿ ಯುರೋಪಿಯನ್ನರಾಗಲಿ ಅಮೇರಿಕನ್ನರನ್ನಾಗಲಿ ತಿರಸ್ಕಾರದಿಂದ ನೋಡುವ ಮನೋಭಾವ ಬೆಳೆದಿದೆ. ಇದೂ ಅಲ್ಲದೆ ದೇಶ ಕೈಗಾರಿಕಾ ಪ್ರಧಾನವಾಗಿ ಮುಂದುವರಿಯಬೇಕಾದರೆ ಈಗಿರುವ ಖನಿಜ ತೈಲ ಮುಂದಿನ ವರ್ಷಗಳಲ್ಲಿ ಬತ್ತಿಹೋಗದೆ ಉಳಿಯಬೇಕು.

ಇತ್ತೀಚೆಗಂತೂ ಇರಾಣದಲ್ಲಿ ಪರಿಸ್ಥಿತಿ ಬಹಳೇ ಹದಗೆಟ್ಟಿದ್ದು ಕಳೆದ ಆಗಸ್ಟ್ ಹತ್ತೊಂಭತ್ತರಂದು ಶಹಾವಿರೋಧಿಗಳು ಅಬದಾನ್ ನಗರದ ಸಿನೇಮಾಗೃಹಕ್ಕೆ ಬೆಂಕಿ ಹಚ್ಚಿದರು. ಸಿನೇಮಾ ನೋಡುತ್ತಿದ್ದ ನಿರಪರಾಧಿ ಪ್ರೇಕ್ಷಕರಲ್ಲಿ ನಾಲ್ಕು ನೂರುಮಂದಿ ಅಗ್ನಿಗಾಹುತಿಯಾದರು. ರಮಜಾನಿನ ಉಪವಾಸದ ದಿನಗಳಲ್ಲಿ ಸಿನೇಮಾ ನೋಡುವ ಅಧಾರ್ಮಿಕ ಕೆಲಸ ಮಾಡಿದರೆಂದು ಇಸ್ಲಾಮಿನ ದುರಭಿಮಾನಿಗಳು ಈ ಕ್ರೂರ ಕೃತ್ಯಕ್ಕೆ ಕೈಹಾಕಿದರೆನ್ನಲಾಗುತ್ತದೆ. ಇರಾಣದ ಅನೇಕ ನಗರಗಳಲ್ಲಿ ಸಿನೇಮಾಗೃಹಗಳೇ ಇಲ್ಲ. ಸಿನೇಮಾಮಂದಿರಗಳನ್ನು ಸ್ಥಾಪಿಸಲು ಇಸ್ಲಾಮೀ ಧುರೀಣರು ಅಡ್ಡ ಬರುತ್ತಿದ್ದಾರೆ. ಅಲ್ಲಿ ಮಹಿಳೆಯರು ಬುರಖಾ ಇಲ್ಲದೆ ಹೊರಗೆ ಹೋಗುವಂತಿಲ್ಲ.

ಕಳೆದ ಸಪ್ಟೆಂಬರಿನಲ್ಲಿ ರಮಜಾನಿನ ಹಬ್ಬದ ದಿನ ಸಾವಿರಾರು ಜನ ತೆಹರಾನಿನಲ್ಲಿ ಅರಸನ ವಿರುದ್ಧ ಶಾಂತ ಮತಪ್ರದರ್ಶನ ನಡೆಸಿದರು. ಶಿಸ್ತು ಕಾಯಲು ನಿಂತಿದ್ದ ಸೈನಿಕರಿಗೆ ಪುಷ್ಪಗುಚ್ಛಗಳನ್ನು ಸಮರ್ಪಿಸಿ 'ಸಹೋದರರಿಗೆ ಗುಂಡಿಕ್ಕಬೇಡಿ' ಎನ್ನುತ್ತಾ ಸೈನಿಕರ ಮನ ಪೊಲಿಸಲು ಪ್ರಯತ್ನಿಸಿದರು.

ಇರಾಣದ ಏಳು ಲಕ್ಷ ಜನ ಬಲದ ಬೃಹತ್ ಸೈನ್ಯ ಅರಸರಿಗೆ ನಿಷ್ಠವಾಗಿತ್ತು. ರಮಜಾನಿನ ಶಾಂತ ಪ್ರದರ್ಶನದ ಮರುದಿನವೇ ತೆಹರಾನಿನ ಚೌಲೇಹ ಚೌಕದಲ್ಲಿ ಹಿಂಸಾತ್ಮಕ ರೂಪ ತಾಳಿದ ಪ್ರದರ್ಶನವೊಂದನ್ನು ನಿಯಂತ್ರಣಕ್ಕೆ ತರಲು ಪೋಲೀಸರೂ ಸೈನಿಕರೂ ಸೇರಿ ಗುಂಡುಹಾರಿಸಿದಾಗ ಸಾವಿರಾರು ಜನರು ಮೃತರಾದರು. ಇರಾಣದ ಹನ್ನೊಂದು ನಗರಗಳಲ್ಲಿ ಲಷ್ಕರೀ ಶಾಸನವನ್ನು ಜಾರಿಗೊಳಿಸಲಾಯಿತು.

ಶಾಹರಿಗೂ ತಮ್ಮ ವಿರೋಧಿಗಳ ಶಕ್ತಿಯ ಕಲ್ಪನೆಯಿತ್ತು. ಆದ್ದರಿಂದಲೆ ಸುಮಾರು ಒಂದು ವರ್ಷದಿಂದ ಪ್ರಧಾನಿಯಾಗಿದ್ದ ನಿಷ್ಠಾವಂತ, ಡಾಕ್ಟರ್ ಜಮಶಿದ್ ಅಮೌಜ್‌ಗಾರರನ್ನು ರಾಜೀನಾಮೆ ಕೊಡಿಸಿ, ಆ ಹುದ್ದೆಯಿಂದ ಮುಕ್ತಗೊಳಿಸಿದರು. ಬಹಾಯಿ ಪಂಥದವರನ್ನು ಸಂಪ್ರದಾಯವಾದಿಗಳು ತಿರಸ್ಕಾರದಿಂದ ಕಾಣುತ್ತಿದ್ದುದರಿಂದ ಬಹಾಯಿ ಪಂಥಕ್ಕೆ ಸೇರಿದ ಒಬ್ಬ ಡಾಕ್ಟರರನ್ನು ಬದಲಿಸಿದರು.

ಮೇಲ್ಮನೆಯ ಅಧ್ಯಕ್ಷರಾಗಿದ್ದ ಜಫಾರ್ ಶರೀಫ್ ಇಮಾಮಿಯವರನ್ನು ಹೊಸ ಪ್ರಧಾನಿಯಾಗಿ ನೇಮಿಸಿದರು. ಅವರು ಇಸ್ಲಾಮನ್ನು ಗೌರವಿಸುವುದಾಗಿ ಘೋಷಿಸಿದರು. ಶಾಹರು

ಜಾರಿಯಲ್ಲಿ ತಂದಿದ್ದ ತಮ್ಮ ರಾಜಮನೆತನದ ಪಂಚಾಂಗದ ಬದಲು ಇಸ್ಲಾಮೀ ಪದ್ಧತಿಯ ಪಂಚಾಂಗವನ್ನೇ ಅಧಿಕೃತ ಕೆಲೆಂಡರ್ ಎಂದು ಸಾರಿದರು.

ಇಷ್ಟಾದರೂ ಧಾರ್ಮಿಕ ಮುಂದಾಳುಗಳ ಮನ ಒಲಿಸುವುದರಲ್ಲಿ ಹೊಸ ಪ್ರಧಾನಿಗಳು ಸಫಲರಾದಂತೆ ಕಂಡು ಬರಲಿಲ್ಲ. ಒಬ್ಬಿಬ್ಬರು ಹಿರಿಯ ರಾಜಕೀಯ ಮುತ್ಸದ್ದಿಗಳು ಮಂತ್ರಿ ಮಂಡಲದಲ್ಲಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತರು. ಹಲವು ವಿರೋಧೀ ಮುಖಂಡರನ್ನು ಬಂಧಿಸಲಾಯಿತು.

ಜನರಲ್ ಗುಲಾಮ್ ಅಲೀ ಒವ್ಯಾಸಿ- ಇರಾಣದ ಭೂಸೇನೆಯ ಪ್ರಧಾನ ದಂಡ ನಾಯಕ. ಸೆಪ್ಟೆಂಬರಿನಲ್ಲಿ ಹನ್ನೊಂದು ನಗರಗಳ ಮೇಲೆ ಲಷ್ಕರೀ ಶಾಸನಗಳನ್ನು ಹೇರಿದ ಬಳಿಕ ಅವರ ಅಧಿಕಾರ ಹೆಚ್ಚಿತು. ಮತ ಪ್ರದರ್ಶಕರ -ಮೇಲೆ ಗುಂಡು ಹಾರಿಸಿ ಮೂರುಸಾವಿರಕ್ಕೂ ಹೆಚ್ಚು ಮಂದಿಯನ್ನು ಒಂದು ವಾರದೊಳಗೆ ಕೊಲ್ಲಲಾಯಿತೆಂಬ ಸುದ್ದಿ ಅನಧಿಕೃತ ಮೂಲಗಳಿಂದ ಅವರು ಅಧಿಕಾರ ಸ್ವೀಕರಿಸುತ್ತಲೇ ಹೊರಬಿತ್ತು.

ಕಳೆದ ಸೆಪ್ಟೆಂಬರ್ ಹದಿನಾರರ ಸಂಜೆ ಇರಾಣಿನ ತಬಾಜ್ ನಗರ ಮತ್ತು ಅದರ ಆಸುಪಾಸಿನಲ್ಲಿ ಭಯಂಕರ ಭೂಕಂಪವಾಯಿತು. ಹೆಚ್ಚು ಕಡಿಮೆ ಮೂವತ್ತು ಸಾವಿರ ಮಂದಿ ಸತ್ತರಾದರು. ಆ ನಗರ ನೆಲಸಮವಾಯಿತು. ಅಲ್ಲಿ ಹತ್ತು ಹನ್ನೆರಡು ಕಟ್ಟಡಗಳೂ ಉಳಿಯಲಿಲ್ಲ.

ಅಂತೂ ಇರಾಣದ ಭವಿಷ್ಯ ಡೋಲಾಯಮಾನವಾಗಿದೆ. ವಿರೋಧಿಗಳಾದ ಧಾರ್ಮಿಕ ಮುಂದಾಳುಗಳು (ಆಯಾತುಲ್ಲಾಗಳು) ತಮ್ಮ ಹೋರಾಟದಲ್ಲಿ ಸಫಲರಾಗಿ ಇರಾಣದ ಗಡಿಯಾರದ ಮುಳ್ಳುಗಳನ್ನು ಹಿಂದೆತಿರುಗಿಸ ಬಹುದು. ಇಲ್ಲವೆ ಇದೇ ಸಂದರ್ಭದಲ್ಲಿ ತಮ್ಮ ಉದ್ದೇಶಗಳನ್ನು ಸಾಧಿಸಿಕೊಂಡು ವಾಮ ಪಂಥದವರಾಗಲಿ ಪ್ರಜಾಪ್ರಭುತ್ವದ ಸಮರ್ಥಕರಾಗಲೀ ಅಧಿಕಾರದ ಗದ್ದುಗೆ ಏರಲೂಬಹುದು. ✿



ಹೊಸ ಪ್ರತಿರೋಧಕ

ಡಿಫ್ತೀರಿಯಾ, ನಾಯಿ ಕೆಮ್ಮು ಮತ್ತು ಧನುರ್ವಾತ ರೋಗಗಳು ಮಕ್ಕಳಿಗೆ ಬಾರದಂತೆ ತಡೆಗಟ್ಟಲು ಬಳಸಲ್ಪಡುತ್ತಿರುವ ಡಿ.ಪಿ.ಟಿ. ಟ್ರಿಪಲ್ ಆಂಟಿಜೆನ್‌ನಂತೆಯೆ ಈಗ ಮತ್ತೊಂದು ಟ್ರಿಪಲ್ ಆಂಟಿಜೆನ್ ನಿರೋಧಕ ಚುಚ್ಚು ಮದ್ದನ್ನು ಕಂಡುಹಿಡಿಯಲಾಗಿದೆ. ಇದನ್ನು ಕೂಡ ಸಾಮಾನ್ಯವಾಗಿ ಮಕ್ಕಳಿಗೆ ತಗಲುವ ದಡಾರ (Measles), ಗದ್ದಮಾರಿ (Mumps) ಮತ್ತು ಜರ್ಮನ್ ದಡಾರ (German measles or Rubella) ಗಳು ಬರದಂತೆ ತಡೆಗಟ್ಟಲು ಉಪಯೋಗಿಸಬಹುದು. ಇದನ್ನು ಎಂ.ಎಂ.ಆರ್. ಎಂದು ಹೆಸರಿಸಬಹುದು. ಆದರೆ ಇದುವರೆಗೆ ನಮ್ಮ ದೇಶದಲ್ಲಿ ರುಬೆಲ್ಲಾ ಅಂದರೆ ಜರ್ಮನ್ ದಡಾರ ರೋಗವು ತಲೆ ಹಾಕದಿರುವುದರಿಂದ, ಈ ಚುಚ್ಚುಮದ್ದನ್ನು ದಡಾರ ಮತ್ತು ಗದ್ದಮಾರಿಗಳು ಬಾರದಂತೆ ಕೊಟ್ಟು ಈ ರೋಗಗಳಿಂದ ಹಾಗೂ ತತ್ಪರಿಣಾಮವಾಗಿ ಉದ್ಭವಿಸಬಹುದಾದ ಅನೇಕ ಭಯಂಕರ ಉಪದ್ರವಗಳಿಂದ ನಮ್ಮ ಮಕ್ಕಳನ್ನು ರಕ್ಷಿಸಬಹುದು. ಆದರೆ ಈ ಹೊಸ ಚುಚ್ಚು ಮದ್ದು ಮಾರುಕಟ್ಟೆಯಲ್ಲಿ ಧಾರಾಳವಾಗಿ ದೊರಕುತ್ತಿಲ್ಲ. ದೊರಕಿದರೂ ತುಂಬಾ ದುಬಾರಿ. ಒಮ್ಮೆ ಮಾತ್ರ ಕೊಡುವಷ್ಟು ಚುಚ್ಚುಮದ್ದಿಗೆ ಇಂದು ಐವತ್ತು ರೂಪಾಯಿ ಕೊಡಬೇಕಾಗುತ್ತದೆ.

-ಸಂಗ್ರಹ: ಡಾ. ಟಿ. ಆರ್. ಶ್ರೀಕಂಠ

ನೀವೇ
ಯೋಚಿಸಿ ನೋಡಿ....

ಶೀಲ

ಎಸ್. ಪ್ರಹ್ಲಾದರಾವ್

ದೇವರೆಯ್ಯುವ ಮಳೆಗೆ ಅವರಿವರೆಂಬ ಭೇದ ವಿಲ್ಲ, ಅದು ಎಲ್ಲರ ತಲೆಯ ಮೇಲೂ ಏಕ ರೀತಿಯಲ್ಲಿ ಸುರಿಯುತ್ತದೆ ಎಂಬ ಮಾತನ್ನು ನೀವು ಒಪ್ಪಿದರೂ ನಾನು ಒಪ್ಪುವುದಿಲ್ಲ. ಅದು ಕೆಟ್ಟವರಿಗಿಂತ ಶೀಲವಂತರ ತಲೆಯ ಮೇಲೆ ಹೆಚ್ಚು ಸುರಿಯುತ್ತದೆಂದು ನನ್ನ ಅನಿಸಿಕೆ. ಏಕೆಂದರೆ ಶೀಲವಂತರ ಕೊಡೆಗಳನ್ನು ಕೆಟ್ಟ ವರು ಕದ್ದುಬಿಡುತ್ತಾರಾದ ಕಾರಣದಿಂದ! ಶೀಲಕ್ಕೆ ಅಂಟಿಕೊಂಡ ಶೀಲವಂತ ಜೀವನದಲ್ಲಿ ಕಷ್ಟಪಡುತ್ತಲೇ ಇರುತ್ತಾನೆ. ಅತ್ತ ಶೀಲ ಭ್ರಷ್ಟರು ಎಳ್ಳಷ್ಟೂ ಕಷ್ಟಪಡದೆ ಜೀವನದಲ್ಲಿ ಸುಖವಾಗಿ ಇರುತ್ತಾರೆ. ಇದು ಇವತ್ತಿನ ಪ್ರಶ್ನೆಯಲ್ಲ. ಮಹಾಭಾರತ ಕಾಲದಿಂದಲೂ ನಮ್ಮನ್ನಿದು ಕಾಡುತ್ತಿದೆ. ಶೀಲವಂತನಾದ ಧರ್ಮ ರಾಯನಿಗೆ ಮಂಕು ಕವಿದಾಗ ಭೀಷ್ಮರ ಬಾಯಲ್ಲಿ ವ್ಯಾಸರು ಈ ಮಾತುಗಳನ್ನು ಆಡಿಸಿದ್ದಾರೆ:

"ಇವೆಲ್ಲಕ್ಕಿಂತ ಶೀಲ ಮುಖ್ಯ. ಶೀಲದಿಂದಲೇ ಧರ್ಮ ಸತ್ಯ ನಡತೆ ಬಲ ಸಂಪತ್ತು ಎಲ್ಲ ಲಭಿಸುವುದು. ಹಿಂದೆ ಪ್ರಹ್ಲಾದ ಇಂದ್ರನನ್ನು ಗೆದ್ದು ತನ್ನ ಶೀಲದಿಂದ ಮೂರು ಲೋಕಗಳನ್ನೂ ವಶಪಡಿಸಿಕೊಂಡು ಆಳುತ್ತಿದ್ದನಂತೆ. ಆಗ ಇಂದ್ರ ಬ್ರಾಹ್ಮಣ ವೇಷದಿಂದ ಅವನಲ್ಲಿಗೆ ಹೋಗಿ ಶಿಷ್ಯವೃತ್ತಿಯಿಂದ ಅವನನ್ನು ಸಂತೋಷಪಡಿಸಿ ಅವನ ಶೀಲವನ್ನೇ ವರವಾಗಿ ಕೇಳಿ ಪಡೆದನಂತೆ. ಇಂದ್ರ ಹೋದ ಕೂಡಲೆ ಅವನ ಹಿಂದೆ ಪ್ರಹ್ಲಾದನ ದೇಹದಿಂದ ಒಂದು ತೇಜಸ್ಸಿನ ಮೂರ್ತಿ ಹೊರಗೆ ಹೊರಟದ್ದನ್ನು ಕಂಡ ಪ್ರಹ್ಲಾದ 'ನೀನು ಯಾರು?' ಎಂದು ಕೇಳಿದನಂತೆ. ಅದಕ್ಕೆ ಅದು 'ನಾನು ಶೀಲ. ನಿನ್ನನ್ನು ಬಿಟ್ಟು ಹೋಗುತ್ತಿದ್ದೇನೆ?' ಎಂದಿತಂತೆ. ಆಮೇಲೆ ಹೀಗೆಯೇ ತೇಜೋರೂಪಿನಿಂದ ಧರ್ಮವೂ ಸತ್ಯವೂ ನಡತೆಯೂ ಬಲವೂ ಸಂಪತ್ತೂ ಒಂದೊಂದಾಗಿ ಹೊರಟು ಹೋದುವಂತೆ. ಆದ್ದರಿಂದ ಶೀಲವೇ ಸಕಲ ಶ್ರೇಯಸ್ಸಿಗೂ ಮೂಲ. ಮನಸ್ಸಿನಿಂದಾಗಲೀ ಮಾತಿನಿಂದಾಗಲಿ ದೇಹದಿಂದಾಗಲೀ ಯಾರಿಗೂ ಕೇಡು ಮಾಡ ಬಾರದು. ಆದಷ್ಟು ಉಪಕಾರವನ್ನೂ ದಾನ ವನ್ನೂ ಮಾಡಬೇಕು. ಅನ್ಯರಿಗೆ ಹಿತವಲ್ಲದ ಅಥವಾ ನಾಚಬೇಕಾದ ಕೆಲಸ ಮಾಡಬಾರದು. ಹತ್ತು ಜನ ಮೆಚ್ಚುವುದನ್ನು ಮಾಡಬೇಕು. ಇದೇ ಸಂಗ್ರಹವಾಗಿ ಶೀಲದ ಸ್ವರೂಪ. ಶೀಲ-ವಂತರಲ್ಲದವರು ಎಲ್ಲಾದರೂ ಸಿರಿವಂತರಾಗಿದ್ದರೆ ಅದನ್ನು ಅವರು ಹೆಚ್ಚು ದಿನ ಅನುಭವಿಸುವುದಿಲ್ಲ. ಬೇಗ ಬುಡಮಟ್ಟ ನಾಶವಾಗುತ್ತಾರೆ. ನಿನ್ನ ಸಿರಿಯನ್ನು ನೋಡಿ ಅಸೂಯೆ ಪಟ್ಟ ದುರ್ಯೋಧನ ಹಿಂದೆ ತಂದೆಯ ಹತ್ತಿರ ತನ್ನ ಹೊಟ್ಟೆಯ ಸಂಕಟವನ್ನು ಹೇಳಿಕೊಂಡಾಗ ಧೃತರಾಷ್ಟ್ರ ಈ ಮಾತುಗಳನ್ನು ಹೇಳಿ ನಿನ್ನ ಶೀಲವನ್ನು ಹೊಗಳಿದ. ಈಗಲೂ ನಿನ್ನ ಶೀಲವೇ ನಿನ್ನ ಎಲ್ಲ ಶ್ರೇಯಸ್ಸಿಗೂ ಸಾಧನ."

ಭೀಷ್ಮರ ಈ ಮಾತುಗಳು ಇಂದಿಗೂ ನಮ್ಮನ್ನು ಹುರಿದುಂಬಿಸುತ್ತಿವೆ. ಶೀಲದ ಬಗ್ಗೆ ಇರುವ ನಮ್ಮ ಭರವಸೆಯನ್ನು ಬಲಗೊಳಿಸುತ್ತಿವೆ. ಪಂಚೇಂದ್ರಿಯಗಳೆಂಬ ಮದಾಶ್ವಗಳಿಗೆ ಶೀಲ ಒಂದು ಕಡಿವಾಣವಿದ್ದಂತೆ.



"ಹರಿಜನರೊಂದಿಗೆ ಬೆರೆತು ಬಾಳಿ ಅವರೂ ಮಾನವ-ಕುಟುಂಬದ ಸಮಾನ ಸದಸ್ಯರೆಂಬುದನ್ನು ಅರಿತುಕೊಳ್ಳುವುದಕ್ಕಿಂತ ಹೆಚ್ಚಿನ ಶಿಕ್ಷಣ ಇನ್ನೊಂದಿಲ್ಲ"

– ಗಾಂಧೀಜಿ

ಕರ್ನಾಟಕದಲ್ಲಿ ಒಂದು ಲಕ್ಷ ಪರಿಶಿಷ್ಟ ಜಾತಿ ಮತ್ತು ಜನಾಂಗದ ಶಾಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ– ಈ ಸೌಲಭ್ಯ ಒಂದು ಲಕ್ಷ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ ಲಭ್ಯ.

ಮೂವತ್ತೊಂದು ಸಾವಿರ ಶಾಲಾನಂತರದ ವಿದ್ಯಾರ್ಥಿಗಳಿಗೆ ಭಾರತ ಸರಕಾರದ ವಿದ್ಯಾರ್ಥಿ ವೇತನ ದೊರೆಯುತ್ತಿದೆ. ಈ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿಗಳಿಗಾಗಿ ೧೨೫ ರೂಪಾಯಿಗಳ ವರೆಗೂ ಹೆಚ್ಚಿನ ಧನ ಸಹಾಯ.

ಐವತ್ತು ಸಾವಿರ ಪರಿಶಿಷ್ಟ ಜಾತಿ, ಜನಾಂಗ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಸರಕಾರಿ ಹಾಗೂ ಧನ ಸಹಾಯ ಪಡೆದ ೧೦೭೬ ವಿದ್ಯಾರ್ಥಿ ನಿಲಯಗಳಲ್ಲಿ ವಸತಿ ಸೌಲಭ್ಯಗಳ ಏರ್ಪಾಡು.

ಕರ್ನಾಟಕ– ಬಡವರ ಏಳಿಗೆಗಾಗಿ
ನಿರಂತರ ಯತ್ನ ನಡೆಯುತ್ತಿರುವ ರಾಜ್ಯ.

ನಗೆ ಮಲ್ಲಿಗೆ

"ಅಲ್ರೋ, ನೀನು ಕನ್ನಡಿಗ. ನಿನಗೆ ತಮಿಳು, ತೆಲುಗು, ಮಲಯಾಳಂ, ಮರಾಠಿ, ಹಿಂದಿ, ರಾಜಸ್ಥಾನಿ, ಗುಜರಾತಿ, ಉರಿಯಾ, ಬಂಗಾಲಿ ಎಲ್ಲಾ ಭಾಷೆಗಳನ್ನೂ ಓದಲಿಕ್ಕೆ-ಬರಿಯಲಿಕ್ಕೆ ಬರತ್ತಲ್ಲಾ-ಹ್ಯಾಗೆ ಕಲಿತೆ?"

"ಏನ್ ಮಾಡ್ಲಿ? ಕನ್ನಡದಲ್ಲಿ ಸೆಕ್ಸ್ ಬುಕ್ಸ್ ಕಡಿಮೆ. ಉಳಿದ ಭಾಷೆಗಳಲ್ಲಿರೋ ರಸವತ್ತಾದ ಸಾಹಿತ್ಯವನ್ನ ಓದಲಿಕ್ಕೆ ಅನುಕೂಲ ನಾಗ್ಲೀಂತ ಎಲ್ಲಾ ಭಾಷೆಗಳನ್ನ ಕಲಿತೆ."

*

ಮದ್ಯಪಾನದ ಬಗ್ಗೆ ಅನಕ್ಷರಸ್ಥರಿಗೆ ತಿಳಿ ಹೇಳಬೇಂದು ಬಂದ ಆ ಮಹಾಶಯ ವೇದಿಕೆಯ ಮೇಲೆ ನಿಂತು ನೆರೆದ ಜನಕ್ಕೆ ಎರಡು ಗ್ಲಾಸುಗಳನ್ನು ತೋರಿಸಿದ. ಒಂದರಲ್ಲಿ ನೀರು- ಮತ್ತೊಂದರಲ್ಲಿ ಮದ್ಯ ಇತ್ತು. ಆತ ಒಂದು ಹುಳುವನ್ನು ನೀರಿದ್ದ ಗ್ಲಾಸಿಗೆ ಹಾಕಿದ. ಹುಳು ಪಟಪಟನೆ ಒದ್ದಾಡಿತು. ನಂತರ ಅದನ್ನು ತೆಗೆದು ಮದ್ಯದ ಗ್ಲಾಸಿಗೆ ಹಾಕಿದ. ಹುಳು ಸತ್ತು ಸುಮ್ಮನೇ ತೇಲ ತೊಡಗಿತು. ನಂತರ ಜನರನ್ನು ನೋಡಿ, "ಇದರಿಂದ ನಿಮಗೇನು ತಿಳೀತು?" ಎಂದು ಪ್ರಶ್ನಿಸಿದ.

"ಮದ್ಯ ಕುಡಿದರೆ ಹೊಟ್ಟೆಯೊಳಗಿನ ಹುಳು ಸತ್ತು ಹೋಗ್ತವೆ" ಹಿಂದಿನಿಂದ ಉತ್ತರ ಬಂತು.

*

ಆತ ರಾತ್ರಿ ಹೆಂಡತಿಯೊಂದಿಗೆ ಸ್ಕೂಟರ್ ಮೇಲೆ ಹೊರಟಿದ್ದ. ಸ್ಕೂಟರಿಗೆ ಲೈಟಿರಲಿಲ್ಲ. ಪೋಲೀಸಿನವ ಬಂದು ತಡೆದ. "ಲೈಟಿಲ್ಲದೆ ನಡಸ್ತಿದ್ದೀರಿ, ಗೊತ್ತಾ?" ಅಂದ.

"ಗೊತ್ತಿದೆ. ಏನು ಮಾಡಂತೀರಿ?"

"ಲೈಸೆನ್ಸ್ ತಗೀರಿ."

"ತಗೊಂಡೇ ಇಲ್ಲ."

"ಬ್ರೆಕ್ ಸರಿಯಾಗಿದೆಯಾ?"

"ಇಲ್ಲ, ಮುಂಜಾನೆ ಡೌನ್ ಆಗಿದೆ."

"ಹಾಗಾದ್ರೆ ನಡೀರಿ ಸ್ಟೇಶನ್ನಿಗೆ. ಮೂರು ಅಪರಾಧ ಮಾಡಿದೀರಿ, ನಾಚಿಗೆಯಾಗಲ್ವೆ?"

ಅಷ್ಟರಲ್ಲಿ ಹೆಂಡತಿ ಬಾಯಿ ಹಾಕಿದಳು:

"ಹೋಗ್ಲಿ ಬಿಡಿ ಇವ್ರೆ. ಅವ್ರು ಕುಡಿದಾಗೆಲ್ಲಾ ಹೀಗೇ ಮಾತಾಡೋದು."

*

"ಪ್ರಿಯೆ, ನಾವಿಬ್ರೂ ಇನ್ನೂ ನಾಲ್ಕು ವರ್ಷ ಹೀಗೇ ಪ್ರೀತಿಸ್ತಾ ಇರಬೇಕಾದ್ದು ಅನಿವಾರ್ಯ."

"ಯಾಕೆ ?"

"ಆಗ ನಂಗೆ ಇಪ್ಪತ್ತೊಂದು ತುಂಬುತ್ತೆ. ಸರ್ಕಾರೀ ಕಾನೂನಿನ ಪ್ರಕಾರ ಆಗ ಮಾತ್ರ ಮದುವೆ ಆಗ್ಲಿಕ್ಕೆ ಸಾಧ್ಯ, ಅಲ್ವಾ?"

*

ರಾಯರ ಮನೆಯ ಕಿಟಕಿಯ ಗಾಜನ್ನು ತೂರಿಕೊಂಡು ಇಟ್ಟಿಗೆಯೊಂದು ಒಳ ಬತ್ತು. ಅದಕ್ಕೊಂದು ಚೀಟಿ ಇತ್ತು: 'ನಾವು ಒಡೆದ ಕಿಟಕಿಯ ಗಾಜು ರಿಪೇರಿ ಮಾಡುತ್ತೇವೆ. ಕೇವಲ ಐದು ರೂಪಾಯಿಗೆ.'

*

ಪತ್ರಿಕೆಯೊಂದರಲ್ಲಿ ಜಾಹಿರಾತು. "ಪೆನ್ನು, ಮಸಿ ಇಲ್ದೇ ಬರೀಬಹುದು. ಹೆಚ್ಚಿನ ವಿವರಕ್ಕಾಗಿ ಈ ವಿಳಾಸಕ್ಕೆ ಎರಡು ರೂಪಾಯಿ ಕಳಿಸಿರಿ."

ಆತ ಕಳಿಸಿದ. ಕಾದ. ಬಂತು ಸಲಹೆ:

"ಪೆನ್ಸಿಲ್ ಉಪಯೋಗಿಸಿ."

*

ಆಪರೇಶನ್ ಥೇಟರಿನಲ್ಲಿ ರೋಗಿ ತುಂಬ ಗಾಬರಿ ಆಗಿ, "ಡಾಕ್ಟ್ರೆ- ಇದು ನನಗೆ ಮೊದಲ್ನೇ ಆಪರೇಶನ್ನು. ತುಂಬಾ ಹೆದರಿಕೆ" ಅಂದ.

"ಕಾಳಜಿ ಮಾಡಬೇಡಿ. ನಂದೂ ಇದು ಮೊದಲ್ನೇ ಆಪ್ರೇಶನ್ನು" ಅಂದ್ರು ಡಾಕ್ಟ್ರು.

ಡ್ರೈವರ್: ಸರ್, ಕಾರು ಮುಂದಕ್ಕೋಗೋದು ಸಾಧ್ಯಾನೇ ಇಲ್ಲ. ಪೆಟ್ರೋಲು ತೀರಿಹೋಗಿದೆ.

ಶೇಠ: ಹಾಗಾದ್ರೆ ವಾಪಸ್ ಮನೇಗೆ ಹೊಡಿ.

*

ಅವರು ಆಗ ತಾನೇ ಅಮೇರಿಕದಿಂದ ಬಂದವರು. ತಮ್ಮ ಊರಿಗೆ ಬಂದರು. ಸತ್ಕಾರ ಏರ್ಪಡಿಸಿದರು ಊರ ಜನ. ಅವರು ಭಾಷಣ ಮಾಡತೊಡಗಿದರು.

"ಅಮೇರಿಕ ಎಷ್ಟು ಮುಂದುವರಿದಿದೆ ಅಂತಂದ್ರೆ ಅಲ್ಲಿ ಎಲ್ಲಾ ಯಂತ್ರದ ಮೇಲೇ ಕೆಲಸ. ನಾಲ್ಕಾಣೆ ಹಾಕಿದ್ರೆ ಸಾಕು..."

"ಅಮೇರಿಕದಲ್ಲಿ ಆನೆಗಳಿಲ್ವಾರಿ......" ಹಿಂದಿನಿಂದ ಕೂಗಿದ ಹೈಸ್ಕೂಲ್ ಪ್ರೋಫ.

*

ಆ ಬಡ ಕವಿ ತನ್ನ ಮಿತ್ರನೊಡನೆ ಹೇಳುತ್ತಿದ್ದ:

"ನಿನ್ನೆ ರಾತ್ರಿ ನನ್ನ ಮನೆಗೆ ಕನ್ನಬಿತ್ತು"

"ಏನೇನು ಹೊಡ್ಕೊಂಡು ಹೋದ್ರು? ಭಾಳಾ ನಷ್ಟಾನಾ?"

"ಲಾಭಾನೇ ಆಯ್ತು ಅನ್ನು. ಮನೇನ ಪೂರ್ಣ ಶೋಧಿಸಿದ ಕಳ್ರು ಏನೂ ಸಿಗದೇ ನನ್ನ ಟೇಬಲ್ ಮೇಲೆ ೨೫ ರೂ. ಇಟ್ಟು ಹೋಗಿದಾರೆ."

*

ನ್ಯಾಯಾಧೀಶ: ನೀವು ಅವಿವಾಹಿತ್ರೇ ಮೇಡಂ?

ಆಕೆ: ಹೌದು- ನಾಲ್ಕನೇ ಸಲ ಸರ್.

*

ಆತ: ನನ್ನ ಕತೆ ಕೇಳಿದ್ರೆ ಕೂದಲು ನಿಮಿರ್ತವೆ.

ಈತ: ಹೌದಾ, ಹಾಗಾದ್ರೆ ನಮ್ಮ ಟೈಗಳೂ ಕಾಕಾಗೆ ಹೇಳು...

*

"ಸಿನ್ಮಾ ನಟಿಗಳು ಲೇಖಕಿ ಅಂತ ಕೇಳಿದೀನಿ ಅಂದ್ಹಾಗೆ ದುಡ್ಡಿಗೋಸ್ಕರ ಬರೀತಾರಾ?"

"ಹೌದ್ಹೌದು. ಪ್ರತಿ ಪತ್ರದಲ್ಲೂ..."

*

ಕಮಲಮ್ಮ ಅಳತೊಡಗಿದರು. 'ಯಾಕೇ, ಏನಾಯ್ತೇ' ಕೇಳಿದರು ಯಜಮಾನ್ರು. 'ಎಲ್ಲಾ ನನ್ನ ಪ್ರಾರಬ್ಧ, ಏನ್ ಮಾಡೋದು...' ಎಂದು ಮತ್ತೆ ಗೋಗರೆದ ಕಮಲಮ್ಮ, 'ನೋಡಿ. ನನ್ನ ಮಕ್ಕಳೆಲ್ಲಾ ತಮ್ಮ ಗಂಡಂದಿರ ಮನೇಲಿ ಎಷ್ಟು ಆರಾಮವಾಗಿದಾರೆ. ಏನ್ ಕಾರು, ಏನ್ ಮನೇಲಿ ಆಳು, ಆಹಾ ಅರಮನೆಯಂಥಾ ಬಂಗ್ಲೆಗಳು, ಗಂಡಂದಿರಿಗೆ ಸಾವಿರಗಟ್ಲೇ ಸಂಬ್ಳಾ—ಏನ್ ಮಾಡೋದು ಎಲ್ಲಾ ನನ್ನ ಪ್ರಾರಬ್ಧ...' ಮತ್ತೆ ಅತ್ತರು. 'ಅಲ್ವೆ, ಅದಕ್ಯಾಕೆ ಅಳು?' ಯಜಮಾನರು ಕೇಳಿದಾಗ, 'ನಮ್ಮಪ್ಪಾ-ಅಮ್ಮನಿಗೆ ಬುದ್ಧಿ ಇರಲಿಲ್ಲ-ಹೋಗಿ ಹೋಗಿ ನಿಮ್ಮಂಥೋರಿಗೆ ಕೊಟ್ಟು ಕೂತ್ರು. ಬಂದು ಕಾರೆ, ಬಂದು ಆಳೆ...'



"ನಾನು ಆರನೇ ಬಾರಿಯೂ ಸೋತಿರೋದು ನೋಡಿದರೆ ನಮ್ಮ ಜನರಲ್ಲಿ ಕರುಣೆ ಅನುಕಂಪಗಳು ಇನ್ನು ಕೆಲವು ವರ್ಷಗಳಲ್ಲಿ ಕಾಣೆಯಾಗಬಹುದು ಅಂತ ನನಗೆ ಅನಿಸ್ತಿದೆ...,"



ನೆಂಜಲಿ

ಪಿ. ಪಿ. ಉಪಾಧ್ಯ

ಎರಡೂ ಕೈಗಳಲ್ಲಿ ನೀರು ತುಂಬಿದ ಮಣ್ಣಿನ ಗಡಿಗೆಗಳನ್ನು ಹಿಡಿದುಕೊಂಡು ಅವುಗಳ ಭಾರಕ್ಕೆ ಜಗ್ಗುತ್ತಿದ್ದ ಭುಜಗಳನ್ನು ಸಮತೋಲನದಲ್ಲಿಡುವ ಪ್ರಯತ್ನ ಮಾಡುತ್ತ ಆ ಇಳಿಜಾರಾದ ದಾರಿಯಲ್ಲಿ ಗುಮ್ಮಿಯಿಂದ ಮೇಲಕ್ಕೆ ಬರುತ್ತಿದ್ದ. ಆವ ಮುದುಕನಾಗಿದ್ದ. ಮೈ ಕೈಗಳ ಚರ್ಮವೆಲ್ಲ ಸುಕ್ಕುಗಟ್ಟಿದ್ದುವು. ಕಣ್ಣುಗಳು ಗುಳಿ ಬಿದ್ದಿದ್ದುವು. ತಲೆಯ ಕೂದಲಿನ ಜತೆಗೆ ಮೀಸೆಯ ಕೂದಲೂ ಬಿಳುಪಾಗಿ ಬೆಳ್ಳಿಯ ಸರಿಗೆಗಳಂತೆ ಕಾಣುತ್ತಿದ್ದುವು. ಈಗ ಜೋತು ಬಿದ್ದಿದ್ದರೂ ಆ ಮೈಯ ಚರ್ಮ ಒಂದೊಂದು ದಿನ ಕಸುವು ತುಂಬಿದ ದೇಹದ ಭಾಗಗಳನ್ನೇ ಮುಚ್ಚಿತ್ತು ಎನ್ನುವುದು ತಿಳಿಯುತ್ತಿತ್ತು. ಉರುಳುತ್ತಿದ್ದ ವರ್ಷಗಳೊಡನೆ ಶಿಥಿಲವಾಗುತ್ತ ಬಂದಿದ್ದ ಆತನಿಗೆ ಈಗ ಎರಡು ಗಡಿಗೆಗಳ ತುಂಬಾ ನೀರನ್ನು ಎತ್ತುವುದೂ ಕಷ್ಟವಾಗುತ್ತಿತ್ತು. ಆದರೂ ಆವನಲ್ಲಿ ಒಂದು ಬಗೆಯ ಹಟವಿತ್ತು. ತನ್ನ ಗುರಿಯನ್ನು ತಲುಪುವ ಹುಚ್ಚು ಹಂಬಲವೂ ಅದರ ಜತೆ ಸೇರಿತ್ತು. ಅವನ ಶ್ರಮದ ಬಹುಪಾಲನ್ನು ಆ ಹಟ, ಹಂಬಲಗಳೇ ನುಂಗುತ್ತಿದ್ದುವು. ಹಲ್ಲು ಕಚ್ಚಿಕೊಂಡು ಮುಂದುವರಿಯುತ್ತಿದ್ದ ಆತ ತನ್ನ ಭಾವದ ಜತೆಗೆ ನೀರು ತುಂಬಿದ ಗಡಿಗೆಯ ಭಾರವೂ ಸೇರಿದುದರಿಂದ ಹೊಯಿಗೆಯಲ್ಲಿ ಹುಗಿಯುತ್ತಿದ್ದ ಕಾಲುಗಳನ್ನು ಪ್ರಯತ್ನಪಟ್ಟು ಎಳೆಯುತ್ತಿದ್ದ.

ಮನೆಯ ಮುಂದಿದ್ದ ಗುಮ್ಮಿ ಮತ್ತು ಮನೆಯ ಸುತ್ತಲಿದ್ದ ತೆಂಗಿನ ಮರಗಳ ನಡುವೆ ಓಡುವಾಗಲೆಲ್ಲ ಅವನ ಕೈಗಳಲ್ಲಿ ಎರಡು ಗಡಿಗೆಗಳಿರುತ್ತಿದ್ದುವು. ಆ ಹೊಯಿಗೆಯ ಗುಡ್ಡೆಯ ಮೇಲೆ ಮನೆಯನ್ನು ಕಟ್ಟಿಕೊಂಡ ಅವನು ಸುತ್ತಮುತ್ತ ತೆಂಗು ಮತ್ತು ಮಾವಿನ ಸಸಿಗಳನ್ನು ನೆಟ್ಟುಕೊಂಡಿದ್ದ. ಒಂದು ದಿನವೂ ಅವುಗಳ ಬುಡಕ್ಕೆ ನೀರನ್ನು ತಪ್ಪಿಸುವಂತಿಲ್ಲ ಎಂಬುದರ ಸ್ಪಷ್ಟ ಅರಿವು ಅವನಿಗಿತ್ತು. ಒಂದು ದಿನ ಎಲ್ಲಿಯಾದರೂ ಮರೆತರೂ ಸಂಜೆ ಹೊತ್ತು ಜೋಲು ಮೋರೆ ಹಾಕಿಕೊಂಡು ಅಳುತ್ತಿರುವವರಂತೆ, ಬಾಡಿ ಜೋತು ಬೀಳುತ್ತಿದ್ದ ಆ ಗಿಡಗಳನ್ನು ನೋಡಲು ಅವನಿಂದ ಸಾಧ್ಯವಾಗುತ್ತಿರಲಿಲ್ಲ. ಹಾಗೆಲ್ಲಾದರೂ ಬೇರೆ ಕೆಲಸದ ಗಡಿಬಿಡಿಯಲ್ಲಿಯೋ ಅಥವಾ ಅವನು ಊರಿನಲ್ಲಿ [illegible] ದಾಗಲೋ ನೀರು ಹಾಕುವುದು ತಪ್ಪಿ[illegible] ಆ ದಿನವಿಡೀ ಅವನ ಸ್ವಾಸ್[illegible] ತನ್ನ ದೇಹದ ಒಂದು ಭಾಗವೇ [illegible] ಬಾಡಿ [illegible] ಎನ್ನುವಂತೆ ಆತ [illegible] ಸುತ್ತಿದ್ದ. ಆಗೆಲ್ಲ ಅವನ ಮುದುಕಿ [illegible]ದ್ದಳು "ಇದೆಲ್ಲ ನಮಗೆ ಯಾಕೆ ಇನ್ನು... ಎರಡು ಹೊತ್ತಿನ ಗಂಜಿಗೆ ಹೇಗೂ ತೊಂದರೆಯಿಲ್ಲ... ಆದ ಮೇಲೆ ಯಾಕೆ ಇಷ್ಟು [illegible]. ಇಂದೋ ನಾಳೆಯೋ ಮಗುಚಿಕೊಳ್ಳ[illegible]..."

ಇನ್ನೂ ಏನೇನೋ ಹೇಳುತ್ತಿದ್ದಳು. ಆದರೆ ಇವನು ಅದನ್ನೆಲ್ಲ ಕಿವಿಯಲ್ಲೇ ಹಾಕಿಕೊಳ್ಳುತ್ತಿರಲಿಲ್ಲ. ತನ್ನಷ್ಟಕ್ಕೇ ನೀರು ಹೊಯ್ಯುತ್ತಿದ್ದ. ತನ್ನ ಮಾತು ಕೇಳದಷ್ಟು ತಾತ್ಸಾರ ಇವನಿಗೆ ಎಂದು ಮುದುಕಿ ಇನ್ನಷ್ಟು ಸಿಡಿಮಿಡಿಗೊಳ್ಳುತ್ತಿದ್ದಳು.

ಮರಳಿನಲ್ಲಿಯೇ ತೋಡಿದ ಆ ಗುಮ್ಮಿಯ ಒರತೆಯಲ್ಲಿ ನೀರಿಗಿಂತ ಹೆಚ್ಚು ಹೊಯಿಗೆಯೇ ಬರುತ್ತಿತ್ತು. ಗಡಿಗೆ ತುಂಬುವುದಿರಲಿ ಪಾದ ಮುಳುಗುವುದೂ ಕಷ್ಟವೆನ್ನಿಸುವುದೂ ಇತ್ತು ಆ ಹೊಂಡದಲ್ಲಿ. ಆಗ ಇವ ಹಾರೆಯಿಂದ ಬೆನ್ನು ನೋಯುವ ವರೆಗೂ ಮಣ್ಣನ್ನು ಎತ್ತಿ ಎತ್ತಿ ಮೇಲಕ್ಕೆ ಹಾಕುತ್ತಿದ್ದ. ಒಂದು ಹಾರೆ ತೆಗೆದು ಮೇಲೆ ಹಾಕುವುದರೊಳಗೆ ಇನ್ನೆರಡು ಹಾರೆ ಮಣ್ಣು ಬರುತ್ತಿದ್ದರೂ ಬೇಸರವಿರಲಿಲ್ಲ ಅವನಿಗೆ. ಒಂದೇ ಸಮನೆ ತೆಗೆಯುತ್ತಿದ್ದ. ಹಾಗೆಯೇ ಗಡಿಗೆ ಮುಳುಗುವಷ್ಟು ಹೊಂಡ ಆಯ್ತು ಎನ್ನಿಸಿದರೆ ಗಡಿಗೆಗಳೆರಡನ್ನು ತುಂಬಿಕೊಂಡು ಗುಮ್ಮಿಯ ಒಂದು ಬದಿಯಲ್ಲಿ ಮಾಡಿದ ದಾರಿಯಲ್ಲಿ ಮೇಲೆ ಹತ್ತುತ್ತಿದ್ದ. ಹಾಗೆ ಮೇಲೆ ಬರುವಾಗ ಗಡಿಗೆ ಎಲ್ಲಿಯಾದರೂ ಪಕ್ಕದ ದಂಡೆಗೆ ತಾಗಿ ಒಡೆದೀತು ಎಂದು ಹೆದರುತ್ತ ಜಾಗ್ರತೆಯಾಗಿ ನಡೆಯುತ್ತಿದ್ದ. ದೂರದಿಂದ ನೋಡುವವರಿಗೆ ಮುದುಕ ನಾಟ್ಯವಾಡುತ್ತಿದ್ದಾನೇನೋ ಎನ್ನಿಸುವ ಭಂಗಿಯಲ್ಲಿರುವಾಗ ಚಾ ಕುಡಿಯಲಿಕ್ಕೋ ಬೆಳಿಗ್ಗಿನ ತಂಗಳನ್ನು ಉಣ್ಣಲೆಂದೋ ಕರೆಯಲು ಬಂದ ಮುದುಕಿ ಅವನ ಅವಸ್ಥೆಯನ್ನು ಕಂಡು ಜೋರು ಮಾಡುತ್ತಿದ್ದಳು; "ನಿನಗೆ ಹೇಳಿದ್ದು ಅರ್ಥವಾಗುವುದಿಲ್ಲವೇನು?... ಕೆಳಗಿನ ಮನೆಯ ಒಡೆಯರು ಇರುವಷ್ಟು ದಿನ ನಮಗೆ ಯಾಕೆ ಈ ಒದ್ದಾಟ! ಬದುಕಿದರೂ ನಾವು ಎಷ್ಟು ದಿನ ಬದುಕಿಯೇವು...? ಆಮೇಲೆ ಇದನ್ನೆಲ್ಲಾ ಯಾರ್‍ಯಾರೋ ಅಲ್ಲವೇ ತಿನ್ನುವುದು...?" ಎಂದು. ಇವನು ಕೇಳಿದರೂ ಕೇಳಿಸಿಕೊಳ್ಳದವನಂತೆ ತನ ಕಾಯಕ ಮುಂದರಿಸಿಯೇ ಇರುತ್ತಿದ್ದ. ಛೆ...... ಈ ಮುದುಕಿಯ ಮನಸ್ಸಿನಲ್ಲಿ ಭಾವನೆಗಳೇ ಇಲ್ಲ[illegible]! ಎಂದುಕೊಳ್ಳುತ್ತಿರಲಿಕ್ಕೂ ಸಾಕು.

[illegible] [illegible] ದಾಟಿ ಬಂದವ ಗಡಿಗೆಗಳನ್ನೊಮ್ಮೆ ನೆಲದ ಮೇಲಿಟ್ಟುಕೊಂಡು ಏದಿತವನ್ನು ಸರಿಮಾಡಿಕೊಂಡು ಪುನಃ ಹೊರಡುತ್ತಿದ್ದ. ಗಡಿಗೆಯೇನಾದರೂ ಕೈ ತಪ್ಪಿದರೆ... ಎನ್ನುವ ಹೆದರಿಕೆ ಅವನಿಗೆ. ಗಡಿಗೆ ಒಡೆದರೆ ಮತ್ತೆ ಸಂತೆಗೇ ಹೋಗಬೇಕಲ್ಲ! ಗಡಿಗೆ ತರುವುದೇನೂ ಸಮಸ್ಯೆಯಲ್ಲ ಅವನಿಗೆ. ಕೆಳಗಿನ ಕೇರಿಯ ಒಡೆಯರ ಮನೆಗೆ ಹೋಗಿ ತಲೆ ತುರಿಸಿದರೆ ಎರಡು ಮೂರು ರೂಪಾಯಿ ಬಿಸಾಕಿಯಾರು. ಆದರೆ ಮಡಕೆ ತರಲು ಇನ್ನೊಂದು ಸಂತೆಯ ದಿನದ ವರೆಗೆ ಕಾಯಬೇಕಲ್ಲ! ಅಲ್ಲಿಯವರೆಗೆ ಗಿಡಗಳಿ-ಗೇನು ಗತಿ!

ಮುದುಕಿ ಎಷ್ಟು ಕರೆದರೂ ಒಳಗೆ ಹೋಗುವುದಿಲ್ಲ ಆತ ಮಧ್ಯದಲ್ಲಿ. ನೀರು ಹೊಯ್ಯುವುದು ಮೊದಲು ಮುಗಿಯಬೇಕು. ಆ ಮೇಲೆಯೇ ಚಾ ಕುಡಿಯುವುದನ್ನೋ ತಂಗಳು ತಿನ್ನುವುದನ್ನೋ ಮಾಡಿಯಾನು. ಮುದುಕಿಗೆ ಅನುಭವ ಹೇಳಿಕೊಟ್ಟಿದೆ ಅದನ್ನು. ಆದ್ದರಿಂದ ಬಾಗಿಲಿನಲ್ಲಿ ನಿಂತುಕೊಂಡು ಅವನನ್ನು ನೋಡುತ್ತಿದ್ದವಳು ಅಲ್ಲಿಯೇ ಕುಳಿತುಕೊಳ್ಳುತ್ತಿದ್ದಳು. ಇವ ಗಡಿಗೆಗಳನ್ನು ನೇತಾಡಿಸಿಕೊಂಡು ಹೋಗುತ್ತಿದ್ದ [illegible] ಗಡಿಗೆಗಳನ್ನು ಇಟ್ಟುಕೊಂಡು ಹತ್ತೆಂಟು ಹೆಜ್ಜೆ ಭಾರವನ್ನು ಹೊತ್ತುಕೊಂಡು ಬಂದು ಸುಸ್ತಾಗಿದ್ದ [illegible] ತಡಿಸುತ್ತಿದ್ದ. ಒಮ್ಮೆ ಕೈಯಿಂದ ಬಿಳಿಯ ಮೀಸೆಯನ್ನೊಮ್ಮೆ ಸವರಿ ತುಟಿಯಿಂದ ಕೆಳಗಿಳಿಯುತ್ತಿದ್ದ ಕೂದಲುಗಳನ್ನು ಒಪ್ಪವಾಗಿರಿಸುವ ವ್ಯರ್ಥ ಪ್ರಯತ್ನಮಾಡಿ ಗಡಿಗೆಯನ್ನೆತ್ತಿ ಮರದ ಬುಡಕ್ಕೆ ಸುರಿಯುತ್ತಿದ್ದ.

ಇಷ್ಟೆಲ್ಲ ಕೆಲಸಗಳನ್ನು ತನ್ನಷ್ಟಕ್ಕೆ ಮಾಡುತ್ತಿದ್ದ ಮುದುಕನ ತಲೆಯಲ್ಲಿ ನೆನಪುಗಳಿಗೇನೂ ಕೊರತೆಯಿರಲಿಲ್ಲ. ಹಿಂದಿನದೆಲ್ಲ ನೆನಪಾದಂತೆ ಕೈಯ್ಯ ಹಿಡಿತ ಬಿಗಿಯಾಗುತ್ತಿತ್ತು. ಹಿಂದಿನ ದಿನಗಳಲ್ಲಿಯ [illegible] ಪುಡಿಮಾಡುವ ಬಿಗಿತ ಇಲ್ಲದಿದ್ದರೂ ಸಾಕಷ್ಟು ಬಿಗಿಯಾಗಿಯೇ ಇರುತ್ತಿತ್ತು. ಆದರೆ [illegible]

ತ್ತಿತ್ತು. ತನ್ನದೆಲ್ಲವೂ ಕಳೆದುಹೋಯ್ತು ಮತ್ತು ಇನ್ನು ಏನು ಉಂಟೆಂದು ಈ ಪ್ರಪಂಚದಲ್ಲಿ ಬದುಕಿರಬೇಕು ಎನ್ನುವ ಪ್ರಶ್ನೆಯೂ ಬರುತ್ತಿತ್ತು. ಆದರೆ ಅದನ್ನು ಬೆಳೆಯಲಿಕ್ಕೆ ಬಿಡದ ಆತ ಗಡಿಗೆಗಳ ಮೇಲಿನ ಹಿಡಿತವನ್ನು ಬಿಗಿಮಾಡುತ್ತ ಗುಮ್ಮಿಗೆ ಇಳಿಯುತ್ತಿದ್ದ. ಅಲ್ಲಿಂದ ನೀರನ್ನು ತುಂಬಿಸಿಕೊಂಡು ಮೊದಲಿನಂತೆಯೇ ತೆಗೆದುಕೊಂಡು ಹೋಗಿ ತೆಂಗಿನ ಸಸಿಯ ಬುಡಕ್ಕೆ ಸುರಿಯುತ್ತಿದ್ದ. ಒಮ್ಮೊಮ್ಮೆ ಹಾಗೆ ನೀರನ್ನು ಸುರಿದವ ಬೆನ್ನನ್ನು ನೆಟ್ಟಗೆ ಮಾಡುವ ನೆಪದಲ್ಲಿ ಮೇಲೆ ನೋಡುತ್ತಿದ್ದ—ತನು ತೆಂಗಿನ ಮರದ ತುದಿಯನ್ನು. ಅದೆಲ್ಲಿ—ಯಾದರೂ ಹೀಚು ಬಿಟ್ಟಿತೇನೋ ಎಂದು ನೋಡುತ್ತಿದ್ದೇನೆ ಎನ್ನುವುದು ಬಾಗಿಲು ಬಳಿಯಲ್ಲಿ ಕುಳಿರುವ ಮುದುಕಿಗೆ ತಿಳಿಯಬಾರದು ಎಂದು. ಅಲ್ಲಿ ಹೀಚಿನ ಸುಳಿವೇ ಕಾಣದಿದ್ದಾಗ ನಿರಾಸೆಯೇ ಆದರೂ ಅಷ್ಟು ಬೇಗ ಅದನ್ನು ಕಂಡೇ ತೀರುತ್ತೇನೆ ಎನ್ನುವ ಹಠದೊಂದಿಗೆ ಗಡಿಗೆಯನ್ನು ಹಿಡಿದುಕೊಂಡು ಚುರುಕಾಗಿ ನಡೆಯುತ್ತಿದ್ದ ಗುಮ್ಮಿಯ ಕಡೆಗೆ. ಆ ಮರಗಳಲ್ಲಿ ಫಲ ಬರುವುದನ್ನು ಕಾಣುವ ಹಂಬಲ ಅತಿಯಾಗಿತ್ತು ಅವನಲ್ಲಿ. ತನ್ನ ಜೀವನದಲ್ಲಿಯ ಒಂದೇ ಒಂದು ಆಸೆಯೆಂದರೆ ಅದೇ ಆಗಿದೆ ಎನ್ನುವುದೂ ತಿಳಿದಿತ್ತು ಅವನಿಗೆ. ಅದೊಂದು ಈಡೇರಿತೆಂದರೆ ಈ ಪ್ರಪಂಚದಿಂದ ತನ್ನ ಬಂಧನವನ್ನು ಸುಲಭದಲ್ಲಿ ಬಿಡಿಸಿಕೊಂಡೇನು ಎಂದೂ ಅನ್ನಿಸಿತ್ತು.

ಇಷ್ಟೆಲ್ಲ ಹಠ ಮತ್ತು ಹಂಬಲವನ್ನು ಹೊತ್ತಿದ್ದರೂ ಅವನಿಗೊಂದು ಹೆದರಿಕೆಯಿತ್ತು. ಒಂದು ದಿನ ಯಾರೋ ಹೇಳಿದ್ದರು. ಅಜ್ಜ... ನಮ್ಮೂರಿಗೊಂದು ರಸ್ತೆ ಮಾಡಿಸುತ್ತಾರಂತೆ. ಮತ್ತೆ [illegible] ... ಎಂದು. ಇವ ಹೌಹಾರಿದ್ದ. ತನ್ನ ಆಸೆಯೆಲ್ಲವೂ ನುಚ್ಚುನೂರಾಗುತ್ತದೆಂದು ಹೆದರಿದ್ದ. ತನ್ನ ಇಷ್ಟು ದಿನದ ಶ್ರಮ ಫಲಕ್ಕೆ ಬರದೇ ಹೋಗುತ್ತದೆಯೇನೋ ಎಂದು ಅಳುಕಿದ್ದ. "ಇಷ್ಟು ದಿನ ತಡೆದವರಿಗೆ ಇನ್ನೊಂದಿಷ್ಟು ದಿನ ತಡೆಯಲಿಕ್ಕೆ ಆಗುವುದಿಲ್ಲವೇ... ಇನ್ನೊಂದೆರಡು ವರ್ಷ... ಅಷ್ಟರಲ್ಲಿ ಈ ತೆಂಗಿನ ಮರಗಳಲ್ಲಿ ಫಲ ಬರುತ್ತದೆ. ಅದನ್ನೊಂದು ಕಣ್ಣಾರೆ ಕಂಡು... ಅದರ ಒಂದೇ ಒಂದು ಎಳನೀರನ್ನು ಕುಡಿದು... ನಾನು ಮುಗುಚಿಕೊಳ್ಳುವವರೆಗೆ ಕಾಯಬಾರದೇ... ನಾನೇನು ಶಾಶ್ವತವೇ ಈ ಪ್ರಪಂಚದಲ್ಲಿ... ನಾನು ಹೋದ ಮೇಲೆ ಏನಾದರೂ ಆಗಲಿ..." ಎಂದೆಲ್ಲ ಆಲೋಚಿಸಿದ್ದ ಮತ್ತು ಹಾಗೆಯೇ ಅವರಿವರ ಹತ್ತಿರ ಹೇಳಿಯೂ ಇದ್ದ. ಅವರು ನಕ್ಕಿದ್ದರು. 'ಅಲ್ಲ ಅಜ್ಜ... ನಿನ್ನಂತಹವರು ಅವರಿಗೆ ಎಷ್ಟು ಜನ ಸಿಗುತ್ತಾರೆಂದು ತಿಳಿದಿದೆಯಾ... ಅವರ ಗೋಳನ್ನೆಲ್ಲ ಕೇಳುತ್ತ ಕುಳಿತರೆ ಈ ರಸ್ತೆಯ ಕೆಲಸ ಮುಂದುವರಿದಂತೆಯೇ...' ಎನ್ನುತ್ತ ಅವರು ಮುಂದುವರಿಸಿದ್ದರು. 'ಅದೇ ನೀನು ಸ್ವಲ್ಪ ದೊಡ್ಡ ಜನವೇನಾದರೂ ಆಗಿದ್ದರೆ ಅಥವಾ ಅವರಿವರ ಗುರುತಾದರೂ ನಿನಗೆ ಇದ್ದಿದ್ದರೆ ಸ್ವಲ್ಪ ತಡೆಯುತ್ತಿದ್ದರೋ ಏನೋ... ಕಡೆಯ ಪಕ್ಷ ನಿನ್ನ ಜಾಗವನ್ನಾದರೂ ತಪ್ಪಿಸುತ್ತಿದ್ದರು...' ಅವರ ಮಾತನ್ನು ಸುಮ್ಮನೆ ಕೇಳುತ್ತಿದ್ದ. ಅವ ಎದುರು ಹೇಳಲು ಬಾರದೆ ಹೆದರಿಕೆಯನ್ನಷ್ಟೇ ತನ್ನಲ್ಲಿ ಉಳಿಸಿಕೊಂಡು ರಸ್ತೆಯನ್ನು ಮಾಡು



"ಆಂ.......!"

ವವರು ಯಾವಾಗ ಬಂದಾರು ಎಂದು ಕಾಯುತ್ತಿದ್ದ. ದಿನದಿಂದ ದಿನಕ್ಕೆ ಅವನ ಹೆದರಿಕೆ ಬೆಳೆಯುತ್ತಿತ್ತು. ಅದರ ಜತೆಯಲ್ಲಿಯೇ ತೆಂಗಿನ ಮರದಲ್ಲಿ ಫಲವನ್ನು ಕಾಣುವ ಇಚ್ಛೆಯೂ. ಈಗೀಗ ಮರಗಳಿಗೆ ಹೊಯ್ಯುವ ನೀರಿನ ಪ್ರಮಾಣವನ್ನು ದುಪ್ಪಟ್ಟುಗೊಳಿಸಿದ ಆತ ಮುದುಕಿಯ ಕಣ್ಣು ತಪ್ಪಿಸಿ ಮರದ ತುದಿಯ ಮೂಲೆ ಮೂಲೆಗಳನ್ನೂ ಬಿಡದೇ ಶೋಧಿಸುತ್ತಿದ್ದ. ಬಯಸಿದ್ದು ಕಾಣಿಸದಿದ್ದಾಗ ನಿಟ್ಟುಸಿರು ಬಿಡುತ್ತಿದ್ದ.

ಅವ ಹೆದರಿಕೆ ಮತ್ತು ರಸ್ತೆಮಾಡುವವರ ನಿರೀಕ್ಷೆಯಲ್ಲಿಯೇ ಇದ್ದಂತೆ ದಿನಗಳು ಉರುಳುತ್ತಿದ್ದವು. ಹಾಗೇ ಕೆಲವು ದಿನಗಳವರೆಗೆ ವಿಶೇಷವೇನೂ ನಡೆಯದಿದ್ದಾಗ "ಯಾರೋ ತನ್ನನ್ನು ಸುಮ್ಮನೆ ತಮಾಷೆ ಮಾಡಿದರು ಅಷ್ಟೆ!... ಈ ಹೊಯಿಗೆಯ ಗುಡ್ಡೆಯ ಮೇಲೆ ರಸ್ತೆ ಮಾಡುತ್ತಾರೆಯೇ..." ಎಂದು ತೃಪ್ತಿಪಟ್ಟುಕೊಳ್ಳುವ ಪ್ರಯತ್ನ ಮಾಡುತ್ತಿದ್ದ. 'ತಾನೇನು ತಪ್ಪು ಮಾಡಲಿಲ್ಲ. ಯಾರಿಗೂ ಅನ್ಯಾಯವನ್ನೂ ಮಾಡಲಿಲ್ಲ. ಅಂತಹವನಿಗೆ ದೈವ ಎರಡು ಬಗೆಯಲಿಕ್ಕಿಲ್ಲ' ಎನ್ನುವ ಅವನ ನಂಬಿಕೆ ಬಲವಾಗುತ್ತ ಬಂದಿತ್ತು. ಮುಳುಗುವವ ಹುಲ್ಲಿಗಕ್ಕೇ ಜೋತು ಬೀಳುವಂತೆ ಅವ ತನ್ನ ಆ ನಂಬಿಕೆಗೇ ಅಂಟಿಕೊಂಡಿದ್ದ, ಈ ದಿನಗಳಲ್ಲಿ ಅಂತಹ ನಂಬಿಕೆಗಳೆಲ್ಲ ಫಲಿಸಿಯಾವೆ ಎಂದು ಎಣಿಸದೇ.

●

ಮುದುಕ ಮೊದಲಿನಿಂದಲೂ ಇಲ್ಲಿಯೇ ಇದ್ದವನಲ್ಲ. ಇಲ್ಲಿನ ಈ ಮನೆ, ಈ ತೆಂಗಿನ ಸಸಿಗಳೊಂದಿಗಿನ ಅವನ ನಂಟು ಬಹಳ ಹಳತೇನೂ ಅಲ್ಲ. ಆದರೆ ಅದು ಆಳವಾಗಿತ್ತು. ಕಾಲದ ಮಿತಿಗೆ ಹೊರಪಟ್ಟ ಅದು ಜನ್ಮ ಜನ್ಮಾಂತರಗಳದ್ದು ಇದ್ದಿರಲಿಕ್ಕೂ ಸಾಕು ಎನ್ನಿಸುವಂತಿತ್ತು. ಅವನಪ್ಪನ ಕಾಲದ ಅಥವಾ ಅಜ್ಜನ ಹಿಂದಿನ ಸಮುದ್ರದ ಬದಿಯ ಗುಡಿಸಲನ್ನು ಇವ ಬಿಟ್ಟು ಬಂದು ಇಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿ ಒಂದು ಹತ್ತು ವರ್ಷಗಳು ಕಳೆದಿರಬಹುದಷ್ಟೇ. ಆದರೂ ಅವನಿಗೆ ಹಾಗನ್ನಿಸುತ್ತಿರಲಿಲ್ಲ. ಬಹಳ ಹಿಂದಿನಿಂದಲೂ ತಾನು ಇಲ್ಲಿಯೇ ಇದ್ದೆ ಅನ್ನಿಸುತ್ತಿತ್ತು ಈಗ.

ಅವ ತನ್ನ ಹುಡುಗಾಟವನ್ನೆಲ್ಲ ಕಳೆದದ್ದು ಸಮುದ್ರದ ಬದಿಯ ಗುಡಿಸಲಿನಲ್ಲಿ. ವತ್ತೆ ಆ ಬಲಿಷ್ಟ ತೋಳುಗಳು ದೋಣಿಯನ್ನು ಸಂಜೆಯ ಹೊತ್ತು ನೀರಿಗೆ ದೂಡಿಕೊಂಡು ಹೋಗಿ ಮಾರನೆಯ ದಿನ ಸಂಜೆಯ ಹೊತ್ತಿಗೆ ಬೆವರಿಳಿಸಿಕೊಳ್ಳುತ್ತಾ ತುಂಬಿದ ದೋಣಿಯೊಂದಿಗೆ ಬಂದು ಹೆಂಡತಿ ಮಾಡಿಟ್ಟ ಬಿಸಿಬಿಸಿ ಗಂಜಿಯೊಂದಿಗೆ ಹಿಂದಿನ ದಿನಗಳಲ್ಲಿ ಹಿಡಿದ ತಂದ ಮೀನನ್ನು ನಂಜಿಕೊಳ್ಳುತ್ತಾ ಉಣ್ಣುತ್ತಿದ್ದುದೂ ಅಲ್ಲಿಯೇ. ಮಡಲು ಹೊದಿಸಿದ ಮಾಡು ಮತ್ತು ಅದರದೇ ತಡಿಕೆಗಳ ಗೋಡೆಯ ಆ ಗೂಡಿನಲ್ಲಿಯೇ ಅವನು ಬೆಚ್ಚಗಿನ ರಾತ್ರಿಗಳನ್ನು ಕಳೆದಿದ್ದ ಮತ್ತು ಆಗಲೇ ಅವನಿಗೆ ಮಗನೊಬ್ಬ ಹುಟ್ಟಿದ್ದ.

ಮಳೆಗಾಲದ ದಿನಗಳಲ್ಲಿ ರಾತ್ರಿಯಿಡೀ ಸಮುದ್ರದ ನೀರು ಪಡು ಬದಿಯ ಮಡಲಿನ ತಡಿಕೆಗೇ ಬಡಿಯುತ್ತಿದ್ದರೂ ಧೃತಿಗೆಡದೆ ಮಲಗಿದ್ದು ಬೆಳಗ್ಗೆದ್ದು ಹಾರೆ ಹಿಡಿದು ಮಣ್ಣನ್ನು ಕಡಿದುಕಡಿದು ದಂಡೆಕಟ್ಟಿದ್ದು–ಅದು ಸಮುದ್ರದ ಸಿಟ್ಟಿನಗಳಿಗೆಗಳಲ್ಲಿ ಒಂದು ನಿಮಿಷಕ್ಕೂ ಈಡಾಗಲಿಕ್ಕಿಲ್ಲ–ಎಂದು ತಿಳಿದೂ. ಸಮುದ್ರದ ತೆರೆಗಳ ಹೊಡೆತವನ್ನೊಂದಿಷ್ಟು ತಡೆದೀತು ಎಂದು ಎಲ್ಲೆಲ್ಲಿಂದಲೋ ಮುಂಡಕ ಮತ್ತು ಮುಳ್ಳುಗಳನ್ನು ತಂದು ಬೇಲಿಕಟ್ಟಿದ್ದು, ಒಂದು ದಿನ ಇಲ್ಲೊಂದು ದೊಡ್ಡ ಹಳು ಬೆಳೆದೀತು ಎಂದು ಆಸೆ ಪಟ್ಟಿದ್ದು ಎಲ್ಲ ಆ ಸಮುದ್ರದ ಬದಿಯಲ್ಲಿ. ಆಗಲೂ ಅದೊಂದು ರೀತಿಯ ಹಟ, ಮನೆಯನ್ನು ನಿಲ್ಲಿಸುತ್ತೇನೆ ಎನ್ನುವ ಛಲ. ದಿನವೂ ಹಿಂದಿನ ದಿನ ಮಾಡಿದ ಕೆಲಸವನ್ನೇ ಮಾಡುತ್ತಿದ್ದ ಮಾಡಿದ ಕೆಲಸದ ಕುರುಹೂ ಇಲ್ಲದೆ ಅಳಿಸಿ ಹೋಗುತ್ತದೆ ಎನ್ನುವುದು ತಿಳಿದೂ ದಂಡೆ ಕಟ್ಟುತ್ತಿದ್ದ. ಈ ಸಮುದ್ರದ ಎದುರಿಗೆ ತಾನೊಂದು ಈಡೇ ಎನ್ನಿಸಿದರೂ ತನ್ನಪ್ಪನಿದ್ದ ಮನೆ ಮತ್ತು ತಾನು ಹುಟ್ಟಿದ ಮನೆ ಎನ್ನುವ ವಾಂಛಲ್ಯ

ಸೇರಿ ಅವನಿಗೆ ಆ ದಿನಗಳಲ್ಲಿ ಆಯಾಸವೇ ಆಗದಂತೆ ಮಾಡುತ್ತಿದ್ದವು.

'ಇವೆಲ್ಲ ಯಾಕೆ ಮಗಾ... ಸಮುದ್ರ ಕಣ್ಣು ಬಿಟ್ಟರೆ ರಾತ್ರಿ ಬೆಳಗಾಗುವುದರೊಳಗೆ ಪಪ್ಪ...' ಎಂದು ಅಪ್ಪ ಹೇಳುತ್ತಿದ್ದುದನ್ನು ಕೇಳಿಸಿಕೊಳ್ಳದೆ ಇವನೇ ಕುಣಿ ತೋಡಿ ಮನೆಯ ಸುತ್ತಲೂ ತೆಂಗಿನ ಸಸಿಗಳನ್ನು ನೆಟ್ಟಿದ್ದ. ಅಪ್ಪ ಸತ್ತು ಇವನ ಮಗ ದೊಡ್ಡವನಾಗುವ ಹೊತ್ತಿಗೆ ಆ ಮರಗಳಲ್ಲಿ ಫಲ ಬರಲಿಕ್ಕೆ ಸುರುವಾಗಿತ್ತು. ಸಮುದ್ರದ ಅಲೆಯೊಂದಿಗೆ ಹೋರಾಡುವ ಕೆಲಸವನ್ನು ವರ್ಷಕ್ಕೊಂದು ನಾಲ್ಕು ತಿಂಗಳು ಮಾಡಿದರೆ ಉಳಿದ ದಿನಗಳನ್ನು ನಿಶ್ಚಿಂತೆಯಿಂದ ಕಳೆಯಬಹುದಿತ್ತು. ಹಾಗೂ ಏನಾದರೂ ಹೆಚ್ಚು ಕಡಿಮೆಯಾದರೆ ಬಲೆಯ ತಂಡೇಲನಿರುತ್ತಿದ್ದ. ಸಾಲವಾಗಿ ಅಕ್ಕಿಯನ್ನೋ ದುಡ್ಡನ್ನೋ ಕೊಟ್ಟಾನು. ಇನ್ನೊಂದು ಬೇಸಿಗೆಯಲ್ಲಿ ಮೀನು ಹಿಡಿಯಲು ಹೋಗುವಾಗ ತೀರಿಸಿದರಾಯ್ತು. ಆದ್ದರಿಂದ ಮಳೆಗಾಲದಲ್ಲಿಯೂ ಆರ್ಥಿಕವಾಗಿ ಕಷ್ಟವೇನೂ ಆಗುತ್ತಿರಲಿಲ್ಲ. ಆಗೆಲ್ಲ ಮಳೆ ಬರದ ಸಂಜೆಗಳಲ್ಲಿ ಸೂರ್ಯನ ಕಿರಣಗಳು ಓರೆಯಾಗಿ ಬೀಳುವಾಗ ಮಗನನ್ನು ಕರೆದುಕೊಂಡು ತೆಂಗಿನ ಮರಗಳ ನಡುವೆ ಸುತ್ತುತ್ತಿದ್ದ. ತಾನು ಪಟ್ಟ ಕಷ್ಟಗಳನ್ನು ಅವನೊಡನೆ ಹೇಳುತ್ತಿದ್ದ. ತೆಂಗಿನ ಮರಗಳನ್ನು ಈ ಫಲ ಕೊಡುವ ಮಟ್ಟಕ್ಕೆ ತರಬೇಕಾದರೆ ತಾನು ಪಟ್ಟ ಪಾಡೆಷ್ಟು ಎನ್ನುವುದನ್ನು ಹೇಳುವಾಗ ಮಗ ಕೇಳುತ್ತಿದ್ದ. ತೆರೆಯದ ತುಟಿಯನ್ನು ಮುಚ್ಚುತ್ತ ಬಂದಿದ್ದ ಆ ಮೀಸೆಯಡಿಯ ಭಾವನೆ ಅರ್ಥವಾಗುತ್ತಿರಲಿಲ್ಲ. ಬಹುಶಃ ಅಪ್ಪನಿಗಿಂತ ತಾನು ಇನ್ನೂ ಹೆಚ್ಚಿನ ಕಷ್ಟ ಪಡಬೇಕು ಎಂದು ಅನ್ನಿಸುತ್ತಿರಲಿಕ್ಕೂ ಸಾಕು.

ದಿನಗಳು ಆ ಸಮುದ್ರದ ಬದಿಯಲ್ಲಿ ಒಂದೇ ಸಮ ಇರುತ್ತಿರಲಿಲ್ಲ. ಬೇಸಗೆ ಕಳೆದು ಬರುವ ಮಳೆಗಾಲಗಳು ಜನರಿಗೆಲ್ಲ ಆತಂಕವನ್ನುಂಟು ಮಾಡುತ್ತಿದ್ದುವು. ಹುಟ್ಟಿದಂದಿನಿಂದ ಸಾಯುವವರೆಗೆ ಸಮುದ್ರದ ಒಡನಾಟದಲ್ಲಿಯೇ ಇರುವವರೆಗೂ ಮಳೆಗಾಲದಲ್ಲಿ ಅಷ್ಟೊಂದು ಸಮಾಧಾನವಿರುತ್ತಿರಲಿಲ್ಲ. ಆದರೂ ದಿನ ದೂಡುತ್ತಿದ್ದರು.

ಹಾಗೆಯೇ ಆ ಒಂದು ಮಳೆಗಾಲವೂ ಸುರುವಾಗಿತ್ತು. ಆರಂಭವಾದದ್ದು ಉಳಿದವುಗಳಂತೆಯೇ ಆದರೂ ಮತ್ತೆ ಜೋರಾಗಿತ್ತು. ಸಮುದ್ರದ ಆರ್ಭಟ ಹಿಂದಿನ ವರ್ಷಗಳಿಗಿಂತ ನಾಲ್ಕು ಪಟ್ಟಾದರೂ ಹೆಚ್ಚಾಗಿತ್ತು ಎಂದು ಜನ ಹೇಳುತ್ತಿದ್ದರು. ಮತ್ತು ಈ ಮಳೆಗಾಲವನ್ನಂತೂ ಸಮುದ್ರದ ಬದಿಯಲ್ಲಿ ಕಳೆಯುವ ಹಾಗೆಯೇ ಇಲ್ಲ ಎನ್ನುವ ಅಭಿಪ್ರಾಯಕ್ಕೆ ಬಂದಿದ್ದರು. ಇವನೂ ಅವರೊಂದಿಗೆ ದನಿಗೂಡಿಸುತ್ತಿದ್ದ. ಒಲ್ಲದ ಮನಸ್ಸಿನಿಂದ 'ಹೌದು. ಹೌದು' ಎನ್ನುತ್ತಿದ್ದ. ಆದರೆ ತಾನು ಆ ಜಾಗವನ್ನು ಬಿಡುವುದರ ಬಗ್ಗೆ ಮಾತ್ರ ಮಾತನಾಡುತ್ತಲೇ ಇರಲಿಲ್ಲ.

ಇವನಿಗಿಂತ ಕ್ಷೇಮವಾದ ಜಾಗದಲ್ಲಿದ್ದವರೆಲ್ಲ ಜಾಗ್ರತೆ ವಹಿಸಿದ್ದರು. ತಮ್ಮ ತಮ್ಮ ಒಡೆಯಂದಿರ ಹತ್ತಿರ ಬೇಡಿ ಸಮುದ್ರದ ತೊಂದರೆಯಿಂದ ದೂರವಿರುವ ಜಾಗಗಳಿಗೆ ಹೋಗಿದ್ದರು. ತಮ್ಮ ತಮ್ಮ ಮನೆಗಳಲ್ಲಿನ ಸಾಮಾನುಗಳನ್ನು ಮೂಟೆ ಕಟ್ಟಿ ಹೊತ್ತುಕೊಂಡು ಹೋಗುವಾಗ 'ಮಕ್ಕಳು ಮರಿಗಳು ಇದ್ದವರು ನಾವು... ರಾತ್ರೋ ರಾತ್ರಿ ನೀರು ನುಗ್ಗಿದರೆ ಏನು ಗತಿ...' ಎನ್ನುತ್ತಾ ಇವನನ್ನು ಕರೆದಿದ್ದರು. ಇವ ಸುಮ್ಮನೇ ನಕ್ಕಿದ್ದ ಮತ್ತು ಪಕ್ಕದಲ್ಲಿಯೇ ನಿಂತಿದ್ದ ಮಗನ ಮುಖವನ್ನು ನೋಡುವಾಗ ಅವರು ಹೊರಟು ಹೋಗಿದರು. ಅವನಿಗೆ ಆ ಗುಡಿಸಲನ್ನು ಬಿಡುವುದು ಸುಲಭವಾಗಿರಲಿಲ್ಲ. ಹಾಗೆಂದು ಹೆಂಡತಿ ಮತ್ತು ಮಗನ ಹತ್ತಿರ ಹೇಳಿಯೂ ಇದ್ದ. ಹೆಂಡತಿ ಒಮ್ಮೆಗೆ ಏನೋ ಪಟಗುಟ್ಟಿದ್ದರೂ ಅಪ್ಪನ ಭಾವನೆಗಳನ್ನು ಅರ್ಥಮಾಡಿಕೊಂಡ ಮಗ ಸುಮ್ಮನಿರುವುದನ್ನು ಕಂಡು ಸುಮ್ಮನಾಗಿದ್ದಳು.

ಆದರೆ ಇವರ [illegible] ಬೇಕಿಲ್ಲ! ಎಂದು [illegible] ಅದು ತನ್ನ [illegible] ಮಾಡಿಯೇ ಬಿಟ್ಟಿತ್ತು. ಪಡುಬದಿಯ ಮಡಲಿಗೆ ಬಡಿಯುತ್ತಿದ್ದ [illegible] ಶಬ್ದ ಜೋರಾಗಿ ಕೇಳಿಸಿ

ಏಟ್ಟತ್ತಾಗ ಇಡಿಯ ಮಾಡೇ ಕೆಳಗಿಳಿಯಲಿಕ್ಕೆ ತೊಡಗಿತ್ತು ಮತ್ತು ಕಾಲು ಮುಳುಗುವಷ್ಟು ನೀರು ಗುಡಿಸಲಿನೊಳಗೂ ಬಂದಿತ್ತು. ಮಗ ಹೆಂಡತಿ ಮತ್ತು ಇವ ಮೂವರೂ ಸೇರಿ ಇದ್ದ ಬಿದ್ದ ಕೈಗೆ ಸಿಕ್ಕಿದ ಸಾಮಾನುಗಳನ್ನೆಲ್ಲ ಹೊತ್ತುಕೊಂಡು ಹೊರಗಡೆ ಸುರಿಯುತ್ತಿದ್ದ ಮಳೆಯಲ್ಲಿಯೇ ಓಡಿದ್ದರು.

ರಾತ್ರಿಯನ್ನು ಹೇಗೋ ಬೆಳಗುಮಾಡಿ ಸಮುದ್ರದ ಬದಿಗೆ ಬಂದರೆ ಅವರಿಗೆ ಕಂಡದ್ದು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಒಡೆದ ಮಡಿಕೆಯ ಚೂರುಗಳು, ಮಣ್ಣಿನಲ್ಲಿ ಹೂತು ಹೋಗಿದ್ದ ಅರ್ಧಂಬರ್ಧ ಹರಿದ ಮಡಲುಗಳು. ಮನೆಯ ಮಾಡು ಎಲ್ಲಿಗೆ ಕೊಚ್ಚಿಹೋಗಿತ್ತೊ, ಇವ ಆಸ್ಥೆಯಿಂದ ಬೆಳೆಸಿದ್ದ ತೆಂಗಿನ ಮರಗಳೂ ಉರುಳಿ ಬಿದ್ದಿದ್ದವು. [illegible] ಕರೆಯಲು ಹೋದವನಿಗೆ ಮುಂದೆ ಮಾತು ಹೊರಡದಿದ್ದಾಗ 'ಬಾ......ಅಪ್ಪ......ದೇವರಿದ್ದಾನೆ' ಎಂದ ಮಗ ಅಪ್ಪನನ್ನು ಎಳೆದುಕೊಂಡೇ ಬಂದಿದ್ದ ಸಮುದ್ರದ ಬದಿಯಿಂದ. ಇನ್ನೂ ಸ್ವಲ್ಪ ಹೊತ್ತು ಅಲ್ಲಿಯೇ [illegible] ಅಪ್ಪನಿಗೇನಾದರೂ ಹೆಚ್ಚು ಕಡಿಮೆಯಾದೀತು ಎಂದು ಹೆದರಿದ್ದ ಅವ.

ಅಪ್ಪ, ಮಗ ಮನೆ ಕಟ್ಟಿದರು. ಬರುತ್ತಿದ್ದ ಫಲ [illegible] ಮತ್ತು ಹೊಸ ಜಾಗಕ್ಕೊ[illegible] [illegible] ಯಾರನ್ನೂ ಬೇಡುವ ಅ[illegible]. [illegible] ಬಂದಂದಿನಿಂದ ಬರದು ಬಿಡದ ಯಾರೂ ಹೆ[illegible] ವರು ಕೇಳುವವರು ಇಲ್ಲದ [illegible] [illegible]ವನ್ನು ಎಬ್ಬಿಸಿದರು. ಸಮುದ್ರದಿಂದ ದೂರ [illegible] ವರೆಗಿನ ಮನೆಯಿಂದ ಹೊತ್ತು ತಂದ ಸಾಮಾನುಗಳು ಯಾವುದಕ್ಕೂ ಸಾಕಾಗಿರ[illegible]. [illegible]ಂಡೇಲಿನ ಹತ್ತಿರದಿಂದ ಕಡ ತಂದ ಮಣ್ಣು ಮತ್ತು ಕೆಳಗಿನ ಕೇರಿಯ ಒಡೆಯರಿಂದ ಬೇಡಿ ತಂದ ಹುಲ್ಲು ಮಡಲುಗಳಿಂದ ದಿನವೆರಡು [illegible] ಹೊಸ ಮನೆಯು ತಯಾರಾಗಿಬಿಟ್ಟಿತ್ತು. ಇಲ್ಲಿ ಮಳೆಗಾಲದ ಹೆದರಿಕೆಯಿರಲಿಲ್ಲ. ಸಮುದ್ರದ ಒಡನಾಟದಲ್ಲಿಯೇ ಇದ್ದವನಿಗೆ ಇಲ್ಲಿ ಸ್ವಲ್ಪ ಬೇಸರವಾಗುತ್ತಿದ್ದುದು ಹೌದು. ಆದರೂ ಮನೆಯ ಪಡುಬದಿಯಲ್ಲಿ ನಿಂತರೆ ಸಮುದ್ರ ಕಾಣಿಸುತ್ತಿತ್ತು. ಇನ್ನೂ ತೃಪ್ತಿಯೆನಿಸದಿದ್ದರೆ ಎರಡು [illegible] ಹಾದಿ ನಡೆದರೆ ಸಮುದ್ರ ಸಿಕ್ಕಿಯೇ ಬಿಡುತ್ತಿತ್ತು.

ಹೊಸ ಬದುಕು ಆರಂಭವಾಗಿತ್ತು. ತಾನು ತನ್ನಪ್ಪನೊಂದಿಗೆ ದಿನಗಳನ್ನು ಕಳೆದ ಮನೆಯನ್ನು ಬಿಟ್ಟು ಬಂದು ಈಗ ಮಗನೊಂದಿಗೆ ಹೊಸ ಮನೆಯಲ್ಲಿ ಸಂಸಾರವನ್ನು ಆರಂಭಿಸಿದ್ದ. ಮನಸ್ಸಿಗೆ ಕೆಲವೊಮ್ಮೆ ಹಿಂಸೆಯೆನಿಸುತ್ತಿತ್ತು. ಕಳೆದ ಮನೆಯ ನೆನಪುಗಳು ಬೇಡವೆಂದರೂ ಬರುತ್ತಿದ್ದವು. ಅವನ್ನೆಲ್ಲ ಹೊಡೆದೋಡಿಸುವ ಪ್ರಯತ್ನಮಾಡುತ್ತಿದ್ದ. ಪೂರ್ತಿಯಾಗಿ ಆ ಪ್ರಯತ್ನದಲ್ಲಿ ಜಯಶಾಲಿಯಾಗದಿದ್ದರೂ ತನಗಿಂತ ಹೆಚ್ಚಿನ ಹಟವನ್ನು ಹೊಂದಿದ್ದ ಮಗನ ಚಟುವಟಿಕೆಗಳನ್ನು ನೋಡುತ್ತ ಅವನ್ನು ಮರೆಯುವ ಸಾಹಸ ಮಾಡುತ್ತಿದ್ದ.

ತೆರೆಯ ಹೊಡೆತಕ್ಕೆ ಸಿಕ್ಕಿ ಗುಪ್ಪೆಯಾಗಿ ಬಿದ್ದಿದ್ದ ತೆಂಗಿನ ಮರಗಳು ಮತ್ತು ಅವುಗಳ ಸೀಳು ಸೀಳಾಗಿ ಬಿದ್ದ ಹೆಡೆಗಳನ್ನು ಅಸಹಾಯಕನಾಗಿ ಅಪ್ಪ ಕಾಣುತ್ತ ನಿಂತದ್ದು ಮಗನ ಕಣ್ಣೆದುರಿನಿಂದ ಮರೆಯಾಗಿರಲಿಲ್ಲ ಇನ್ನೂ. ಅಪ್ಪನ ಆ ದುಃಖವನ್ನು ಹೋಗಲಾಡಿಸಿಯೇ ತೀರುತ್ತೇನೆಂದು ಈತ ಹಟ ತೊಟ್ಟಿದ್ದ, ಬೆಳಿಗ್ಗಿನಿಂದ ಸಂಜೆಯವರೆಗೆ ಒಬ್ಬನೇ ತೋಡಿ– ಅಪ್ಪ ಹಾಕಿ ಹಿಡಿದುಕೊಂಡು ಬಂದರೂ ಬೇಡವೆಂದು ಹೇಳಿ–ಒಂದು ಗುಪ್ಪೆಯನ್ನು ತಯಾರು ಮಾಡಿದ್ದ. ಕಾಲಪ್ರೋ ಕಡಸೋ ಮಾಡಿ ಮನೆಯ ಸುತ್ತಲಿನ ಜಾಗದಲ್ಲೆಲ್ಲ ತೆಂಗಿನ ಸಸಿಗಳನ್ನು ನೆಟ್ಟಿದ್ದ. ಬೇಸಗೆ [illegible]

ದಿನಗಳು ಹಾಗೆಯೇ ಉರುಳಿದುವು. ಅವರು ಮೂವರ ಸಂಸಾರ ಒಂದು ರೀತಿಯಿಂದ ಸಾಗುತ್ತಿತ್ತು. ತಲೆ ಕೂದಲು ಆಗಲೇ ಹಣ್ಣಾಗಿದ್ದ ಅಪ್ಪನ ಮೈಯ ಚರ್ಮ ಜೋತ ಬೀಳಲಿಕ್ಕೆ

ತೊಡಗಿದ್ದನ್ನು ಕಂಡು ಮಗ ಅವನಿಗೆ ವಿಶ್ರಾಂತಿ ಕೊಡಲು ಬಯಸಿದ್ದ. 'ಅಪ್ಪ... ನೀನು ಇನ್ನು [illegible] ಆ ಪ್ರಾಯದ ಹುಮ್ಮಸ್ಸಿನಲ್ಲಿ ಅವನೆಲ್ಲಿಯಾದರೂ ಒಂದಕ್ಕೆ ಒಂದೂವರೆ ಮಾಡಿಕೊಳ್ಳುತ್ತಾನೇನೋ ಎನ್ನುವ ಹೆದರಿಕೆಯಿದ್ದರೂ ತಾನೂ ಮುದುಕನಾದೆ ಇನ್ನೆಷ್ಟು ದಿನ ಅವನ ಕಾವಲಿಗಿರಲು ಸಾಧ್ಯ ಎನ್ನುವ ಅರಿವೂ ಇದ್ದುದರಿಂದ ಸುಮ್ಮನಾಗಿದ್ದ. ಮತ್ತು ಮಗನ ಒತ್ತಾಯದ ಜತೆಗೆ ಅಕ್ಕಪಕ್ಕದ ತನ್ನ ಮಗನಿಗಿಂತ ಹೆಚ್ಚು ಅನುಭವಿಗಳಾದ ಹುಡುಗರ ಒತ್ತಾಸೆಯೂ ಸೇರಿದುದರಿಂದ ನೆಮ್ಮದಿಯ ಉಸಿರು ಬಿಟ್ಟಿದ್ದ.

ಮಗ ಬೆಳಿಗ್ಗೆಯೆದ್ದು ಆ ಗುಮ್ಮಿಯಿಂದ ಸ್ವಚ್ಛ ನೀರನ್ನು ಒಂದೆರಡು ಗಡಿಗೆಗಳಲ್ಲಿ ಕುಡಿಯಲಿಕ್ಕೆ ಮತ್ತು ಅಡಿಗೆಗೆ ಎಂದು ಒಳಗೆ ತಂದಿಟ್ಟು ಮತ್ತೆ ತೆಂಗಿನ ಮರಗಳಿಗೆಲ್ಲ ನೀರು ಹೊಯ್ದು ಅಜ್ಜಿ ಮಾಡಿಕೊಟ್ಟ ಚಾ ಒಂದಿಷ್ಟು ಕುಡಿದು ಕಡಲಿಗೆಂದು [illegible] ಮತ್ತೆ ವಾಪಸು ಬರುವುದು ಸೂರ್ಯ ಪಡುವಣದಂಚಿನಲ್ಲಿ ಜಾರಿ ಗಳಿಗೆಯೆರಡು ಕಳೆದ ಮೇಲೆಯೇ. ಅಂದಿನ ತನ್ನ ಸಂಪಾದನೆಯನ್ನು ಹೆಮ್ಮೆಯಿಂದ ಹೊತ್ತು ತರುತ್ತಿದ್ದ. ಆತ ಕೆಲವೊಮ್ಮೆ ಅಪರೂಪದ ಮೀನುಗಳನ್ನು ತರುವುದೂ ಇತ್ತು. ತಂದವ ಅಜ್ಜಿಯ ಪಕ್ಕದಲ್ಲಿಯೇ ಅವಳು ಅದನ್ನು ಕತ್ತರಿಸಿ ಅಡುಗೆ ಮಾಡುವುದನ್ನೇ ನೋಡುತ್ತ ಕುಳಿತುಕೊಳ್ಳುತ್ತಿದ್ದ. ಒಲೆಯ ಬೆಂಕಿಗೆ ಮುಖ ಮಾಡಿ ಕುಳಿತ [illegible] ಮೀಸೆಯ ಮೇಲೆ ಬೆಳಕು ಬಿದ್ದಾಗ ಅಪ್ಪ ಎಣಿಸುತ್ತಿದ್ದ 'ಇವನೂ ದೊಡ್ಡವನಾಗಿದ್ದಾನೆ... ಒಂದು [illegible] ಇದ್ದ.

ಆದರೆ ಒಮ್ಮೆ ಹಾಗೆ ಅಜ್ಜಿಯ ಕೈಯಲ್ಲಿ ಮೀನಿನ ಅಡಿಗೆ ಮಾಡಿಸಿ ತಿಂದು ಬೆಳಿಗ್ಗೆಯೆದ್ದು ಜತೆಯವರೊಡನೆ ಕಡಲಿಗೆ ಹೋದಮಗ ವಾಪಸು ಬಂದಿರಲಿಲ್ಲ. ಹೋದವ ಸಮುದ್ರದಲ್ಲಿ ಲೀನವಾದ್ದ: ಅವನ ಹೆಣವೂ ಸಿಕ್ಕಿರಲಿಲ್ಲ. ನಾಲ್ಕು ದಿನ ಅವ ಮತ್ತು ಅವನೊಂದಿಗೆ ಹೋದವರು [illegible] ಬರದಿದ್ದಾಗ, ಅವರ ಬಗ್ಗೆ ವರ್ತಮಾನವೂ ಸಿಗದಿದ್ದಾಗ ಜನರಿಗೆಲ್ಲ [illegible] ಬದಿಯಲ್ಲೆಲ್ಲ ಓಡಾಡಿದ್ದರು. ಚಿಕ್ಕ ಚಿಕ್ಕ ದೋಣಿಗಳನ್ನು ಹಿಡಿದುಕೊಂಡು ಕಡಲಿನ ಮೇಲೆ ಹೋಗಿದ್ದರು. ಮತ್ತೂ ಸುಳಿವು ಸಿಗದಿದ್ದಾಗ ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದರು.

ಹತ್ತೆರಡು ದಿನಗಳ ನಂತರ ಮುದುಕನ ಮಗನ ಜತೆಯಲ್ಲಿ ಹೋದವರಲ್ಲಿ ಇಬ್ಬರ ಹೆಣ ದಡಕ್ಕೆ ಸೇರಿದಾಗ ಜನರ ಓಡಾಟ ನಿಂತಿತ್ತು. ಗಾಬರಿ, ಹುಡುಕಾಟಗಳು ಒಂದು ನಿಲುಗಡೆಗೆ ಬಂದಿದ್ದವು. ಘಟನೆಯ ನಿಚ್ಚಳತೆ ಅರಿವಾಗಲಿಕ್ಕೆ ಹತ್ತಿತ್ತು. ಮತ್ತು ಅಳುವುದೊಂದೇ ಬಾಕಿ ಉಳಿದಿತ್ತು. ಮುದುಕ ಆ ಹೆಣಗಳನ್ನೇ ತಬ್ಬಿಕೊಂಡು ಗೋಳೋ ಎಂದು ಅತ್ತಿದ್ದ. ಹುಚ್ಚನಂತೆ ರಾತ್ರಿ ಹಗಲು ಸಮುದ್ರದ ಬದಿಯಲ್ಲಿಯೇ ಕಳೆದಿದ. ಕಡೆಗೂ ಅವನ ಮಗನ ಹೆಣ ಮಾತ್ರ ಬರದಿರ

"ಈಗೀಗ ಏನು ನಾಸ್ತಿಕರದಾರೆ ಅಂತೀರಿ...., ದೇವರ ಡಬ್ಬಿಗೂ ಸಹ ಕಾಣಿಕೆ ಹಾಕಲ್ಲವಲ್ರೀ...."

ಇಲ್ಲ! ತನ್ನ ಸಮುದ್ರದ ಬದಿಯ ಮನೆ ಮತ್ತು ಅಲ್ಲಿನ ತೆಂಗಿನ ಮರಗಳು ಸಮುದ್ರದ ಹೊಡೆತಕ್ಕೆ ಸಿಕ್ಕಿ ನುಚ್ಚು ನೂರಾದದ್ದು ನೆನಪಿಗೆ ಬಂದಿತ್ತು. ಅವನಿಗೆ ತನ್ನದೆಲ್ಲವೂ ಹೋಯಿತು ಎನಿಸಿದ ಅವನು ಪ್ರಪಂಚದಲ್ಲಿನ ತನ್ನ ಆಧಾರವೇ ಕುಸಿದು ಬಿತ್ತು ಎಂದು ಅತ್ತಿದ್ದ. ಅಳುವಿನ ನಡುವೇ ಮನೆಯತ್ತ ಓಡಿದರೆ ಅಲ್ಲಿನ ತೆಂಗಿನ ಮರಗಳು ನಾಲ್ಕಾರು ದಿನಗಳಿಂದ ನೀರಿಲ್ಲದೆ ಬಾಡಿದ್ದುವು. ಪುನಃ ಅವನ ಹೊಟ್ಟೆಯಲ್ಲಿ ಬೆಂಕಿ ಬಿದ್ದಂತಾಗಿ ನಾಲ್ಕು ದಿನದಿಂದ ಊಟ ವಿರಲಿಲ್ಲ ತನಗೆ ಎನ್ನುವುದನ್ನೂ ಮರೆತು ಒಂದೇ ಸಮನೆ ಗುಮ್ಮಿಯಿಂದ ನೀರನ್ನು ತಂದು ಅವಕ್ಕೆ ಸುರಿದಿದ್ದ. ನೀರು ಖಾಲಿಯಾದಾಗ ಕೈಯಲ್ಲಿಯೇ ಹೊಂಡ ತೋಡಿ ಬೊಗಸೆಯಲ್ಲಿಯೇ ಗಡಿಗೆಗೆ ನೀರು ತುಂಬಿ ತೆಂಗಿನ ಮರಗಳ ಬುಡಕ್ಕೆ ಹೊಯಿದ.

ಅದೇ ಕೆಲಸವನ್ನು ಇವತ್ತಿನವರೆಗೆ ಮುಂದುವರಿಸಿಕೊಂಡು ಬಂದಿದ್ದ. ದಿನ ಬೆಳಗೆದ್ದರೆ ಅದೇ ಕೆಲಸ. ಈಗೀಗಂತೂ ನೀರು ಹೊಯ್ಯುವಾಗ ಮಗನ ನೆನಪು ಆಯಿತೆಂದರೆ ಮರಗಳಿಗೆಲ್ಲ ಎಷ್ಟೆಷ್ಟು ನೀರು ಹೊಯ್ಯಬೇಕು ಎನ್ನುವ ಲೆಕ್ಕವೇ ತಪ್ಪುತ್ತಿತ್ತು. ಅವನಿಗೆ. ಸುರಿದೇ ಸುರಿಯುತ್ತಿದ್ದ. ನೋವಿನ ಮೇಲೆ ನೋವನ್ನು ತಿಂದ ಅವ ದೈಹಿಕವಾಗಿಯೂ ಮಾನಸಿಕವಾಗಿಯೂ ಜರ್ಝರಿತನಾಗಿದ್ದರೂ ಹಠವೊಂದು ಇತ್ತು. ಮಗನ ಲೆಕ್ಕವನ್ನು ತಾನು ಪೂರ್ತಿ ಮಾಡಬೇಕು ಎಂದು ದೃಢವಾಗಿ ಅಂದುಕೊಂಡಿದ್ದ. ತೆಂಗಿನ ಮರಗಳ ಪ್ರತಿ ಹಿಡಿ ಮಣ್ಣಿನ ಲೆಕ್ಕ ಮಾಡುತ್ತಿದ್ದ ಅವನು ಆ ಸಸಿಗಳಲ್ಲಿ ಪ್ರತಿ ಹೊಸ ಸುಳಿ ಬಂದಾಗಲೂ ಅದನ್ನು ನೇವರಿಸುತ್ತಿದ್ದ. ಹಾಗೆಯೇ ನೇವರಿಸುವಾಗೆಲ್ಲ ಮಗನ ನೆನಪು... ಗರಿಗಳಲ್ಲಿ ಹಾಗೇ ಬಿದ್ದುಕೊಂಡಿರುತ್ತಿದ್ದವನನ್ನು ಮುದುಕಿ ಎಚ್ಚರಿಸಿದಾಗ ಇಲ್ಲಿ ಮಾಡುತ್ತಿರುವ ಕೆಲಸವನ್ನು ನೆನೆಸಿಕೊಂಡು ಮುಂದುವರಿಯುತ್ತಿದ್ದ.

ದಿನ ಕಳೆದಂತೆ ತೆಂಗಿನ ಮರಗಳ ಮೇಲೆ ಅವನ ವ್ಯಾಮೋಹ ಬೆಳೆಯುತ್ತಿತ್ತು. ಕೆಲಸವಿಲ್ಲದಾಗಲೆಲ್ಲ ಬಂದು ಅವುಗಳ ನಡುವೆ ಸುತ್ತುತ್ತಿದ್ದ. ಹಾರೆಯಿಂದ ಅಥವಾ ಅದಿಲ್ಲದಿದ್ದರೆ ಕೈಯಿಂದ ಆ ಮರಗಳ ಬುಡದಲ್ಲಿ ಸುತ್ತ ಕಟ್ಟೆಯನ್ನು ಸರಿಪಡಿಸುತ್ತ ಕಾಲ ಕಳೆಯುತ್ತಿದ್ದ. ಪ್ರತಿ ಹಿಡಿ ಮಣ್ಣನ್ನು ತೆಗೆದು ಮೇಲೆ ಹಾಕುವಾಗಲೂ ಏನೋ ಆತ್ಮೀಯ ಭಾವನೆ ಉಂಟಾಗುತ್ತಿತ್ತು. ತನಗೆ ಅತೀ ಸಮೀಪದವರೊಬ್ಬರ ಸೇವೆಯನ್ನು ಮಾಡುತ್ತಿದ್ದೇನೆ ಎನ್ನಿಸುತ್ತಿತ್ತು. ಎಂದಿಗೆ ಅವುಗಳಲ್ಲಿ ಫಲಕಂಡೇನು ಎನ್ನುವ ಆತುರವೋ ಅಥವಾ ಅವುಗಳ ಜತೆಯಲ್ಲಿಯೇ ಕಾಲ ಕಳೆಯುವ ಆಸೆಯೋ ಅಂತೂ ದಿನದ ಹೆಚ್ಚಿನ ಭಾಗವನ್ನು ಅವುಗಳೊಂದಿಗೇ ಕಳೆಯುತ್ತಿದ್ದ. ಜನ್ಮ ಜನ್ಮಗಳಿಂದ ಅವುಗಳೊಂದಿಗೆ ತನ್ನ ನಂಟು ಉಂಟು ಎನ್ನಿಸುತ್ತಿತ್ತು ಅವನಿಗೆ. ಮನುಷ್ಯನ ಮಾತು ಕೇಳುತ್ತಿದ್ದರೆ ತೆಂಗಿನ ಮರಗಳಲ್ಲಿ ಬೇಗ ಫಲ ಬರುತ್ತದೆ ಎಂದು ಯಾರೋ ಹೇಳಿದುದನ್ನು ಕೇಳಿದ ಆತ ಮನೆಯಿಂದ ದೂರವಿದ್ದ ಸಸಿಗಳ ಹತ್ತಿರ ಹೋಗಿ ಸ್ವಗತ ಸಂಭಾಷಣೆ ನಡೆಸುತ್ತಿದ್ದ. 'ಹೌದು ತೆಂಗಿನ ಸಸಿಗಳಿಗೆ ನನ್ನ ಮಾತು ಕೇಳಿಸುತ್ತಿದೆ ಮತ್ತು ಅವುಗಳಲ್ಲಿ ಬೇಗನೆ ಫಲ ಬರುತ್ತದೆ' ಎಂದುಕೊಳ್ಳುತ್ತ ಆತ ಖುಷಿಪಡುತ್ತಿದ್ದ.

ಮುದುಕನನ್ನು ಕರೆದು ಕರೆದು ಸಾಕಾದಾಗ ಮುದುಕಿ ಸಿಟ್ಟುಗೊಳ್ಳುತ್ತಿದ್ದಳು. ಇವನದೆಲ್ಲ ಅತಿಯಾಯಿತು ಎನಿಸಿ ಬಯ್ಯುತ್ತಿದ್ದಳು. ಇನ್ನು ಸಾಧ್ಯವಿಲ್ಲ ಎನ್ನುವಷ್ಟು ಒಯ್ದು ಮುಗಿಸಿದ ಮೇಲೆ ಆತ ನಿಧಾನವಾಗಿ ಏನೂ ಆಗದಿದ್ದವನಂತೆ ಒಳಗೆ ಬಂದು ತಂಗಳಿನ ತಟ್ಟೆಯ ಮುಂದೆ ಕುಳಿತು-ಕೊಳ್ಳುತ್ತಿದ್ದ. ಈಗೀಗ ಊಟದಲ್ಲಿಯೂ ಆಸಕ್ತಿಯನ್ನು ಕಳೆದುಕೊಂಡಿದ್ದ ಅವ ಕೋಳಿ ಕೆದಕುವಂತೆ ತಂಗುಳನ್ನವನ್ನು ಕೆದಕುತ್ತ ಮುದುಕಿಯ ಒಂದೇ ಸಮನೆ ವಟಗುಡುತ್ತಿದ್ದ ಬಾಯಿಗೆ ಬಲಿಯಾಗುತ್ತಿದ್ದ. ಅವಳ ಬೈಗುಳಗಳಿಗೆ ಉತ್ತರ ಹೇಳುವ ಗೋಜಿಗೇ ಹೋಗದಿರುತ್ತಿದ್ದ ಆತನ ತಲೆಯಲ್ಲಿ ಸುತ್ತುತ್ತಿದ್ದುದು ತೆಂಗಿನ ಮರಗಳು ಮತ್ತು ಮಗ.

ಅಂತಹ ದಿನಗಳಲ್ಲಿಯೇ ಅವನ ಕಿವಿಯ ಮೇಲೆ ಅಲ್ಲಿ ರಸ್ತೆ ಬರುವ ವರ್ತಮಾನ ಬಿದ್ದು ಅವನಲ್ಲಿ

ಅಸ್ತವ್ಯಸ್ತತೆಯನ್ನು ಉಂಟುಮಾಡಿದ್ದು. ಆ ಅಸ್ತ-ವ್ಯಸ್ತತೆಯಲ್ಲಿಯೇ ಕೇಳುತ್ತಿದ್ದ ಅವ. 'ರಸ್ತೆ ಬಂದರೆ ನನಗೆ ಏನು ಆಗುತ್ತದೆ. ಒಂದು ರಸ್ತೆಗೋಸ್ಕರ ಈ ಮನೆಯನ್ನು... ಇಷ್ಟು ಚೆನ್ನಾಗಿ ಬೆಳೆದ ತೆಂಗಿನ ಮರಗಳನ್ನು ಕಿತ್ತು ಹಾಕುತ್ತಾರೆಯೇ...' ಎಂದು. ಎದುರಿನವರು ಉತ್ತರ ಕೊಡದಿದ್ದರೆ ಸುಮ್ಮನಾಗುತ್ತಿದ್ದ ಮತ್ತು ಸ್ವಲ್ಪ ತಡೆದು ತೆಂಗಿನ ಮರಗಳ ಹತ್ತಿರವೇ ಕೇಳುತ್ತಿದ್ದ. ಮನಸ್ಸಿಗೆ ಸಮಾಧಾನವಾಗುತ್ತಿರಲಿಲ್ಲ. ತಲೆಯ ಮೇಲೆ ಕೈ ಹೊತ್ತು ಕುಳಿತುಕೊಳ್ಳುತ್ತಿದ್ದ ಮರದ ಬುಡದಲ್ಲಿ.

▪

ಇಂದೂ ಹಾಗೆಯೇ ಅವನು ಬೆಳಿಗೆ ಎದ್ದವನೇ ತನ್ನ ಕೆಲಸವನ್ನು ಆರಂಭಿಸಿದ್ದ. ರಸ್ತೆ-ಯಾಗುವ ಬಗ್ಗೆ ವರ್ತಮಾನ ಬಂತು ಬಹಳ ದಿನಗಳು ಕಳೆದಿದ್ದರೂ ಯಾರೂ ಆ ಬಗ್ಗೆ ಕೆಲಸ ಮಾಡಲು [illegible] ನೀರು ತಂದು ಸುರಿಯುತ್ತಿದ್ದ. ಕೆಲಸ ಮುಗಿಯುತ್ತ [illegible] ಅಸ್ವಮನಸ್ಕತೆ ಅತಿಯಾಯ್ತು' ಎಂದು ಮುದುಕಿಗೆ ಪ್ರಸಃ ಅನ್ನಿಸಿರಬೇಕು. ಬಾಗಿಲಿನಂಚಿಗೆ ಬಂದು ನಿಂತು ಬಿಸಿಲಿನ ಝಳಕ್ಕೆ ಬೆವರಿನಿಂದ ತೊಯ್ದು ಮುದುಕನ ಸುಕ್ಕುಗಟ್ಟಿದ ಚರ್ಮ ಹೊಳೆಯುವುದನ್ನು ನೋಡುತ್ತ ಅವನನ್ನು ಕರೆದಳು. 'ಸಾಕು ಬಾ... ಏನಾಗಿದೆ ಇವತ್ತು ನಿನಗೆ....'

ದಿನದ ಹಾಡು ಎಂದುಕೊಂಡ ಮುದುಕ ಗಮನ ಅತ್ತ ಹರಿಸಲೇ ಇಲ್ಲ. ಆದರೆ ಗುಮ್ಮಿಯಿಂದ ನೀರನ್ನು ತುಂಬಿದ ಗಡಿಗೆಗಳನ್ನು ಹಿಡಿದುಕೊಂಡು ಮೇಲಕ್ಕೆ ಬರುವಾಗ ಯಾವತ್ತೂ ನಿಲ್ಲದ ಮುದು-ಕಿಯು ಪಟಗುಟ್ಟುವಿಗೆ ನಿಂತದ್ದು ಅವನಿಗೆ ಆಶ್ಚ-ರ್ಯವನ್ನುಂಟುಮಾಡಿತ್ತು. ವಿಶೇಷ ಎನಿಸಿ ಆಕೆಯತ್ತ ದೃಷ್ಟಿ ಹಾಯಿಸಿದರೆ ಅವಳು ಮಾತನಾಡುವುದನ್ನೇ ಮರೆತು ಎತ್ತಲೋ ನೋಡುತ್ತಿದ್ದಳು. ಇವನ ದೃಷ್ಟಿಯೂ ಆಕೆಯದನ್ನೇ ಹಿಂಬಾಲಿಸಿದರೆ ಇವನಿಗೆ ಕಂಡದ್ದು ನಾಲ್ಕೆಂಟು ಜನ. ಬಿಳಿ ಬಿಳಿಯ ಅಂಗಿ ತೊಟ್ಟ ಅವರೆಲ್ಲ ಎರಡೂ ಕಾಲುಗಳಿಗೆ ಇಜಾರವನ್ನು ಹಾಕಿಕೊಂಡಿದ್ದರು. ಅವರಿಂದ ಸ್ವಲ್ಪ ಹಿಂದಕ್ಕೆ ಇನ್ನೂ ಒಂದಿಷ್ಟು ಜನ ಕೆಲಸದವರಂತೆ ಕಾಣುತ್ತಿದ್ದರು. ಎಲ್ಲ ಹಾರೆ ಹಿಡಿಗೆಗಳನ್ನು ಹಿಡಿದುಕೊಂಡಿದ್ದರು. [illegible] ಇವನ ಗುಡಿಸಲಿನತ್ತಲೇ ಬರುತ್ತಿದ್ದರು.

ಏನೋ ಆಪತ್ತು ಬಂತೆಂದು ಮುದುಕನಿಗೆ ಅನ್ನಿಸಿತು. ಗಡಿಗೆಗಳಲ್ಲಿ ತುಂಬಿದ ನೀರನ್ನು ಸುರಿಯುವುದನ್ನೂ ಮರೆತು ಅತ್ತ ನಡೆದ, ಮನ-ದಲ್ಲಿನ ಅಳುಕನ್ನು ಅದುಮಿ ಹಿಡಿಯುತ್ತಾ ಯುದ್ಧಕ್ಕೆ ಹೊರಟ ಯೋಧನಂತೆ ಅವರತ್ತ ಸಾಗಿದ ಗಡಿಗೆಗಳನ್ನು ಹಿಡಿದುಕೊಂಡೇ. ಆ ಜನರಲ್ಲಿ ಮುಂದೆ ಬರುತ್ತಿದ್ದವನೊಬ್ಬ ಇವನ ಎದುರಿಗೇ ಬಂದ. 'ಏನಜ್ಜ ಈ ಮನೆ ನಿನ್ನದೇ?... ಈತೆಂಗಿನ ಮರಗಳೆಲ್ಲ ನಿನ್ನವೆಯೇನೋ?...'ಎಂದು ಕೇಳಿದ. 'ಹೌದು ಒಡೆಯ ನನ್ನದೇ' ಎಂದ ಇವ. 'ನೋಡು ರಸ್ತೆಗೋಸ್ಕರ ಅಳತೆ ಮಾಡಿ ಗಡಿ ಹಾಕಲು ಬಂದವರು [illegible] ತ್ತದೆ' ಎಂದು ಕೈ ತೋರಿಸಿದ. ಅವನ ಕೈಯತ್ತಲೇ ನೋಡುತ್ತಿದ್ದ ಮುದುಕನಿಗೆ ಜೀವ ಹಾರುವಂತಾಯ್ತು. ಇವನ ನಾಲ್ಕೆಂಟು ಸಾಲು ತೆಂಗಿನ ಸಸಿಯ ಜತೆಗೆ ಮನೆಯ ಅರ್ಧ ಮಾಡೂ ಹೋಗುತ್ತಿತ್ತು. ಎಣಿಸಿದ ಆಪತ್ತು ತಲೆಯ ಮೇಲೇ ಬಂದು ಎರಗಿತು ಎಂದು ಹೆದರಿದ. ಅಗ ಕೇಳಿಸಿತು ಅವರ ಮಾತು. ಇನ್ನೊಬ್ಬ [illegible] ಸರದಿ. 'ನಿನ್ನದೇನಾದರೂ ಇದ್ದರೆ ತೆಗೆದುಕೋ... ನಾವು ಈಗಲೇ ಕೆಲಸ ಸುರುವು ಮಾಡಿಸುವವರು' ಏನನ್ನು ತಾನೇ ತೆಗೆದುಕೊಂಡಾನು ಮುದುಕ. ತೆಗೆದುಕೊಂಡರೂ ಅವುಗಳನ್ನು ಹಿಡಿದುಕೊಂಡು ಎಲ್ಲಿಗೆ ಹೋದಾನು ! ಏನು ಮಾಡಲಿಕ್ಕೂ! ತೋಚದೆ ಅವ ಪಿಳಿ ಪಿಳಿ ನೋಡುತ್ತಿರುವಂತೆಯೇ ಒಬ್ಬ ಒಂದು ಗಳುವನ್ನು ನೆಟ್ಟು ನೇರಕ್ಕೆ ಕೈ ಕೈ ತೋರಿಸುತ್ತ ಅಕ್ಕ ಪಕ್ಕದಲ್ಲಿ ಅದೆಷ್ಟೋ ಅಗಲಕ್ಕೆ ಗುರುತು ಹಾಕಲು ಹೇಳುತ್ತಿದ್ದ ಮತ್ತು ಆ ಗುರುತುಗಳ ನಡುವೆ ಇದ್ದುದೆಲ್ಲವನ್ನೂ ನೆಲ-ಸಮ ಮಾಡಲು ಆದೇಶಿಸುತ್ತಿದ್ದ.

ಹಿಡಿಗೆ ಪಾರೆಗಳನ್ನು ಹಿಡಿದುಕೊಂಡು ಬಂದವರು ತಮ್ಮ ಕೆಲಸವನ್ನು ಆರಂಭಿಸಿದ್ದರು. ಮುದುಕ ಕೈಯ್ಯಲ್ಲಿದ್ದ ಗಡಿಗೆಗಳನ್ನು ನೆಲದ ಮೇಲೆ ಬಿಟ್ಟ. ಕಳೆದು ಹೋಗುತ್ತಿದ್ದ ಚೇತನವನ್ನೆಲ್ಲ ಒಟ್ಟುಗೂಡಿಸುತ್ತ ಅವರಿಗೆ ಕೈ ಮುಗಿದ. ಮತ್ತೆ ಇಜಾರಿನವನ ಹತ್ತಿರ ಕೇಳಿದ. ತುಂಡು ತುಂಡಾಗಿ ಬಂದ ಮಾತುಗಳು ಅವನ ವಿಪರೀತ ನೋವನ್ನು ತೋರಿಸುತ್ತಿದ್ದುವು. 'ಅಯ್ಯ... ರಸ್ತೆಯನ್ನು ಸ್ವಲ್ಪ ಆಚೆಯಿಂದ ತೆಗೆದುಕೊಂಡು ಹೋದರೆ ಆಗದಾ...' ಎಂದು ತನ್ನ ಒತ್ತಿಲಿನ ಪಕ್ಕದ ಖಾಲಿ ಜಾಗವನ್ನು ತೋರಿಸಿದ. ಕಣ್ಣು ಕೆಂಪು ಮಾಡಿಕೊಂಡು ಎದುರಿನವ ಹೇಳಿದ್ದ "ಛೆ...ಛೆ ಅದೆಲ್ಲ ಹೇಗಾಗುತ್ತದೆ, ರಸ್ತೆಯನ್ನು ಹಾಗೆ ತಿರುಗಿಸಿದರೆ ನಮಗೆಷ್ಟು ಖರ್ಚು ಹೆಚ್ಚು! ಅದೂ ಅಲ್ಲದೆ ರಸ್ತೆಗಳೆಲ್ಲ ನೇರವಾಗಿಯೇ ಇರಬೇಕಲ್ಲ."



"ಸಾರ್! ಅದೃಷ್ಟವನ್ನು ಬಿಟ್ಟು ಬಿಟ್ಟು ಅನುಭವವನ್ನು ಮಾತ್ರ ತಗದುಕೊಂಡರೆ, ನಿಮ್ಮ ಸೀಟ್‌ನಲ್ಲಿ ನಾನು ಕೂತುಕೊಂಡಿರಬೇಕು, ನನ್ನ ಸೀಟ್‌ನಲ್ಲಿ ನೀವು ಕೂತುಕೊಂಡಿರಬೇಕಾಗಿತ್ತು... ಸಾರ್..."

ಕೆಲಸಗಾರರು ತಮ್ಮ ಕೆಲಸವನ್ನು ಮುಂದುವರಿಸಿದ್ದರು. ಕೆಲವರು ತೆಂಗಿನಮರದ ಬುಡವನ್ನು ಹಾರೆಯಿಂದ ಹರಡುತ್ತಿದ್ದರು. ಬಹುಶಃ ಅದನ್ನೆಲ್ಲ ಬುಡ ಸಹಿತ ಕಿತ್ತೆಸೆಯುವ ಹಟವಿರಬೇಕು ಅವರಿಗೆ! ಕೆಲವರಂತೂ ಮುದುಕನ ಮನೆಯ ಮಾಡಿನ ಒಂದು ಬದಿಗೇ ಕೈ ಕೊಟ್ಟಿದ್ದರು. ಜತೆಯಲ್ಲಿಯೇ ಇದ್ದ ಮೇಸ್ತ್ರಿಯೊಬ್ಬ ಬೀಡಿಯೊಂದನ್ನು ಹಚ್ಚಿಕೊಂಡು ಅತ್ತಿತ್ತ ಓಡಾಡುತ್ತಿದ್ದ. ಮುದುಕನಿಗೆ ಕಣ್ಣು ಕತ್ತಲಿಡಲಿಕ್ಕೆ ಆರಂಭವಾಗಿತ್ತು. ಮನೆಯ ಕಡೆ ತಿರುಗಿ ಬಾಗಿಲಿಗೆ ಒರಗಿನಿಂತ ಮುದುಕಿ ಏನು ಮಾಡುತ್ತಿದ್ದಾಳೆ ನೋಡುವ ಎನ್ನಿಸಿದರೂ ತಿರುಗಲಿಕ್ಕೆ ಸಾಧ್ಯವಾಗದೆ ಅಲ್ಲಿಯೇ ಕುಳಿತ. ಹೊಯಿಗೆಯ ಮೇಲೆ ಬಿಟ್ಟದ್ದು ಬಿಟ್ಟ ಹಾಗೆಯೇ ಇದ್ದ ಗಡಿಗೆಗಳ ಮೇಲೆ ಕೈ ಊರಿಕೊಂಡವ ಅವನ್ನು ಸವರಲಿಕ್ಕೆ ತೊಡಗಿದ. ಅಷ್ಟರಲ್ಲಿ ತೆಂಗಿನ ಮರಗಳೆರಡು ಉರುಳಿದ್ದುವು.

ಸುತ್ತಮುತ್ತ ಊರಿನ ಜನ ಆಗಲೇ ನೆರೆದಿದ್ದರು. ಬಹಳ ದಿನಗಳಿಂದ ಅಪೇಕ್ಷಿಸುತ್ತಿದ್ದ ರಸ್ತೆಯೊಂದು ತಮ್ಮೂರಿಗೆ ಬರುವುದರ ಬಗ್ಗೆ ನಡೆಯುವ ಕೆಲಸವನ್ನು ನೋಡಲು ಅವರು ತಮ್ಮ ತಮ್ಮ ಕೆಲಸಗಳನ್ನೂ ಬಿಟ್ಟು ಬಂದಿದ್ದರು. ಕುಳಿತಿದ್ದ ಮುದುಕ ಅವರಿಂದಾದರೂ ತನಗೇನಾದರೂ ಸಹಾಯವಾದೀತು ಎಂದು ತನ್ನ ಮಂಜು ಮಂಜಾದ ದೃಷ್ಟಿಯನ್ನು ಅವರತ್ತ ಹಾಯಿಸಿದರೆ ಅವರೆಲ್ಲ ಇವನ ನೋಟವನ್ನು ತಪ್ಪಿಸಲೆಂದೇ ಪ್ರಯತ್ನಿಸುತ್ತಿದ್ದರು. ತಮ್ಮ ತಮ್ಮಲ್ಲೇ ಏನೋ ಗಹನವಾದ ವಿಚಾರವನ್ನು ಮಾತನಾಡುವವರಂತೆ ನಟಿಸುತ್ತಿದ್ದ ಅವರಲ್ಲಿ ಯಾರೊಬ್ಬರೂ ಮುದುಕನ ನೇರ ನೋಟವನ್ನು ಎದುರಿಸಲು ತಯಾರಿರಲಿಲ್ಲ. ಮುದುಕ ಸುಮ್ಮನೇ ಆರ್ತನಾಗಿ ನೋಡುತ್ತಿದ್ದ. ಒಮ್ಮೆ ಇಜಾರಿನವನತ್ತ, ಒಮ್ಮೆ ಒಂದೇ ಸಮನೆ ತೆಂಗಿನ ಮರಗಳ ಬುಡವನ್ನು ಹರಡುತ್ತಿದ್ದ ಕೆಲಸದವರತ್ತ ಇನ್ನೊಮ್ಮೆ ನೆರೆದಿದ್ದ ಊರ ಜನರತ್ತ ನೋಡುತ್ತಿದ್ದ ಅವ ಎಲ್ಲಿಯೂ ಪ್ರತಿಕ್ರಿಯೆ ಬರದಿದ್ದಾಗ ಉರುಳಿ ಬಿದ್ದ ತೆಂಗಿನ ಮರಗಳತ್ತ ನೋಡುತ್ತ

ಅವುಗಳೆನ್ನು ತಪ್ಪಿಕೊಳ್ಳುವ ಮನಸ್ಸಾದರೂ ತಪ್ಪಿಕೊಳ್ಳದೆ ಎತ್ತಲೋ ನೋಡತೊಡಗಿದ್ದ.

ಈಗ ಅವನ ಕಣ್ಣಿಗೆ ಆ ಇಜಾರಿನವರು, ಕೆಲಸದವರು ಮತ್ತು ಊರಿನವರು ಯಾರೂ ಕಾಣಿಸುತ್ತಿರಲಿಲ್ಲ. ಬಹುಶಃ ಒಂದೇ ಸಮನೆ ಒಂದರ ಹಿಂದೊಂದರಂತೆ ಉರುಳಿ ಬೀಳುತ್ತಿದ್ದ ತೆಂಗಿನ ಮರಗಳು ಕೂಡ. ಹೆಣವೂ ಕಾಣಲಿಕ್ಕೆ ಸಿಗದಂತೆ ಸತ್ತು ಹೋಗಿದ್ದ ಮಗ ಮತ್ತು ಸುಳಿಯೆಲ್ಲ ಮುರಿದು ಮುದ್ದೆಯಾಗಿ ಸಮುದ್ರದ ಬದಿಯಲ್ಲಿ ಬಿದ್ದಿದ್ದ ಆ ತೆಂಗಿನ ಸಸಿಗಳು ಮಾತ್ರ ಕಾಣಿಸುತ್ತಿದ್ದುವು. ಆ ದೃಶ್ಯವನ್ನೇ [illegible] ಲಿಲ್ಲ. ಅದನ್ನು ಅಳಿಸಿ ಹಾಕುವ ಪ್ರಯತ್ನ ಪಡುತ್ತಿದ್ದಂತೆಯೇ ತೆಂಗಿನ ಮರವೊಂದು ಅವನ ಕಾಲ ಬುಡದಲ್ಲಿಯೇ ಉರುಳಿತು. ಅದರ ಎಳೆಯ ಸುಳಿಯೊಂದು ಇವನ ಕಾಲನ್ನು ಸವರುತ್ತಿತ್ತು. ಈಗ ಅವನು ತನ್ನ ಭಾವನೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಅಸಮರ್ಥನಾಗಿದ್ದ. [illegible] ವಾಗುತ್ತಿದ್ದ ಬಯಕೆಯನ್ನು ಹತ್ತಿಕ್ಕಲು ಸಾಧ್ಯವಿರಲಿಲ್ಲ ಅವನಿಗೆ. ಎರಡೂ ಕೈಗಳಿಂದ [illegible] ಆ ತೆಂಗಿನ ಮರವನ್ನು [illegible] ಅದರ [illegible] ಹಿಡಿದುಕೊಳ್ಳುವ ಪ್ರಯತ್ನ ಮಾಡಿದ. ಕೈಗೆ ಸಿಕ್ಕಿದಷ್ಟನ್ನೇ ಬಿಗಿಯಾಗಿ ಹಿಡಿದು ಎದೆಗೆ ಅಮುಕಿಕೊಳ್ಳುತ್ತಾ...ಕೊಳ್ಳುತ್ತಾ ಮುದುಕ ಬಲವಾಗಿ ಕಣ್ಣುಗಳನ್ನು ಮುಚ್ಚಿದ.

ಕೆಲಸದವರೆಲ್ಲ ಈಗ ತೆಂಗಿನ ಮರದ ಬುಡವನ್ನು ಹರಡುವುದನ್ನು ಬಿಟ್ಟು ಮುದುಕನ ಗುಡಿಸಲಿನ ಇನ್ನೊಂದು ಪಕ್ಕದಲ್ಲಿ ದೊಡ್ಡ ಹೊಂಡವನ್ನು ತೋಡುವ ಕೆಲಸದಲ್ಲಿದ್ದರು. ಮುದುಕಿ ತೆಂಗಿನ ಓಲೆಗಳನ್ನು ಬಿಗಿಯಾಗಿ ಹಿಡಿದುಕೊಂಡು ಸೆಟೆದು ಕೊಂಡಿದ್ದ ಮುದುಕನನ್ನು ತಬ್ಬಿಕೊಂಡು ಗೋಳೋ ಎಂದು ಅಳುತ್ತಿದ್ದಳು. ಎಂಜಿನಿಯರು ಮತ್ತು ಕಾಂಟ್ರಾಕ್ಟರರು 'ಆ ಹೊಂಡವನ್ನು ಮುಚ್ಚಿದ ಮೇಲೆ ಉರುಳಿಬಿದ್ದ ತೆಂಗಿನ ಸಸಿಗಳಲ್ಲಿ ಒಂದನ್ನು ಅಲ್ಲಿಯೇ ನೆಟ್ಟುಬಿಡುವ' ಎಂದು ಮಾತಾಡಿಕೊಳ್ಳುತ್ತಿದ್ದರು. ನೆರೆದಿದ್ದ ಊರ ಜನರಲ್ಲಿ ಕೆಲವರಾದರೂ ತಮ್ಮೂರಿಗೆ ಬರಲಿಕ್ಕಿರುವ ರಸ್ತೆ— [illegible] ಬಿಟ್ಟುಕೊಂಡು ತಿರುಗುವ ಕನಸು ಕಾಣುತ್ತಿದ್ದರು.

✲



ನಂಬಬೇಡಿ

ಈ ಕೆಳಗಿನ ಮಾತುಗಳನ್ನಾಡುವಾಗ ಹೀಗೆ ಮಾತನಾಡಿದ ಈ ಜನರನ್ನು ನಂಬಬೇಡಿ.

"ಒಂದ್ನಿಮಿಷ ನಿಮ್ಜೊತೆ ಇದ್ದು ಹೋಗೋಣಾ ಅಂತ ಬಂದೆ."

"ನನ್ನ ಬಗ್ಗೆ ಜನ ಏನು ಮಾತನಾಡಿದರೂ ನಾನು 'ಕೇರ್' ಮಾಡೋಲ್ಲ."

"ಇಂಥಾದ್ದನ್ನ ಜೀವಮಾನದಲ್ಲಿ ಈ ಮೊದಲು ನೋಡಿಯೇ ಇಲ್ಲ."

"ನಿಮಗೆ ಐವತ್ತೇ ?... ನಿಮಗೆ ಅಷ್ಟು ವಯಸ್ಸಾಗಿದೆ ಅಂತ ನಾನು ಯೋಚಿಸಿಯೇ ಇರಲಿಲ್ಲ."

"ನಿಮಗೆ ಸಲಹೆ ನೀಡಲು ನನಗೆ ಇಷ್ಟವಿಲ್ಲ... ಆದರೆ ನಾನು ನಿಮ್ಮ ಸ್ಥಾನದಲ್ಲಿ ಇದ್ದಿದ್ದರೆ..."

"ನೀವು ಒಂದು ವಾರದ ಹಿಂದೆ ಕೇಳಿದ್ದರೆ... ಅಥವಾ ಕೊನೇಪಕ್ಷ ನಿನ್ನೆ... ಆದರೆ ಇವೊತ್ತು ನನ್ನ ಜೇಬಿನಲ್ಲಿ ಒಂದು ಪೈಸೆಯೂ ಇಲ್ಲ.

—ಎಸ್. ವಿಶ್ವನಾಥ

ಕ್ಷಣವೇ ಜೀವ ಕ್ಷಣ ಜೀವನ

ನಾನು ಹಾಗೂ ನನ್ನ ಮಿತ್ರ ರಾಜಶೇಖರನು ಒಂದು ಬೆಟ್ಟದಲ್ಲಿ ದನಗಳನ್ನು ಮೇಯಿಸುತ್ತಿದ್ದೆವು. ಮರದ ನೆರಳಿನಲ್ಲಿ ಕುಳಿತು ಏನೇನೋ ಮಾತನಾಡಿಕೊಳ್ಳುತ್ತಿದ್ದಂತೆಯೆ ೧೦-೪೫ ಗಂಟೆಯ ಸುಮಾರಿಗೆ ನಮ್ಮ ಆಶ್ರಯದಾತ ಮರದಲ್ಲಿ ಹಕ್ಕಿಗಳ ಚಿಲಿಪಿಲಿ ಸದ್ದು ಕೇಳಿಸಿತು. ಏನೆಂದು ನೋಡುವಾಗ ಒಂದು ಹಕ್ಕಿಯು ಸುತ್ತ ಉಳಿದೆಲ್ಲಾ ಹಕ್ಕಿಗಳು ಸುತ್ತುವರಿದು ಶಬ್ದ ಮಾಡುತ್ತಿದ್ದವು. ಅವುಗಳು ಮರಿಯನ್ನು ಗೂಡಿನಿಂದ ಹೊರಹಾಕುತ್ತಿವೆ ಎಂದು ನಾನು ಸುಮ್ಮನಾದೆನು. ಆದರೆ ನನ್ನ ಗೆಳೆಯನು ಇನ್ನೂ ಅದರ ವೀಕ್ಷಣೆಯಲ್ಲೇ ಇದ್ದನು. ಹಾಗೆಯೇ ಸ್ವಲ್ಪ ಸಮಯದ ನಂತರ ದಿಟ್ಟಿಸಿದಾಗ ಒಂದು ಎಲೆ ಹಾವು ಆ ಮರಿಯನ್ನು ಕಚ್ಚಿಕೊಂಡದ್ದು ಕಾಣಿಸಿತು. ಹಾವಿನ ಮೇಲೆ ಗುರಿಯಿಟ್ಟು ಕಲ್ಲೆಸೆದರೂ ಪ್ರಯೋಜನವಾಗಲಿಲ್ಲ. ಇದರಿಂದ ಬೇಸತ್ತು ಕುಳಿತುಕೊಳ್ಳಲು ಹವಣಿಸುತ್ತಿದ್ದಂತೆಯೇ ನಮ್ಮ ದೃಷ್ಟಿ ಚಕ್ಕಂದವಾಡುತ್ತಿದ್ದ ಅಳಿಲು ಜೋಡಿಯ ಮೇಲೆ ಬಿತ್ತು. ಅವುಗಳಲ್ಲಿ ಒಂದು ಹಾವು ಹಕ್ಕಿಯನ್ನು ಹಿಡಿದಿದ್ದ ಸ್ಥಳವನ್ನೇ ನೋಡುತ್ತಿದ್ದಿತು. ಕೂಡಲೇ ಅದು ಆ ಸ್ಥಳಕ್ಕೆ ಓಡಿ ಹಾವಿನ ಮುಖದ ಮೇಲೆ ಹರಿಯಿತು. ಪ್ರಯೋಜನವಾಗಲಿಲ್ಲ. ಮತ್ತೊಮ್ಮೆ ಅದರ ಮೂತಿಯ ಮೇಲೆ ಹರಿದು, ತನ್ನ ಕಾಲಿನಿಂದ ಏನೋ ಮಾಡಿತು. ಕೂಡಲೇ ಹಕ್ಕಿಯು ಸಂತೋಷ ಮಿಶ್ರಿತ ಭಯದಿಂದೆಂಬಂತೆ ಕೆಳಕ್ಕಿರುವ ಒಂದು ಪೊದೆಯೊಳಗೆ ಬಿತ್ತು. ಹಾವು ಸಿಟ್ಟಿನಿಂದ ಭುಸುಗುಟ್ಟುತ್ತಿತ್ತು. ಅಳಿಲು ತನ್ನ ಸಂಗಾತಿಯೊಂದಿಗೆ ಆಟವಾಡಲು ಮರಳಿತು.

–ಪಿ. ಶಿವಾನಂದ

ಅನುಭವಕ್ಕೆ ಹತ್ತು ಮುಖಗಳು. ಕಳೆದ ವರ್ಷ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ, ನಾನು ಬಡವನಾದರೂ ಒಬ್ಬ ಹುರಿಯಾಳುವಿನ ಪರವಾಗಿ ಓಡಾಡಿ ಪ್ರಚಾರ ಮಾಡಿದೆ. ಆದರೆ ಚುನಾವಣೆ ಮುಗಿದ ನಂತರ ನಾನು ಎರಡು ಸಲ ಮತ ನೀಡಿರುವುದಾಗಿ ಆಪಾದಿಸಿ ನನ್ನ ವಿರುದ್ಧ ಒಂದು ಕೇಸು ನೋಂದಾಯಿಸಲ್ಪಟ್ಟಿತು. ಕೈಲಿ ಬಿಡಿಗಾಸಿಲ್ಲದ ನಾನು ನ್ಯಾಯಾಲಯದಲ್ಲಿ ನನ್ನನ್ನು ಸಂರಕ್ಷಿಸಿಕೊಳ್ಳುವ ಬಗೆಯೇನು ಎಂಬುದೇ ತಿಳಿಯದಾಯಿತು ಆಗ ನಾನು ಯಾವ ವ್ಯಕ್ತಿಗಾಗಿ ಅಷ್ಟೆಲ್ಲ ಶ್ರಮಿಸಿದ್ದೆನೋ ಆ ಮಹಾಶಯನ ಬಳಿಯೇ ಹೋದೆ. ಅವರು ನಮ್ಮೂರಲ್ಲಿ ದೊಡ್ಡ ವಕೀಲರು. ನನ್ನ ಸ್ಥಿತಿಯನ್ನು ವಿವರಿಸಿ, ನಾನು ಚುನಾವಣೆಯಲ್ಲಿ ಅವರ ಪರವಾಗಿಯೇ ದುಡಿದದ್ದನ್ನು ಹೇಳಿ ನನ್ನ ಪರವಾಗಿ ವಕಾಲತ್ತು ವಹಿಸಿ ಈ ಕಷ್ಟದಿಂದ ಪಾರು ಮಾಡಬೇಕೆಂದು ಬೇಡಿಕೊಂಡೆ.

"ನನ್ನ ಫೀ ಇಪ್ಪತ್ತು ರೂಪಾಯಿ ತಾ. ವಕಾಲತ್ತು ಹಾಕುತ್ತೇನೆ." ಅವರ ಪ್ರತಿಕ್ರಿಯೆ.

ನಾನೆಷ್ಟು ಹೇಳಿಕೊಂಡರೂ ಪ್ರಯೋಜನವಾಗಲಿಲ್ಲ. ಮುಂದೆ ನ್ಯಾಯಾಲಯದಲ್ಲಿ ಹಣ ತೆತ್ತು ವಕೀಲನನ್ನು ಕೊಟ್ಟು ನನ್ನನ್ನು ರಕ್ಷಿಸಿಕೊಳ್ಳಲು ನನಗಾಗಲಿಲ್ಲ. ನನ್ನ ಮೊರೆ ನ್ಯಾಯಾಧೀಶರ ಕಿವಿಗೂ ಕೇಳಲೇಯಿಲ್ಲವೇನೋ. ನನಗೆ ರೂ. ೧೫ ದಂಡ ವಿಧಿಸಿ ತುಂಬುವುದಕ್ಕೆ ಮೂರು ತಾಸು ಅವಧಿ ಕೊಟ್ಟರು. ಅಲ್ಲಿಯೇ ಇದ್ದ ಈ ವಕೀಲ ಮಹಾಶಯನನ್ನು ಅಷ್ಟನ್ನಾದರೂ ಕೊಡುವಂತೆ ಬಿನ್ನವಿಸಿದೆ. ಕೇಳಿಯೂ ಕೇಳಿಸದಂತಿದ್ದ ಅವರನ್ನು ಬಿಟ್ಟು

ಮತ್ತಾರೋ ಪರಿಚಿತರನ್ನು ಕಾಡಿ ಬೇಡಿ ಹೇಗೋ ದಂಡದ ಹಣ ತುಂಬಿದೆನೆನ್ನಿ. ಆದರೆ ನನ್ನ ಮನಸ್ಸನ್ನು ಅಂದು ಆವರಿಸಿದ ಪ್ರಶ್ನೆ ನನ್ನ ಬಡತನಕ್ಕಾಗಿ ನಾನು ಸಹಿಸಬೇಕಾಗಿ ಬಂದ ಈ ಅಪಮಾನಕ್ಕಿಂತ ಬಲು ದೊಡ್ಡದಾಗಿತ್ತು. ಅಬ್ಬಾ, ನಾವು ಎಂಥವರಿಗಾಗಿ ಕುರಡರಂತೆ ಕಣ್ಣುಚ್ಚಿ ಹೋರಾಡುತ್ತೇವೆ! ಸಾಮಾನ್ಯ ಮನುಷ್ಯನಲ್ಲಿ ಕಂಡು ಬರುವ ಕೃತಜ್ಞತೆಯ ಲಕ್ಷಣ ಒಂದು ಎಸಳಿನಷ್ಟೂ ಕಂಡು ಬಾರದ ಇಂಥವರಿಗಾಗಿ ನಾವು ಓಟು ಹಾಕುತ್ತೇವೆ. ಇವರು ಆಯ್ಕೆಗೊಂಡು ದೇಶೋದ್ಧಾರ ಮಾಡುತ್ತಾರೆ! ಹೌದು, ಇದು ಜೀವನ.


-ಸತ್ತೆಪ್ಪ ಕಲಮಲ

ಸಾಯಂಕಾಲ ಬಸ್ಸಿಗೆ ಹರಿಹರದಿಂದ ದಾವಣಗೆರೆಗೆ ಹೊರಟಿದ್ದ ನಮಗೆ "ನಾನ್ ಸ್ಟಾಪ್ ದಾವಣಗೆರೆ," ಎಂಬ ಕಂಡಕ್ಟರನ ಕಂಚಿನ ಧ್ವನಿ ಕಿವಿಗಪ್ಪಳಿಸಿತು. ತಕ್ಷಣ ನಾವು ಅತ್ತ ಧಾವಿಸಿದೆವು. ಅಷ್ಟರಲ್ಲಿ ಒಬ್ಬ ಹಳ್ಳಿಯವನು ಚಿತ್ರದುರ್ಗಕ್ಕೆ ಹೋಗಬೇಕಿತ್ತಂತೆ. ಕಂಡಕ್ಟರ್ ಅವನನ್ನು "ಎಲ್ಲಿಗೆ ಹೋಗ್ಬೇಕು ಯಜಮಾನ್ರೆ, ಮಧ್ಯಯಲ್ಲೂ ನಿಲ್ಸಾಕಿಲ್ಲ. ಈಗ್ಲೇ ಹೇಳಿಬಿಟ್ಟಿದ್ದೀನಿ. ಏನಿದ್ರೂ ದಾವಣಗೆರೆ, ಚಿತ್ರದುರ್ಗದಲ್ಲಿ ಮಾತ್ರ ನಿಲ್ಸಾದು" ಎಂದು ಹೇಳುವುದು ಕೇಳಿಸಿತು. ಅಷ್ಟರಲ್ಲಿ ಬಸ್ ಹೊರಡುವ ಸೂಚನೆ ಕಂಡಿದ್ದರಿಂದ ಗಡಿಬಿಡಿಯಲ್ಲಿ ನಾವು ಬಸ್ ಹತ್ತುವಾಗ ಆ ಯಜಮಾನರೂ ನಮ್ಮನ್ನು ಹಿಂಬಾಲಿಸಿ ನಮ್ಮ ಹಿಂದಿನ ಸೀಟನಲ್ಲಿ ಕುಳಿತದ್ದನ್ನು ಗಮನಿಸಿದೆ. ಬಸ್ಸು ಹರಿಹರ ಬಿಟ್ಟು ಎರಡೂ ಅಥವಾ ಮೂರು ಕಿ. ಮೀ. ಸಾಗಿರಬಹುದು. ಇದ್ದಕ್ಕಿದ್ದಂತೆ ಬಸ್ಸು ನಿಂತಿತು. ಏಕೆಂದು ಕುತೂಹಲದಿಂದ ತಲೆಯನ್ನು ಕೊಕ್ಕರೆಯಂತೆ ಹೊರಚಾಚಿ ನೋಡಲಾಗಿ ಕತ್ತಲಲ್ಲಿ ರೇಲ್ವೆ ಗೇಟ್ ಹಾಕಿದ್ದು ಕಾಣಿಸಿತು. ಐದು, ಹತ್ತು ನಿಮಿಷವಾದರೂ ರೈಲು ಬರುವ ಸುಳಿವೇ ಇಲ್ಲ. ಅಷ್ಟರಲ್ಲಿ ಹಿಂದಿನ ಸೀಟಿನಿಂದ ಗಡುಸಾದ ಸ್ವರದಲ್ಲಿ "ಅಲ್ಲಯ್ಯೋ ಕಂಡಕ್ಟ್ರೇ, ಬಸ್ ಮಧ್ಯದಾಗೆ ಎಲ್ಲೂ ನಿಲ್ಸಾಕಿಲ್ಲ ಎಂದು ಹೇಳ್ ಬಿಟ್ಟು, ಈಟೊತ್ತಾಗೆ, ಆದು ನಡೂದಾರೀಗೆ ನಿಲ್ಲಿಸಿ ಮಜಾ ಮಾಡಕತ್ತಿದ್ದಿಯಲ್ಲಯ್ಯೋ. ನಾವು ಜಲ್ದಿ ಊರು ಕಂಡು ಉಂಡ್ಬುಟ್ಟು ಮಕ್ಕೊಬೇಕು; ರೈಟ್ ಹೇಳು," ಎಂದು ಅಜ್ಞಾಪಿಸಿದ ಆ ಯಜಮಾನ.

ಸಿ. ಎಚ್. ಚಿದಂಬರಮೂರ್ತಿ

ಈ ಘಟನೆ ನಡೆದುದು ಸುಮಾರು ೨೫ ವರ್ಷಗಳ ಹಿಂದೆ. ಆಗ ನಾನು ಮುಂಬಯಿಯಲ್ಲಿ ವಾಸಿಸುತ್ತಿದ್ದೆ. ನನ್ನ ರೂಮಿನಲ್ಲಿ ನನ್ನ ಜೊತೆಗಿದ್ದ ಸ್ನೇಹಿತ ಅಂಚೆ ಕಚೇರಿಯಲ್ಲಿ ಗುಮಾಸ್ತ. ಆ ಪ್ರದೇಶದಲ್ಲಿಯ ಒಂದು ದೊಡ್ಡ ಕಂಪನಿಯ ಅಧಿಕಾರಿಯೊಬ್ಬರಿಗೆ 'ಫಿಲ್ಮ್ ಇಂಡಿಯಾ' ಮಾಸಿಕ ರಜಿಸ್ಟರ್ಡ್ ಅಂಚೆಯಿಂದ ಬರುತ್ತಿತ್ತು. ನನ್ನ ಸ್ನೇಹಿತ ಅದನ್ನು ಒಂದೆರಡು ದಿನ ಮನೆಗೆ ತಂದು ನಾವಿಬ್ಬರೂ ಓದಿದ ನಂತರ ಬಟವಡೆಗಾಗಿ ಪೋಸ್ಟ್‌ಮನ್ನನಿಗೆ ಕೊಡುತ್ತಿದ್ದ. ಹೀಗೆಯೆ ನಡೆದಿತ್ತು ನಮ್ಮ 'ಕಳ್ಳ' ಓದು. ಒಂದು ದಿನ ಆ ಅಧಿಕಾರಿಯಿಂದ ನನ್ನ ಸ್ನೇಹಿತನಿಗೆ ಒಂದು ಪತ್ರ ಬಂತು. ಕ್ರಾಸ್‌ವರ್ಡ್ಸ್‌ನಲ್ಲಿ ಜಯ ಸಿಗಲಿ ಎಂದು ಹಾರೈಸಿ ಬರೆದಿದ್ದ. ನಡೆದುದು ಇಷ್ಟೆ. ತಾನು ತುಂಬಿದ್ದ ಕ್ರಾಸ್ ವರ್ಡ್ಸ್ ಫಾರ್ಮನ್ನು ನನ್ನ ಗೆಳೆಯ ಮಾಸಿಕ ಓದುವಾಗ ಅದರಲ್ಲಿಯೆ ಇಟ್ಟು ಮರೆತುಬಿಟ್ಟಿದ್ದ. ಹಾಗೆಯೆ ಬಟವಡೆಯಾಗಿತ್ತು. ಹೀಗಾಗಿ ಕಳ್ಳತನ ಬಯಲಿಗೆ ಬಿದ್ದಿತು. ಆದರೆ ಅಧಿಕಾರಿ ಇದನ್ನು ವಿನೋದದಿಂದಲೆ ತೆಗೆದುಕೊಂಡು ಕ್ರಾಸ್ ವರ್ಡ್ಸ್ ಫಾರ್ಮ ಮರಳಿಸಿ ಶುಭ ಕೋರಿದ್ದ. ಬಚಾವ್ ಆದೆ ಎಂದು ನನ್ನ ಮಿತ್ರ ಸಮಾಧಾನದ ನಿಟ್ಟುಸಿರು ಬಿಟ್ಟ.

ವೈ. ಎನ್. ಜೋಶಿ



ఆల్బర్ట్ ఐన్‌స్టీన్

జి. టి. నారాయణరావ్

ಆಲ್ಬರ್ಟ್ ಐನ್‌ಸ್ಟೈನ್*

"ವಿಜ್ಞಾನರಂಗದಲ್ಲಿ ತಮ್ಮ ಹೆಸರುಗಳನ್ನು ಶಾಶ್ವತಗೊಳಿಸಿರುವ ಈ ಯುಗದ ಇತರ ಮಹಾವಿಜ್ಞಾನಿಗಳ ಕೊಡುಗೆಗಳನ್ನು ಎಳ್ಳಷ್ಟೂ ಕಡೆಗಣಿಸದೆ ಬೇರೆ ಯಾರ ಬಗ್ಗೆಯೂ ಹೇಳಲಾಗದ ಒಂದು ಮಾತನ್ನು ಐನ್‌ಸ್ಟೈನರ ಬಗ್ಗೆ ಧೈರ್ಯದಿಂದ ಹೇಳಬಹುದು. ಇವರ ಮಾನಸಿಕ ಸಂರಚನೆಯಲ್ಲಿ ಏನೋ ಒಂದು ವಿಶೇಷತೆ ಇವರ ವ್ಯಕ್ತಿತ್ವಕ್ಕೆ ಎಣೆ ಇಲ್ಲದ ಮೆರುಗು ನೀಡಿತ್ತು. ಇವರು ಅಳಿಸಿ ಹೋಗದ ಶಾಯಿಯಿಂದ ತಮ್ಮ ಹೆಸರನ್ನು ವಿಜ್ಞಾನೇತಿಹಾಸದ ಪುಟಗಳಲ್ಲಿ ದಾಖಲಿಸಿದ್ದಾರೆ. ಪ್ರಪಂಚದಲ್ಲಿ ಮಾನವ ಉಳಿದಿರುವ ತನಕವೂ ಈ ದಾಖಲೆ ಮಸುಕಾಗದು. ಇವರ ಆವಿಷ್ಕಾರಗಳಲ್ಲಿ ಅಲುಗಿಸಲು ಸಾಧ್ಯವಾಗದ ವಿಶಿಷ್ಟ ಸಿದ್ಧಿ ಕಂಡುಬರುತ್ತದೆ. ಸಿದ್ಧಾಂತಗಳು ಆಗಮಿಸುತ್ತವೆ, ಸಿದ್ಧಾಂತಗಳು ನಿರ್ಗಮಿಸುತ್ತವೆ. ಐನ್‌ಸ್ಟೈನ್ ಆದರೋ ಸಿದ್ಧಾಂತಗಳನ್ನು ರೂಪಿಸುವುದಕ್ಕಿಂತ ಹೆಚ್ಚಿನದನ್ನು ಸಾಧಿಸಿದರು. ಇವರು ವಿಶ್ವದ ಮೌನಸ್ವನಗಳನ್ನು ಪರಮ ಶ್ರದ್ಧೆಯಿಂದ ಆಲಿಸಿ ಅವು ಬಿತ್ತರಿಸುವ ಸಂದೇಶವನ್ನು ಅಚ್ಚಳಿಯದ ಖಚಿತತೆಯಿಂದ ಬರೆದಿಟ್ಟರು. ಭೌತ ಸನ್ನಿವೇಶವೊಂದನ್ನು ಆವರಿಸಿರುವ ವಿವರಗಳ ಗೊಂದಲದಿಂದ ಇನಿತೂ ವಿಚಲಿತರಾಗದೆ ಅದರ ತಳದಲ್ಲಿ ಹುದುಗಿರುವ ತತ್ತ್ವವನ್ನು ಪತ್ತೆಹಚ್ಚಿ ಸಮಸ್ಯೆಯ ತಿರುಳಿಗೇ ನೇರ ಹೋಗಬಲ್ಲ ಇವರ ಚಿಂತನೆಯ ಧಾಟಿ ಬೆರಗುಗೊಳಿಸುವಂತಿತ್ತು. ಇವರೆಂದೂ ಮೇಲುನೋಟದಿಂದ ಮೋಸಹೋಗುತ್ತಿರಲಿಲ್ಲ. ಹೀಗಾಗಿ ಇವರ ತೀರ್ಮಾನಗಳು ನಿರಾಕರಿಸಲಾಗದ ಪರಿಪೂರ್ಣತೆಯಿಂದ ಕೂಡಿರುವಂಥವು ಎಂಬುದಾಗಿ ಅಂಗೀಕೃತವಾಗಿವೆ."

—ಕಾರ್ನೀಲಿಯಸ್ ಲ್ಯಾನ್ಸೋಸ್

ಯಾರೀ ಪುಣ್ಯಶ್ಲೋಕರು?

"ಯುಗಯುಗಗಳ ಆರುನೂರು ಮಂದಿ ಮಹಾಪುರುಷರ – ಸಂತರ, ತತ್ತ್ವಜ್ಞಾನಿಗಳ, ರಾಜರ—ಆಕೃತಿಗಳು ನ್ಯೂಯಾರ್ಕ್ ರಿವರ್ಸೈಡ್ ಇಗರ್ಜಿಯ ಕ್ಷೇತ್ರಭಿತ್ತಿಗಳ ಮೇಲೆ ಕಂಡರಿಸಲ್ಪಟ್ಟು ಸುಣ್ಣಗಲ್ಲಿನಲ್ಲಿ ಅಮರತ್ವ ಪಡೆದು ಶಾಶ್ವತ ಮೂಕ ನೇತ್ರಗಳಿಂದ ಕಾಲ ಮತ್ತು ಆಕಾಶವನ್ನು ಸರ್ವೇಕ್ಷಣೆ ಮಾಡುತ್ತಿವೆ. ಇಲ್ಲಿನ ಒಂದು ಅಂಕಣ ಶತಮಾನಗಳ ಜೀಸಿನಿಂದ ಆಯ್ದ ಹದಿನಾಲ್ಕು ಮಂದಿ ವಿಜ್ಞಾನ ಸೀಮಾಪುರುಷರಿಂದ ಅಲಂಕೃತವಾಗಿದೆ—ಕ್ರಿಸ್ತಪೂರ್ವ ೩೭೦ರ ಸುಮಾರಿಗೆ ಗತಿಸಿದ ಹಿಪ್ಪೋಕ್ರೇಟಸನಿಂದ ತೊಡಗಿ ಮಾರ್ಚ್ ೧೯೪೯ರಲ್ಲಿ ಎಪ್ಪತ್ತು ವರ್ಷ ವಯಸ್ಸು ತುಂಬಲಿರುವ ಆಲ್ಬರ್ಟ್ ಐನ್‌ಸ್ಟೈನ್ ವರೆಗೆ. ಈ ಚರಿತಾರ್ಹ ಪುಣ್ಯಶ್ಲೋಕರ ಶಿಲ್ಪದರ್ಶನದಲ್ಲಿ ಐನ್‌ಸ್ಟೈನ್ ಒಬ್ಬರೇ ಜೀವಂತವ್ಯಕ್ತಿ ಎಂಬುದು ಗಮನಿಸಬೇಕಾದ ಸಂಗತಿ.

"ಇಷ್ಟೇ ಗಮನಾರ್ಹವಾದ ಇನ್ನೊಂದು ಸಂಗತಿ

* (೧) ಮೈಸೂರಿನ ಶ್ರೀ ಬಿ.ವಿ.ಕೆ. ಮೂರ್ತಿಯವರು ಪ್ರಕಟಿಸಲಿರುವ ಪುಸ್ತಕದಿಂದ ಉದ್ಧೃತ
(೨) ಐನ್‌ಸ್ಟೈನರ ಕುರಿತು ಈ ಹಿಂದೆ ೧೯೬೩ರ ಏಪ್ರಿಲ್ ಸಂಚಿಕೆಯಲ್ಲಿ ಬಂದ ಲೇಖನವನ್ನೂ ನೋಡಿ

ಎಂದರೆ ಪ್ರಾನ್ಸ್‌ಟನ್ನಿನ ಅತ್ಯಂತ ಪ್ರೇಕ್ಷಣೀಯ ಪ್ರಾಟೆಸ್ಟೆಂಟ್ ಇಗರ್ಜಿಯಲ್ಲಿ ವಾರ ವಾರ ಪೂಜೆ ಸಲ್ಲಿಸುವ [illegible] ಶತಕದ ತೊಂಬತ್ತೊಂಬತ್ತು ಮಂದಿಯೂ [illegible] ಐನ್‌ಸ್ಟೈನ್ ಪ್ರತಿಮೆ ಏಕೆ ಇದೆ ಎನ್ನುವುದನ್ನು ವಿವರಿಸಲು ಶಕ್ತರಾಗರು ಎಂಬುದು ಕೂಡ. ಒಂದು ತಲೆಮಾರಿನ ಹಿಂದೆ ಆ ಇಗರ್ಜಿಯ ಪ್ರತಿಮಾ ಶಿಲ್ಪವನ್ನು ಯೋಜಿಸುತ್ತಿದ್ದಾಗ ಡಾ॥ ಹ್ಯಾರಿ ಎಮರ್ಸನ್ ಫಾಸ್ಡಿಕ್ ಅವರು, ರಾಷ್ಟ್ರದ ಉಚ್ಚ ವಿಜ್ಞಾನಿಗಳ ತಂಡಕ್ಕೆ ವಿಜ್ಞಾನೇತಿಹಾಸದಲ್ಲಿ ಎದ್ದು ಕಾಣುವ ಹದಿನಾಲ್ಕು ಮಂದಿ ಸರ್ವಶ್ರೇಷ್ಠರ ಹೆಸರುಗಳನ್ನು ಒಳಗೊಂಡಿರುವ ಯಾದಿಗಳನ್ನು ತಯಾರಿಸಿ ತನಗೆ ಒಪ್ಪಿಸಬೇಕೆಂದು ಕೋರಿ ಪತ್ರ ಬರೆದರು. ವಿಜ್ಞಾನಿಗಳಿಂದ ಬಂದ ಆಯ್ಕೆಪಟ್ಟಿಗಳಲ್ಲಿ ಒಮ್ಮತವಿರಲಿಲ್ಲ. ಹೆಚ್ಚಿನವುಗಳಲ್ಲಿ ಆರ್ಕಿಮಿಡೀಸ್, ಯೂಕ್ಲಿಡ್ ಗೆಲಿಲಿಯೊ ಮತ್ತು ನ್ಯೂಟನ್ ಹೆಸರುಗಳಿದ್ದುವು. ಆದರೆ ಪ್ರತಿಯೊಂದರಲ್ಲಿಯೂ ಅಲ್ಬರ್ಟ್ ಐನ್‌ಸ್ಟೈನ್ ಹೆಸರು ಮಾತ್ರ ಇದ್ದೇ ಇತ್ತು." ಲಿಂಕನ್ ಬಾರ್ನೆಟ್ ೧೯೪೮ರಲ್ಲಿ ಬರೆದ The Universe and Dr Einstein ಎಂಬ ಗ್ರಂಥದ ಮೊದಲ ಎರಡು ಪರಿಚ್ಛೇದಗಳಿವು.

೧೯೭೯ರ ಮಾರ್ಚ್ ೧೪ಕ್ಕೆ ಆಲ್ಬರ್ಟ್ ಐನ್‌ಸ್ಟೈನ್ ಹುಟ್ಟಿ ನೂರು ವರ್ಷಗಳು ತುಂಬುತ್ತವೆ. ಈ ಮಹಾನುಭಾವ ೧೯೫೫ರ ಏಪ್ರಿಲ್ ೧೮ರಂದು ವಿಶ್ವಚೈತನ್ಯದೊಡನೆ ಲೀನರಾದರಾದರೂ ಇವರ ವಿಜ್ಞಾನವಿಕ್ರಮಗಳು ಇವರಿಗೆ ಪ್ರಪಂಚದ ಇತಿಹಾಸದಲ್ಲಿ ಶಾಶ್ವತ ಉಜ್ಜ್ವಲ ಸ್ಥಾನವನ್ನು ಗಳಿಸಿ ಕೊಟ್ಟಿವೆ.

ಅಲ್ಬರ್ಟ್ ಐನ್‌ಸ್ಟೈನ್ ಎಂಬ ಹೆಸರು ಕಿವಿ ಮೇಲೆ ಬಿದ್ದಾಗ ಮನದಲ್ಲಿ ಮಿಡಿಯುವ ಭಾವಗಳೇನು? ಪ್ರಪಂಚದ ಸಾರ್ವಕಾಲಿಕ ಸರ್ವಶ್ರೇಷ್ಠ ವಿಜ್ಞಾನಿಗಳಾದ ಆರ್ಕಿಮಿಡೀಸ್ (ಕ್ರಿ. ಪೂ. ಸು ೨೮೭ರಿಂದ ೨೧೨), ನಿಕೊಲಾಸ್ ಕೊಪರ್ನಿಕಸ್ (ಕ್ರಿ. ಶ. ೧೪೭೩–೧೫೪೩), ಗೆಲಿಲಿಯೊ ಗೆಲಿಲೀ (೧೫೬೪–೧೬೪೨), ಐಸಾಕ್ ನ್ಯೂಟನ್ (೧೬೪೨–೧೭೨೭) ಮತ್ತು ಕಾರ್ಲ್ ಫ್ರೀಡರಿಶ್ ಗೌಸ್ (೧೭೭೭–೧೮೫೫) ಈ ವಿದ್ವನ್ [illegible] ಪಂಕ್ತಿಯಲ್ಲಿ [illegible] ನಿಲ್ಲಬಲ್ಲ [illegible] ಸಾಪೇಕ್ಷತಾ ಸಿದ್ಧಾಂತವನ್ನು (Theory of Relativity) ಪ್ರತಿಪಾದಿಸಿದ ಪರಮ ಮೇಧಾವಿ. ಅನಂತಾಲ್ಪಗಾತ್ರದ ಪರಮಾಣುವಿನ ಹೂರಣದಲ್ಲಿ ಹುದುಗಿರುವ ಅಗಾಧ ಶಕ್ತಿಯ ಚಿದಂಬರ ರಹಸ್ಯವನ್ನು $E=mc^2$ ಎಂಬ ಸರಳ ಸುಂದರ ಸೂತ್ರದಲ್ಲಿ ಕುಂಚಿಸಿದ ಉತ್ತಮ ಕಲಾವಿದ, ಅತಿ ಸರಳವೆಂದು ಭಾಸವಾಗುವ ಬೆಳಕಿನ ಅತಿ ವಿಚಿತ್ರವರ್ತನೆಯನ್ನು ನಿರಪೇಕ್ಷವಾಗಿ ಪರಿಶೀಲಿಸಿ ಸಮರ್ಪಕವಾಗಿ ವಿವರಿಸಿದ ಜ್ಯೋತಿಪುರುಷ, ಕೀರ್ತಿ ಪ್ರತಿಷ್ಠೆ ಗೌರವ ಸಿರಿ ಹರೆಯದಲ್ಲೇ ಹಿರಿ ಮಟ್ಟದಲ್ಲಿ ಪೇರಿಕೊಂಡು ಬಂದರೂ ಅವನ್ನು ಅತಿ ಲಘುವಾಗಿಯೂ ಸಹಜವಾಗಿಯೂ ಹೊತ್ತು ಅವುಗಳಿಂದ ಎಳ್ಳಷ್ಟೂ [illegible] ಕೊನೆ ಉಸಿರಿನ ತನಕವೂ ಮಗುವಿನ ಮೂಕ ವಿಸ್ಮಯ ಮುಗ್ಧತೆಯಿಂದಲೇ ಜಗತ್ತನ್ನು ಗಮನಿಸಿದ ದಾರ್ಶನಿಕ, ನಾಟ್ಸೀ ಜರ್ಮನಿಯ ಅಂಧ ವರ್ಣದ್ವೇಷದ ಅಂತೆಯೇ ಸಮಸ್ತ ಯುದ್ಧಪ್ರೇರಕ ಮನೋಭಾವದ ಎದುರು ಸೆಟೆದು ನಿಂತು ಮಾನವನ ಹಕ್ಕುಬಾಧ್ಯತೆಗಳನ್ನು ಸದಾಕಾಲ ಕಾಪಾಡಲು ತನ್ನ ಬದುಕನ್ನೇ ಮುಡಿಪಾಗಿಟ್ಟ ಶಾಂತಿದೂತ, ಸಮಗ್ರವಾಗಿ ಇಪ್ಪತ್ತನೆಯ ಶತಮಾನದ ವಿಜ್ಞಾನ, [illegible] ಮತ್ತು ಮನಸ್ಸಾಕ್ಷಿ ಇವುಗಳ ಭವ್ಯ ಪ್ರತೀಕ – ಇಷ್ಟೆಲ್ಲ ಭಾವಗಳು ಸಾಗರತರಂಗಗಳೋಪಾದಿಯಲ್ಲಿ ಪ್ರವಹಿಸಿದರೂ ನಮಗೆ ತೃಪ್ತಿ ಎನ್ನಿಸದು.

ಪ್ರತಿಭಾ ವಿಜ್ಞಾನಿಯೂ ಪರಿಪೂರ್ಣ ಮಾನವನೂ ಆಗಿರುವ ಏಕೈಕ ನಿದರ್ಶನ ಐನ್‌ಸ್ಟೈನ್. ಸೈದ್ಧಾಂತಿಕ ಭೌತವಿಜ್ಞಾನಿಯಾಗಿ (theoretical physicist) ಇವರು ವಿಜ್ಞಾನಪ್ರಪಂಚಕ್ಕೆ ಆಗಮಿಸಿದ್ದು ಎಷ್ಟು ಕಾಲೋಚಿತವಾಗಿತ್ತೊ, ಪರಮ ಮಾನವನಾಗಿ ವ್ಯವಹಾರಪ್ರಪಂಚಕ್ಕೆ ಆಗಮಿಸಿದ್ದೂ ಅಷ್ಟೆ ಕಾಲೋಚಿತವಾಗಿತ್ತು. ರಾಶಿ–ಶಕ್ತಿ (mass–energy) ಅವಿಭಾಜ್ಯತೆಯನ್ನೂ ಆಕಾಶ–ಕಾಲ ಸಾತತ್ಯವನ್ನೂ (space-time continuum) ರುಜುವಾತಿಸಿದ ಇವರ ಬಾಳ್ವೆ ಈ ತತ್ತ್ವಗಳಿಗೆ ಪ್ರತ್ಯಕ್ಷ ಪ್ರಮಾಣ

ವಾಗಿತ್ತು: ಇವರ ವ್ಯಕ್ತಿತ್ವದಲ್ಲಿ ಜೀವನದಿಂದ ಬೇರೆ ಆದ ವಿಜ್ಞಾನ ಇರಲಿಲ್ಲ; ವಿಜ್ಞಾನದಿಂದ ಬೇರೆ ಆದ ಜೀವನ ಇರಲಿಲ್ಲ. ಇಲ್ಲಿ ಜೀವನ ಪದವನ್ನು 'ಜಗತ್ತಿನ ಸಮಸ್ತ ವಿದ್ಯಮಾನಗಳು' ಎನ್ನುವ ವ್ಯಾಪಕಾರ್ಥದಲ್ಲಿ ಬಳಸಲಾಗಿದೆ. ಎಂದೇ ಇವರು ವಿಜ್ಞಾನಿಗಳಿಗೆ ಹೇಗೋ ಸಾಮಾನ್ಯರಿಗೂ ಹಾಗೆಯೇ ಆದರ್ಶಪ್ರಾಯರಾಗಿದ್ದಾರೆ, ಸ್ಫೂರ್ತಿಯ ನೆಲೆ ಆಗಿದ್ದಾರೆ, ಬದುಕಿಗೆ ಅರ್ಥ ನೀಡಬಲ್ಲ ದ್ರಷ್ಟಾರರಾಗಿದ್ದಾರೆ.

ದಿಕ್ಸೂಚಿ ಸೂಚಿಸಿದ ದಿಕ್ಕು

ಯೆಹೂದ್ಯ ವಣಿಕರ ಅಲೆಮಾರಿ ಕುಟುಂಬವೊಂದು ಜರ್ಮನಿ ರಾಷ್ಟ್ರದ ವುರ್ಟೆನ್‌ಬರ್ಗ್ ರಾಜ್ಯದ ಉಲ್ಮ್ ಪಟ್ಟಣದಲ್ಲಿ ನೆಲೆಸಿತ್ತು. ಹರ್ಮನ್ ಐನ್‌ಸ್ಟೈನ್ ಮನೆಯ ಹಿರಿಯ, ಪೌಲೀನ್ ಇವರ ಹೆಂಡತಿ, ಜೇಕಬ್ ತಮ್ಮ. ಐನ್‌ಸ್ಟೈನ್ ಸಹೋದರರು ಒಂದು ವಿದ್ಯುದ್ರಾಸಾಯನಿಕ ಕಾರ್ಖಾನೆಯ ಮಾಲಿಕರು. ಇದರ ತಾಂತ್ರಿಕಾಂಶಗಳ ನಿರ್ವಹಣೆ ತಮ್ಮನ ಹೊಣೆ. ವ್ಯಾಪಾರ ವಹಿವಾಟುಗಳನ್ನು ಅಣ್ಣ ನೋಡಿಕೊಳ್ಳುತ್ತಿದ್ದರು. ಹರ್ಮನ್ ಅಂಥ ವ್ಯವಹಾರಕುಶಲಿ ಏನೂ ಆಗಿರಲಿಲ್ಲ, ಮುಗ್ಧತೆಯ ಕಡೆಗೇ ಒತ್ತು ಜಾಸ್ತಿ. ಹೀಗಾಗಿ ಕಾರ್ಖಾನೆ ಪದೇ ಪದೇ ನಷ್ಟಕ್ಕೆ ಈಡಾಗುತ್ತಿತ್ತು. ಆದರೆ ಅವರ ಜೀವನ ತೃಪ್ತಿಯಾಗಲಿ ಸ್ವಾತಂತ್ರ್ಯವಾಗಲಿ ಇದರಿಂದ ಬಾಧಿತವಾಗುತ್ತಿರಲಿಲ್ಲ.

ಪೌಲೀನ್ ವಿಶೇಷ ಸಾಮರ್ಥ್ಯವಂತ ವ್ಯಕ್ತಿ. ಸಂಗೀತ, ಕಲೆ, ಸುಸಂಸ್ಕೃತ ಜೀವನ ಇವುಗಳಲ್ಲಿ ಅಪಾರ ಶ್ರದ್ಧೆ ಇರುವಾಕೆ. ಮನೆವೆಚ್ಚಕ್ಕೆ ಒದಗುತ್ತಿದ್ದ ರೊಕ್ಕ ಬಹು ಕಡಿಮೆ ಆಗಿದ್ದರೂ ಅಷ್ಟರಿಂದಲೇ ತೃಪ್ತಿ ತಳೆದು ಬದುಕಿಗೆ ಒಪ್ಪ ಓರಣ ತರುತ್ತಿದ್ದ ಕುಶಲಿ. ಮನೆಯಲ್ಲಿ ಹೆಚ್ಚು ಕಡಿಮೆ ಪ್ರತಿ ಸಂಜೆಯೂ ಕೂಡುತ್ತಿದ್ದ ಸಂಗೀತ ಮೇಳದ ಕೇಂದ್ರವ್ಯಕ್ತಿ ಅಥವಾ ಪ್ರಧಾನಸೂತ್ರ ಈಕೆಯೇ. ಜರ್ಮನ್ ಅಭಿಜಾತ (classical) ಸಂಗೀತ ಪ್ರಪಂಚದಲ್ಲಿ ವಿಹರಿಸುವುದು ಈ ಕಲಾಭಿಮಾನಿಗಳ ಪ್ರಿಯ ಹವ್ಯಾಸ.

ಜೇಕಬ್ ಒಬ್ಬ ಎಂಜಿನಿಯರ್. ಈ ವೃತ್ತಿಗೆಂದೇ ಶಿಕ್ಷಣ ಪಡೆದಾತ. ಅಮೂರ್ತ ಬೌದ್ಧಿಕ ಚಿಂತನೆಗಳಲ್ಲಿ ಇವನಿಗೆ ಹೆಚ್ಚಿನ ಒಲವು.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧ. ಇಂದಿನ ಪಟ್ಟಣಗಳಿಗೆ ಹೋಲಿಸಿದಾಗ ಅಂದಿನ ಉಲ್ಮ್ ಪಟ್ಟಣ ವಿಸ್ತೃತ ಗ್ರಾಮವಾಗಿತ್ತು. ಸರಳ ಶಾಂತ ಜೀವನ.

ಐನ್‌ಸ್ಟೈನ್ ಕುಟುಂಬಕ್ಕೆ ಹೇಳಿಕೊಳ್ಳುವಂಥ ಸಿರಿವಂತಿಕೆ ಇಲ್ಲದಿದ್ದರೂ ಬದುಕಿನಲ್ಲಿ ನೆಮ್ಮದಿಗೆ ಏನೂ ಕೊರತೆ ಇರಲಿಲ್ಲ. ಕರ್ಮಠ ಯೆಹೂದ್ಯ ಸಂಪ್ರದಾಯವಾದಿಗಳಲ್ಲದ ಇವರು ಆ ಧರ್ಮದ ಸಾರವಾದ ಮಾನವೀಯತೆ, ಸಚಾರಿತ್ರ್ಯ, ಕರ್ತವ್ಯಪರಾಯಣತೆ, ಜೀವನಮೌಲ್ಯಗಳ ಬಗ್ಗೆ ವಿಶ್ವಾಸ ಇವನ್ನು ಹೀರಿ ಮೈಗೂಡಿಸಿಕೊಂಡು ಋಜು ಜೀವನವನ್ನು ಬಾಳುತ್ತಿದ್ದರು.

ಹರ್ಮನ್ ಮತ್ತು ಪೌಲೀನ್ ಐನ್‌ಸ್ಟೈನ್ ದಂಪತಿಗಳ ಮೊದಲ ಕೂಸು ೧೮೭೯ ಮಾರ್ಚ್ ೧೪ರಂದು ಹುಟ್ಟಿತು. ಗಂಡು ಮಗು ಮನೆಗೆ ಹಬ ಮನಕ್ಕೆ ಹರ್ಷ ತಂದಿತ್ತು. ಮಗುವಿಗೆ ಆಲ್ಬರ್ಟ್ (ಐನ್‌ಸ್ಟೈನ್) ಎಂಬುದಾಗಿ ಹೆಸರಿಟ್ಟರು.

ಉಲ್ಮ್ ಪಟ್ಟಣದ ವ್ಯವಹಾರದಲ್ಲಿ ಯಶಸು ಕಾಣದ ವಣಿಕ ಕುಟುಂಬ ಮೂರು ವರ್ಷ ನೆರೆ ರಾಜ್ಯ ಬವೇರಿಯಕ್ಕೆ ವಲಸೆ ಹೋಗಿ ಮ್ಯೂನಿಕ್ ನಗರದಲ್ಲಿ ನೆಲೆಸಿತು. ಕಾರ್ಖಾನೆಯ ಪಕ್ಕದಲ್ಲಿಯೇ ವಾಸಕ್ಕಾಗಿ ಎರಡು ಮನೆಗಳನ್ನು ಹರ್ಮನ್ ಮತ್ತು ಜೇಕಬ್ ಕುಟುಂಬಗಳು ಬಾಡಿಗೆಗೆ ಹಿಡಿದುವು. ಪಟ್ಟಣದ ಮಂದನಡೆಗೆ ಒಗ್ಗಿ ಹೋಗಿದ್ದ ಇವರು ಈಗ ನಗರದ ಬಿರುಸು ಹೆಜ್ಜೆಗೆ ಹೊಂದಿಕೊಳ್ಳಬೇಕಾಗಿತ್ತು. ಹಳೆ ಒಡಂಬಡಿಕೆಯ (Old Testament) ಪಠನ ಮತ್ತು ಜರ್ಮನ್ ಅಭಿಜಾತ ಸಾಹಿತ್ಯದ ವಾಚನ ದೈನಂದಿನ ಸಂಜೆ ಕಾರ್ಯಕ್ರಮದ ಮುಖ್ಯ ಭಾಗಗಳೇ ಆಗಿದ್ದುವು.

ಅಣುಗ ಆಲ್ಬರ್ಟ್ ಕಣ್ತೆರೆದದ್ದು ಈ ಪರಿಸರದಲ್ಲಿ, ತಾಯಿ ನಲ್ಮೆಯಿಂದ ಕಟ್ಟಿ ಹೊರೆಯುತ್ತಿದ್ದ ಬೆಚ್ಚಗಿನ ಗೂಡಿನಲ್ಲಿ, ತಂದೆ ತಾಳ್ಮೆಯಿಂದ ನೋಡಿ [illegible] ಇಚ್ಛೆ ಅರಿವ ಬೀಡಿನಲ್ಲಿ. ಈ ಮಗುವಿನಲ್ಲಿ ಬಾಲ ಪ್ರತಿಭೆಯ ಯಾವ ಲಕ್ಷಣವೂ ಪ್ರಕಟವಾಗಲಿಲ್ಲ. ಇಷ್ಟೆ ಅಲ್ಲ, ವಯಸಿಗೆ ಅನುಗುಣವಾಗಿ ಇವನ

ಬುದ್ಧಿ ವಿಕಾಸಗೊಳ್ಳುತ್ತಿದ್ದಂತೆಯೂ ತೋರಲಿಲ್ಲ. ಈತ ಮಾತು ಕಲಿತದ್ದು ತುಂಬ ತಡವಾಗಿ. ಇತರ ಪುಟಾಣಿಗಳೊಡನೆ ಕೂಡಿ ಆಡಲು ಇವನೆಂದೂ ಮುಂದಾಗಲಿಲ್ಲ.

ಮಗುವಿಗೆ ನಾಲ್ಕು ಅಥವಾ ಐದು ವರ್ಷ ವಯಸ್ಸಾಗಿದೆ. ಒಂದು ದಿನ ಶೀತಜ್ವರದಿಂದ ಬಾಧೆಗೊಂಡು ಮಂಕಾಗಿ ಮುದ್ದೆಯಾಗಿ ನರಳುತ್ತ ಮಲಗಿದೆ. ಔಷಧಿ ತರಲೆಂದು ಅಂಗಡಿಗೆ ಹೋಗಿದ್ದ ಹರ್ಮನ್ ಅಲ್ಲೊಂದು ದಿಕ್ಸೂಚಿಯನ್ನು (compass) ಕಂಡಿದ್ದಾರೆ. ಸರಿ, ಅದನ್ನು ಕೊಂಡು ತಂದು ಮಗನಿಗೆ ಕೊಟ್ಟಿದ್ದಾರೆ. ಸುಸ್ತು ಹೊಡೆದು ಮುದುರಿ ಕುಸಿದಿದ್ದ ಮಗು ನಾಜೂಕಾದ ಪೆಟ್ಟಿಗೆ ಕಂಡು ಎದ್ದು ಕುಳಿತಿದೆ. ಅದರೊಳಗೆ ಏನು ವಿಚಿತ್ರ! ವಿಲಿ ವಿಲಿ ಒದ್ದಾಡುತ್ತಿರುವ ಸೆರೆಯಿಂದ ಬಿಡಿಸಿಕೊಳ್ಳಲು ತವಕಿಸುತ್ತಿರುವ. ಯಾವ ಬಾಹ್ಯ ಕಾರಕದ ಪ್ರಭಾವವೂ ಇಲ್ಲದೆ ಚಡಪಡಿಸುತ್ತಿರುವ ಸೂಜಿ. ಪೆಟ್ಟಿಗೆಯನ್ನು ಹೇಗೆಯೇ ಇಟ್ಟರೂ ಎತ್ತ ಕಡೆಗೆ ತಿರುಗಿಸಿದರೂ ಸೂಜಿ ಮಾತ್ರ ಜಪ್ಪಯ್ಯ ಎಂದು ಪಟ್ಟು ಬಿಡದೆ ಒಂದೇ ದಿಕ್ಕಿಗೆ ಗುರಿ ಮಾಡಿ ನಿಲ್ಲುತ್ತಿದೆ.

"ಅಪ್ಪಾ, ಸೂಜಿ ಯಾವಾಗಲೂ ಒಂದೇ ದಿಕ್ಕಿಗೆ ತಿರುಗಿರುವುದರ ಕಾರಣವೇನು?" ಮಗುವಿನ ಕಣ್ಣುಗಳಲ್ಲಿ ವಿಸ್ಮಯದ ಕಾಂತಿ.

"ನಿನಗದು ಅರ್ಥವಾಗದು ಮರಿ. ಭೂಕಾಂತತ್ವ ಈ ಸೂಜಿಯನ್ನು ಎಳೆಯುತ್ತಿರುವುದರಿಂದ..."

"ಭೂ–ಭೂ–ಭೂ– ಏನಪ್ಪ ನೀನು ಹೇಳಿದ್ದು?"

"ನಿನಗದರ ಗೊಡವೆ ಬೇಡ ಅಲ್ಬರ್ಟ್. ಕಣ್ಣಿಗೆ ಕಾಣದ ಒಂದು ವಿಶಿಷ್ಟ ಬಲದ ವಿಚಿತ್ರ ಹೆಸರದು. ನೀನು ದಿಕ್ಸೂಚಿಯೊಡನೆ ಆಡುತ್ತಿರು."

"ಆದರೆ ಸೂಜಿ ಏಕೆ ಹೀಗೆ ವರ್ತಿಸುತ್ತಿದೆ?"

ಮಗುವಿನ ಕೊನೆಗಾಣದ "ಏಕೆ"ಗಳಿಗೆ ಸರಿ ಉತ್ತರ ಹೇಳಿ ಅದರಿಂದ "ಸರಿ" ಎನ್ನಿಸಿಕೊಳ್ಳಬಲ್ಲ 'ಅಪ್ಪ'ಗಳೆಲ್ಲಿದ್ದಾರೆ?

ಈ ಪ್ರಥಮ ವಿಸ್ಮಯಾನುಭವದ ಬಗ್ಗೆ ಆಲ್ಬರ್ಟ್ ಐನ್‌ಸ್ಟೈನ್ ತಮ್ಮ ಅರವತ್ತೇಳನೆಯ ವಯಸ್ಸಿನಲ್ಲಿ ಬರೆದ "ಆತ್ಮಚರಿತ್ರೆಯ ಟಿಪ್ಪಣಿಗಳು" ಎಂಬುದರಲ್ಲಿ ಉಲ್ಲೇಖಿಸಿದ್ದಾರೆ "ಆ ಸೂಜಿ ಇಂಥ ನಿರ್ಧಾರಿತ ರೀತಿಯಲ್ಲಿ ವರ್ತಿಸಿತೆಂಬುದು ಪರಿಕಲ್ಪನೆಗೆ ಪ್ರಜ್ಞಾತೀತ ಪ್ರಪಂಚದಲ್ಲಿ ಸ್ಥಳ ಪಡೆಯಬಲ್ಲ (ನೇರ 'ಸ್ಪರ್ಶ'ಕ್ಕೆ ಸಂಬಂಧಿಸಿದ ಪರಿಣಾಮ) ಘಟನೆಗಳ ಸ್ವಭಾವದೊಡನೆ ಹೊಂದಿಕೊಳ್ಳಲೇ ಇಲ್ಲ. ಆ ಅನುಭವ ನನ್ನ ಮೇಲೆ ಗಾಢವಾದ ಮತ್ತು ಚಿರಕಾಲ ಉಳಿಯಬಲ್ಲ ಮುದ್ರೆ ಒತ್ತಿತು ಎಂಬುದು ಇನ್ನೂ ನೆನಪಿದೆ. ಅಥವಾ ಕೊನೆಯ ಪಕ್ಷ ನೆನಪಿದೆ ಎಂದು ನಂಬಿದ್ದೇನೆ. ಘಟನೆಗಳ ಹಿಂದೆ, ಆಳದಲ್ಲಿ ಹುದುಗಿಕೊಂಡಿರುವ ಏನೋ ಒಂದು ಇದ್ದಿರಲೇಬೇಕು......"

ತಸ್ಕರ ಶೋಧನೆ

ಆರು ವರ್ಷದ ಅಲ್ಬರ್ಟನನ್ನು ಶಾಲೆಗೆ ಸೇರಿಸಿದರು (೧೮೮೫). ಇವನಿಗೆ ಮಾತು ಕಡಿಮೆ. ಸತ್ಯನಿಷ್ಠ. ಸರೀಕರೊಡನೆ ಬೆರೆಯುತ್ತಿರಲಿಲ್ಲ. ಆಟವಂತೂ ಬಲು ದೂರ. ಹೀಗಾಗಿ ಅವರ ದೃಷ್ಟಿಯಲ್ಲಿ ಇವನೊಬ್ಬ 'ಅಜ್ಜಯ್ಯ', 'ಧರ್ಮರಾಯ'ನ ಅಪರಾವತಾರ. ತರಗತಿಯ ಉಕ್ಕಿನ ಶಿಸ್ತು ಇವನ ಕತ್ತು ಹಿಸುಕುತ್ತಿತ್ತು. ಪಾಠ ಪ್ರವಚನಗಳ ವಿಧಾನವೇನು? ತರಗತಿಯೊಂದು ಮಿಲಿಟರಿ ಕವಾಯತಿ ರಂಗ. ವಿದ್ಯಾರ್ಥಿಗಳು ಅಲ್ಲಿನ ಮೂಕ ಮಂಕ ಯೋಧರು. ಕೀಲು ಗೊಂಬೆಗಳು. ಅಧ್ಯಾಪಕನೇ ದಂಡನಾಯಕ. ಕಲಿಕೆ ಎಂದರೇನು? ಪಠ್ಯ ಪುಸ್ತಕಗಳನ್ನು ಉರು ಹೊಡೆಯುವುದು ಮತ್ತು ದಂಡನಾಯಕ ಕೇಳುವ ಪ್ರಶ್ನೆಗಳಿಗೆ ದಿಢೀರ್ ಉತ್ತರ ಒಪ್ಪಿಸುವುದು. ಒಂದು ಪ್ರಶ್ನೆ, ಒಂದು ಉತ್ತರ – ಇದು ಅಲ್ಲಿನ ವ್ಯವಹಾರ ನಿಯಮ. ಅತಿ ಕ್ಷಿಪ್ರವಾಗಿ ತಾರಸ್ಥಾಯಿಯಲ್ಲಿ ಅರಚುವಾತನೇ ಸುಟಿ ವಿದ್ಯಾರ್ಥಿ. ಇಂಥ ಕಡ್ಡಾಯದ ತುರ್ತು ಕಸಾಯಿಖಾನೆಯಲ್ಲಿ ಕುತೂಹಲ ಮೊದಲ ಬಲಿ ಆಗುವುದು ನಿರೀಕ್ಷಿತವೇ. ಅಲ್ಲಿ ಅಲ್ಬರ್ಟ್ ಕುರಿ ಮರಿಯಂತೆ ನವೆಯುತ್ತಿದ್ದ. ಅವನ ಆಸಕ್ತಿ ಒಂದಿಷ್ಟೂ ಕುದುರಲಿಲ್ಲ.

"ಆತ್ಮಚರಿತ್ರೆ"ಯಲ್ಲಿನ ಟಿಪ್ಪಣಿ "[illegible] ಬೋಧನವಿಧಾನಗಳು ಅನ್ವೇಷಣೆಯ ಸುಕುಮಾರ ಕುತೂಹಲವನ್ನು ಇನ್ನೂ ತುಳಿದಪ್ಪಳಿಸದಿರುವುದೊಂದು ಪವಾಡವೇ ಸೈ ಕೋಮಲವಾದ ಈ ಪುಟ್ಟ ಸಸಿ ಅರಳಲು ಉತ್ತೇಜನೆಯ ಜೊತೆಗೆ ಅತ್ಯವಶ್ಯವಾದದ್ದು ಮುಕ್ತ ಪರಿಸರ. ಇದಿಲ್ಲದಿದ್ದರೆ ಸಸಿ

ಕಲಿಕೆ ಸರಿ ಹೋಗುತ್ತದೆ [illegible] ನೋಡುವ ಹಾಗೂ ಅರಸುವ ಕೌತುಕದ್ದನ್ನ ಸಂತೋಷವನ್ನು ಕಡ್ಡಾಯ ಕ್ರಮಗಳಿಂದ ಮತ್ತು ಅನಾವಶ್ಯಕ್ಕೆ [illegible] ಗಿಂತಲೂ ಪ್ರೋತ್ಸಾಹಿಸಬಹುದೆಂದು ಭಾವಿಸುವುದು ದೊಡ್ಡ ತಪ್ಪು."

ತರಗತಿಯ ಕೃತಕ ಮೌನ. ದಂಡನಾಯಕ ಪಿಟೀಲಿ ಹುಕುಂ ಜಾಲೂ ಮಾಡಿದ "ಈ ಹುಡುಗ ಶತದಡ್ಡ. ಅತ್ಯಂತ ಸರಳವಾದ ವಿಷಯಗಳನ್ನು ಕಲಿಯಲಾರ. ಆಲ್ಬರ್ಟ್! ನಿನ್ನನ್ನೇ ಕುರಿತು ನಾನು ಹೇಳುತ್ತಿರುವುದು. ನಾನು ಈಗ ತಾನೇ ಕೇಳಿದ ಪ್ರಶ್ನೆಗೆ ಒಡನೆ ಉತ್ತರ ಬೊಗಳು, ಹೂಂ."

ಹುಡುಗ ಮೂಕನಾಗಿದ್ದ. ವಿದ್ಯಾರ್ಥಿಗಳ ಗೇಲಿಗೆ ವಸ್ತುವಾಗಿದ್ದ. ಆದರೆ ಕಟುಕಶಿರೋಮಣಿಯ ಮಾರಕಾಸ್ತ್ರಕ್ಕೆ ಅಂಜಿ ಅವರು ಮೌನ ತಳೆದಿದ್ದರು. ಹೆದರಿದ ಹುಡುಗನ ನಿರುತ್ತರ ಸ್ಥಿತಿಯನ್ನು ದಂಡ ನಾಯಕ ಅರ್ಥೈಸಿದ, ಧಾರ್ಷ್ಟ್ಯ ಎಂಬುದಾಗಿ ಬಗೆದ. ಕ್ಷಣಕ್ಷಣ ಇವನ ಮುಸುಡಿನ ರಂಗೇರುತ್ತಿತ್ತು. ಸಿಟ್ಟಿನಿಂದ ಕೊನೆಗೊಮ್ಮೆ ಅಬ್ಬರಿಸಿಯೇ ಬಿಟ್ಟ, "ಆಲ್ಬರ್ಟ್! ನೀನಿಲ್ಲಿಂದ ತೊಲಗಿಯೇ ಹೋಗು."

ಸದ್ಯ ಪೆಟ್ಟು ಕುಟ್ಟಲಿಲ್ಲ, ಬಚಾವ್! ಒಳಗಿನ ಅಸಹನೀಯ ಬೇಗೆಗಿಂತ ಹೊರಗಿನ ಶಾಂತ ಪರಿಸರ ಈ ಮಗುವಿಗೆ ಸಹ್ಯವಾಯಿತು, ಪ್ರಿಯವಾಯಿತು ಕೂಡ.

ಆಲ್ಬರ್ಟ್ ಎಂದೂ ಅವಿಧೇಯನಾಗಿರಲಿಲ್ಲ. ಆದರೆ ಯಾವುದೇ ಪ್ರಶ್ನೆಯನ್ನು ಅರ್ಥಮಾಡಿಕೊಂಡು ಅದಕ್ಕೆ ಸಮರ್ಪಕ ಉತ್ತರವನ್ನು ಮನಸ್ಸಿನಲ್ಲಿ ರೂಪಿಸಿಕೊಂಡು ಯೋಗ್ಯ ಭಾಷೆಯಲ್ಲಿ ಹೇಳಲು ಇವನಿಗೆ ಕಾಲಾವಕಾಶ ಬೇಕಾಗುತ್ತಿತ್ತು. ತಮ್ಮ ಬಾಲ್ಯ ವಿದ್ಯಾಭ್ಯಾಸದ ಬಗ್ಗೆ ೧೯೪೭ರಲ್ಲಿ ಪ್ರಸ್ತಾಪಿಸುತ್ತ ಐನಸ್ಟೈನ್ ಹೀಗೆ ಬರೆದರು "ವಿದ್ಯಾರ್ಥಿಯಾಗಿ ನಾನು ವಿಶೇಷ ಮುಂದೆಯೂ ಇರಲಿಲ್ಲ, ಹಿಂದೆಯೂ ಇರಲಿಲ್ಲ. ನನ್ನ ಪ್ರಧಾನ ದೌರ್ಬಲ್ಯವಿದ್ದದ್ದು ಸ್ಮರಣಸಾಮರ್ಥ್ಯದಲ್ಲಿ, ಅದೂ ಪದಗಳನ್ನು ಹಾಗೂ ಪಠ್ಯಗಳನ್ನು ಕುರಿತಂತೆ... ಸ್ವಾಧ್ಯಾಯದಿಂದಲೇ ನಾನು ಕಲಿತೆ."

ಶಾಲೆಯ ಪಾಠಪ್ರವಚನ ಇವನಿಗೆ ಸುತರಾಂ ಒಡಿಸಲಿಲ್ಲ. ಪಟಾಲಮ್ಮಿನ ದೈಹಿಕ ಕವಾಯತಿಗೂ ತರಗತಿಯ ಮಾನಸಿಕ ದೊಂಬರಾಟಕ್ಕೂ ನಿಕಟ ಸಾಮ್ಯವಿದೆ, ಎರಡರ ತಳಹದಿಯೂ ಕ್ರೌರ್ಯಸಹಿತವಾದ ಶಿಸ್ತು ಎಂಬುದಾಗಿ ಇವನು ಭಾವಿಸಿದ್ದ. ಮನೆಯ ಮುಕ್ತ ವಾತಾವರಣ ಮತ್ತು ನಿಸರ್ಗದ ಸ್ವಾತಂತ್ರ್ಯ, ಆದರೂ ಕ್ರಮಬದ್ಧ ವರ್ತನೆ ಈ ತರಹದ ನೀರಸ ಶಿಸ್ತಿನಿಂದ ಬಂಧಿತವಾಗಿಲ್ಲ ಎಂದೂ ಇವನಿಗೆ ಅನ್ನಿಸುತ್ತಿತ್ತು.

ಎಂಟು ವರ್ಷದ ಆಲ್ಬರ್ಟ್ ತಂದೆಯನ್ನು ಗಂಭೀರವಾಗಿ ಪ್ರಶ್ನಿಸಿದ "ನಾನೇಕೆ ಶಾಲೆಗೆ ಹೋಗಬೇಕು?"

"ಏನು? ಅಜ್ಞಾನಿಯಾಗಿ ಬಾಳಬೇಕೆಂದಿರುವೆಯಾ?"

"ಅಜ್ಞಾನಿ ಎಂದರೇನು ಅರ್ಥ?"

ಪೌಲೀನ್ ನಕ್ಕು ನುಡಿದರು "ಹರ್ಮನ್! ನೀನೆಂದೂ ಆಲ್ಬರ್ಟನನ್ನು ಪ್ರಶ್ನೆ ಕೇಳುವ ಸ್ಪರ್ಧೆಯಲ್ಲಿ ಸೋಲಿಸಲಾರೆ. ನನ್ನ ಹಾಡುಗಾರಿಕೆ ಮಾತ್ರ ಅವನನ್ನು ಸಮಾಧಾನಪಡಿಸಬಲ್ಲದು."

ಮಗುವಿನ ಮೃದು ಕೂದಲನ್ನು ತಾಯಿ ಪ್ರೀತಿಯಿಂದ ನೇವರಿಸುತ್ತ ಹಾಡತೊಡಗಿದರು. ಆದರೆ ಇವನು ಸುಮ್ಮನಾಗಲಿಲ್ಲ. ತಾಯಿಗೇ ಪ್ರಶ್ನೆ ಎಸೆದ "ಅಮ್ಮಾ! ಪ್ರಶ್ನೆ ಕೇಳುವುದು ತಪ್ಪೆ?"

"ಭಲೆ! ಪುನಃ ಅದೇ ಚಾಳಿ! ನಿನ್ನ ಹಾಡಿಗೂ ಈ ಪೋರ ಮಣಿಯಲಿಲ್ಲ" ಹರ್ಮನ್ನರ ಕೊಂಕು ನುಡಿ.

"ಮಗೂ, ಪ್ರಶ್ನೆ ಕೇಳುವುದು ಖಂಡಿತ ತಪ್ಪಲ್ಲ. ಆದರೆ ಇತರರನ್ನು ಲೇವಡಿ ಮಾಡಲು ಇಲ್ಲವೇ ಅಪಮಾನಗೊಳಿಸಲು ಮಾತ್ರ ಪ್ರಶ್ನೆ ಹಾಕಕೂಡದು."

"ನಾನೆಂದೂ ಹಾಗೆ ಮಾಡಿಲ್ಲ, ಮಾಡಲಾರೆ. ನನಗೆ ತಿಳಿಯದ್ದು ಇಷ್ಟೊಂದು ಇರುವಾಗ ಇದನ್ನೆಲ್ಲ ತಿಳಿಯಲಿಕ್ಕಾಗಿ ಮಾತ್ರ ನಾನು ಪ್ರಶ್ನೆ ಕೇಳುತ್ತೇನೆ. ತಿಳಿಯಬೇಕೆಂದು ಆಶಿಸುವುದೂ ತಪ್ಪೆ?"

"ಖಂಡಿತ ತಪ್ಪಲ್ಲ ಇಂಥ ತಿಳಿವಳಿಕೆಯನ್ನು. ನೀನು ಗಳಿಸಬೇಕೆಂದೇ ನಿನ್ನನ್ನು ಶಾಲೆಗೆ ಕಳಿಸುತ್ತಿದ್ದೇವೆ. ಆದರೆ ನೀನು ಶಾಲೆಗೇ ಹೋಗುವುದಿಲ್ಲವೆಂದು ಹಠ ಹಿಡಿದಿದ್ದೀಯ?"

"ಇಲ್ಲ. ಇಲ್ಲ ಅಲ್ಲಿ ಪ್ರಶ್ನೆ ಕೇಳಿದರೆ ಹೊಡೆಯು

ತ್ತಾರೆ, ಅಪಮಾನಿಸುತ್ತಾರೆ. ಎಂದೂ ಉತ್ತರ ಹೇಳುವುದಿಲ್ಲ. ನನಗೆ ಶಾಲೆ ಎಂದರೆ ಹೆದರಿಕೆ. ಅದೊಂದು ದೊಡ್ಡ ಉಕ್ಕಿನ ಕೋಟೆ. ಉಪಾಧ್ಯಾಯ ಅದರ ಕೊತವಾಲ." ಮಗುವಿನ ಸಾತ್ತ್ವಿಕ ರೋಷ ಉಕ್ಕೇರಿತ್ತು.

೧೮೭೦ರ ಬಿಸ್ಮಾರ್ಕನ ಜರ್ಮನಿ ಮಿಲಿಟರಿ ಪೌರುಷದ ಉತ್ಕರ್ಷಣೆ ಪರ್ವ. ಉಗ್ರ ರಾಷ್ಟ್ರೀಯತೆ ಎಲ್ಲೆಲ್ಲೂ ಪ್ರಕಟಗೊಳ್ಳುತ್ತ ಜನರನ್ನು ಒಂದಾಗಿ ಬೆಸೆಯುತ್ತಿತ್ತು. ಆ ದಿನಗಳಂದು ಮ್ಯೂನಿಕ್ ನಗರದಲ್ಲಿ ಸೈನಿಕ ತುಕ್ಕಡಿಗಳ ಸಾಮೂಹಿಕ ಕವಾಯತಿ ಮಾಮೂಲಿ ನೋಟವಾಗಿತ್ತು. ಗರಿ ಗರಿ ಸಮವಸ್ತ್ರ, ಕಣ್ಣು ಕೋರೈಸುವಂತೆ ಥಳಥಳಿಸುವ ಗುಂಡಿಗಳು, ಬಣ್ಣಬಣ್ಣದ ಪಾಗು, ಮಿರಮಿರನೆ ಮಿಂಚುವ ಬೂಟುಗಳು ಇವುಗಳಿಂದ ಅಲಂಕೃತರಾದ ಸುಟಿ ಯುವಕರು ವೀರ್ಯವತ್ತಾದ ಢೋಲು ವಾದ್ಯಗಳ ಬಜಾವಣೆಯ ತಾಳವನ್ನು ಅನುಸರಿಸುತ್ತ ಬೂಟ್ ಹಿಮ್ಮಡಿಗಳನ್ನು ನೆಲಕ್ಕೆ ಬಡಿದು ಬಡಿದು ಕೈಗಳನ್ನು ಬೀಸಿ ಬೀಸಿ ಎದೆ ಮುಂದೆ ಮಾಡಿ ಕಣ್ಣುಗಳನ್ನು ಶೂನ್ಯದಲ್ಲಿ ಕೀಲಿಸಿ ದರ್ಪಾಭಿಮಾನಪೂರಿತರಾಗಿ ನಡೆಯುತ್ತಿದ್ದ ದೃಶ್ಯ ಪ್ರಜೆಗಳ ಮನಸ್ಸಿನಲ್ಲಿ ಪಿತೃಭೂಮಿ ಜರ್ಮನಿಯ ಬಗ್ಗೆ ಹೆಮ್ಮೆ ಮೂಡಿಸುತ್ತಿತ್ತು. ಜರ್ಮನಿಯ ದೈತ್ಯ ತ್ರಾಣದ ಅಂತೆಯೇ ಉಜ್ವಲ ವೈಭವದ ದಿವ್ಯ ಪ್ರತೀಕವಾದ ಚಮೂದಳವನ್ನು ಸೇರಲಾಗದ ಹಿರಿಯರು ತಮ್ಮ ಎಳೆಯರಿಗೆ ಸೈನಿಕರ ಕವಾಯತಿಗಳನ್ನು ತೋರಿಸುತ್ತ ಹೇಗೆ ಆ ಮಕ್ಕಳು ದೊಡ್ಡವನಾದ ಬಳಿಕ ಈ ಸಂತೋಷ ಸಾಹಸದಲ್ಲಿ ಭಾಗಿಗಳಾಗಿ ಮೆರೆಯಬೇಕು ಎಂಬುದನ್ನು ಉಪದೇಶಿಸುತ್ತಿದ್ದರು. ದಂಡಿಗೆ ದಾಖಲಾಗುವುದೇ ಗಂಡುಗಳ ಹಿರಿ ಗುರಿ ಆಗಿತ್ತು. ದಾಳಿ ಹೂಡುವುದು, ಮುಲೆತು ಕಾದಾಡುವುದು, ಸೆರೆ ಹಿಡಿಯುವುದು, ಶಿಕ್ಷೆ ನೀಡುವುದು ಮೊದಲಾದ ಸೈನಿಕ ಆಟಗಳು ಮಕ್ಕಳ ಪ್ರಿಯ ಹವ್ಯಾಸಗಳಾಗಿದ್ದುವು.

ಆದರೆ ಆಲ್ಬರ್ಟ್ ಈ ಬಹುಸಂಖ್ಯಾತರಿಂದ ಬೇರೆಯವನೇ ಆಗಿದ್ದ. ಇವನು ನಗಾರಿ ಬಡಿತದ ನಾದಕ್ಕೆ ಬೆಚ್ಚಿ ಬೀಳುತ್ತಿದ್ದ, ಹಿಮ್ಮಡಿ ಹೊಡೆತದ ಪೆಟ್ಟಿಗೆ ಭಯಪಡುತ್ತಿದ್ದ. ದೊಡ್ಡವನಾದಾಗ ತಾನು ಆ ಕುರಿಗಳಂತೆ ಕಡ್ಡಾಯದ ಕಟ್ಟುಪಾಡುಗಳಿಗೆ ಒಳಪಡುವುದು ಖಂಡಿತ ಸಾಧ್ಯವಿಲ್ಲ ಎಂದು ಅಂಜಿ ಅಳುಕಿ ನುಡಿಯುತ್ತಿದ್ದ. ಶಿಸ್ತಿನ ನಡೆ, ಲಯಬದ್ಧ ಚಲನೆ ಮತ್ತು ದರ್ಪ ವರ್ತನೆ ಅನುಕರಣೀಯ ಗುಣಗಳೆಂಬ ಭಾವನೆ ಸಾಮಾನ್ಯ ಮಕ್ಕಳಲ್ಲಿ ಮೊಳೆಯುತ್ತಿದ್ದಾಗ ಇವನು ಕಂಡದ್ದು ಅವುಗಳ ಹಿಂದಿದ್ದ ಕಠಿನಾಜ್ಞೆಗಳ ಕಠೋರತೆಯನ್ನು, ಅಂತಃಕರಣರಹಿತ ಮಾನವಮನಸ್ಸಿನ ದೌಷ್ಟ್ಯವನ್ನು, ಜೀವನವನ್ನು ವೈವಿಧ್ಯರಹಿತ ನೀರಸ ಏಕತಾನತೆಗೆ ತಳ್ಳಲು ಹವಣಿಸುತ್ತಿದ್ದ ಅಂಕುಶಹೀನ ಪ್ರವೃತ್ತಿಯ ಪಾಶವೀಯತೆಯನ್ನು.

ನಿಸರ್ಗದ ನಿರಂತರ ಸಾಮೀಪ್ಯ ಇವನಲ್ಲಿ ಪರಮಾಶ್ಚರ್ಯವನ್ನು ಪ್ರೇರಿಸುತ್ತಿತ್ತು. ಹಗಲು ರಾತ್ರಿಗಳ ಎಂದೂ ಮುಗಿಯದ ಒಂದನ್ನೊಂದು ಹಿಡಿಯುವ ಆಟ, ಆಕಾಶವೈಭವವಾದ ಸೂರ್ಯನ ಸರ್ವಗ್ರಹಣ, ಸಾಮರ್ಥ್ಯ, ಇರು[illegible] ಉಡುಪತಿಯ ಬಗೆಬಗೆಯ ವರಸೆಗಳು, ನಕ್ಷತ್ರಗಳ ಚಿರಂತನ ಮೂಕಶ್ಲೋಕ, ಗಿಡಮರಗಳ ಮತ್ತು ಹಕ್ಕಿ ಹುಪ್ಪಡಿಗಳ ಮೂಲಕ ಪ್ರಕೃತಿ ಪ್ರದರ್ಶಿಸುತ್ತಿದ್ದ ಋತುಗಾನ ಇವೆಲ್ಲವೂ ಇವನ ಸುಪ್ತ ಮನಸ್ಸಿನ ಮೇಲೆ ಅಗಾಧ ಪ್ರಭಾವವನ್ನು ಬೀರುತ್ತಿದುವು. ಮನೆಯಲ್ಲಿ ಆಚರಿಸುತ್ತಿದ್ದ ಧರ್ಮಾಚರಣೆಗಳು— ಪ್ರಾರ್ಥನೆ, ಪೂಜೆ, ಅತಿಥಿಪುರಸ್ಕಾರ ಧರ್ಮಗ್ರಂಥ ಪಠನ— ನೈಸರ್ಗಿಕ ವಿದ್ಯಮಾನಗಳ ಜೊತೆ ವಿಶೇಷ ರೀತಿಯಲ್ಲಿ ಹೊಂದಿಕೊಂಡಿದ್ದುದನ್ನು ಕಂಡು ಜೀವನವೆಂಬುದು ಅಖಂಡವಾದ ಸುಂದರ ನೇಯ್ಗೆ ಎಂಬ ಭಾವದಿಂದ ಉದ್ದೀಪಿತನಾಗುತ್ತಿದ್ದ.

ಮಗನ ಈ ಮನೋಧರ್ಮ ತಿಳಿದಿದ್ದ ತಂದೆಗೆ ಇವನ ವಾದದ ಯಾಥಾರ್ಥ್ಯ ಮನವರಿಕೆ ಆಗಿತ್ತು. "ಜರ್ಮನಿಯ ನೈಜ ಸಂಸ್ಕೃತಿಗೆ ಜಂಗು ಹಿಡಿದಿದೆ" ಎಂಬುದಾಗಿ ಹರ್ಮನ್ ಪರಿತಪಿಸುತ್ತಿದ್ದರು. ಪ್ರಚಲಿತ ಕಾನೂನು ಕಠಿನವಾಗಿತ್ತು: ಮಕ್ಕಳು ಶಾಲೆಯ 'ಗಿರಣಿ' ಮೂಲಕ ಹಾಯಲೇಬೇಕಾಗಿತ್ತು.

"ಆಲ್ಬರ್ಟ್! ನೀನು ದೊಡ್ಡವನಾಗಿ ಹೊಟ್ಟೆ ಹಿಡಿದು ಬದುಕಬೇಕು. ಶಾಲೆಯ ಡಿಪ್ಲೊಮವಿಲ್ಲದೆ ಹುದ್ದೆ ದೊರೆಯದು. ಸುಧಾರಿಸಿಕೊಂಡು ಹೋಗು." ತಂದೆಯ ಮಾತು ಗಂಭೀರವಾಗಿತ್ತು, ಕರುಣಾಮಯವಾಗಿತ್ತು. ಮಗು ಪ್ರಶ್ನೆಗೆ ಇಂಬು ಕೊಡು

ವಂತಿರಲಿಲ್ಲ.

"ಅಪ್ಪಾ! ಇನ್ನು ಮುಂದೆಂದೂ ನಾನು ಶಾಲೆಯನ್ನು ದೂರುವುದಿಲ್ಲ. ಶಾಲೆಯಲ್ಲಿ ಹೊಂದಿಕೊಂಡು ಹೋಗಲು ಸಾಧ್ಯವಿರುವಷ್ಟೂ ಪ್ರಯತ್ನಪಡುತ್ತೇನೆ."

ಇಷ್ಟಾಗುವಾಗ ಚಿಕ್ಕಪ್ಪ ಜೇಕಬ್ ಅಲ್ಲಿಗೆ ಬಂದರು. ಇಡೀ ರಾದ್ಧಾಂತದ ವರದಿಯನ್ನು ಅವರಿಗೆ ಒಪ್ಪಿಸಿದ್ದಾಯಿತು. ಅವರೆಂದರು: "ಆಲ್ಬರ್ಟ್! ನಿನಗೆ ಪ್ರಿಯವಾದ ಕೆಲಸವನ್ನೇ ನೀನು ಮಾಡಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಬದುಕಿನಲ್ಲಿ ಯಾವಾಗಲೂ ಇಂಥ ಸುಸಂದರ್ಭವೇ ಒದಗುವುದಿಲ್ಲ. ಅಪ್ರಿಯವಾದ ಕೆಲಸಗಳಲ್ಲೂ ಸಂತೋಷ ತಳೆಯುವ ಗುಣ ಬೆಳೆಸಿಕೊಳ್ಳಬೇಕು. ನೀನು ಶಾಲೆಗೆ ಹೋಗು."

"ನಾನು ಶಾಲೆಯನ್ನು ದ್ವೇಷಿಸುತ್ತೇನೆ."

"ಆ ಪದವನ್ನು ನೀನು ಬಳಸಬಾರದು. ಪ್ರಪಂಚದಲ್ಲಿ ಸಾಕಷ್ಟು ದ್ವೇಷಾಸೂಯೆ ಇವೆ. ಆದ್ದರಿಂದ ಶಾಲೆಯನ್ನು ನೀನು ಪ್ರತ್ಯೇಕವಾಗಿ ದ್ವೇಷಿಸಬೇಕಾಗಿಲ್ಲ. ಅದಿರಲಿ. ನೀನು ಯಾವ ವಿಷಯವನ್ನು ತೀವ್ರವಾಗಿ 'ದ್ವೇಷಿಸುವೆ' ಹೇಳು ನೋಡೋಣ."

ಹುಡುಗ ಕ್ಷಣಕಾಲ ಯೋಚಿಸಿದ, "ನಾನು ಹೆಚ್ಚು ದ್ವೇಷಿಸುವುದು ಬೀಜಗಣಿತವನ್ನೋ ಜ್ಯಾಮಿತಿಯನ್ನೋ ಎಂದು ಖಚಿತವಾಗಿ ನಿರ್ಧರಿಸಲಾರೆ. ಇವೆರಡರ ಬಗ್ಗೆಯೂ ನನಗೆ ಒಂದೇ ತೆರನಾದ ತಿರಸ್ಕಾರವಿದೆ."

"ಇಷ್ಟೆ ತಾನೆ! ಈ ವಿಷಯಗಳಂಥ ಮೊದ್ದು ಗಣಿತವಿಭಾಗಗಳು ಬೇರೊಂದಿಲ್ಲ. ಇವನ್ನು ನೀನು ತಿರಸ್ಕರಿಸುವುದುಂಟೆ? ಚೆನ್ನಾಯಿತು. ನೀನೆಂದಾದರೂ ಕಳ್ಳ-ಕೊತವಾಲ ಆಟ ಅಥವಾ ಆ ತರಹದ ಆಟ ಆಡಿದ್ದುಂಟಲ್ಲ?"

"ಉಂಟು."

"ಈಗ ನಾನೊಂದು ಬದಲಾವಣೆ ಸೂಚಿಸುತ್ತೇನೆ. ನೀನೊಬ್ಬ ಪತ್ತೇದಾರಿ. ನೀನು ತುಬ್ಬು ಮಾಡಬೇಕಾಗಿರುವುದು ನಿನಗೆ ಗೊತ್ತಿಲ್ಲದ ಒಬ್ಬ ಕಳ್ಳನನ್ನು. ಅವನನ್ನು x ಎಂದು ಕರೆಯೋಣ. ಕಳ್ಳನ ಬಗ್ಗೆ ತಿಳಿದಿರುವ ಎಲ್ಲ ಮಾಹಿತಿಗಳನ್ನು – ಕಳ್ಳತನ ಎಷ್ಟು ಹೊತ್ತಿಗಾಯಿತು, ಏನೇನು ಸಾಮಾನುಗಳು ಕಳವಾಗಿವೆ, ಕಳ್ಳನ ಬೆರಳಚ್ಚು ಹೇಗಿದೆ ಮುಂತಾದವನ್ನು — x ನ ಮೇಲೆ ಹಚ್ಚು. ಆಗ

ನಿನಗೊಂದು ಸಮೀಕರಣವೋ ಜ್ಯಾಮಿತೀಯ ಚಿತ್ರವೋ ದೊರೆಯುತ್ತದೆ. ಮುಂದಿನ ಹಾದಿಯನ್ನು ಅದೇ ನಿನಗೆ ಕಾಣಿಸುತ್ತದೆ, ಕೈಹಿಡಿದು ನಡೆಸಿಕೊಂಡು ಹೋಗಿ x ನನ್ನು ನಿನಗೊಪ್ಪಿಸುತ್ತದೆ. ಈಗ ಹೇಳು, ಬೀಜಗಣಿತವಾಗಲಿ ಜ್ಯಾಮಿತಿಯಾಗಲಿ ನಿನಗೇಕೆ ಅಪ್ರಿಯವಾಗಬೇಕು?"

ಜೇಕಬ್ ಬೀಜಗಣಿತದ 'ಹಿಕಮತ್ತ'ನ್ನು ಅಥವಾ ಬೀಜಮಂತ್ರವನ್ನು ತಸ್ಕರ ಶೋಧನೆಗೆ ಹೋಲಿಸಿ ವಿವರಿಸಿದ್ದೆ ತಡ ಆಲ್ಬರ್ಟನ ಮುಂದೆ ಸ್ವಯಂ–ಪ್ರಭೆಯ ಮಾಯಾಲೋಕ ಅನಾವರಣಗೊಂಡಂತಾಯಿತು. ಮುಂದಿನ ದಿನಗಳಲ್ಲಿ ಈ ತರುಣ 'ಪತ್ತೆದಾರಿ' ಸ್ವಚ್ಛಂದವಾಗಿಯೂ ನಿರಾತಂಕವಾಗಿಯೂ ಗಣಿತ ಮತ್ತು ಭೌತವಿಜ್ಞಾನ ಕ್ಷೇತ್ರಗಳಲ್ಲಿ ವಿಹರಿಸಬಲ್ಲವನಾದ. ಉಪಾಧ್ಯಾಯರಿಂದ ದಡ್ಡನೆಂದು ತಿರಸ್ಕರಿಸಲ್ಪಟ್ಟಿದ್ದ ಹುಡುಗ ಅತ್ಯಂತ ಕಠಿನ ವಿಷಯಗಳಲ್ಲಿ ತರಗತಿಗೇ ಒಂದನೆಯವನಾದ.

ನಿರಂಕುಶಮತಿ

ಗಾನಪ್ರಿಯರಾದ ಹರ್ಮನ್ ಮತ್ತು ಪೌಲೀನ್ ತಮ್ಮ ಮಗನಿಗೆ ಪಿಟೀಲು ಪಾಠ ಹೇಳಿಸಿದರು. ಆದರೆ ಆಲ್ಬರ್ಟನಿಗೆ ದೊರೆತ ಶಿಕ್ಷಕ ಎಂಥವನು? ಅವನ ಸಿಗಾ ಪಿಟೀಲಿನ ತಂತ್ರದ ಕಡೆಗೆ ಹೆಚ್ಚು, ಕಲೆಯ ಕಡೆಗೆ ಕಡಿಮೆ. ಇಲ್ಲಿಯೂ ಆಲ್ಬರ್ಟನ ನಿರ್ಮಲ ಬುದ್ಧಿ ಗುರುತಿಸಿದ್ದು ವಿಲಂಬಿಪ್ರಧಾನವನ್ನೇ ವಿನಾ ಕಲಾವಿಹಾರವನ್ನಲ್ಲ. ಆರು ವರ್ಷದ ಅಣುಗ ಬಲವಂತಿಕೆಯ ಈ ಮಾಘಸ್ನಾನವನ್ನು ವಿರೋಧಿಸಿದ. ಅಂತೂ ಅವನ ಕಮಾನಿನ ಎಳೆತ ಮತ್ತು ಬೆಟ್ಟುಗಳ ಮಿಡಿತ ಕುಂಟುತ್ತ ಪರಡುತ್ತ ತೆವಳಿದುವು. ಪ್ರಾಯ ಹದಿಮೂರು ತುಂಬಿದಾಗ ಇವನೆದುರು ಮೊರ್ಝಾರ್ಟನ ವಿಖ್ಯಾತ ಸೊನಾಟಗಳು(ಮೂರು ಅಥವಾ ನಾಲ್ಕು ಗತಿಗಳಲ್ಲಿ ಮುಖ್ಯತಃ ಪಿಯಾನೊ ವಾದ್ಯಕ್ಕಾಗಿ ರಚಿಸಿದ ಪಾಶ್ಚಾತ್ಯ ಸಂಗೀತ ಕೃತಿಗಳು) ಪ್ರತ್ಯಕ್ಷವಾದುವು. ಈ ಪಾರಲೌಕಿಕ ಕಲಾವಂತಿಕೆ ಇವನ ಚೇತನವನ್ನು ಸೂರೆಗೊಂಡಿತು. ಆದರೆ ಮನದಲ್ಲಿ ಸ್ಫುರಿಸುತ್ತಿದ್ದ ಭಾವ ಪಿಟೀಲಿನ ಮಾಧ್ಯಮಕ್ಕೆ ಇಳಿದು ರಸವಾಗಿ ಹರಿಯುತ್ತಿರಲಿಲ್ಲ — ಇವನ ವಾದನ ತಂತ್ರಸಿದ್ಧಿ ತೀರ ಕಡಿಮೆ. ಒಮ್ಮೆ ಗುರಿ ಹೊಳೆಯಿತೋ ಮತ್ತೆ ಹಾದಿ ಹುಡುಕುವುದು ಇವನಿಗೆ ಬಲು ಸಲೀಸು. ಅಧಿಕೋತ್ಸಾಹದಿಂದ ಸ್ವಂತ ಪ್ರಯತ್ನವನ್ನು ಪ್ರಯೋಗಿಸಿದ. ಪಿಟೀಲುವಾದನ ಇವನ ಬದುಕಿನ ಅಖಂಡ ಭಾಗವಾಗಿ ವಿಕಾಸಗೊಂಡಿತು. ಹವ್ಯಾಸಿವಾದನಕಾರನಾಗಿ ಶ್ರೇಷ್ಠ ಗುಣಮಟ್ಟ ಐದಿದ. ಸ್ವಂತ ಸುಖವೇ ಮುಖ್ಯ ಗುರಿ.

ಬಾಲ್ಯದ ಈ ಅನುಭವವನ್ನು ಕುರಿತಂತೆ ಪ್ರೌಢ ಐನ್‌ಸ್ಟೈನರ ಮಾತುಗಳಿವು "ಆರನೆಯ ವಯಸ್ಸಿನಿಂದ ಹದಿನಾಲ್ಕರ ತನಕ ನಾನು ಪಿಟೀಲು ಪಾಠ ಹೇಳಿಸಿಕೊಂಡೆ. ಆದರೆ ಯಾಂತ್ರಿಕ ವರಿಸೆಗಳನ್ನು ಮೀರಿ ನಿಂತಿರುವ ಸಂಗೀತ ತಿಳಿದಿರದಿದ್ದ ಶಿಕ್ಷಕರ ಜೊತೆ ನನ್ನ ಅದೃಷ್ಟ ಕುದುರಲಿಲ್ಲ. ನಾನು ಕಲಿಯಲು ನಿಜವಾಗಿ ತೊಡಗಿದ್ದು ಸುಮಾರು ಹದಿಮೂರು ವರ್ಷ ವಯಸ್ಸಿನವನಾದಾಗ ಮಾತ್ರ. ಅದೂ ಮೊರ್ಝಾರ್ಟನ ಸೊನಾಟಗಳ ಬಗ್ಗೆ ಪ್ರೇಮಾದರ ತಳೆದ ಮೇಲೆಯೇ. ಅವುಗಳ ಕಲಾತ್ಮಕತೆಯನ್ನೂ ವಿಶಿಷ್ಟ ನಯವನ್ನೂ ಪುನರುತ್ಪಾದಿಸಲು ಮಾಡಿದ ಪ್ರಯತ್ನ ನನ್ನ ತಂತ್ರವನ್ನು ಸುಧಾರಿಸಿಕೊಳ್ಳಲು ನನ್ನನ್ನು ಒತ್ತಾಯಿಸಿತು. ವ್ಯವಸ್ಥಿತವಾಗಿ ಅಭ್ಯಾಸ ಮಾಡದೆಯೂ ನಾನು ಈ ಸುಧಾರಣೆಯನ್ನು ಸೊನಾಟಗಳಿಂದ ಪಡೆದುಕೊಂಡೆ. ಒಟ್ಟಾರೆ ಹೇಳುವುದಾದರೆ ಕರ್ತವ್ಯಪ್ರಜ್ಞೆಗಿಂತ ಒಲವೇ ಹೆಚ್ಚು ಲೇಸಾದ ಗುರುವೆಂದು ನಂಬಿದ್ದೇನೆ. ಕನಿಷ್ಠ ಪಕ್ಷ ನನ್ನ ಮಟ್ಟಿಗಂತೂ ಇದು ಪೂರ್ಣ ನಿಜವಾಗಿತ್ತು."

ಪ್ರಾಕೃತಿಕ ವಿಜ್ಞಾನ – ಅಂದರೆ ಪ್ರಕೃತಿಯ ವಿದ್ಯಮಾನಗಳನ್ನು ಕುರಿತು ಅಧ್ಯಯನ. ಉದಾಹರಣೆಗೆ ಖಗೋಳವಿಜ್ಞಾನ, ಭೌತವಿಜ್ಞಾನ ಇತ್ಯಾದಿ — ಇವನಿಗೆ ಪ್ರೀತಿಯ ವಿಷಯ. ಸ್ನೇಹಿತರಿಂದ ದೊರೆತ ಜನಪ್ರಿಯ ವಿಜ್ಞಾನ ಪುಸ್ತಕಗಳನ್ನು ಇವನು ಬಕಗೇಡಿ ಅಶನವನ್ನು ಕಬಳಿಸುವ ಆತುರತೆಯಿಂದ ಓದಿ ಅರಗಿಸಿಕೊಂಡ. ನಿಸರ್ಗದ ಘಟನೆಗಳ [illegible] ಕಾರ್ಯಕಾರಣ ಸಂಬಂಧ ನೀಡಿ ವಿವರಿಸುತ್ತಿದ್ದ ಈ ಪುಸ್ತಕಗಳು ಇವನ ಚಿಂತನೆಯನ್ನು ಹರಿತಗೊಳಿಸಿದುವು. ಪರಿಣಾಮವಾಗಿ ಧಾರ್ಮಿಕ ನಂಬಿಕೆಗಳ ಬಂಡ ಕುಸಿ

ಯಿತು. ಬೈಬಲ್ಲಿನಲ್ಲಿ ವರ್ಣಿತವಾಗಿರುವ ಪ್ರಪಂಚ ಮತ್ತು ಅದರ ನಡವಳಿಕೆಗಿಂತ ವಾಸ್ತವ ಪ್ರಪಂಚ ಮತ್ತು ಅದರ ನಡವಳಿಕೆ ತೀರ ಬೇರೆಯೇ ಆಗಿದ್ದುವು. ಕಾಣುವ ಈ ಲೋಕದ ಮುಂದೆ ಕಾಣದ ಆ ಲೋಕ ಕಟ್ಟುಕತೆ ಎನ್ನಿಸಿತು. ಧರ್ಮಗ್ರಂಥದಲ್ಲಿ ಉಕ್ತವಾಗಿರುವ ಸಂಗತಿಗಳನ್ನು ಸಂದೇಹ, ಪ್ರಶ್ನೆ ಎತ್ತದೆ ಅಂಧಶ್ರದ್ಧೆಯಿಂದ ಒಪ್ಪಿಕೊಳ್ಳಬೇಕೆ ಬೇಡವೆ ಎಂಬ ಮಾನಸಿಕ ತುಮುಲದಿಂದ ಆಲ್ಬರ್ಟ್ ಜರ್ಝರಿತನಾದ. ಪ್ರಭುಶಕ್ತಿ ಅಥವಾ ಅಧಿಕಾರ ಅದು ಧಾರ್ಮಿಕ ಛಾಯೆಯದೇ ಆಗಿರಲಿ, ರಾಜಕೀಯ ಸ್ವರೂಪದ್ದೇ ಆಗಿರಲಿ, ಬೇರೆ ಯಾವುದೇ ಬಗೆಯದಾಗಿರಲಿ — ಈತನಲ್ಲಿ ತಿರಸ್ಕಾರ ಅಸಹನೆಗಳನ್ನು ಪ್ರೇರಿಸುತ್ತಿತ್ತು.

ಮುಂದೊಂದು ದಿವಸ ಐನ್‌ಸ್ಟೈನರನ್ನು "ವಿಜ್ಞಾನರಂಗದ ನಿರ್ವಿವಾದ ಪ್ರಭು" ಎಂಬುದಾಗಿ ವರ್ಣಿಸಿದಾಗ ಇವರು ಕೊಟ್ಟ ಉತ್ತರ ಮಾರ್ಮಿಕವಾಗಿದೆ: "ಪ್ರಭುಶಕ್ತಿಯ ಬಗ್ಗೆ ನನಗಿರುವ ತಿರಸ್ಕಾರಕ್ಕಾಗಿ ನನ್ನನ್ನು ಶಿಕ್ಷಿಸಲೆಂದೇ ವಿಧಿ ಬಿದ್ದು ನನ್ನನ್ನೇ ಒಬ್ಬ 'ಪ್ರಭು'ವಾಗಿ ಮಾಡಿದೆ!" ಇವರ ಮನಸ್ಸು ಎಳವೆಯಿಂದಲೇ ಸಕಲ ವಿಧದ ಅಂಕುಶಗಳನ್ನೂ ದ್ವೇಷಿಸುತ್ತಿತ್ತು. ಇಂಥ ನಿರಂಕುಶಮತಿ ಇವರದಲ್ಲವಾಗಿದ್ದರೆ ಇವರೆಂದೂ ವಿಜ್ಞಾನಪ್ರಪಂಚದಲ್ಲಿ ತರ್ಕಾಂಕುಶಾತೀತ ಔನ್ನತ್ಯಗಳನ್ನು ಏರಿ ವಿಶಾಲ ವಿಶ್ವ ನೋಡಿ ವಿವರಿಸುವುದು ಸಾಧ್ಯವಾಗುತ್ತಿರಲಿಲ್ಲ.

ಆಲ್ಬರ್ಟನ ಧಾರ್ಮಿಕ ಶ್ರದ್ಧೆಯ ಬುಡ ಅಲ್ಲಾಡಿದ ತರುಣದಲ್ಲಿ ಉತ್ಕೃಷ್ಟ ಜ್ಯಾಮಿತಿ ಗ್ರಂಥವೊಂದು ಇವನಿಗೆ ದೊರೆಯಿತು. ಯೂಕ್ಲಿಡ್ಡನ ಜ್ಯಾಮಿತಿ ಎಂಬುದಾಗಿ ಸುಪರಿಚಿತವಾಗಿರುವ ಈ ಗಣಿತ ವಿಭಾಗ ಬಿಂದು, ಸರಳರೇಖೆ, ವಕ್ರರೇಖೆ, ಸಮತಲಾಕೃತಿಗಳು, ಮೂರು ಆಯಾಮಗಳಲ್ಲಿನ ವಿವಿಧ ಘನಾಕೃತಿಗಳು ಮುಂತಾದವುಗಳ — ಅಂದರೆ ನಮ್ಮ ಇಂದ್ರಿಯಗಮ್ಯ ಪ್ರಪಂಚದ — ಗಣಿತೀಯ ಗುಣಲಕ್ಷಣಗಳನ್ನು ಸ್ಪಷ್ಟವಾಗಿಯೂ ತಾರ್ಕಿಕವಾಗಿಯೂ ವಿವರಿಸಿ ರುಜುವಾತಿಸುತ್ತದೆ. ಪರಮಾತ್ಮ ಶ್ರೇಷ್ಠ ಕಲಾವಿದ, ಅವನ ಪರಮೋತ್ಕೃಷ್ಟ ಕಲಾಕೃತಿ ಜ್ಯಾಮಿತಿ, ಇದರ ಪ್ರಕಟಿತ ರೂಪವೇ ವಿಶ್ವ ... ಪ್ರಾಚೀನ ಹೇಳಿಕೆ ಉಂಟು. ಸಹಜವಾಗಿ ಈ ಜ್ಯಾಮಿತಿಯ ಅಮೂರ್ತ ಸೌಂದರ್ಯ ಆಲ್ಬರ್ಟನ ವರ್ಣರಂಜಿತ ಮನಸ್ಸಿಗೆ ಅಪ್ಯಾಯಮಾನವಾಯಿತು.

ಹಲವಾರು ದಶಕಗಳ ತರುವಾಯ, ಐನ್‌ಸ್ಟೈನ್ ಮಹಾಪ್ರಸ್ತಾರರೆಂಬುದಾಗಿ ಖ್ಯಾತಿವಂತರಾಗಿದ್ದಾಗ, ಅವರನ್ನೊಂದು ಪ್ರಶ್ನೆ ಕೇಳಲಾಯಿತು: "ನಿಮ್ಮ ವಿಜ್ಞಾನ ಪ್ರತಿಭೆ ತಂದೆ ಕಡೆಯಿಂದಲೂ ಸಂಗೀತಪ್ರತಿಭೆ ತಾಯಿ ಕಡೆಯಿಂದಲೂ ಆನುವಂಶಿಕವಾಗಿ ಬಳುವಳಿ ಬಂದವಾಗಿರಬಹುದೇ?"

ಅವರ ಉತ್ತರ ನೇರವಾಗಿತ್ತು, ಪಾರದರ್ಶಕವಾಗಿತ್ತು "ನನಗೆ ಯಾವ ವಿಶೇಷ ಪ್ರತಿಭೆಯೂ ಇಲ್ಲ. ನಾನು ತೀವ್ರ ಕುತೂಹಲಿ ಆಗಿದ್ದೇನೆ ಮಾತ್ರ. ಎಂದೇ ಇದು ಆನುವಂಶಿಕತೆಯ ಪ್ರಶ್ನೆ ಅಲ್ಲ."

ಆ ಪ್ರಶ್ನೆಯಲ್ಲೇ ಒಂದು ದೋಷ ನುಸುಳಿತ್ತು: ಐನ್‌ಸ್ಟೈನರ ವಿಜ್ಞಾನಪ್ರತಿಭೆಯನ್ನು (ಇದು ನಿಸ್ಸಂಶಯವಾಗಿಯೂ ಪರಮೋಚ್ಚ ಮಟ್ಟದ್ದಾಗಿತ್ತು) ಸಂಗೀತಪ್ರತಿಭೆಗೆ (ಇದೆಂದೂ ಶ್ರೇಷ್ಠ ವೃತ್ತಿಕಲಾವಿದರ ಪ್ರತಿಭೆಯ ಮಟ್ಟಕ್ಕೆ ಏರಿರಲಿಲ್ಲ) ಸಮೀಕರಿಸಿದ್ದು. ವಿಜ್ಞಾನರಂಗದಲ್ಲಿ ಐನ್‌ಸ್ಟೈನರ ವೈಶಿಷ್ಟ್ಯವೇನು? ಬನೇಶ್ ಹಾಫ್‌ಮನ್ (ಇವರು ಐನ್‌ಸ್ಟೈನರೊಡನೆ ಪ್ರಿನ್ಸ್‌ಟನ್ನಿನಲ್ಲಿ ಸಂಶೋಧನೆ ನಡೆಸಿದ್ದರು, ೧೯೩೭) ಹೇಳುತ್ತಾರೆ "ಯಾವ ಒಂದು ಗುಣದ ಗೈರುಹಾಜರಿಯಿಂದ ಅತ್ಯಂತ ತೀವ್ರವಾದ ಕುತೂಹಲವೂ ಬರಿದೆ ಬರಡು ಎನ್ನಿಸುತ್ತದೋ ಆ ಮಾಂತ್ರಿಕ ಸ್ಪರ್ಶ ಇವರಿಗೆ ಮಾತ್ರ ವಿಶಿಷ್ಟವಾಗಿತ್ತು: ಅಧಿಕತರ ಸಾಮರ್ಥ್ಯವಿರುವ ಸಾಧಾರಣ ವ್ಯಕ್ತಿಗಳ ಭೂರಿಸಂತೆಯಿಂದ ಮಹಾಪ್ರತಿಭಾವಂತರನ್ನು ಪ್ರತ್ಯೇಕಿಸಿ ಕಾಣಿಸುವ ತರ್ಕಾತೀತ ಸತ್ಯಭೂಯಿಷ್ಠ ಮಾಂತ್ರಿಕತೆ ಇವರ ಸೊತ್ತಾಗಿತ್ತು."

ಐನ್‌ಸ್ಟೈನರ ಚಿಂತನ ವಿಧಾನ ಹೇಗಿತ್ತು? ಈ ಪ್ರಶ್ನೆಗೆ ಹಾಫ್‌ಮನ್ ಸ್ವಂತಾನುಭವ ಮತ್ತು ಸಮೀಪದರ್ಶನದಿಂದ ನೀಡಿರುವ ಉತ್ತರ "ಇವರ ಏಕಾಗ್ರತೆಯ ತೀವ್ರತೆ ಹಾಗೂ ಗಭೀರತೆ ಪರಮಾದ್ಭುತ. ಜಗ್ಗದ ಜಿಗುಟು ಸಮಸ್ಯೆಯೊಡನೆ ಕಾದಾಡುತ್ತಿರುವಾಗ ಇವರು ಅದನ್ನು ಹಿಂಸ್ರಪಶು ತನ್ನ ಎರೆಯನ್ನು ಗೋಳುಹುಯ್ದುಕೊಳ್ಳುವಂತೆ ಪೀಡಿಸುತ್ತಿದ್ದರು. ತೋರಿಕೆಗೆ ಅಡ್ಡವಾಯು

ಲಾಗದಂಥ ಅಡಚಣೆ ಪದೇಪದೇ ನಮಗೆದುರಾಗುತ್ತಿತ್ತು (ಹಾಫ್‌ಮನ್ ಮತ್ತು ಇನ್‌ಫೆಲ್ಡ್ ಎಂಬ ಇಬ್ಬರು ಸಹಾಯಕರು). ಆಗ ಇವರು ಎದ್ದು ನಿಂತು ಹೊಗೆ ಕೊಳವೆಯನ್ನು (ಪೈಪ್) ಮೇಜಿನ ಮೇಲಿಟ್ಟು ತಮ್ಮ ವಿಚಿತ್ರವಾದ ಇಂಗ್ಲಿಷಿನಲ್ಲಿ, 'I will a little tink' (ಯೋಚಿಸುತ್ತೇನೆ ಕೊಂಚ ನಾನು) ಎನ್ನುವರು. ತರುವಾಯ, ನರೆಯುತ್ತಿದ್ದ ತಮ್ಮ ನೀಳ ಕೂದಲಿನ ಒಂದು ಕುರುಳನ್ನು ತೋರುಬೆರಳಿನಿಂದ ಸುರುಳಿ ಸುತ್ತುತ್ತ ಕೆಳಗೆ ಮೇಲೆ ಶತಪಥ ಕಾಲಿಡುವರು. ಕನಸಿನಾಳದ ದೂರ ನೆಟ್ಟ ಆದರೂ ಒಳತಿರುಗಿದ ನೋಟ ಇವರ ವದನದ ಮೇಲೆ ಸುಳಿಯುತ್ತದೆ. ಅಲ್ಲಿ ಏಕಾಗ್ರತೆಯ ಸುಳುಹಿಲ್ಲ, ಹುಬ್ಬುಗಂಟಿಕ್ಕಿ ಚರ್ಮ ನೆರಿಗಟ್ಟಿರುವುದಿಲ್ಲ. ಚಿರಶಾಂತ ಆಂತರಿಕ ತಾದಾತ್ಮ್ಯಭಾವ ಮಾತ್ರ. ನಿಮಿಷಗಳು ಸರಿಯುತ್ತವೆ. ಐನ್‌ಸ್ಟೈನ್ ಕಾಲಿಡುವುದನ್ನು ಒಮ್ಮೆಗೆ ನಿಲ್ಲಿಸುವರು. ಅದೇ ವೇಳೆ ಅವರ ಮುಖ ಹೂನಗೆಯಿಂದ ಅರಳಿರುತ್ತದೆ. ಸಮಸ್ಯೆಗೆ ಅವರು ಪರಿಹಾರ ಪತ್ತೆ ಹಚ್ಚಿದ್ದಾರೆ ಎನ್ನುವುದರ ಕುರುಹು ಇದು. ಕೆಲವೊಮ್ಮೆ ಈ ಪರಿಹಾರ ಎಷ್ಟು ಸರಳವಾಗಿರುತ್ತಿತ್ತೆಂದರೆ ನಾವೇ ಇದನ್ನು ಯೋಚಿಸಲಾಗದಿದ್ದುದಕ್ಕಾಗಿ ಇನ್‌ಫೆಲ್ಡ್ ಮತ್ತು ನಾನು ತಲೆತಲೆ ಚಚ್ಚಿಕೊಳ್ಳುತ್ತಿದ್ದೆವು. ಆದರೆ ಐನ್‌ಸ್ಟೈನರ ಮನದಾಳದಲ್ಲಿ, ನಮಗೆ ಮುಟ್ಟಲಾಗದ ಅಳೆಯಲಾಗದ ಒಂದು ಪ್ರಕ್ರಿಯೆಯಿಂದ, ಈ ಮೋಡಿ ನಡೆದು ಹೋಗಿರುತ್ತಿತ್ತು."

ಅನಾಥ ಪಕ್ಷಿ

ಜರ್ಮನಿಯಲ್ಲಿ ಲಷ್ಕರಶಾಹಿಯ ಪರಿಣಾಮವಾಗಿ ರಾಷ್ಟ್ರೀಯತೆಯೂ 'ಅಧಿಕಾರಮತ್ತೆ'ಯೂ ಉಲ್ಬಣಿಸುತ್ತಿದ್ದುವು. ಉಪೋತ್ಪನ್ನವಾಗಿ ಯೆಹೂದ್ಯದ್ವೇಷ ಗುಪ್ತಗಾಮಿಯಾಗಿ ಬುಸುಗುಟ್ಟುತ್ತಿತ್ತು. ಭೋಳೆ ಸ್ವಭಾವದವರೂ ಯೆಹೂದ್ಯಮತದವರೂ ಆಗಿದ್ದ ಐನ್‌ಸ್ಟೈನ್ ಸಹೋದರರಿಗೆ ಉಸಿರು ಕಟ್ಟಿಸುವ ಈ ಹವೆಯಲ್ಲಿ ತಮ್ಮ ವ್ಯವಹಾರವನ್ನು ಲಾಭದಾಯಕವಾಗಿ ನಿರ್ವಹಿಸುವುದು ಸಾಧ್ಯವಾಗಲಿಲ್ಲ. ಮ್ಯೂನಿಕ್ ನಿಂದ ವಲಸೆ ಹೋದರು (೧೮೯೪). ಹೀಗಾಗಿ ಅವರು ಇಟಲಿ ದೇಶದ ಮಿಲಾನ್ ನಗರಕ್ಕೆ ವಲಸೆ ಹೋಗಿ ತಮ್ಮ ವ್ಯಾಪಾರ ಉದ್ಯಮವನ್ನು ಅಲ್ಲಿ ಪ್ರಾರಂಭಿಸಿದರು.

ಆಗ್ಗೆ ಹದಿನೈದರ ಹುಡುಗ ಆಲ್ಬರ್ಟ್ ಏಕಾಂಗಿಯಾಗಿ ಮ್ಯೂನಿಕ್ಕಿನಲ್ಲಿ ಉಳಿದಿದ್ದು ವಿದ್ಯಾಭ್ಯಾಸವನ್ನು ಮುಂದುವರಿಸಬೇಕಾಗಿತ್ತು. ಸದಾ ಅಂತರ್ಮುಖಿಯಾಗಿದ್ದ ಈ ಬಾಲಕನ ಸಹಪಾಠಿಗಳಿಗಾಗಲಿ ಅಧ್ಯಾಪಕರಿಗಾಗಲಿ ಅರ್ಥವಾಗದ ಒಗಟಾಗಿತ್ತು. ಈತ ಗಣಿತ ಮತ್ತು ಭೌತ ವಿಜ್ಞಾನಗಳಲ್ಲಿ ಅತಿ ಪ್ರವೀಣ. ತರಗತಿಯಲ್ಲಿ ಇತರರಿಗಿಂತ ಎತ್ತರದಲ್ಲಿದ್ದ. ಆದರೆ ಭಾಷೆ

ಕಲಿಕೆಯಲ್ಲಿ ತೀರ ಕೆಳಗಿದ್ದ. ಯಾಂತ್ರಿಕವಾಗಿ ವ್ಯಾಕರಣ ನಿಯಮಗಳನ್ನೂ ಛಂದಸೂತ್ರಗಳನ್ನೂ ಪದಗುಚ್ಛಗಳನ್ನೂ ಗಟ್ಟಿ ಮಾಡಿ ಈ ಪ್ರಾವೀಣ್ಯವನ್ನು ಗಳಿಸಬೇಕಿತ್ತು. ಕಡ್ಡಾಯ ತನದ ಲೇಪವಿರುವ ಎಲ್ಲ ವಿಧಿಗಳೂ ಇವನಿಗೆ ನಿಷಿದ್ಧ. ಈತ ಮಿತಭಾಷಿ. ಮೌನಿ ಎನ್ನುವುದೇ ಹೆಚ್ಚು ಸರಿ. ಎಂದೂ ಗರ್ವದಿಂದ ಬೀಗಿದವನಲ್ಲ. ಸದಾ ಸ್ನೇಹಶೀಲನಾಗಿಯೇ ವರ್ತಿಸಿದವ. ಆದರೆ ಆಟೋಟಗಳಲ್ಲಾಗಲಿ ಹರಟೆ ಗೇಲಿಗಳಲ್ಲಾಗಲಿ ಭಾಗವಹಿಸಲಾರ. ಸ್ಪಷ್ಟವಾಗಿ ವ್ಯಕ್ತಪಡಿಸದಿದ್ದರೂ ಅಧಿಕಾರ ಮುದ್ರೆ ಬಿದ್ದಿದ್ದ ಪ್ರತಿಯೊಂದನ್ನೂ – ಪಾಠ ಉರುಹೊಡೆಯುವುದು, ಮನೆಗೆಲಸ ಮಾಡಿ ಒಪ್ಪಿಸುವುದು, ಒಟ್ಟಾರೆ 'ಗುರುವಿನ ಗುಲಾಮ'ನಾಗಿರುವುದು – ಇವನು ಮನಸಾ ವಿರೋಧಿಸುತ್ತಿದ್ದ. ಶಿಕ್ಷಣ ಸಂಸ್ಥೆಯ ವಿಧಿನಿರ್ಬಂಧಗಳು ತನಗೆ ತೊಡಿಸಿದ ಬಳಿ ಸಂಕೋಲೆಗಳೆಂದೇ ಇವನ ಭಾವನೆ.

ಅಂದಿನ ಸಂದಿಗ್ಧ ಸನ್ನಿವೇಶವನ್ನು ಐನ್‌ಸ್ಟೈನ್ ೧೯೫೦ರಲ್ಲಿ ಬರೆದ ಒಂದು ಕಾಗದದಲ್ಲಿ ವಿವರಿಸಿದ್ದಾರೆ: "ಆ ಶಾಲೆಯಲ್ಲಿ ನಾನು ಕಾಲ ಸವೆಯುತ್ತಿದ್ದಾಗ ನನ್ನ ಮೇಲುಸ್ತುವಾರಿಯ ಹೊಣೆ ಹೊತ್ತಿದ್ದ ಗ್ರೀಕ್ ಭಾಷಾ ಉಪಾಧ್ಯಾಯರು ಒಂದು ದಿನ ನನ್ನನ್ನು ತಮ್ಮ ಕೊಠಡಿಗೆ ಕರೆಸಿ ನಾನು ಶಾಲೆಯಿಂದ ತೊಲಗಿ ಹೋದರೆ ಕ್ಷೇಮವೆಂದು ಸೂಚಿಸಿದರು. ನಾನೇನೂ ಅಪರಾಧ ವೆಸಗಿಲ್ಲವಲ್ಲ ಎಂಬ ನನ್ನ ಅಹವಾಲಿಗೆ ಅವರೆಂದರು: 'ನಿನ್ನ ಖುದ್ದು ಇರುವಿಕೆಯೇ ತರಗತಿಯಲ್ಲಿ ನನ್ನ ಬಗ್ಗೆ ಗೌರವವನ್ನು ಕೆಡಿಸುತ್ತಿದೆ.' ನಿಜವಾಗಿ ಹೇಳುವುದಾದರೆ, ನಾನೇ ಶಾಲೆ ತೊರೆದು ನನ್ನ ಹೆತ್ತವರನ್ನು ಅನುಸರಿಸಿ ಇತಲಿಗೆ ತೆರಳಬೇಕೆಂದು ಯೋಚಿಸುತ್ತಿದ್ದೆ. ಶಾಲೆಯಲ್ಲಿನ ನೀರಸವೂ ಯಾಂತ್ರಿಕೀಕೃತವೂ ಆದ ಬೋಧನ ವಿಧಾನ ಇದರ ಮುಖ್ಯ ಕಾರಣ. ಪದಗಳನ್ನು ಕುರಿತಂತೆ ನನ್ನ ನೆನಪು ಬಲು ಮಂಕಾಗಿದ್ದುದರಿಂದ ನಾನು ಸಾಕಷ್ಟು ತೊಂದರೆಗಳನ್ನು ಎದುರಿಸಬೇಕಾಯಿತು. ಈ ಕಷ್ಟನಿವಾರಣೆಗಾಗಿ ಪ್ರಯತ್ನಿಸುವುದು ಅರ್ಥಹೀನವೆಂದು ನನಗನ್ನಿ

ಸಿತು. ಹೀಗಾಗಿ ಅವರು ವಿಧಿಸುವ ಸಮ ಶಿಕ್ಷೆಗಳನ್ನೂ ಸಹಿಸುವುದೊಂದೇ ಹಾದಿ, ಉ ಹೊಡೆದದ್ದನ್ನು ಹುಚ್ಚಾಬಟ್ಟೆ ಉರುಹುವು ಎಂಬ ನಿರ್ಧಾರಕ್ಕೆ ಬಂದೆ."

ಉಭಯ ಪಕ್ಷಗಳೂ ಪರಸ್ಪರರಿಂದ ಬ ಗಡೆ ಪಡೆಯಲು ಬಯಸಿದ್ದುವು. ಅ ಸಂಸ್ಥೆಯ ನಿಯಮಗಳು ಸುಲಭವಾಗಿರಲ ಆಲ್ಬರ್ಟ್ ವೈದ್ಯಕೀಯ ಶಿಫಾರಸನ್ನು ಶಾ ಒಪ್ಪಿಸಿ ತುರಂಗವಿಮುಕ್ತನಾದ.

ಅನಾಥ ಪಕ್ಷಿ ಇತಲಿಗೆ ಹೋಗಿ ತಾಯಿ ಒಲುಮೆಯ ಗೂಡನ್ನು ಸೇರಿತು.

ಬಿರಿದ ಮುಗುಳು

ಇತಲಿಗೆ ಬಂದವನೇ ಅಲ್ಬರ್ಟ್ ಜರ್ಮನ್ ಪೌರತ್ವವನ್ನೂ ಯೆಹೂದ್ಯಮ ವಲಂಬನೆಯನ್ನೂ ಕೊಡವಿ ಬಿಸುಟ. ನಿಜ ಅವನೀಗ ಜಾತ್ಯತೀತ ವಿಶ್ವಮಾನವನಾ (೧೮೯೫).

ಸದ್ಯ ಇತಲಿ ಅವನ ತವರೂರು. ಅಲ್ಲಿನ ಸುಂದರ ಸ್ವತಂತ್ರ ವಾತಾವರಣ. ಪ್ರ ಸೌಂದರ್ಯಕ್ಕೂ ಶಿಲ್ಪಕಲೆಗೂ ಹೆಸರಾಂತ ವದು. ಜನ ಮೃದುಹೃದಯಿಗಳು, ಸ್ನೇಹಪರ ಸ್ನೇಹಿತನೊಡಗೂಡಿ ಅಲ್ಬರ್ಟ್ ಗುಡ್ಡ ಕಾಡು ಮೇಡು ಎಲ್ಲ ಕಡೆ ಬೇಕಾಬಿಟ್ಟಿ ಅಲ ಯಥೇಚ್ಛವಾಗಿ ಸ್ವಾತಂತ್ರ್ಯಾಮೃತಪಾನ ಮ ಸುತ್ತಿದನು. ಹರ್ಷ ತಳೆದ, ಹೊಸ ನೋಟವ ಪಡೆದವನಾದ. ಭವಿಷ್ಯ? ಅದರ ಗ ವೆಯೇ ಆಗ ಅವನಿಗಿರಲಿಲ್ಲ.

ಆದರೆ ಹರ್ಮನ್ನರ ವ್ಯವಹಾರ ಅಲ್ಲಿಯ ಕೈಗೊಡಲಾರಂಭಿಸಿತ್ತು. ಹೀಗಾಗಿ ಅವ ಮಗನಿಗೆ ಭವಿಷ್ಯವನ್ನು ಕುರಿತಂತೆ ನಾಲ್ಕು ಎಚ್ಚ ಮಾತು ಹೇಳುವುದು ಅಗತ್ಯವಾಯಿತು. ಆಲ್ಬ ಮತ್ತೆ ಶಾಲೆ ಸೇರಿ ತೇರ್ಗಡೆಗೊಂಡು ಡಿಪ್ಲೊ ಗಳಿಸಿ ಹುದ್ದೆ ಹಿಡಿಯಬೇಕೆಂಬುದು ಅ ಆಶಯ.

ಇತಲಿ, ಆಸ್ಟ್ರಿಯ, ಜರ್ಮನಿ ಮತ್ತು ಫ್ರಾ ದೇಶಗಳು ಸ್ವಿಟ್ಸರ್ಲೆಂಡ್ ದೇಶವನ್ನು

ಹೊರಣವನ್ನು ಆವರಿಸಿರುವಂತೆ ಸುತ್ತುವರಿದಿವೆ. ಇದೊಂದು ನೆಲದ್ವೀಪ. ಆವರಣ ದೇಶಗಳ ಪ್ರಭಾವ ಇಲ್ಲಿ ಎದ್ದು ಕಂಡರೂ ಇದು ಸ್ವತಂತ್ರ ರಾಷ್ಟ್ರ. ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಎಂತೊ ಮುಕ್ತ ವಾತಾವರಣಕ್ಕೂ ಅಂತೆಯೆ ಹೆಸರಾಂತ ದೇಶ ಸ್ವಿಟ್ಸರ್ಲೆಂಡ್. ಇಲ್ಲಿನ ಝೂರಿಕ್ ನಗರದ ಜರ್ಮನ್ ಭಾಷಾ ಪ್ರದೇಶದಲ್ಲಿ ಫೆಡರಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಸಂಕ್ಷೇಪವಾಗಿ ಪಾಲಿಟೆಕ್ನಿಕ್, ಎಂಬ ವಿಖ್ಯಾತ ಶಿಕ್ಷಣ ಸಂಸ್ಥೆ ಇತ್ತು. ಎಂಜಿನಿಯರಿಂಗ್ ವಿದ್ಯಾರ್ಥಿಯಾಗಿ ಈ ಸಂಸ್ಥೆ ಸೇರಿ ಅಧ್ಯಯನ ಮುಂದುವರಿಸಬೇಕೆಂದು ಇಚ್ಛಿಸಿದ ಆಲ್ಬರ್ಟ್ ಪ್ರವೇಶ ಪರೀಕ್ಷೆ ಬರೆದ. ಇವನಿಗೆ ದೊರೆತ ಬಿರುದು Failed (ಅನುತ್ತೀರ್ಣ ಅಥವಾ ನಪಾಸು).

ಉರುಹೊಡೆದು ಕಾರಬೇಕಾಗಿದ್ದ ಭಾಷಾ ಪತ್ರಿಕೆಗಳೂ ಸಸ್ಯ ಮತ್ತು ಪ್ರಾಣಿ ವಿಜ್ಞಾನ ಪತ್ರಿಕೆಗಳೂ ಈ ಪೋರನ ಎದುರಿದ್ದ ತಮ್ಮ 'ಹಳೆ ಹಗೆತನ'ವನ್ನು ಈಗ ಸಾಧಿಸಿದ್ದುವು. ಆದರೆ ಗಣಿತ ಮತ್ತು ಭೌತವಿಜ್ಞಾನಗಳಲ್ಲಿ ಈತ ತನ್ನ ಖಚಿತ ಮುದ್ರೆ ಒತ್ತದಿರಲಿಲ್ಲ. ಇವನ ಪಾಡನ್ನೂ ಅಂತೆಯೇ ಮೇಲ್ಮೆಯನ್ನೂ ಪಾಲಿಟೆಕ್ನಿಕ್ಕಿನ ಹಿರಿಯ ಪ್ರಾಧ್ಯಾಪಕರು ಗಮನಿಸಿದ್ದರು. ಉತ್ತಮ ಗಣಿತವಿದನಾಗಬಹುದಾದ ಗುಣಗಳು ಇವನಲ್ಲಿ ಹುದುಗಿವೆ ಎಂಬುದನ್ನು ಗುರುತಿಸಿದ್ದರು. ಇಂಥವನು ವೃಥಾ ಪ್ರವೇಶಪರೀಕ್ಷೆಯ ಪುನಸ್ಸಿದ್ಧತೆಯಲ್ಲಿ ಕಾಲಹರಣ ಮಾಡುವುದರ ಬದಲಾಗಿ ಸ್ವಿಟ್ಸರ್ಲೆಂಡಿನ ಇನ್ನೊಂದು ಭಾಗದಲ್ಲಿದ್ದ ಆರೌ ಪಟ್ಟಣದ [illegible] ಪೂರ್ವಶಿಕ್ಷಣ [illegible] ಪಾಲಿಟೆಕ್ನಿಕ್ಕಿಗೆ ನೇರ ಪ್ರವೇಶ [illegible].

ಮತ್ತೆ ಮ್ಯೂನಿಕ್ಕಿನ ತುರಂಗಶಾಲೆಯ ಪುನರಾವರ್ತನೆ? ಆರೌಗೆ ಹೋಗಲಾರೆ ಎಂದು ಆಲ್ಬರ್ಟ್ ಒಮ್ಮೆ ಯೋಚಿಸಿದ. ಏನಾದರೂ ಕೆಲಸ ಹಿಡಿದು ಬಾಳೋಣವೆಂದು ಬಗೆದ. ಆದರೆ ಹದಿನಾರರ ಹುಂಬ, ಸ್ವಿಟ್ಸರ್ಲೆಂಡಿನ ಪೌರತ್ವವಿರದಾತ, ಯಾವ ಸಾರ್ಥಕ ಹುದ್ದೆಯನ್ನು ತಾನೇ ಅಲ್ಲಿ ಗಳಿಸಿಕೊಂಡಾನು? ಅಡಿಯು ಹಿಂದಿಡೆ ನರಕ, ಸರಿ. ಅಡಿಯ ಮುಂದಿಡೆ ಕೂಡ ನರಕವೇ. ಆದರೂ ಅವನು ಅಡಿಯನ್ನು ಮುಂದಿಟ್ಟ, ಆರೌ ಶಾಲೆಯನ್ನು ಸೇರಿದ.

ಪರಮಾಶ್ಚರ್ಯ—ಆಲ್ಬರ್ಟ್ ಕನಸು ಕಾಣುತ್ತಿದ್ದ ವಿಮುಕ್ತ ಶಾಲೆ ಅದಾಗಿತ್ತು. ಶಾಲೆಯ ಒಬ್ಬ ಉದಾತ್ತ ಉಪಾಧ್ಯಾಯ ಇವನಿಗೆ ತನ್ನ ಮನೆಯಲ್ಲಿಯೇ ಆಸರೆ ಕೊಟ್ಟು ಉಪಚರಿಸಿದ. ಅಲ್ಲಿನ ಒಂದು ವರ್ಷದ ವಾಸ್ತವ್ಯ ಆಲ್ಬರ್ಟ್‌ನನ್ನು ಹೊಸ ವ್ಯಕ್ತಿಯಾಗಿಯೇ ಮಾರ್ಪಡಿಸಿತು.

ಈ ವೇಳೆಗೆ ಇವನು ಕಲನಶಾಸ್ತ್ರವನ್ನು (calculus) [illegible] ಪ್ರಾವೀಣ್ಯ ಗಳಿಸಿದ್ದ. ಭೌತ ಮತ್ತು ಗಣಿತ ವಿಜ್ಞಾನಗಳ ಪ್ರಮುಖ ಹತ್ಯಾರು [illegible] ಮತ್ತು ಭಾಷೆ ಕಲನಶಾಸ್ತ್ರ. ಭೌತಪ್ರಪಂಚವನ್ನು ಕುರಿತಾತೆ ಹಲವಾರು ಮೂಲಭೂತ ಪ್ರಶ್ನೆಗಳು ಇವನನ್ನು ಕಾಡುತ್ತಿದ್ದುವು. ಎರಡು ಮುಖ್ಯ ಪ್ರಶ್ನೆಗಳಿವು: [illegible]



"ನಿನಗೆ ಗೊತ್ತೇನು, ಈ ಪುಸ್ತಕ ಬರೆಯಲು ನಾನು ೧೫ ದಿನ ಕಾಲೇಜಿಗೆ ಚಕ್ಕರ್ ಹೊಡೆದಿದ್ದೆ."

ವಾತನಿಗೆ ಆ ಅಲೆ ಹೇಗೆ ಕಾಣಬಹುದು? ಬೆಳಕಿನ ಅಗಾಧ ವೇಗದಲ್ಲಿ ಜಿಗಿಯುವಾತನಿಗೆ ಆ ಅಲೆ ಸ್ಥಗಿತವಾಗಿರುವಂತೆ ಕಾಣಬಹುದೆ? (ಬೆಳಕಿನ ವೇಗ ಸೆಕೆಂಡಿಗೆ ಮೂರು ಲಕ್ಷ ಕಿಲೊಮೀಟರುಗಳು).

ಆಲ್ಬರ್ಟ್ ಆರೌ ಶಾಲೆಯಲ್ಲಿ, ಮೇಲಾಗಿ ಅಲ್ಲಿನ ಹಿತಕರ ಪರಿಸರದಲ್ಲಿ, ಸಾಕಷ್ಟು ಬೌದ್ಧಿಕ ಪೋಷಣೆ ಪಡೆದು ಝೂರಿಕ್ಕಿನ ಪಾಲಿಟೆಕ್ನಿಕ್ಕನ್ನು ಪ್ರವೇಶಿಸಿದ. ತನ್ನ ಆಸಕ್ತ ಕ್ಷೇತ್ರ ಭೌತ ವಿಜ್ಞಾನ, ಜೀವನಧ್ಯೇಯ ಉದಾತ್ತ ಉಪಾಧ್ಯಾಯನಾಗುವುದು ಎಂಬ ಸ್ಪಷ್ಟ ನಿಲವನ್ನು ಆವನೀಗ ತಳೆದಿದ್ದ. ತಂದೆಯಿಂದ ಹಾಗೂ ಸಮೀಪದ ಬಂಧುವೊಬ್ಬರಿಂದ ಮಿತ ಮೊತ್ತದ ಆರ್ಥಿಕ ಸಹಾಯ ಬರು ಬರುತ್ತಿತ್ತು. ಆ ಮಹಾನಗರದಲ್ಲಿ ಈ ಅಪ್ರಸಿದ್ಧ ತರುಣನ ಬಾಳು ಬಹಳೇಕ ಬವಣೆಸದ್ದ— ಉಣಿಸು, ವಸನ, ವಸತಿ ಒಂದೊಂದರಲ್ಲೂ. ಹೊಟ್ಟೆ ಕಟ್ಟಿ ಕಾಸು ಉಳಿಸಿ ಸಂಗೀತಗೋಷ್ಠಿಗಳಿಗೆ ತಪ್ಪದೆ ಹೋಗುತ್ತಿದ್ದ. ಮುಂದೊಂದು ದಿವಸ ಸ್ವಿಸ್ ಪೌರತ್ವ ಸಂಪಾದಿಸಲು ಹಣ ಬೇಕಾದೀತೆಂದು ಬಿಗಿದು ಅಲ್ಪ ರಾಶಿಯಲ್ಲಿ ಒಂದಿಷ್ಟನ್ನು ಅವಶ್ಯಕ ಮೀಸಲಿಡುತ್ತಿದ್ದ. ಆಡಂಬರದ ಬಾಳು ಇವನನ್ನೆಂದೂ ಆಕರ್ಷಿಸಿದ್ದಿಲ್ಲ. ಭವಿಷ್ಯದ ಪರಮೋಜ್ವಲ ದಿನಗಳಲ್ಲಿ ಕೀರ್ತಿ ಸಂಪತ್ತು ಜನಾರಾಧನೆ ಇವನ ಬೆನ್ನಟ್ಟಿ ಬೆರಸಿಕೊಂಡು ಬಂದಾಗ ಕೂಡ.

ತರುಣ ಆಲ್ಬರ್ಟ್ ಹೇಗಿದ್ದ?

ಕಟ್ಟುಮಸ್ತಾದ ಆಳು. ಕೊನರುತ್ತಿದ್ದ ಮೀಸೆ. ದಟ್ಟ ಗುಂಗುರು ಕೂದಲು. ಉಜ್ವಲ ನೇತ್ರಗಳು ಸೌಮ್ಯ ಮತ್ತು ಆಕರ್ಷಕ ವದನ. ಸದಾ ಗಂಭೀರ. ಚಿಂತನಶೀಲ. ಅಡಕವಲ್ಲದ ಅಳ್ಳಕ ಉಡುಪು. ಜನಸಂದಣಿಯಿಂದ ದೂರ ಬಿರಲು ಚಡಪಡಿಸುವಾತ. ಯೋಚಿಸಿ ಪದಗಳನ್ನು ತೂಗಿ ನಿಧಾನವಾಗಿ ಮಾತಾಡುವ ಅಥವಾ ಹೊರಗೆಡಹುವ ಪ್ರವೃತ್ತಿ. ಕ್ರಾಂತಿಕಾರಿ ಭಾವನೆಗಳ ಸಂತತ ತಾಡನೆಗಳಿಂದ ಪೀಡಿತನಾದ ತರುಣ. "ಭಾವನೆಗಳು ದೇವರಿಂದ ಬರುತ್ತವೆ" ಎಂಬುದಾಗಿ ಮುಂದೊಂದು ದಿವಸ ಜಗತ್ಪ್ರಖ್ಯಾತ ಐನ್‌ಸ್ಟೈನ್ ಹೇಳಿದ್ದುಂಟು.

ಐನ್‌ಸ್ಟೈನರ ಜೀವನಚರಿತ್ರೆಯನ್ನು ಇವರ ಅಳಿಯ (ಮಗಳ ಗಂಡ) ರೂಡೋಲ್ಫ್ ಕೈಸರ್ ಬರೆದಿದ್ದಾರೆ. ಈ ಗ್ರಂಥಕ್ಕೆ ಮುನ್ನುಡಿಯಾಗಿ ಐನ್‌ಸ್ಟೈನ್ ಬರೆದಿರುವ ಮಾತು "ಪುಸ್ತಕದ ವಾಸ್ತವಾಂಶಗಳು ಯಥಾಯೋಗ್ಯವಾಗಿ ನಿಷ್ಕೃಷ್ಟವಾಗಿರುವುದನ್ನೂ ಇದರ ವ್ಯಕ್ತಿಗುಣವರ್ಣನೆ, ಆದ್ಯಂತ, ನಾನು ಇನ್ನೊಬ್ಬ ಆಗಲಾರೆ ಹೇಗೊ ಹಾಗೆ ಒಬ್ಬ ಇನ್ನೊಬ್ಬ ಆಗದೆ ತಾನೇ ಆಗಿರುವಾತನಿಂದ ನಿರೀಕ್ಷಣೆ ಮಾಡಬಹುದಾದಷ್ಟು ಸಮರ್ಪಕವಾಗಿರುವುದನ್ನೂ ಕಂಡೆ. ಪ್ರಾಯಶಃ ಇಲ್ಲಿ ಗಮನಿಸದಿರುವ ಅಂಶವೆಂದರೆ ಎಂದೂ ಆಯಾಸಹೊಂದದೆ ಕ್ರಿಯಾಶೀಲವಾಗಿರುವ ನಿಸರ್ಗ ಆತ್ಮಾನಂದಕ್ಕಾಗಿಯೊ ಎಂಬಂತೆ ವ್ಯಕ್ತಿಯಲ್ಲಿ ನೆಡುವ ಅತಾರ್ಕಿಕತೆ, ಅಸಾಂಗತ್ಯ, ವೈಲಕ್ಷಣ್ಯ, ಮತ್ತು ವೈಕಲ್ಯ ಕೂಡ. ಆದರೆ ಇವು ಪ್ರತ್ಯೇಕಿತವಾಗುವುದು ವ್ಯಕ್ತಿಯ ಸ್ವಂತ ಮನಸ್ಸಿನ ಮೂಸೆಯಲ್ಲಿ ಮಾತ್ರ."

ಐನ್‌ಸ್ಟೈನರ ಭಾವನೆಯಲ್ಲಿ ಪರವಸ್ತು, ದೇವರು, ನಿಸರ್ಗ, ವಿಶ್ವ ಎಂದರೆ ಒಂದೇ — 'ಜೀವ ಜಡ ರೂಪ ಪ್ರಪಂಚವನದಾವುದೋ ಆವರಿಸಿಕೊಂಡುಮೊಳನೆರೆದುಮಿಹುದಂತೆ ಭಾವಕೊಳಪಡದಂತೆ ಅಳತೆಗಳವಡದಂತೆ ಆ ವಿಶೇಷಕೆ ಮಣಿಯೊ — ಮಂಕುತಿಮ್ಮ.'

"ಸುದೀರ್ಘ ಜೀವನದಲ್ಲಿ ನಾನು ಒಂದು ಸಂಗತಿಯನ್ನು ಕಂಡುಕೊಂಡಿದ್ದೇನೆ. ವಾಸ್ತವತೆಗೆ ಎದುರಾಗಿ ಅಳೆದಾಗ ನಮ್ಮ ಸಮಸ್ತ ವಿಜ್ಞಾನವೂ ತೀರ ಆದಿಮವಾದದ್ದು, ಬಾಲಿಶವಾದದ್ದು. ಹೀಗಿದ್ದಾಗ್ಯೂ ಇದು ನಮ್ಮ ವಶದಲ್ಲಿರುವ ಅತ್ಯಂತ ಅಮೂಲ್ಯ ವಸ್ತು." ವಿಶ್ವವಿಸ್ಮಯಗಳ ಪ್ರೇಕ್ಷಕರಾಗಿ ಐನ್‌ಸ್ಟೈನ್ ಆಡಿದ ಮಾತುಗಳಿವು.

ತಾತ್ವಿಕವಾಗಿ ಈಗ ಆಲ್ಬರ್ಟ್ ಪಾಲಿಟೆಕ್ನಿಕ್ಕಿನ ವಿದ್ಯಾರ್ಥಿ (೧೮೯೬). ಆದರೆ ಒಮ್ಮೆ ಅನುಭವಿಸಿದ ಸ್ವಾತಂತ್ರ್ಯದ ರಸಸುಖವನ್ನು ಇವನು ತರಗತಿಗೆ ಹೋಗಿ ಕುಳಿತುಕೊಂಡು ಪಾಠ ಆಲಿಸುತ್ತ ಟಿಪ್ಪಣಿ ಗೀಚುತ್ತ ಅಧ್ಯಾಪಕರು ಸೂಚಿಸಿದ ಆಕರಗ್ರಂಥಗಳನ್ನು ಪಠಿಸುತ್ತ ಕಳೆದುಕೊಂಡಾನೇ? ಇಂಥ

ಯಾವ ನಿರ್ಬಂಧವೂ ಇವನಿಗೆ ಒಗ್ಗದು — ಅಲರ್ಜಿ. ಹಾಗಾದರೆ ಇವನೇಕೆ ಪಾಲಿಟೆಕ್ನಿಕ್ಕಿಗೆ ದಾಖಲಾದ? ಬಾಳ್ವೆ ನಡೆಸಲು ದುಡ್ಡು ಬೇಕು: ದುಡ್ಡು ಪಡೆಯಲು ಪದವಿ(ಡಿಪ್ಲೊಮ) ಬೇಕು: ಪದವಿ ಗಳಿಸಲು ಪಾಲಿಟೆಕ್ನಿಕ್ ವಿದ್ಯಾರ್ಥಿ ಆಗಬೇಕು.

ಪಾಲಿಟೆಕ್ನಿಕ್ಕಿನ ಪ್ರಾಧ್ಯಾಪಕರು ತಮ್ಮ ಪಾಠ ಪ್ರವಚನಗಳಿಂದಾಗಲಿ ಆಸಕ್ತ ಚಿಂತನೆಗಳಿಂದಾಗಲಿ ಇವನನ್ನು ತಮ್ಮೆಡೆಗೆ ಆಕರ್ಷಿಸಲು ಸಮರ್ಥರಾಗಲಿಲ್ಲ. ನಿಯಮಿತ ಪಠ್ಯಪಟ್ಟಿ ವಿಧಿವತ್ತ ನಿಯಮಿತ ಜಾಡಿನೊಳಗೆ ಕ್ರಮಬದ್ಧವಾಗಿ ಸಾಗುತ್ತಿದ್ದ ಅವರ ಬೋಧನವಿಧಾನದಲ್ಲಿ ವಿಜ್ಞಾನದ ಸಾರಭೂತಾಂಶವೇ ಗೈರುಹಾಜರಾಗಿದೆ ಎಂದು ಇವನಿಗೆ ಅನ್ನಿಸುತ್ತಿತ್ತು. ಮಾಹಿತಿಗಳ ಅಚ್ಚುಕಟ್ಟಾದ ಗುಪ್ಪೆ ವಿಜ್ಞಾನವಲ್ಲ — ಅವರ ಹಿಂದಿರುವ ಸೃಷ್ಟ್ಯಾತ್ಮಕ ಮನಸ್ಸಿನ ಅಮೂರ್ತ ವ್ಯಾಪಾರ ವಿಜ್ಞಾನ. ಸಿದ್ಧಾಂತಗಳ ವ್ಯವಸ್ಥಿತ ನಿರೂಪಣೆ ವಿಜ್ಞಾನವಲ್ಲ — ಅವರ ಹಿಂದಿರುವ ಅನ್ವೇಷಕ ಬುದ್ಧಿಯಿಂದ ಆಗುವ ಆವಿಷ್ಕಾರ ವಿಜ್ಞಾನ. ಸಮೀಕರಣಗಳ ಗೋಜುಗೋಜಲು ಮುಖಲು ವಿಜ್ಞಾನವಲ್ಲ — ಅವರ ಹಿಂದಿರುವ ಪ್ರತಿಭಾಗೋಚರ ಸತ್ಯವೇ ವಿಜ್ಞಾನ. ಆಲ್ಬರ್ಟ್ ಕನಸು ಕಾಣುತ್ತಿದ್ದುದು ಇಂಥ ವಿಜ್ಞಾನವನ್ನು, ವ್ಯವಹರಿಸುತ್ತಿದ್ದುದು ಇಂಥ ವಿಜ್ಞಾನಲೋಕದಲ್ಲಿ. ಸ್ಫೂರ್ತಿ ಪಡೆಯುತ್ತಿದ್ದುದು ಇಂಥ ವಿಜ್ಞಾನದಿಂದ. ಅಚ್ಚರಿಯ ಸಂಗತಿ ಎಂದರೆ ವಿಜ್ಞಾನಿಗಳ ರಾಣಿ ಎಂದು ಪ್ರಸಿದ್ಧವಾಗಿರುವ ಖುದ್ದು ಗಣಿತವಿಜ್ಞಾನದ ಬಗ್ಗೆಯೇ' ಈತ ವಿರಕ್ತನಾಗಿದ್ದುದು. ತಾನು ರೂಪಿಸಿಕೊಂಡಿದ್ದ ಪಥಕ್ರಮಕ್ಕೆ — ಭೌತವಿಜ್ಞಾನದ ಮೂಲಭೂತನಿಯಮಗಳ ಅನ್ವೇಷಣೆ—ಪ್ರಾಥಮಿಕ ಗಣಿತನಿಯಮಗಳೂ ಸೂತ್ರಗಳೂ ಸಾಕು, ಪ್ರೌಢಗಣಿತವೇನೂ ಬೇಕಾಗದು ಎಂಬುದಾಗಿ ಇವನು ಅಂದು ನಂಬಿದ್ದ. ಹೀಗಾಗಿ ಸಾಕ್ಷಾತ್ ಹರ್ಮನ್ ಮಿಂಕೊವ್ಸ್ಕೀಯಂಥ ಅಂತಾರಾಷ್ಟ್ರೀಯ ಖ್ಯಾತಿವೇತ್ತ ಗಣಿತವಿದ್ವಾಂಸನ ತರಗತಿಗಳು ಕೂಡ ಇವನಿಗೆ ರುಚಿಸಲಿಲ್ಲ.

ಪಾಲಿಟೆಕ್ನಿಕ್ಕಿನಲ್ಲಿ ತಾವು ಇದ್ದ ದಿನಗಳನ್ನು ಕುರಿತು ಐನ್‌ಸ್ಟೈನ್ "ಆತ್ಮಚರಿತ್ರೆ"ಯಲ್ಲಿ ಬರೆದಿದ್ದಾರೆ "ಅಲ್ಲಿ ಬಲು ಸಮರ್ಥ ಗಣಿತ ಪ್ರಾಧ್ಯಾಪಕರಿದ್ದರು (ಉದಾಹರಣೆಗೆ ಹರ್ವಿಟ್ಸ್, ಮಿಂಕೊವ್ಸ್ಕೀ ಮೊದಲಾದವರು). ಹೀಗಾಗಿ ನಿಜಕ್ಕೂ ನಾನು ಪರಿಪುಷ್ಟ ಗಣಿತ ಶಿಕ್ಷಣ ಪಡೆಯಬಹುದಾಗಿತ್ತು. ಆದರೂ ಹೆಚ್ಚಿನ ವೇಳೆಯನ್ನು ಭೌತವಿಜ್ಞಾನದ ಪ್ರಯೋಗಮಂದಿರದಲ್ಲಿ ಕೆಲಸ ಮಾಡುತ್ತ ವಿನಿಯೋಗಿಸುತ್ತಿದ್ದೆ. ಅಲ್ಲಿ ಅನುಭವದೊಡನೆ ಒದಗುತ್ತಿದ್ದ ನೇರ ಸಂಸ್ಪರ್ಶ ನನ್ನನ್ನು ಸಂಮೋಹಗೊಳಿಸಿತ್ತು. ಉಳಿಕೆಕಾಲ ಹೆಚ್ಚಾಗಿ ಮನೆಯಲ್ಲಿ ಕಿರ್ಖಫ್, ಹೆಲ್ಮ್‌ಹಾಲ್ಟ್ಸ್, ಹರ್ಟ್ಸ್ ಮೊದಲಾದವರ ಕೃತಿಗಳ ಅಧ್ಯಯನದಲ್ಲಿ ನಿರತನಾಗಿರುತ್ತಿದ್ದೆ. ಗಣಿತವನ್ನು ನಾನು ಸ್ವಲ್ಪ ಮಟ್ಟಿಗೆ ಕಡೆಗಣಿಸಿದ್ದು ಪ್ರಾಕೃತಿಕ ವಿಜ್ಞಾನಗಳಲ್ಲಿ ನನಗೆ ಗಣಿತಕ್ಕಿಂತ ಪ್ರಬಲತರ ಆಸಕ್ತಿ ಇದ್ದುದು ಒಂದೇ ಕಾರಣಕ್ಕಾಗಿ ಅಲ್ಲ. ಈ ಮುಂದಿನ ವಿಚಿತ್ರಾನುಭವವೂ ಅದರ ಕಾರಣವಾಗಿತ್ತು: ಗಣಿತ ಹಲವಾರು ವಿಶೇಷ ವಿಭಾಗಗಳಾಗಿ ಒಡೆದು ಹೋಗಿದ್ದುದನ್ನು ಕಂಡೆ; ಪ್ರತಿಯೊಂದು ವಿಭಾಗವೂ ನಮಗೆ ದತ್ತವಾಗಿರುವ ಅಲ್ಪಾಯುಷ್ಯವನ್ನು ಸುಲಭವಾಗಿ ಆಪೋಶಿಸಲು ಸಾಕು. ಹೀಗಾಗಿ ಯಾವ ನಿರ್ದಿಷ್ಟ ಹುಲ್ಲುಕಂತೆಯನ್ನು ಆಯಬೇಕು ಎಂಬುದನ್ನು ನಿರ್ಧರಿಸಲಾಗದ ಬ್ಯೂರಿಡನ್ನನ ಕತ್ತೆಯಂತಾಯಿತು ನನ್ನ ಸ್ಥಿತಿ. ಗಣಿತಕ್ಷೇತ್ರದಲ್ಲಿ ಮೂಲಭೂತವಾಗಿ ಪ್ರಮುಖವಾದದ್ದು ಯಾವುದು — ನಿಜಕ್ಕೂ ಆಧಾರರೂಪದ್ದು ಯಾವುದು—ಎಂಬುದನ್ನು ಉಳಿದ ಹೆಚ್ಚು ಕಡಿಮೆ ನಿವಾರ್ಯ ಪ್ರೌಢ ಪಾಂಡಿತ್ಯದಿಂದ ಸ್ಪಷ್ಟವಾಗಿ ವಿಭೇದೀಕರಿಸುವಷ್ಟರ ಮಟ್ಟಿಗೆ ನನ್ನ ಅಂತರ್ಬೋಧೆ ಬಲಶಾಲಿ ಆಗಿಲ್ಲದಿದ್ದುದೇ ಇದರ ಕಾರಣವೆಂಬುದರಲ್ಲಿ ಸಂದೇಹವಿಲ್ಲ. ಇಷ್ಟೂ ಅಲ್ಲದೆ ನಿಸರ್ಗಜ್ಞಾನದ ಬಗ್ಗೆ ನನಗಿದ್ದ ಕುತೂಹಲ ನಿಸ್ಸಂದಿಗ್ಧವಾಗಿಯೂ ಪ್ರಬಲತರವಾಗಿತ್ತು; ಆದರೆ ಭೌತವಿಜ್ಞಾನದ ಆಧಾರತತ್ತ್ವಗಳನ್ನು ಕುರಿತು ಹೆಚ್ಚಿನ ಆಳವಾದ ಜ್ಞಾನವನ್ನು ಗಳಿಸುವುದರತ್ತ ಸಾಗುವ ದಾರಿ ಅತ್ಯಂತ ಜಟಿಲ ಹಾಗೂ ಸೂಕ್ಷ್ಮ ಗಣಿತವಿಧಾನಗಳೊಡನೆ ಬಂಧಿತವಾಗಿದೆ ಎಂಬ ಸಂಗತಿ ವಿದ್ಯಾರ್ಥಿ ಆಗಿದ್ದ ನನಗೆ ಸ್ಪಷ್ಟವಾಗಿರಲಿಲ್ಲ. ಮುಂದೆ ಸ್ವತಂತ್ರವಾಗಿ

[illegible]ಣೆಯನ್ನು ಮಾಡುತ್ತ ಸಾಗಿ ನಂತರ ಕ್ರಮೇಣ ಈ ಜ್ಞಾನೋದಯವಾಯಿತು. ನಿಜಸಂಗತಿ ಎಂದರೆ ಭೌತವಿಜ್ಞಾನವೂ ಪ್ರತ್ಯೇಕ ವಲಯಗಳಾಗಿ ಒಡೆದುಹೋಗಿತ್ತು. ಇಂಥ ಒಂದೊಂದು ವಲಯವೂ, ಆಳವಾದ ತಿಳಿವಳಿಕೆಯನ್ನು ಗಳಿಸಬೇಕೆಂಬ ಹಸಿವನ್ನು ಎಂದೂ ಹಿಂಗಿಸದೆ, ಇಡಿ ಆಯುರ್ಮಾನದ ಕಾರ್ಯವನ್ನೆ ಕಬಳಿಸಬಲ್ಲದಾಗಿತ್ತು. ಇಲ್ಲಿಯೂ ಅರ್ಥಂಬರ್ಥವಾಗಿ ಸಂಬಂಧಿತವಾಗಿದ್ದ ದತ್ತಾಂಶಗಳ ರಾಶಿ ಅಗಾಧವಾಗಿತ್ತು. ಆದರೆ ಈ ರಂಗದಲ್ಲಿ ನಾನು ಬೇಗನೆ [illegible] ಮೂಲಭೂತಾಂಶಗಳತ್ತ [illegible] ಗ್ರಹಿಸಲು ಕಲಿತೆ ಮತ್ತು ಮನಸ್ಸಿನ ಮೇಲೆ ಪೇರಿಕೊಂಡು ಬಂದು ಅದನ್ನು ಸಾರಭೂತ ವಿಷಯದಿಂದ ಕವಲಿಸುವ ಉಳಿದ ಎಲ್ಲವುಗಳಿಂದ ವಿಮುಖನಾಗಲು ಕಲಿತೆ. ಇಲ್ಲೊಂದು ಸಿಕ್ಕು ಇತ್ತು: ತನಗೆ ಒಲವು ಇರಲಿ ಇಲ್ಲದಿರಲಿ ವಿದ್ಯಾರ್ಥಿ ಪರೀಕ್ಷೆಗಳಿಗೋಸ್ಕರವಾಗಿ ಇವೆಲ್ಲ ರದ್ದಿಗಳನ್ನೂ ಮನದಾಳಕ್ಕೆ ಗಿಡಿಯಲೇಬೇಕಾಗಿತ್ತು. ಈ ಬಲವದ್ಬಂಧ [illegible] ಕುಗ್ಗಿಸಿಬಿಟ್ಟಿತ್ತೆಂದರೆ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣನಾದ ತರುವಾಯ ಮುಂದಿನ ಪೂರ್ತಿ ಒಂದು ವರ್ಷ ಕಾಲ ನನಗೆ ಯಾವುದೇ ವೈಜ್ಞಾನಿಕ ಸಮಸ್ಯೆಯ ಪರಿಶೀಲನೆಯೂ ಅರುಚಿಕರವಾಗಿತ್ತು."

[illegible] ವಿದ್ಯಾರ್ಥಿಜೀವನದಲ್ಲಿ ಎದ್ದು [illegible] ಹೊಮ್ಮುತ್ತಿದ್ದ [illegible] ಸುಸಂಸ್ಕೃತ ಕಂಪು, ಮೇಲಾಗಿ [illegible] ವ್ಯಕ್ತಿತ್ವದಲ್ಲೇ ಅಂತರ್ಗತವಾಗಿದ್ದ [illegible] ಪ್ರವೃತ್ತಿ ಇವನಿಗೆ ಅನೇಕ ವಿಚಿತ್ರ ಸ್ನೇಹಿತರನ್ನು ತಂದುಕೊಟ್ಟವು. ಇವರ ಪೈಕಿ ಹೆಸರಿಸಬೇಕಾದವರು ಮುಖ್ಯವಾಗಿ ಮೂವರು: ಮಾರ್ಸೆಲ್ ಗ್ರಾಸ್‌ಮ್ಯಾನ್, ಫ್ರೀಡರಿಷ್ ಆ್ಯಡ್ಲರ್, ಕುಮಾರಿ ಮಿಲೇವಾ ಮ್ಯಾರಿಷ್. ಗ್ರಾಸ್‌ಮ್ಯಾನ್ ತರಗತಿಯ ಟಿಪ್ಪಣಿಗಳನ್ನು ಟಾಕುಟೀಕಾಗಿ ಬರೆದು ಅಭ್ಯಸಿಸುತ್ತಿದ್ದ ಆದರ್ಶ ಸುಟಿ ಯುವಕ. ಆ್ಯಡ್ಲರ್ ಎಲ್ಲ ಮಿಲಿಟರಿತನವನ್ನೂ ಆಮೂಲಾಗ್ರವಾಗಿ ವಿರೋಧಿಸುತ್ತಿದ್ದ ಶಾಂತಿವಾದಿ. ಮಿಲೇವಾ ಬಲುಜಿಗುಟು ಸ್ವಭಾವದ ಮತ್ತು ಸ್ವತಂತ್ರ ಧೋರಣೆಯ ದಿಟ್ಟ ಮಹಿಳೆ. ಈ ನಾಲ್ವರ ಕೂಟ ಭೌತಗಣಿತವಿಜ್ಞಾನಗಳ ಬುಡಮೇಲು ಮಾಡಿತು, ಮಹಾವಿಜ್ಞಾನಿಗಳು ಒಪ್ಪಿ ಅಂಗೀಕರಿಸಿದ್ದ ಪರಿಕಲ್ಪನೆಗಳ ಬಗ್ಗೆ ಮೂಲಭೂತ ಚಿಂತನೆ ನಡೆಸಿ ಹಲವಾರು ಹುಳುಕುಗಳನ್ನು ಹೊರಗೆಡಹಿತು, ಕಾಡುಬೆಟ್ಟ ಸರೋವರಗಳಲ್ಲಿ ಸ್ವಚ್ಛಂದವಾಗಿ ವಿಹರಿಸಿತು.

ಆಲ್ಬರ್ಟ್ ಪಾಲಿಟೆಕ್ನಿಕ್ಕಿನ ಅಂತಿಮ ಪರೀಕ್ಷೆಯ ಗಲ್ಲುಗಂಬಕ್ಕೆ ಏರಬೇಕಾಗಿತ್ತು. ಗ್ರಾಸ್‌ಮ್ಯಾನನ ತರಗತಿಟಿಪ್ಪಣಿಗಳಿಗೆ ಶರಣು ಹೋಗುವುದೊಂದೇ ಇವನನ್ನು ಉಳಿಸಲು ಇದ್ದ ಉಪಾಯ. ಎಣೆ ಇಲ್ಲದ ಕರುಣೆಯಿಂದ, ಆದರೆ ಸ್ನೇಹಿತನಿಗೆ ತಾನು ಸಲ್ಲಿಸಬೇಕಾದ ಸೇವೆ ಇದೆಂಬ ನಿವೇದನಭಾವದಿಂದ, ಗ್ರಾಸ್‌ಮ್ಯಾನ್ ಆಲ್ಬರ್ಟನಿಗೆ ತನ್ನ ಪುಸ್ತಕರಾಶಿಯನ್ನು ಒಪ್ಪಿಸಿದ. ಆಲ್ಬರ್ಟ್ ಪರೀಕ್ಷೆಯಲ್ಲಿ ಉತ್ತಮಾಂಕಗಳನ್ನು ಪಡೆದು ಉತ್ತೀರ್ಣನಾದ (೧೯೦೦).

ಆ ವೇಳೆಗೆ ಆಲ್ಬರ್ಟ್ ಮತ್ತು ಮಿಲೇವಾ ತಾವು ವಿವಾಹಬಂಧಿತರಾಗಲಿದ್ದೇವೆಂಬ ನಿರ್ಧಾರವನ್ನು ಪ್ರಕಟಿಸಿದ್ದರು. ಮುಂದೆ, ೧೯೦೩ರಲ್ಲಿ ಇವರ ಮದುವೆ ನೆರವೇರಿತು. ಇವರಿಗೆ ಇಬ್ಬರು ಗಂಡು ಮಕ್ಕಳು: ಹ್ಯಾನ್ಸ್ ಆಲ್ಬರ್ಟ್ (೧೯೦೪–೭೩) ಮತ್ತು ಎಡ್ವರ್ಡ್ (೧೯೧೦–೬೫). ದೀರ್ಘಕಾಲ ಈ ದಾಂಪತ್ಯ ಮುಂದುವರಿಯಲಿಲ್ಲ. ೧೯೧೯ರಲ್ಲಿ ಇವರು ಪರಸ್ಪರ ಒಪ್ಪಿಗೆಯಿಂದ ವಿವಾಹವಿಚ್ಛೇದನ ಪಡೆದು ಬೇರ್ಪಟ್ಟರು. ಮಕ್ಕಳು ತಾಯಿಯ ಜೊತೆ ಸೇರಿದರು. ಐನ್‌ಸ್ಟೈನರು ಮಿಲೇವಾರಿಗೆ ಪ್ರೀತಿವಿಶ್ವಾಸಪೂರ್ವಕವಾಗಿ ಮಾಸಿಕ ಅಶನಾರ್ಥ ಕಳಿಸುತ್ತಿದ್ದರು. ಇಷ್ಟೇ ಅಲ್ಲ. ಮುಂದೆ ಇವರಿಗೆ ನೊಬೆಲ್ ಪಾರಿತೋಷಿಕ ಲಭಿಸಿದಾಗ (೧೯೨೧) ಅದರ ಪೂರ್ತಿ ಮೊಬಲಗನ್ನೂ (ನಲವತ್ತು ಸಾವಿರ ಡಾಲರುಗಳು) ಸದ್ದುಗದ್ದಲವಿಲ್ಲದೆ ಈಕೆಗೆ ಕಳಿಸಿಕೊಟ್ಟರು.

ಕಿರಿಯನಾದ ಎಡ್ವರ್ಡನಿಗೆ ಆ ಸುಮಾರಿಗೆ ತನ್ನ ವಿಖ್ಯಾತ ತಂದೆಯ ಪುನರ್ದರ್ಶನವಾಯಿತು. ಹನ್ನೊಂದರ ಹೈದ ತಂದೆಯನ್ನು ಪ್ರಶ್ನಿಸಿದ

"ಡ್ಯಾಡಿ, ನೀನು ಇಷ್ಟೊಂದು ಪ್ರಸಿದ್ಧನಾಗಿರುವುದರ ಕಾರಣವೇನು?"

ಸಾಪೇಕ್ಷತಾಸಿದ್ಧಾಂತದ ಆವಿಷ್ಕರ್ತೃ ಎರಡನೆಯ ಯೋಚನೆ ಇಲ್ಲದೆ, ಆ ಗಳಿಗೆ ವಾಯುಮಂಡಲಾತೀತ ಅಮೂರ್ತ ಔನ್ನತ್ಯದಿಂದ ಗಟ್ಟಿ ನೆಲಕ್ಕೆ ಥಟ್ಟನೆ ಇಳಿದು ಕಾರಣ ವಿವರಿಸಿದರು "ಮಗುವೇ ಕೇಳು! ಕುರುಡು ಹುಳುವೊಂದು ಕಾಲ್ಚೆಂಡಿನ ಮೇಲೆ ಇದು ಗುಂಡಗಿದೆಯೆಂಬುದನ್ನು ಗಮನಿಸದೆ ತೆವಳುತ್ತಿತ್ತು. ಇದನ್ನು ಗಮನಿಸುವ ಅದೃಷ್ಟ ನನ್ನದಾಗಿತ್ತು."

ಹಿಮು ಕಡಿದ ಹೂವು

ಜರ್ಮನಿಯ ಪೌರತ್ವವನ್ನು ತೊರೆದಿದ್ದ ಆಲ್ಬರ್ಟ್ ಸ್ವಿಟ್ಸರ್ಲೆಂಡಿನ ಪ್ರಜೆ ಆಗಲು ಬಯಸಿದ. ಈ ಉದ್ದೇಶಕ್ಕಾಗಿ ಉಳಿತಾಯ ಮಾಡುತ್ತಿದ್ದ ಹಣವೀಗ ಕೈಗೂಡಿಬಂತು. ೧೮೯೯ ಅಕ್ಟೋಬರಿನಲ್ಲಿ ಅರ್ಜಿ ಸಲ್ಲಿಸಿದ. ೧೯೦೧ ಫೆಬ್ರುವರಿಯಲ್ಲಿ ಆಲ್ಬರ್ಟ್ ಐನ್‌ಸ್ಟೈನ್ ಸ್ವಿಟ್ಸರ್ಲೆಂಡಿನ ಪ್ರಜೆ ಆದರು.



"ಇದೇ, ನಾವು ಹೊಸದಾಗಿ ತಗೊಂಡಿರೋ ನಾಯಿ!...ಲೈಸೆನ್ಸ್ ಕೂಡ ತಗೊಂಡಾಯಿತು!.."
"ಎತಕ್ಕೆ! ಕಾರ್ ಓಡಿಸೋದಿಕ್ಕಾ?..."

ಅಲ್ಲಿಗೆ ಇವರ ಪೌರರಾಹಿತ್ಯ ತ್ರಿಶಂಕುತ್ವ ಕೊನೆಗೊಂಡಂತಾಯಿತು. ಜರ್ಮನಿಯ ಸೈನಿಕ ಮೊಹರಿ ಲೇಪ ಅಳಿಸಿಹೋದಂತಾಯಿತು.

ಆಗತಾನೇ ಅರಳಿದ ಮೊಗ್ಗು, ಹೊರನೋಟವನ್ನು ಕಣ್ಣಗಲಿಸಿ ಸವಿಯುತ್ತಿದ್ದ ನಿಸರ್ಗದ ಹಿಗ್ಗು. ಬದುಕಿಗೆ ಗೆಲುವನ್ನು ಎರೆಯಲು ತವಕಿಸುತ್ತಿದ್ದ ಹೂವು, ನೆಲದ ಸಾರವನ್ನು ಹೀರಿ ಮೈ ತುಂಬಿದ್ದ ಬಾಳ ಚೆಲುವು — ಆಲ್ಬರ್ಟ್ ಐನ್‌ಸ್ಟೈನ್. ಉತ್ತಮ ಪದವೀಧರ — ಮುಂದಿನ ಒಂದು ವರ್ಷಕಾಲ ಅವ್ಯಾಹತ ಹಿಮಪಾತಕ್ಕೆ ಈಡಾಗಿ ನರಳಬೇಕಾಯಿತು. ಇಂಥ ಬುದ್ಧಿಶ್ರೀಮಂತ ಹಾಗೂ ಗುಣಶ್ರೀಮಂತ ತರುಣನನ್ನು ಮಾತೃ ವಿದ್ಯಾಸಂಸ್ಥೆ, ಝೂರಿಕ್ಕಿನ ಪಾಲಿಟೆಕ್ನಿಕ್, ತುಂಬ ಆದರಾಭಿಮಾನಗಳಿಂದ ತನ್ನ ಅಧ್ಯಾಪಕ ಬಳಗಕ್ಕೆ ಕರೆದು ಬರಮಾಡಿಕೊಂಡು ಆತನ ಶ್ರೇಯೋಭಿವೃದ್ಧಿಗೆ ಕಾರಣವಾಗಬೇಕಾಗಿತ್ತು, ತನ್ನ ವರ್ಚಸ್ಸನ್ನು ವೃದ್ಧಿಪಡಿಸಿಕೊಳ್ಳಬೇಕಾಗಿತ್ತು. ಆದರೆ ಹೀಗೆ ನಡೆಯಲಿಲ್ಲ. ಎಳೆ ಕಲ್ಪವೃಕ್ಷದ ಬಾಳೇನೂ ಸುಲಭ ಅಲ್ಲ. ಎರಡು ಅವೈಜ್ಞಾನಿಕ ಪ್ರಬಲಾತಂಕಗಳು ಐನ್‌ಸ್ಟೈನರ ಹಾದಿಗೆ ಅಡ್ಡ ಬಂದುವು: ಪ್ರತಿಭೆಯಲ್ಲಿ ಕೆಳದರ್ಜೆಯ ಆದರೆ ಅಧಿಕಾರನಿಮಿತ್ತ ಒದಗಿದ ಅಂತಸ್ತಿನಲ್ಲಿ ಮೇಲು ಮಟ್ಟದ ಪ್ರಾಧ್ಯಾಪಕರು ಪ್ರಖರ ಪ್ರತಿಭಾನ್ವಿತರೂ ಸ್ವತಂತ್ರ ಪ್ರವೃತ್ತಿಯವರೂ ಆಗಿದ್ದ ಖಾಸಾ ಶಿಷ್ಯ ಐನ್‌ಸ್ಟೈನರನ್ನು ತಮ್ಮ ಬಳಗಕ್ಕೆ ಬರಮಾಡಿಕೊಳ್ಳಲು ಇಷ್ಟಪಡಲಿಲ್ಲ (ದ್ವಿತೀಯ ದರ್ಜೆಯ ಬುದ್ಧಿ ಸಾಮರ್ಥ್ಯ ಪ್ರಥಮ ಮಟ್ಟದ ಅಧಿಕಾರ ಸ್ಥಾನದಲ್ಲಿದ್ದರೆ ತೃತೀಯ ಹಾಗೂ ತದನಂತರದ ದರ್ಜೆಯ ಬುದ್ಧಿ ಸಾಮರ್ಥ್ಯಗಳನ್ನು ಮಾತ್ರ ಉತ್ಪಾದಿಸುತ್ತದೆ!); ಪ್ರಚ್ಛನ್ನವಾಗಿ ಹೊಗೆ ಆಡುತ್ತಿದ್ದ ಯೆಹೂದ್ಯ ದ್ವೇಷ (ಹುಟ್ಟಿನ ಆಕಸ್ಮಿಕತೆಯಿಂದಲೂ ಅನಿವಾರ್ಯತೆಯಿಂದಲೂ ವ್ಯಕ್ತಿಗೆ ಬೀಳುವ ಜಾತಿ ಮುದ್ರೆ ಪ್ರತಿಭಾವಿಕಾಸಕ್ಕೆ ಮಾರಕವಾಗುವುದು ಮಾನವೇತಿಹಾಸದ ದುರಂತ ಅಧ್ಯಾಯಗಳಲ್ಲಿ ಒಂದು). ಮಕ್ಕಳಿಗೆ ಖಾಸಗಿ ಪಾಠ ಹೇಳಿ, ಶಾಲೆಯಲ್ಲಿ ಹಂಗಾಮಿ ಕೆಲಸಮಾಡಿ, ಅಂಗಡಿ ಲೆಕ್ಕ ಬರೆದು, ಪಿಟೀಲು ವಾದ್ಯ ನುಡಿಸಿ ಈ ಜಗತ್ಪ್ರತಿಭ

ಜೀವ–ದೇಹ ಸಂಬಂಧ ಕಡಿದು ಹೋಗದಂತೆ ಕಾಪಾಡಿಕೊಂಡುಬರಬೇಕಾಯಿತು.

ಇಂಥ ದುರ್ದಿನಗಳಲ್ಲಿಯೂ ಪಾಲಿಟೆಕ್ನಿಕ್ಕಿನ ಕಪಿ ಒಗರು ಕಿರುನಾಲಗೆಯನ್ನು ಕುಟುಕುತ್ತಿದ್ದ ಕ್ಷಣ ಗಳಲ್ಲಿಯೂ ಐನ್‌ಸ್ಟೈನರ ಜ್ಞಾನಪಿಪಾಸೆ ತನ್ನ ಅಸ್ತಿತ್ವವನ್ನು ವ್ಯಕ್ತಪಡಿಸದೆ ಇರಲಿಲ್ಲ. ಅವರ ವಿಜ್ಞಾನಾಸಕ್ತಿ ಕ್ರಮೇಣ ಮರಳಿತು. ಅವ ರೊಂದು ಸಂಶೋಧನಪ್ರಬಂಧ ಬರೆದರು. ಅದನ್ನು ಜರ್ಮನಿಯ ಲೈಪ್ಜಿಗ್ಗಿನಿಂದ ಪ್ರಕಟ ವಾಗುತ್ತಿದ್ದ ಪ್ರಸಿದ್ಧ ವಿಜ್ಞಾನ ಪತ್ರಿಕೆ Annalen der Physik ಪ್ರಕಟಿಸಿತು. ಲೈಪ್ಜಿಗ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕ ರಾಗಿದ್ದ (ಮುಂದೆ ೧೯೦೯ರಲ್ಲಿ ನೊಬೆಲ್ ಪಾರಿ ತೋಷಿಕ ಗಳಿಸಿದ) ವಿಲ್‌ಹೆಲ್ಮ್ ಆಸ್ಟ್‌ವಾಲ್ಡ್ ಅವರಿಗೆ ಈ ಪ್ರಬಂಧದ ನಕಲನ್ನು ಕಳಿಸುತ್ತ ಐನ್‌ಸ್ಟೈನ್ ನಿವೇದಿಸಿಕೊಂಡರು "ಸಾಮಾನ್ಯ ರಸಾ ಯನವಿಜ್ಞಾನವನ್ನು ಕುರಿತು ನೀವು ರಚಿಸಿರುವ ಪುಸ್ತಕದಿಂದ ಸ್ಫೂರ್ತಿ ಪಡೆದು ಲಗತ್ತು ಪ್ರಬಂಧ ವನ್ನು ನಾನು ಬರೆದದ್ದಾಗಿದೆ. ಎಂದೇ ಇದರ ಒಂದು ಪ್ರತಿಯನ್ನು ನಿಮಗೆ ಒಪ್ಪಿಸುವ ಸ್ವಾತಂತ್ರ್ಯ ವಹಿಸಿದ್ದೇನೆ. ಇದೇ ಸಂದರ್ಭದಲ್ಲಿ, ನಿರಪೇಕ್ಷ ಮಾಪನಗಳಲ್ಲಿ ಪರಿಶ್ರಮವಿರುವ ಗಣಿತೀಯ ಭೌತವಿಜ್ಞಾನಿಯೊಬ್ಬನ ಸೇವೆ ನಿಮಗೆ ಬೇಕಾಗ ಬಹುದೇ ಎಂದು ನಿಮ್ಮನ್ನು ಕೋರುವ ಸಾಹಸ ಮಾಡುತ್ತಿದ್ದೇನೆ. ನನಗೆ ಏನೂ ಆದಾಯವಿಲ್ಲ ವಾದ್ದರಿಂದ ಮಾತ್ರ, ಮತ್ತು ಇಂಥ ಒಂದು ನೆಲೆ ಮಾತ್ರ ನನಗೆ ಇನ್ನಷ್ಟು ಜ್ಞಾನಾರ್ಜನೆಯ ಸಾಧ್ಯತೆ ಯನ್ನು ಒದಗಿಸಬಲ್ಲದಾದ್ದರಿಂದ ಈ ಪ್ರಾರ್ಥನೆ ಸಲ್ಲಿಸುವ ಸ್ವಾತಂತ್ರ್ಯ ವಹಿಸುತ್ತಿದ್ದೇನೆ" (ಮಾರ್ಚ್ ೧೯೦೧).

ಜರ್ಮನಿಯಲ್ಲಿ ಅಂದಿನ ವಿಶ್ವವಿದ್ಯಾಲಯ ಪ್ರಾಧ್ಯಾಪಕರು ಮಹಾ ಘನತೆ ಪಡೆದ ಅತಿಮಾನ ವರೆಂದೇ ಪರಿಗಣಿತರಾಗಿದ್ದರು. ಸಾಮಾನ್ಯ ಮಂದಿ ಅವರ ನೆರಳನ್ನು ಕೂಡ ಸೋಂಕುವಂತಿರಲಿಲ್ಲ. ಘನ ಹೊಂದಿದ ಪ್ರಾಧ್ಯಾಪಕ ಆಸ್ಟ್‌ವಾಲ್ಡರು ಅಪ್ರ ಸಿದ್ಧ ಐನ್‌ಸ್ಟೈನರ ಯಾಚನಾಪತ್ರಕ್ಕೆ ಮಾರೋ ಲೆಯನ್ನು ಕರುಣಿಸಲಿಲ್ಲ.

ವಿಜ್ಞಾನಭಾವನೆಗಳು ಸ್ವಯಂಪ್ರೇರಿತವಾಗಿ ಬಂದು ಐನ್‌ಸ್ಟೈನರನ್ನು ಬೇರೊಂದು ಲೋಕಕ್ಕೆ ಒಯ್ಯುತ್ತಿದ್ದವು. ಭೌತವಿಜ್ಞಾನದಲ್ಲಿ, ವ್ಯಾಪಕ ವಾಗಿ ಭೌತವಿಶ್ವದ ವಿಶಿಷ್ಟ ವಿದ್ಯಮಾನಗಳಲ್ಲಿ, ಊಹನೆಗಳನ್ನು (speculations) ಮಂಡಿ ಸುತ್ತ ಅವುಗಳ ಬೆನ್ನಟ್ಟಿ ಫಲಿತಾಂಶಗಳನ್ನು ಪಡೆ ಯುವುದು ಇವರ ಗೀಳಾಯಿತು.

ಸಾಧಾರಣವಾಗಿ ಸಂಶೋಧನೆ ಮುನ್ನಡಿ ಇಡು ವುದು ಪ್ರಾಯೋಗಿಕ ಪ್ರತಿರೂಪ ವಿಧಾನದಿಂದ. ಈ ವಿಧಾನದಲ್ಲಿ ವೀಕ್ಷಣೆಗಳಿಂದಲೂ ಪ್ರಯೋಗ ಗಳಿಂದಲೂ ಲಭಿಸಿದ ಮಾಹಿತಿಗಳನ್ನು ಆಧರಿಸಿ ಇವನ್ನು ತಾಳೆಪಡಿಸಬಲ್ಲ ಪ್ರತಿರೂಪವನ್ನು (model) ನಿರ್ಮಿಸುತ್ತಾರೆ. ಇದೊಂದು ಭೌತಾ ಕೃತಿ ಆಗಿರಬಹುದು. ಇಲ್ಲವೇ ಗಣಿತೋಕ್ತಿ ಆಗಿರ ಬಹುದು. ತರುವಾಯ ಈ ಪ್ರತಿರೂಪ ಎಷ್ಟರ ಮಟ್ಟಿಗೆ ವಾಸ್ತವತೆಯೊಡನೆ ಹೊಂದುತ್ತದೆ. ಅಂದರೆ ಇವನ್ನು ವಿವರಿಸುವುದರಲ್ಲಿ ಯಶಸ್ವಿ ಯಾಗುತ್ತದೆ ಎಂಬುದನ್ನು ತಪಾಸಿಸುತ್ತಾರೆ. ಈ ವೇಳೆ ಲಭಿಸುವ ದೋಷಗಳನ್ನು ಗಮನಿಸಿ ಪ್ರತಿ ರೂಪವನ್ನು ಯುಕ್ತವಾಗಿ ಮಾರ್ಪಡಿ-ಸುತ್ತಾರೆ. ಹೀಗೆ ಹೆಜ್ಜೆ ಮೇಲೆ ಹೆಜ್ಜೆ ಇಟ್ಟು ಪರಿಪೂರ್ಣತೆಯೆಡೆಗೆ ಸಾಗುವ ವಿಧಾನವಿದು. ಯೋಹನ್ ಕೆಪ್ಲರ್ (೧೫೭೧—೧೬೩೦) ಆವಿಷ್ಕರಿಸಿದ ಗ್ರಹಚಲನ ನಿಯಮ-ಗಳು ಈ ವಿಧಾನಕ್ಕೆ ನಿದರ್ಶನ. ಊಹನಾವಿಧಾನ ವಾದರೋ ವಾಸ್ತವತೆಯನ್ನು ಕುರಿತು ಬರೆದ ಭಾಷ್ಯ. ಮಹಾಪ್ರತಿಭರ ಊಹನೆಗಳು ಮಾತ್ರ ಸಫಲವಾಗುತ್ತವೆ. ವಿಶ್ವಗುರುತ್ವಾಕರ್ಷಣ ನಿಯ ಮವನ್ನು ಐಸಾಕ್ ನ್ಯೂಟನ್ ಪ್ರತಿಪಾದಿಸಿದ್ದು ಊಹನಾವಿಧಾನದಿಂದ. ನ್ಯೂಟನ್ ಅನಂತರ ಉದಯಿಸಿದ ಮಹೋಜ್ವಲ ತಾರೆಯೇ ಐನ್‌ ಸ್ಟೈನ್.

ಊಹನೆಗಳಿಂದ ಹೊಟ್ಟೆ ತುಂಬಿಸುವುದು ಸಾಧ್ಯವಿಲ್ಲವಷ್ಟೆ! ವಾಸ್ತವತೆಯ ಈ ನಕ್ರಪೂರಿತ ಮಡುವಿನಿಂದ ಅಂದು ಐನ್‌ಸ್ಟೈನರನ್ನು ದಂಡೆ ಹತ್ತಿಸಿದ್ದು ಅವರ ಮಾಜಿ ಸಹಪಾಠಿ ಗ್ರಾಸ್ ಮ್ಯಾನ್. ಹೊಟ್ಟೆ ತುಂಬಿಸಲು ಆ ಕೆಲಸ ಈ ಕೆಲಸ

ಎಂದುಂಟೇ ಹೋಟೆ ಕೆಲಸವೇ ಸಾಚಾ ಕೆಲಸ, ಅದರಲ್ಲಿಯೇ ತೃಪ್ತಿ ತಳೆಯುತ್ತೇನೆ ಎಂದು ಕೊಂಡಿದ್ದ ಐನ್‌ಸ್ಟೈನರಿಗೆ ಈ ಮಿತ್ರ ಸೂಚಿಸಿದ್ದು ಇಂಥದೇ ಒಂದು ಕೆಲಸವನ್ನು: ಸ್ವಿಟ್ಸರ್ಲೆಂಡಿನ ಬರ್ನ್ ನಗರದಲ್ಲಿದ್ದ ಏಕಸ್ವ ಕಛೇರಿಯಲ್ಲಿ (Patent office) ಏಕಸ್ವ ತಪಾಸಣೆಕಾರನ ಹುದ್ದೆ. ಗ್ರಾಸ್‌ಮ್ಯಾನರ ಪ್ರಭಾವದಿಂದ ಐನ್‌ಸ್ಟೈನರಿಗೆ ಈ 'ಹಿರಿಹುದ್ದೆ' ದಕ್ಕಿತು. ಕಲಿತದ್ದು ಸೈದ್ಧಾಂತಿಕ ಭೌತವಿಜ್ಞಾನ, ಪ್ರಾವೀಣ್ಯ ಗಳಿಸಿದ್ದು ಭೌತ ಮತ್ತು ಗಣಿತ ವಿಜ್ಞಾನಗಳಲ್ಲಿ; ಮಾಡುತ್ತಿದ್ದ ಕೆಲಸ? ಉಪಜ್ಞೆಕಾರರು (inventors) ತಮ್ಮ ನೂತನ ಉಪಜ್ಞೆಗಳಿಗೆ (inventions) ಏಕಸ್ವ ಪಡೆಯಲು ಸಲ್ಲಿಸುತ್ತಿದ್ದ ತಾಂತ್ರಿಕ ನಕ್ಷೆ ಹಾಗೂ ವಿವರಗಳನ್ನು ವೈಜ್ಞಾನಿಕ ತಪಾಸಣೆಗೆ ಒಳಪಡಿಸಿ ಅವರ ಕೋರಿಕೆಗೆ ಮನ್ನಣೆ (ಅಂದರೆ ಏಕಸ್ವ) ನೀಡಬಹುದೆ ಬಾರದೆ ಎಂದು ಶಿಫಾರಸು ಮಾಡುವುದು. ಒಂದೊಂದು ಆಲೇಖ್ಯದ ಹಿಂದೆಯೂ ಒಂದೊಂದು ಅಜ್ಞಾತ ಸೃಷ್ಟಿಶೀಲ ಮನಸ್ಸು ಹುದುಗಿದೆ, ಆ ಚೈತನ್ಯವನ್ನು ತಾನು ಗೌರವದಿಂದ ಸ್ವಾಗತಿಸಿ ಅದಕ್ಕೆ ಮನ್ನಣೆ ಕೊಡಬೇಕು ಎಂಬ ನಿವೇದನಭಾವದಿಂದ ಇವರು ಆ ಹೊಣೆಗಾರಿಕೆಯನ್ನು ನಿರ್ವಹಿಸುತ್ತಿದ್ದರು.

'ತಸ್ಕರಶೋಧನೆ' (ಅಜ್ಞಾತ x ನ ಶೋಧನೆ) ಯಲ್ಲಿ ನಿಷ್ಣಾತರಾಗಿದ್ದ ಐನ್‌ಸ್ಟೈನರ ಪ್ರಖರ ಮತಿಗೆ ಏಕಸ್ವ ತಪಾಸಣೆ ಅತಿ ಸುಲಭದ ಹವ್ಯಾಸವಾಗಿ ಕಂಡುಬಂದಿತು. ತಮ್ಮ ದೈನಂದಿನ ಕರ್ತವ್ಯವನ್ನು ಕೇವಲ ಎರಡು ಮೂರು ಗಂಟೆಗಳಲ್ಲಿ ಬಲು ಹಗುರವಾಗಿ ಆದರೆ ಅತ್ಯಂತ ಪರಿಷ್ಕಾರವಾಗಿ ಇವರು ನಿರ್ವಹಿಸುತ್ತಿದ್ದರು. ಉಳಿದ ವೇಳೆ?

ನವ ಅರುಣೋದಯ


ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಅಂದರೆ ಐನ್‌ಸ್ಟೈನರು ರಂಗಪ್ರವೇಶ ಮಾಡಲಿದ್ದ ಸಂದರ್ಭದಲ್ಲಿ ಭೌತವಿಜ್ಞಾನಕ್ಷೇತ್ರ ಪರ್ಯಾಪ್ತ ಸ್ಥಿತಿಯನ್ನೈದಿತ್ತು. ಇದರಲ್ಲಿ ನೂತನ ಸಂಶೋಧನೆಗಳಿಗೆ ಎಳ್ಳಷ್ಟೂ ಅವಕಾಶವಿರಲಿಲ್ಲ. ಕೇವಲ ಒಂದು ನೂರ ಎಪ್ಪತ್ತಮೂರು ವರ್ಷಗಳ ಹಿಂದೆ, ೧೭೨೭ರಲ್ಲಿ, ಗತಿಸಿದ್ದ ನ್ಯೂಟನ್ನನ ಸಾಮ್ರಾಜ್ಯ
ವ್ಯಾಪಿಯೂ ಸರ್ವಗ್ರಾಹಿಯೂ ಆಗಿ
ವಿಜ್ಞಾನದಲ್ಲಿ ತಿಳಿಯುವಂಥದು ಅಥವಾ ಅ
ವಂಥದು ಏನೂ ಇಲ್ಲ ಎನ್ನುವ ಶೂನ್ಯ ಪರಿ
ಏರ್ಪಟ್ಟಿತ್ತು. ವಿಶ್ವದ ಸಮಸ್ತ ವಿದ್ಯಮಾನ
ನ್ಯೂಟನ್ ವಿಧಿಸಿದ ಚೌಕಟ್ಟಿನ ಒಳಗೆ ಕ್ರಮ
ವಾಗಿ ಗಣಿತನಿಯಮಾನುಸಾರ ನಡೆಯುತ್ತಿರು
ಹೊಸ ಸಮಸ್ಯೆಗೆ ಎಡೆಯೆಲ್ಲಿ?

ಹೀಗಿದ್ದರೂ ಆಗ ಈಗ ಅಲ್ಲಿ ಇಲ್ಲಿ ಕೆಲವು
ಅಪಸ್ವರ ಕೇಳಿಬರದೇ ಇರುತ್ತಿರಲಿಲ್ಲ.
ಉದಾಹರಣೆಗಳನ್ನು ಉಲ್ಲೇಖಿಸಬಹುದು.

ಮೊದಲಿನ ಅಪಸ್ವರ ಬೆಳಕಿನ ಸಂಚಾರ ಮ
ಮವೆಂದು ನಂಬಲಾಗಿದ್ದ ಈಥರನ್ನು ಕುರಿ
ನಾವು ಮಾತಾಡಿದ್ದು ನೆರೆಯವನಿಗೆ ಕೇಳು
ಶಬ್ದದ ಅಲೆಗಳು ವಾಯುಮಾಧ್ಯಮದ ಮ
ಸಾಗುವುದರಿಂದ ಸಾಧ್ಯವಾಗುತ್ತದೆ. ನಿರ್ವಾ
ಶಬ್ದ ಪ್ರಸಾರವಾಗದು, ಆದರೆ ಬೆಳಕು
ರವಾಗಬಲ್ಲದು ಎಂಬ ಸಂಗತಿ ಇಂದಿನ
ಶಾಲೆಯ ವಿದ್ಯಾರ್ಥಿಗಳಿಗೆ ಸಹ ಪ್ರಾಂ
ವಾಗಿ ತಿಳಿದಿದೆ – ಪಾರದರ್ಶಕ ಗಾಜಿನ ಜಾಡಿ
ಗಿರಿಸಿದ ಅಲಾರಮ್ ಗಡಿಯಾರದ ಪ್ರಯ
ಮಾಡಿ ಅಥವಾ ನೋಡಿ ಬೆರಗಾಗದವರಾರು?
ಕಾದರೂ ಸಂಚರಿಸುವುದು ಅಲೆಅಲೆಗಳಾಗಿ
ಎಂದು ತಿಳಿದಿತ್ತು. ಎಂದಮೇಲೆ ಬೆಳಕಿನ
ಗಳನ್ನು ಒಯ್ಯಬಲ್ಲ ಮಾಧ್ಯಮವೊಂದು
ಬೇಕಷ್ಟೆ. ಅದು ಹೇಗೂ ವಾಯು ಅಲ್ಲ.
ರಿಂದ ಅದಕ್ಕೊಂದು ಹೊಸ ಕಾಲ್ಪನಿಕ
ಟ್ಟರು: ಈಥರ್. ಬಲು ತಳುವಾದ
ರ್ಥವೆಂದು ಈ ಪದದ ಅರ್ಥ, ಬೆಳಕಿನ ಸಂ
ಮಾಧ್ಯಮವಾದ ಈಥರಿನ ಗುಣಲಕ್ಷಣಗಳ ಶ
ನೆಯನ್ನು ಪ್ರಾಯೋಗಿಕವಾಗಿಯೂ ಗಣಿ
ವಾಗಿಯೂ ಕೈಗೊಂಡರು. ನಕ್ಷತ್ರಗಳಿಂದ
ಹೊಮ್ಮುವ ಬೆಳಕು ವಿಶ್ವವ್ಯಾಪಿಯಾದ ಈ
ಕಡಲಿನಲ್ಲಿ ಈಸಿ ಭೂಮಿಗೆ ಬರುತ್ತದೆ, ಅದ್ದ
ನಕ್ಷತ್ರಗಳು ನಮಗೆ ಗೋಚರಿಸುತ್ತವೆ
ದಾಗಿ ತರ್ಕ ವಿವರಿಸಿತು. ಆದರೆ ಈ ಈಥ
ಸೆರೆಹಿಡಿಯಲು ಮಾಡಿದ ಸರ್ವ ಪ್ರಯತ್ನ

ವಿಫಲವಾದುವು. ಹಾಗಾದರೆ ಈಥರ್ ಇಲ್ಲ ಅನ್ನೋಣವೆ? ಬೆಳಕು ಪ್ರಸಾರವಾಗದು. ಈಥರ್ ಇದೆ ಅನ್ನೋಣವೇ? ಅದು ಕೈಗೆ ಸಿಕ್ಕುತ್ತಿಲ್ಲ. ಇನ್ನಷ್ಟು ಸೂಕ್ಷ್ಮ ಪ್ರಯೋಗಗಳಿಂದ ಅದನ್ನು ಪತ್ತೆ ಹಚ್ಚಬೇಕೆಂದು ಚಿಂತಿಸುತ್ತಿದ್ದಾಗ ಗಣಿತಗಾರರುಗಳು ಒಗ ಸಿಪ್ಪು ಬೀರಿದುದನ್ನೇ—ಅವುಗಳ ಪ್ರಕಾರ ಈಥರ್ ಇರುವುದಾದ ಪಕ್ಷ ಅದು ನಿಶ್ಚಲವಾಗಿರಬೇಕು. ಇದರ ಅರ್ಥ ಭೂಮಿ, ಚಂದ್ರ, ಬುಧ, ಶುಕ್ರ ಮುಂತಾದ ಸಮಸ್ತ ಆಕಾಶಕಾಯಗಳೂ ಚಲನ ರಹಿತವಾಗಿವೆ ಎಂದು. ಈ ವ್ಯಾಘಾತದ (contradiction) ಮರ್ಮವೇನು? ಎರಡನೆಯ ಅಪಸ್ವರ ಎದ್ದದ್ದು ಬೆಳಕಿನ ವೇಗವನ್ನು ಕುರಿತದ್ದು. ಹರಿಯುತ್ತಿರುವ ನೀರಿಗೆ ಈಸಲು ಧುಮುಕಿದವನಿಗೆ ಅಥವಾ ಅದರಲ್ಲಿ ದೋಣಿ ಹಾಯಿಸಲು ಯತ್ನಿಸಿದವನಿಗೆ ಒಂದು ಸಂಗತಿ ಮನವರಿಕೆ ಆಗಿರುತ್ತದೆ. ಹೊನಲಿನ ದಿಶೆಯಲ್ಲಿ ಚಲನೆ ಸುಲಭ, ಎದುರು ದಿಶೆಯಲ್ಲಿ ಕಷ್ಟ. ವ್ಯಕ್ತಿಯ ವೇಗವೂ ಹೊನಲಿನ ವೇಗವೂ ಸೇರಿ ಮೊದಲನೆಯ ಚಲನೆ ಸುಲಭವಾದರೆ ಎರಡನೆಯದರಲ್ಲಿ ವ್ಯಕ್ತಿ ಹೊನಲಿನ ವೇಗವನ್ನು ಎದುರಿಸಬೇಕಾಗುವುದರಿಂದ ಚಲನೆ ಕಷ್ಟವಾಗುತ್ತದೆ. ತಾತ್ತ್ವಿಕವಾಗಿ ಇದರ ಅರ್ಥವಿಷ್ಟು: ವಸ್ತುವಿನ ಚಲನೆಯ ವೇಗಕ್ಕೆ ಆಕರದ ಅಂದರೆ ಆ ವಸ್ತುವಿನ ಆಗಮಸ್ಥಾನದ ವೇಗವೂ ಸೇರಿ ವಸ್ತುವಿನ ಫಲಿತವೇಗ ಹೆಚ್ಚಾಗಬಹುದು ಯಾ ಕಡಿಮೆ ಆಗಬಹುದು. ಅಂತೂ ಅದು ಆಕರ ನಿಶ್ಚಲ ಸ್ಥಿತಿಯಲ್ಲಿದ್ದಾಗಿನ ವೇಗಕ್ಕಿಂತ ಬೇರೆ ಆಗುತ್ತದೆ. ಬೆಳಕನ್ನು ಕುರಿತಂತೆ ಕೂಡ ಈ ತತ್ತ್ವ ಸಿಂಧುವಾಗಬೇಕು. ಅಂದರೆ ಬೆಳಕನ್ನು ಬೀರುವ ಆಕರ ಸ್ವತಃ ಚಲಿಸುತ್ತಿದ್ದರೆ ಆಗ ಬೆಳಕಿನ ವೇಗ ತದನುಗುಣವಾಗಿ ಹೆಚ್ಚು ಅಥವಾ ಕಡಿಮೆ ಆಗಬೇಕು ಎಂಬುದಾಗಿ ವಿಜ್ಞಾನಿಗಳು ಭಾವಿಸಿದ್ದರು. ಮೈಕೆಲ್‌ಸನ್ ಮತ್ತು ಮಾರ್ಲೀ ಎಂಬ ಇಬ್ಬರು ಭೌತವಿಜ್ಞಾನಿಗಳು ಈ ಭಾವನೆಯ ತಳ ಶೋಧಿಸಲು ಪ್ರಯೋಗವನ್ನು ರೂಪಿಸಿದರು. ಸೆಕೆಂಡಿಗೆ ಸುಮಾರು ಮೂರು ಲಕ್ಷ ಕಿಲೋಮೀಟರ್ ದೂರ ನೆಗೆಯುವ ಈ ದೂತ ಸಾಕ್ಷಾತ್ ಭೂಮಿಗೆ ಏಳು ಪ್ರದಕ್ಷಿಣೆಗಳಿಗಿಂತಲೂ ಜಾಸ್ತಿ ಆಗುವುದು— ಬೆಳಕಿನ ಮೇಲೆ ಪ್ರಯೋಗವೆಸಗುವುದೇನೂ ಸಾಮಾನ್ಯ ಸವಾಲಾಗಿರಲಿಲ್ಲ. ೧೮೮೭ರಲ್ಲಿ ಕೈಗೊಂಡ ಅವರ ರೋಮಾಂಚಕಾರಿ ಪ್ರಯೋಗ ಬೆಳಕನ್ನು ಕುರಿತ ನಂಬಿಕೆಯ ಬುಡವನ್ನೇ ಹಂದಾಡಿಸಿಬಿಟ್ಟಿತು. ಬೆಳಕಿನ ವೇಗ ಆಕರದ ವೇಗವನ್ನು ಅವಲಂಬಿಸಿಲ್ಲ, ಆಕರ ನಿಶ್ಚಲವಾಗಿರಲಿ ಚಲಿಸುತ್ತಿರಲಿ ಅದರಿಂದ ಹೊಮ್ಮುವ ಬೆಳಕಿನ ಮೇಲೆ ಏನೂ ಪರಿಣಾಮವಾಗದು, ಬೆಳಕಿನ ವೇಗ ಸದಾ ಒಂದೇ. ಅದು ನಿರ್ವಾತದಲ್ಲಿ ಸೆಕೆಂಡಿಗೆ ೨,೯೯,೭೭೪ ಕಿಲೋಮೀಟರುಗಳೆಂದು ಪ್ರಯೋಗ ಶ್ರುತಪಡಿಸಿತು. ಈ ವ್ಯಾಘಾತದ ಮರ್ಮವೇನು?

ಇಲ್ಲಿ ಇನ್ನೊಂದು ವಿಚಾರವನ್ನು ಕುರಿತಂತೆ ಎರಡು ಮಾತು ಅವಶ್ಯ. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಅಣು ಪರಮಾಣುಗಳ ಸೂಕ್ಷ್ಮ ಪ್ರಪಂಚದ ಕೆಲವೊಂದು ಅಂತರಂಗ ರಹಸ್ಯಗಳು ಕ್ರಮೇಣ ಬಹಿರಂಗ ಸತ್ಯಗಳಾಗತೊಡಗಿದವು. ಇವನ್ನು ವಿವರಿಸುವಲ್ಲಿ ನ್ಯೂಟನ್ ಬಲವಿಜ್ಞಾನದ (Newtonian mechanics) ಹತ್ತಾರು



“ಇವತ್ತು ದೀನದಲಿತರ ಸಭೆಯಲ್ಲಿ ಸಮಾಜ ತುಳಿಯುತ್ತಿರುವುದು ನಿಮ್ಮನ್ನಲ್ಲ, ನಮ್ಮನ್ನು-ಬೇಕಿದ್ದರೆ ನನ್ನ ಟಬೂನ ನೋಡಿ ಅನುಭವಿಸಿದ್ದೇನೆ; ಚೆನ್ನಾಗಿ ಬಣ್ಣ ಹಾಕು.”

ಗಳು ಫಲಕಾರಿಗಳಾಗುತ್ತಿರಲಿಲ್ಲ. ನಮ್ಮ ವ್ಯವಹಾರ ಪ್ರಪಂಚವೊಂದು ದೊಡ್ಡ ಯಂತ್ರ. ಉದಾಹರಣೆಗೆ ವಾಹನಗಳ ಚಲನೆ, ನೈಸರ್ಗಿಕ ಚಲನೆ ಇತ್ಯಾದಿ ವಿದ್ಯಮಾನಗಳು ಹೇಗೆ ಸಂಭವಿಸುತ್ತವೆ, ಅವು ಭವಿಷ್ಯದಲ್ಲಿ ಹೇಗೆ ವರ್ತಿಸಲಿವೆ ಮುಂತಾದವನ್ನು ತಿಳಿಯಲು ಪ್ರಪಂಚವನ್ನು ಯಂತ್ರವೆಂದು ಪರಿಗಣಿಸಿ ಇದಕ್ಕೆ ನ್ಯೂಟನ್ ಬಲವಿಜ್ಞಾನದ ಹತ್ಯಾರುಗಳನ್ನು ಪ್ರಯೋಗಿಸಿದರಾಯಿತು. ರೇಲ್ವೇ ವೇಳಾಪಟ್ಟಿಯನ್ನು ತಯಾರಿಸುವಲ್ಲಿಂದ ಹಿಡಿದು ಭವಿಷ್ಯ ಗ್ರಹಣಗಳನ್ನು ಮುನ್ನುಡಿಯುವಲ್ಲಿ ವರೆಗೆ ಮಾನವ ಗಳಿಸಿರುವ ಯಶಸ್ಸು ಇಂಥ ಪ್ರಯೋಗಗಳಿಂದಾಗಿದೆ. ಅಂದ ಮಾತ್ರಕ್ಕೆ ಇವೇ ಹತ್ಯಾರುಗಳಿಂದ ಅಣು ಪರಮಾಣುಗಳ ಪ್ರಪಂಚದ ಸೂಕ್ಷ್ಮಪ್ರಪಂಚದ ವ್ಯವಹಾರಗಳನ್ನು ಕೂಡ ನಿಭಾಯಿಸಲು ಬರುವೇತೆಂದು ಹೇಳುವಂತಿಲ್ಲ. ಹೊಸ ಹತ್ಯಾರುಗಳು ಅನಿವಾರ್ಯವಾಗುತ್ತವೆ. ಹೇಗೆ ಉದರಶಸ್ತ್ರ ಚಿಕಿತ್ಸೆಗೆ ಬಳಸುವ ಉಪಕರಣಗಳಿಗಿಂತ ಭಿನ್ನವಾದವು ನೇತ್ರಶಸ್ತ್ರಚಿಕಿತ್ಸೆಗೆ ಅಗತ್ಯವಾಗುವುವೊ ಹಾಗೆ.

೧೮೫೮ರಿಂದ ೧೯೪೭ರ ತನಕ ಬಾಳಿದ ಜರ್ಮನ್ ಭೌತವಿಜ್ಞಾನಿ ಮಾಕ್ಸ್ ಪ್ಲಾಂಕ್ ಅವರು ಶಕಲ ಬಲವಿಜ್ಞಾನವೆಂಬ (Quantum mechanics) ಭೌತವಿಜ್ಞಾನದ ನೂತನ ಶಾಖೆಯನ್ನು ಪ್ರವರ್ತಿಸಿ ಈ ಸೂಕ್ಷ್ಮೋಪಕರಣಗಳನ್ನು ಒದಗಿಸಿದರು. ಬೆಳಕು ಅಲೆಗಳಾಗಿ ಚಲಿಸುವಂತೆಯೇ ಅತ್ಯಂತ ಸೂಕ್ಷ್ಮ ಕಣಗಳಾಗಿಯೂ ಚಲಿಸುತ್ತವೆ ಎಂಬ ನಿಲವಿಗೆ ಶಕಲಬಲವಿಜ್ಞಾನ ಸಮರ್ಪಕ ತಳಹದಿ ಕಟ್ಟಿತು. ಬೆಳಕಿನ ಸೂಕ್ಷ್ಮ ಕಣಗಳಿಗೆ – ನಿಖರವಾಗಿ, ಶಕ್ತಿ ಕಟ್ಟುಗಳಿಗೆ – ಫೋಟಾನುಗಳೆಂದು ಹೆಸರು. ಸ್ಥೂಲವಾಗಿ ಬೆಳಕೆಂಬುದು ಫೋಟಾನುಗಳ ಎರಚಿಕೆ ಎಂದು ಭಾವಿಸಬಹುದು. ಮಾಕ್ಸ್ ಪ್ಲಾಂಕ್ ಅವರ ಕ್ರಾಂತಿಕಾರಿ ಸಿದ್ಧಾಂತ ಪ್ರಪಂಚದ ಬೆಳಕನ್ನು ಕಂಡದ್ದು ೧೯೦೦ರ ಡಿಸೆಂಬರ್ ೧೪ರಂದು. ಶಕಲಬಲವಿಜ್ಞಾನದ ಜನ್ಮದಿನವದು.

ಹೀಗೆ ಇಪ್ಪತ್ತನೆಯ ಶತಮಾನದ ಮೊದಲ ವರ್ಷದಲ್ಲಿ ಭೌತವಿಜ್ಞಾನಪ್ರಪಂಚ ಒಂದು ಪರ್ವಬಿಂದುವನ್ನು ತಲಪಿತ್ತು. ಬೆಳಕಿನ ತೋರ್ಕೆ ಅಸಂಗತ ಚಲನೆಯನ್ನು ಸಮರ್ಪಕವಾಗಿ ವಿವರಿಸಲಾಗದ ನ್ಯೂಟನ್ ಚೌಕಟ್ಟು, ಸೂಕ್ಷ್ಮ ಪ್ರಪಂಚದ ನಡವಳಿಕೆಯನ್ನು ಸಮರ್ಥವಾಗಿ ವಿವರಿಸಬಲ್ಲ ಶಕಲಬಲವಿಜ್ಞಾನ ಇವು ದಟ್ಟವಾಗಿ ಕವಿದು ಹವೆ ಗಾಢವಾಗಿತ್ತು. ಯಾವ ಪೂರ್ವಾಗ್ರಹದಿಂದಲೂ ಬಾಧಿತವಾಗದ, ಸ್ವತಂತ್ರವಾಗಿಯೂ ಮೂಲಭೂತವಾಗಿಯೂ ಚಿಂತಿಸಿ ಊಹನೆಗಳನ್ನು ಮಂಡಿಸಬಲ್ಲ, ಪ್ರತ್ಯುತ್ಪನ್ನಮತಿಯೊಂದೇ ಭೌತವಿಜ್ಞಾನವನ್ನು ಈ ಕುರುಡುಗಲ್ಲಿಯಿಂದ ಪಾರುಗಾಣಿಸಬಲ್ಲದಾಗಿತ್ತು.

ಹೂವು ಅರಳಿತು

ಏಕಸ್ವ ಕಛೇರಿಯ ಹುದ್ದೆ ನಿರುದ್ಯೋಗಿ ಐನ್‌ಸ್ಟೈನರಿಗೆ ವರಪ್ರದಾನದಂತೆ ಒದಗಿ ಬಂದಿತ್ತು. ಹೊಟ್ಟೆಗೆ ಹಿಟ್ಟು, ನಿಲ್ಲಲು ನೆಲೆ ನಿಗದಿಯಾದುವು. ಇವರು ಗೃಹಸ್ಥರಾಗಿ ಸಂಸಾರ ಹೂಡಿದರು. ಉಪಕಾರಿ ಗ್ರಾಸ್‌ಮ್ಯಾನರ ಸಾಮಯಿಕ ಸಹಾಯವನ್ನು ಐನ್‌ಸ್ಟೈನರು, ೧೯೩೬ರಲ್ಲಿ ಗ್ರಾಸ್‌ಮ್ಯಾನ್ ತೀರಿಕೊಂಡಾಗ ಶ್ರೀಮತಿ ಗ್ರಾಸ್‌ಮ್ಯಾನರಿಗೆ ಬರೆದ ಸಾಂತ್ವನ ಪತ್ರದಲ್ಲಿ ಹೃದಯಂಗಮವಾಗಿ ಸ್ಮರಿಸಿಕೊಂಡಿದ್ದಾರೆ "......ಪಾಲಿಟೆಕ್ನಿಕ್ಕಿನಲ್ಲಿನ ನಮ್ಮ ವಿದ್ಯಾರ್ಥಿ ದಿನಗಳು ನನ್ನ ನೆನಪಿಗೆ ಬರುತ್ತಿವೆ. ಅವರು ಆದರ್ಶ ವಿದ್ಯಾರ್ಥಿ. ನಾನೋ ಅಚ್ಚುಕಟ್ಟು ಇಲ್ಲದವ, ಹಗಲುಗನಸುಗಾರ. ಅವರಿಗೆ ಉಪಾಧ್ಯಾಯರ ಜೊತೆ ನಿಕಟ ಬಾಂಧವ್ಯವಿತ್ತು ಮತ್ತು ಅವರು ಪ್ರತಿಯೊಂದನ್ನೂ ಸುಲಭವಾಗಿ ಗ್ರಹಿಸುತ್ತಿದ್ದರು. ನಾನೋ ಪೂರಾ ಬೇರೆಯೇ. ಅತೃಪ್ತ. ಜನಪ್ರಿಯತೆ ಗಳಿಸಿದ್ದಿಲ್ಲ. ಆದರೆ ನಾವು ಒಳ್ಳೆಯ ಸ್ನೇಹಿತರಾಗಿದ್ದವು. ಪ್ರತಿ ಕೆಲವೇ ವಾರಗಳಿಗೊಮ್ಮೆ ನಾವು ಮೆಟ್ರೊಪೋಲಿಸಲ್ಲಿ ಬರ್ಫಶೀತಲಿತ ಕಾಫಿ ಹೀರುತ್ತ ನಡೆಸುತ್ತಿದ್ದ ಸಂಭಾಷಣೆಗಳು ನನ್ನ ಅತ್ಯಂತ ಮಧುರ ಸ್ಮರಣೆಗಳ ಸಾಲಿಗೆ ಸೇರಿಹೋಗಿವೆ. ಮುಂದೆ ನಮ್ಮ ವಿದ್ಯಾಭ್ಯಾಸದ ಕೊನೆ ಬಂತು...ಹಠಾತ್ತಾಗಿ ನಾನು ಎಲ್ಲರಿಂದಲೂ ಕೈ ಬಿಡಲ್ಪಟ್ಟೆ. ದಿಙ್ಮೂಢನಾದೆ. ಬದುಕನ್ನು ಹೇಗೆ ಎದುರಿಸಬೇಕೆಂದು ತಿಳಿಯಲಾರದವನಾದೆ. ಆದರೆ ಅವರು ಆಗ ನನ್ನ ಒತ್ತಿಗೆ ನಿಂತರು. ಅವರ ಹಾಗೂ ಅವರ ತಂದೆಯವರ ಮೂಲಕ ನಾನು ಹ್ಯಾಲರ್ ಅವರ ಏಕಸ್ವ ಕಛೇರಿ

ಯನ್ನು ಸೇರಿಕೊಂಡೆ. ಒಂದು ರೀತಿಯಲ್ಲಿ ಇದು ನನ್ನ ಬದುಕನ್ನು ಉಳಿಸಿತು. ಇದಲ್ಲವಾಗಿದ್ದರೆ ನಾನು ಸತ್ತು ಹೋಗುತ್ತಿದ್ದನೆಂದು ಅರ್ಥವಲ್ಲ. ಆದರೆ ಬೌದ್ಧಿಕವಾಗಿ ಕುಂಠಿತನಾಗುತ್ತಿದ್ದೆ."

ಏಕಸ್ವ ಕಛೇರಿಯಲ್ಲಿ ಐನ್‌ಸ್ಟೈನ್ ಮಾಡುತ್ತಿದ್ದ 'ಮೋಜಿ ಕೆಲಸ' ಬಲು ಬೇಗ, ಒಂದೆರಡು ಗಂಟೆಗಳಲ್ಲೇ, ಮುಗಿಯುತ್ತಿತ್ತು. ಉಳಿದ ವೇಳೆ?

ಬೆಳಕಿನ ಅಲೆಯ ಜೊತೆ ಕಾಲಿಡುವಾತನಿಗೆ ಆ ಅಲೆ ಹೇಗೆ ಕಂಡೀತು? ಬೆಳಕಿನ ಅಲೆಗಿಂತ ರಭಸವಾಗಿ ಓಡುವಾತನಿಗೆ? ಇವೇ ಮೊದಲಾದ ಸಮಸ್ಯೆಗಳು ಇವರನ್ನು ಈಗ ಹಿಂದೆಂದಿಗಿಂತಲೂ ಗಾಢವಾಗಿ ಬಾಧಿಸುತ್ತಿದ್ದುವು. ವಿಜ್ಞಾನಿಯ ಅನ್ವೇಷಕ ಬುದ್ಧಿಯಿಂದ. ತತ್ತ್ವಜ್ಞಾನಿಯ ಉನ್ನತ ನಿಲವಿನಿಂದ ಮತ್ತು ದ್ರಷ್ಟಾರನ ಮಂತ್ರದೃಷ್ಟಿಯಿಂದ ಇವರು ಆ ಭಾವನೆಗಳ ಬೆಂಬತ್ತಿದರು.

ಏಕಸ್ವ ಕಛೇರಿಯ ಕೆಲಸ ಐನ್‌ಸ್ಟೈನರಿಗೆ ನಿಜಕ್ಕೂ ತುಂಬ ಅನುಕೂಲತೆಯದಾಗಿತ್ತು. ವಿಶ್ವವಿದ್ಯಾಲಯಗಳ 'ಬೌದ್ಧಿಕಹವೆ'ಯ ಅಡ್ಡಿ ಆತಂಕಗಳೂ 'ಅಭಿಪ್ರಾಯವಿನಿಮಯ'ದ ಸದ್ದು ಗದ್ದಲಗಳೂ ಇಲ್ಲದೆ ತಮ್ಮಷ್ಟಕ್ಕೆ ತಾವೇ ಸ್ವಂತ ಊಹನೆಗಳನ್ನು ಮಂಡಿಸಲು ಹಿತಕರವಾಗಿತ್ತು. ಆಯ್ದ ಕೆಲವು ಪರಿಣತ ಹಾಗೂ ಆಸಕ್ತ ಮಿತ್ರರೊಡನೆ ತಮ್ಮ ಕ್ರಾಂತಿಕಾರಿ ಭಾವನೆಗಳನ್ನು ಚರ್ಚಿಸುತ್ತಿದ್ದರು. ಅಪರಾತ್ರಿಯ ತನಕ ಇಂಥ ಚರ್ಚೆಗಳು ಬಿರುಸಿನಿಂದ ನಡೆಯುತ್ತಿದ್ದುವು. ನೆರೆಕರೆಯವರಿಗೆ ಇವರೇ ಹುಚ್ಚರೊ ಜಗಳಗಂಟಿಗಳೊ ಎಂಬ ಅಭಿಪ್ರಾಯ ಮೂಡುವಂತೆ. ಅನೇಕ ವೇಳೆ ತಮ್ಮ ಹಿರಿಯ ಮಗನನ್ನು ಆರೈಕೆ ಮಾಡುತ್ತ. ಆದರೆ ಒಂದಿಷ್ಟೂ ತನ್ಮಯತೆ ಕಳೆದುಕೊಳ್ಳದೆ. ಐನ್‌ಸ್ಟೈನ್ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದರು.

ಇವೆಲ್ಲವುಗಳ ಫಲವಾಗಿ—ಗಾಢಾಧ್ಯಯನ, ಗಂಭೀರ ಚಿಂತನೆ—ತೀವ್ರ ಚರ್ಚೆ, ಒಟ್ಟಾರೆ ಕಠಿಣ ಪರಿಶ್ರಮ, ಐನ್‌ಸ್ಟೈನ್ ತಮ್ಮ ಸಿದ್ಧಾಂತಗಳನ್ನು ಅತ್ಯಂತ ನಿಷ್ಕೃಷ್ಟ ಹಾಗೂ ಕಲಾಪೂರ್ಣ ಪರಿಭಾಷೆಯಲ್ಲಿ ನಿರೂಪಿಸಬಲ್ಲವರಾಗಿದ್ದರು. ವಿಶ್ವದಲ್ಲಿ ಎಲ್ಲವೂ ಸಾಪೇಕ್ಷವೇ (relative); ನಿರಪೇಕ್ಷವೆಂಬುದೇ (absolute) ಇಲ್ಲ. ತಾನು ಈ ಸಾಪೇಕ್ಷತೆಗೆ (relativity) ಸಂಬಂಧಿಸಿದಂಥ ಊಹನೆಗಳನ್ನು ಬೆಂಬತ್ತಿದ್ದೇನೆ ಎಂಬುದಾಗಿ ಇವರು ಸ್ನೇಹಿತರೊಡನೆ ಹೇಳುತ್ತಿದ್ದುದುಂಟು. ಕ್ರಮೇಣ relativity ಎಂಬ ಹೆಸರೇ ಘನೀಭವಿಸಿ ಇವರು ಪ್ರತಿಪಾದಿಸಿದ ಸಿದ್ಧಾಂತಕ್ಕೆ Theory of Relativity (ಸಾಪೇಕ್ಷತಾಸಿದ್ಧಾಂತ) ಎಂಬ ಹೆಸರೇ ಗಟ್ಟಿ ಆಯಿತು.

ಜೂನ್ ೧೯೦೫. ಆಲ್ಬರ್ಟ್ ಐನ್‌ಸ್ಟೈನ್ ತಮ್ಮ ಸಂಶೋಧನಪ್ರಬಂಧದ "ಹೊರೆ"ಯನ್ನು ಬರ್ನ್ ನಗರದ ಅಂಚೆ ಕಛೇರಿಗೆ ಕೊಂಡೊಯ್ದರು. ಮೂವತ್ತು ಪುಟಗಳಲ್ಲಿ ಓರಣವಾಗಿಯೂ ಅಡಕವಾಗಿಯೂ ಕೈ ಬರೆಹದಲ್ಲಿ ಲಿಖಿತವಾಗಿದ್ದ ಪ್ರಬಂಧವನ್ನು ಪ್ರತಿಷ್ಠಿತ ವಿಜ್ಞಾನಪತ್ರಿಕೆ Annalen der Physik ಗೆ 'ಹೊತ್ತು ಹಾಕಿದರು'. ಈ 'ಕೇವಲ' ಮೂವತ್ತು ಪುಟಗಳ ನಿಬಂಧ [illegible]ದಲ್ಲಿ ಹೇಗೆ ವಿಜ್ಞಾನದ ಹಣೆಬರಹವನ್ನೇ ಪ್ರಪಂಚದ ಮುಖವನ್ನೇ ಬದಲಾಯಿಸಿಬಿಟ್ಟೀತು ಎಂಬ ಸಂಗತಿ ಆಗ ಸಾಕ್ಷಾತ್ ಅದರ ಕರ್ತೃವಿಗೂ ತಿಳಿದಿರಲಾರದು.

Physik ಪತ್ರಿಕೆಯಲ್ಲಿ ಐನ್‌ಸ್ಟೈನರ ಪ್ರಬಂಧ ಪ್ರಕಟವಾದಾಗ ಅದು ವಿಜ್ಞಾನಪ್ರಪಂಚದಲ್ಲಿ ಪ್ರಚಂಡ ಚಂಡಮಾರುತವನ್ನೇ ಉತ್ಪಾದಿಸಿಬಿಟ್ಟಿತು. ಆ ಭಾವನೆಗಳ ನಾವೀನ್ಯ, ಸರಳತೆ. ನಿರೂಪಣೆಯ ಸಹಜತೆ. ಸೌಂದರ್ಯ ಒಂದೊಂದರಿಂದಲೂ. ಇಷ್ಟೇ ಅಲ್ಲ, ಆ ತನಕ ಎಲ್ಲಿಯೂ ಕೇಳಿಬರದಿದ್ದಂಥ ಈ ಅಪ್ರಸಿದ್ಧ ಅನಾಮಧೇಯ ಐನ್‌ಸ್ಟೈನ್ ಯಾರು? ಅವರು ಪ್ರಾಧ್ಯಾಪಕರಾಗಿರುವ ವಿಶ್ವವಿದ್ಯಾಲಯ ಯಾವುದು? ಅವರ ಹಿನ್ನೆಲೆ ಏನು? ಇವು ಕೂಡ ವಿಜ್ಞಾನಿಗಳಿಗೆ ಆಸಕ್ತ ವಿಷಯಗಳಾಗಿದ್ದುವು. ಸ್ವಿಟ್ಸರ್ಲೆಂಡಿನ ಬರ್ನ್ ನಗರದ ಏಕಸ್ವ ಕಛೇರಿಯಲ್ಲಿ ಗುಮಾಸ್ತನಾಗಿರುವ 'ಕ್ಷುದ್ರ ವ್ಯಕ್ತಿ' ಈ ಮಹಾ ನಿಬಂಧದ ಕರ್ತಾರನಾಗಿರಬಹುದೆಂಬುದು ಅವರ ಊಹೆಗೆ ಮೀರಿದ್ದಾಗಿತ್ತು. ಈ ಒಗಟನ್ನು ಬಿಡಿಸಿಯೇ ತೀರಬೇಕೆಂದು ಬಗೆದು ಹಿರಿಯ ಪ್ರಸಿದ್ಧ ಪ್ರಾಧ್ಯಾಪಕರೊಬ್ಬರು ಖುದ್ದಾಗಿ ಬರ್ನ್ ನಗರಕ್ಕೆ ಚಿತ್ತೈಸಿಯೇಬಿಟ್ಟರು. ಇನ್ನೂ 'ಹುಡುಗತನ' ಮಾಯದ ತರುಣ ಐನ್‌ಸ್ಟೈನರನ್ನು ಕಂಡಾಗ ಅವರಿಗಾದ ಅಚ್ಚರಿಗೆ ಎಣೆಯೇ ಇರಲಿಲ್ಲ. ಐನ್–

ಸ್ಟೈನರ ಗುರು ಸುವಿಖ್ಯಾತ ಮಿಂಕೊವ್‍ಸ್ಕೀ (ಇವರ ತರಗತಿಗಳಿಗೂ ವಿದ್ಯಾರ್ಥಿ ಐನ್‌ಸ್ಟೈನ್ 'ಚಕ್ಕರ್' ಹೊಡೆಯುತ್ತಿದ್ದರೆಂಬ ಸಂಗತಿ ಅಲಾಯಿದ!) ಈ ನಿಬಂಧ ಓದಿ ಸಂತೋಷಾಶ್ಚರ್ಯ ಪುಳಕಿತರಾಗಿ ಬಾಯಿಗೆ ಬೆರಳಿಟ್ಟರು. ತರಗತಿಯಲ್ಲಿ ತಾನು 'ಸೋಮಾರಿ ನಾಯಿ' ಎಂದು ಹೆಸರಿಸಿದ್ದ ಆ ಅಗಣ್ಯ ಈ ಪರಮಗಣ್ಯನಿರೂಪಣೆಯ ಕಾರಣಿಕ ಕರಣಿಕನೇ ಎಂದು!

ಏನು ವಿಸ್ಮಯ ಸೃಷ್ಟಿ !

ಐನ್‌ಸ್ಟೈನ್ ಏನು ಸಾಧಿಸಿದ್ದರು ಎಂಬುದರ ಅತಿ ಸ್ಥೂಲ ವಿವರಣೆಯನ್ನು ಮಾತ್ರ ಇಲ್ಲಿ ಕೊಡಬಹುದು, ಅಷ್ಟೆ.

ರಾಶಿ (mass), ಆಕಾಶ (space), ಚಲನೆ ಮತ್ತು ಕಾಲ ಮುಂತಾದವುಗಳ ಬಗ್ಗೆ ಕೊನೆಯ ಮಾತನ್ನು ಅಥವಾ ಅಂತಿಮ ತೀರ್ಪನ್ನು ಭೌತ ವಿಜ್ಞಾನ ಹೇಳಿ ಶತಮಾನಗಳೇ ಸಂದಿದ್ದುವು. ವಿಶ್ವವೊಂದು ಪರಿಪೂರ್ಣ ಯಂತ್ರ. ಇದರ ಎಲ್ಲ ಚಟುವಟಿಕೆಗಳನ್ನೂ ಯಂತ್ರದ ವರ್ತನೆಯನ್ನು ವಿವರಿಸುವಷ್ಟು ಸುಲಭವಾಗಿ ವಿವರಿಸಬಹುದು ಎಂಬುದಾಗಿ ವಿಜ್ಞಾನಿಗಳು ಭಾವಿಸಿದ್ದರು. ವಿಶ್ವದ ಯಾಂತ್ರಿಕ ಪ್ರತಿರೂಪಕ್ಕೆ ಹಾಗೂ ವರ್ತನೆಗೆ ಮಹಾ ವಿಜ್ಞಾನಿಗಳ ಅಂಗೀಕಾರ ಮುದ್ರೆ ಬಿದ್ದು ಆ ಪ್ರಕಾರವೆ ವಿಶ್ವವನ್ನು ಅರ್ಥವಿಸುವುದು ಸಾಧ್ಯವಾಗಿರುವಾಗ ಭೌತ ವಿಜ್ಞಾನ ಮಾಡಬೇಕಾದದ್ದೇನು? ಅಲ್ಲಿಂದ ಮುಂದಕ್ಕೆ ಸಾಗುವ ಪ್ರಯತ್ನ ಮಾತ್ರ.

ಆದರೆ ಐನ್‌ಸ್ಟೈನರು ಪ್ರಚಲಿತ ಅಂಗೀಕೃತ ಚೌಕಟ್ಟನ್ನು ತೊರೆದರು – ಇದೊಂದು ನಿರ್ಮೋಚನ ಕ್ರಿಯೆ (moulting) ಪೊರೆಕಳಚಿ ಹುಳು ಪತಂಗವಾಗಿ ಹೊರಬರುವ ವಿಶಿಷ್ಟ ವಿದ್ಯಮಾನ. ಪ್ರಚಲಿತ ಚೌಕಟ್ಟು ತೊಡಿಸಿದ್ದ ಬಣ್ಣಗಾಜನ್ನು ಇವರು ಕಳಚಿ ಹಾಕಿದರು. ರಾಶಿ, ಆಕಾಶ, ಚಲನೆ, ಕಾಲ ಒಂದೊಂದನ್ನೂ ಕುರಿತು ಮೂಲಭೂತವಾಗಿ ಚಿಂತಿಸಿ ತಮ್ಮ ಊಹನೆಗಳನ್ನು ವಿಜ್ಞಾನದ ಪರಿಭಾಷೆಗೆ ಅನುವಾದಿಸಿ ಹೊಸ ಜಾಡಿನಲ್ಲಿ ನಡೆದರು, ಆನೆ ನಡೆದಂತೆ. ಹೊಸ ಹರವನ್ನು ಕಂಡರು, ವೈನತೇಯ ಕಂಡಂತೆ.

ಕಲ್ಲನ್ನು ಎಸೆದು ನೋಡಿ. ಗುಂಡನ್ನು ಹೊಟ್ಟಿಸಿ ನೋಡಿ. ಆಕಾಶನೌಕೆಯನ್ನು ಉಡಾಯಿಸಿ ನೋಡಿ. ಈ ಒಂದೊಂದು ವಸ್ತುವಿಗೂ ನಿರ್ದಿಷ್ಟ ರಾಶಿ ಉಂಟು. ಈಗ ಕಲ್ಲಿನ ವೇಗಕ್ಕಿಂತ ಗುಂಡಿನದು ಹೆಚ್ಚು, ನೌಕೆಯದು ಇನ್ನೂ ಹೆಚ್ಚು. ಈ ಹಿರಿ ವೇಗಗಳು ಅವುಗಳಿಗೆ ಹೇಗೆ ಒದಗುತ್ತವೆ? ಪ್ರಾರಂಭಿಕ ನೂಕುಬಲವನ್ನು ಅಧಿಕಗೊಳಿಸುವುದರಿಂದ ಎನ್ನುವಿರಿ. ಕಲ್ಲಿನ ಮೇಲೆ ಖುದ್ದು ಈ ಪ್ರಯೋಗ ಮಾಡಿಯೂ ನೋಡಬಹುದು. (ಎಚ್ಚರಿಕೆ: ಗಾಜಿನ ಮನೆಯಲ್ಲಿ ವಾಸಿಸುವವರು ಈ ಪ್ರಯೋಗಕ್ಕೆ ಕೈಹಾಕಬಾರದು.) ಆದ್ದರಿಂದ ಅಧಿಕ ಬಲಕ್ಕೆ(force) ಅಧಿಕ ವೇಗವೆಂದು (velocity) ತಿಳಿಯುವಿರಿ. ಈ ತಿಳಿವಳಿಕೆಯನ್ನು ಸಾರ್ವತ್ರೀಕರಿಸಿ, ಬಲವನ್ನು 'ಅತಿ'ಗೆ ಏರಿಸಿ ಅತಿ ವೇಗವನ್ನು, ಮಿತಿ ಇಲ್ಲದ ವೇಗವನ್ನು, ಸಾಧಿಸಬಹುದೆಂದು ವಾದಿಸುತ್ತೀರಿ. ಈಗ, ವಿಶ್ವದಲ್ಲಿ ಯಾವುದೇ ವಸ್ತು ಐದಬಹುದಾದ ವೇಗಕ್ಕೆ ಗರಿಷ್ಠ ಮಿತಿ ಇದೆ ಎಂದು ಯಾರಾದರೂ ನುಡಿದದ್ದಾದರೆ ಆತನ ಮಾನಸಿಕ ಸ್ವಾಸ್ಥ್ಯದ ಬಗ್ಗೆ ನಿಮಗೆ ಸಂದೇಹ ಮೂಡುವುದು ಖರೆ.

ಪುನಃ ಮೇಲಿನ ಉದಾಹರಣೆಗಳನ್ನೆ ಪರಿಶೀಲಿಸಿ. ಕಲ್ಲಿನ ಇಲ್ಲವೇ ಗುಂಡಿನ ಇಲ್ಲವೇ ನೌಕೆಯ ರಾಶಿಯ ಮೇಲೆ, ಅಂತೆಯೇ ಗಾತ್ರದ ಮೇಲೆ, ಆಯಾ ವೇಗದಿಂದ ಏನೂ ಪರಿಣಾಮವಾಗಿರುವುದಿಲ್ಲ. ಅರ್ಥಾತ್ ಆ ವಸ್ತುವಿನ ರಾಶಿ (ಅಂತೆಯೇ ಗಾತ್ರ ಕೂಡ) ಅದರ ನಿಶ್ಚಲ ಸ್ಥಿತಿಯಲ್ಲಿ ಎಷ್ಟಿತ್ತೊ, ಚಲನಸ್ಥಿತಿಯಲ್ಲಿಯೂ ಅಷ್ಟೆ ಇರುತ್ತದೆ ಎಂದು ನೀವು ಒಪ್ಪುತ್ತೀರಿ. ಈಗ ಆರೋಪಿತ ವೇಗದ ಪರಿಣಾಮವಾಗಿ ರಾಶಿಯ ಅಳತೆಯಲ್ಲಿ (ಅಂತೆಯೇ ಗಾತ್ರದಲ್ಲಿ ಕೂಡ) ವ್ಯತ್ಯಾಸ ಉಂಟಾಗುತ್ತದೆಂದು ಯಾರಾದರೂ ಹೇಳಿದರೆ ಆತನಿಗೆ ಬುದ್ಧಿ ವಿಕಲ್ಪವಾಗಿರಬಹುದೆ ಎಂಬ ಸಂಶಯ ನಿಮಗೆ ಮೂಡುವುದು ಖಾತ್ರಿ.

ಬೆಳಕು, ವಿದ್ಯುತ್, ಉಷ್ಣ ಮುಂತಾದ ಅಮೂರ್ತಾನುಭವಗಳಿಗೆ ಒಟ್ಟಾಗಿ 'ಶಕ್ತಿ' (energy) ಎಂಬ ಹೆಸರುಂಟು. ಶಕ್ತಿಯ ನೆರವಿನಿಂದ

'ಕಾರ್ಯ' (work) ಮಾಡಬಲ್ಲವು. ಉದಾಹರಣೆಗೆ ವಿದ್ಯುತ್ತಿನ ನೆರವಿನಿಂದ ಪಂಖ ಚಾಲನೆ. ಬಲ್ಬ ಉರಿಯದಿರುವಾಗ, ಮತ್ತು ಉರಿಯುತ್ತಿರುವಾಗ ಅದನ್ನು ತೂಗಿ ನೋಡಿ. ತೂಕ ಒಂದೇ ಇರುತ್ತದೆ. ಆದ್ದರಿಂದ ಬೆಳಕಿಗೆ ರಾಶಿ ಇಲ್ಲ. ತಂತಿಯ ಮೂಲಕ ವಿದ್ಯುತ್ ಹರಿಯದಿರುವಾಗ, ಮತ್ತು ಹರಿಯುತ್ತಿರುವಾಗ ಅದನ್ನು ತೂಗಿ ನೋಡಿ. ತೂಕ ವ್ಯತ್ಯಾಸವಿಲ್ಲ. ಆದ್ದರಿಂದ ವಿದ್ಯುತ್ತಿಗೆ ರಾಶಿ ಇಲ್ಲ. ಕಬ್ಬಿಣದ ಗುಂಡು ತಣ್ಣಗಿರುವಾಗ, ಮತ್ತು ಕಾದಿರುವಾಗ ಅದನ್ನು ತೂಗಿ ನೋಡಿ. ತೂಕ ಬದಲಾವಣೆ ಕಾಣದು. ಆದ್ದರಿಂದ ಉಷ್ಣಕ್ಕೆ ರಾಶಿ ಇಲ್ಲ. ಒಟ್ಟಾರೆ ಹೇಳುವುದಾದರೆ ಶಕ್ತಿಗೆ ರಾಶಿ ಇಲ್ಲ. ಈಗ, ಶಕ್ತಿಗೆ ರಾಶಿ ಇದೆ ಎಂದು ಯಾರಾದರೂ ಸಾಧಿಸಿದ್ದಾದರೆ ಆತನ ಮಿದುಳರಾಶಿಯಲ್ಲಿ ಊನವಿರಬಹುದೇ ಎಂಬುದಾಗಿ ನೀವು ಶಂಕಿಸುವುದು ದಿಟ.

ಶಕ್ತಿಗೆ ರಾಶಿ ಇರುವುದಾದರೆ ರಾಶಿಗೆ ಶಕ್ತಿ ಇರಬೇಕಷ್ಟೆ. ಹೌದು, ಕಿರಿ ಕಲ್ಲಿನ ತುಣುಕಿನಲ್ಲಿ ಹಿರಿ ಆನೆಗಳ ದಂಡೇ ಮಾಡಬಲ್ಲ ಕಾರ್ಯಕ್ಕೆ ಸಮಾನವಾದ ಶಕ್ತಿ ಹುದುಗಿದೆ. ನಿಸರ್ಗದ ಒಂದೊಂದು 'ನಿಷ್ಪ್ರಯೋಜಕ' ವಸ್ತುವೂ ಹೀಗೆಯೇ–ಅಗಾಧ ಶಕ್ತಿಯ ಘನೀಭವಿತ ರೂಪ. ಸಾಮಾನ್ಯ ಪ್ರಜ್ಞೆಗೆ (common sense ಪೂರ್ವಾಗ್ರಹಗಳ ಸಂಕಲನ?) ತೀರ ಹೊರಗಾದ ಇಂಥ ಒಂದು ಹೇಳಿಕೆಯನ್ನು ಯಾರಾದರೂ ಮಂಡಿಸಿದ್ದಾದರೆ ಆತ ಶತ ಶುಂಠನೆಂದು ನೀವು ತೀರ್ಮಾನಿಸುವುದು ಖಂಡಿತ.

ಓಡುತ್ತಿರುವ ಬಂಡಿಯಿಂದ ನೇರ ಹೊರ ಧುಮುಕಿದಾತ ಮುಗ್ಗರಿಸಿ ಮಣ್ಣು ಮುಕ್ಕುತ್ತಾನೆ. ನಿಂತಿರುವ ಬಂಡಿಯಿಂದ ಹೊರ ಜಿಗಿದಾತ ಸಲೀಸಾಗಿ ಕೆಳಗಿಳಿದಿರುತ್ತಾನೆ. ಏಕೆ ಈ ವಿಪರ್ಯಾಸ ? ಒಂದನೆಯ ಪ್ರಯೋಗದಲ್ಲಿ ಬಂಡಿಯ ವೇಗ ವ್ಯಕ್ತಿಗೆ ಆರೋಪಿತವಾಗಿ ಅವನ ಊಹೆ ತಪ್ಪಿ ಅವನು ಸಮತೋಲ ಕಳೆದುಕೊಂಡು ಮುಗ್ಗರಿಸುತ್ತಾನೆ. ಎರಡನೆಯ ಪ್ರಯೋಗದಲ್ಲಿ ಬಂಡಿಗೆ ವೇಗವಿಲ್ಲದ್ದರಿಂದ ಊಹಾನುಸಾರವಾಗಿಯೇ ನೆಲಕ್ಕೆ ಇಳಿದಿರುತ್ತಾನೆ. ಆದ್ದರಿಂದ ಆಕರದ ವೇಗದ ಪರಿಣಾಮ ವಸ್ತುವಿನ ಮೇಲಿದೆ. ನೇರ ಹಳಿಗಳ ಮೇಲೆ ರೇಲ್ ಎಂಜಿನ್ ಶಿಳ್ಳು ಹೊಡೆಯುತ್ತ ಧಾವಿಸುತ್ತಿರುವಾಗ ಶಿಳ್ಳಿನ ಸ್ಥಾಯಿ ಒಂದೇ ಆಗಿದ್ದರೂ ಎಂಜಿನ್ ನಿಮ್ಮ ಸಮೀಪಕ್ಕೆ ಬರುತ್ತಿದ್ದಂತೆ ಸ್ಥಾಯಿ ತಾರಕ್ಕೆ ಏರಿದಂತೆಯೂ ನಿಮ್ಮಿಂದ ದೂರ ಹೋಗುತ್ತಿದ್ದಂತೆ ಸ್ಥಾಯಿ ಮಂದ್ರಕ್ಕೆ ಇಳಿದಂತೆಯೂ ಭಾಸವಾಗುತ್ತದೆ. ಆದ್ದರಿಂದ ಆಕರದ ವೇಗದ ಪರಿಣಾಮ ಶಬ್ದದ ಮೇಲಿದೆ. ಸಹಜವಾಗಿ, ಬೆಳಕಿನ ಮೇಲೆಯೂ ಆಕರದ ವೇಗದ ಪರಿಣಾಮವಿದೆಯೆಂದು ನೀವು ತೀರ್ಮಾನಿಸುತ್ತೀರಿ. ಈಗ, ಬೆಳಕನ್ನು ಉತ್ಪಾದಿಸುವ ಆಕರದ ವೇಗ ಎಷ್ಟೆ ಇದ್ದರೂ ಯಾವ ದಿಶೆಗೇ ಇದ್ದರೂ ಅಲ್ಲಿಂದ ಹೊಮ್ಮುವ ಬೆಳಕಿನ ವೇಗದ ಮೇಲೆ ಅದರ ಪರಿಣಾಮವೇನೂ ಇಲ್ಲ, ಬೆಳಕು ಸದಾ ಒಂದೇ ವೇಗದಿಂದ ಸಾಗುತ್ತಿರುವುದು ಎಂದು ಯಾರಾದರೂ ಮಂಡಿಸಿದ್ದಾದರೆ ಆತನ ಬುದ್ಧಿಯ



"ನಮ್ಮ ಮಟ್ಟಕ್ಕೆ ಬರಬೇಕಾದರೆ ಸತತವಾಗಿ ಪ್ರಯತ್ನದಿಂದ ಮಾತ್ರ ಸಾಧ್ಯರಿ...,"

ಮೊದಲನೆಯದಕ್ಕೆ
ತಡ ಮಾಡಿ

ಎರಡನೆಯದಕ್ಕೆ
ಅಂತರ ಇಡಿ

ಭಾವಿ
ತಾಯಿತಂದೆಯರಿಗೆ
ಉತ್ತಮ ಸಲಹೆ

ಮೂರನೆಯದು...
ಬೇಡ. ಬಿಡಿ

ನಿಮಗೆ ಅಗತ್ಯದ ಸಲಹೆ ಮತ್ತು ಸಾಧನಗಳನ್ನು ನೀಡಲು ನಿಮ್ಮ ಸಮೀಪದ ಕುಟುಂಬ ಯೋಜನಾ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಯವರು ಅಥವಾ ಗ್ರಾಮ ಆರೋಗ್ಯ ಸಹಾಯಕ ಸಿದ್ಧವಾಗಿದ್ದಾರೆ.

ಅವರ ಬಳಿಗೆ ಇಂದೇ ಹೋಗಿ

ಆಕರಕ್ಕೆ ಏನೊ ಆಗಿರಬೇಕು ಎಂಬುದಾಗಿ ನೀವು ನಿರ್ಧರಿಸುವುದು ಕಂಡಂತೆಯೇ ಇದೆ.

ಇವೆಲ್ಲವನ್ನೂ – ಇವು ಸಾಮಾನ್ಯ ಓದುಗರಿಗೆ ತಿಳಿಯುವಂಥವು, ಇನ್ನು ಗಣಿತ ಮತ್ತು ಭೌತ ವಿಜ್ಞಾನ ಪರಿಣಿತರಿಗೆ ಮಾತ್ರ ಅರ್ಥವಾಗುವಂಥ ಹೊಸ ಸಂಗತಿಗಳು ಎಷ್ಟೋ ಇವೆ – ವಿಜ್ಞಾನ ಸಿದ್ಧಾಂತಗಳ ರೂಪದಲ್ಲಿ ಸಾಕ್ಷ್ಯಾಧಾರ ಸಮೇತ ಪ್ರಕಟಿಸಿದವರು ಆಲ್ಬರ್ಟ್ ಐನ್‌ಸ್ಟೈನ್. ಎಂದೇ ಇವರು ನವ ಮನ್ವಂತರದ ಪ್ರವರ್ತಕರು, ವಿಜ್ಞಾನ ರಂಗದ ಸೀಮೋಲ್ಲಂಘನಕಾರರು.

ಐನ್‌ಸ್ಟೈನ್ ಪ್ರತಿಪಾದನೆಗಳಿಗೆ ಒಟ್ಟಾಗಿ ವಿಶೇಷ ಸಾಪೇಕ್ಷತಾವಾದದೆಂದು (Special Theory of Relativity)ಹೆಸರು. ಇದರಿಂದ ಬೆಳಕಿಗೆ ಬಂದ ಕೆಲವು ಮುಖ್ಯ ಫಲಿತಾಂಶಗಳನ್ನು ಈಗ ನೋಡೋಣ.

ವಿಶ್ವದಲ್ಲಿ ವೇಗದ ಗರಿಷ್ಠ ಮಿತಿಯೆಂದರೆ ನಿರ್ವಾತದಲ್ಲಿ ಬೆಳಕಿನ ವೇಗ — ಸೆಕೆಂಡಿಗೆ ಸುಮಾರು ಮೂರು ಲಕ್ಷ ಕಿಲೊಮೀಟರುಗಳು. ಇದನ್ನು c ಪ್ರತೀಕದಿಂದ ಸೂಚಿಸುವುದು ವಾಡಿಕೆ. ರಾಶಿಗೂ (ಪ್ರತೀಕ m) ಶಕ್ತಿಗೂ (ಪ್ರತೀಕ E) ಅವಿನಾಸಂಬಂಧವಿದೆ. ಶಕ್ತಿರಹಿತ ರಾಶಿ ಇಲ್ಲ, ರಾಶಿರಹಿತ ಶಕ್ತಿ ಇಲ್ಲ. ಅಂತಿಮ ವಿಶ್ಲೇಷಣೆಯಲ್ಲಿ ಯಾವುದು ಶಕ್ತಿಯೊ ಅದು ರಾಶಿಯೂ ಹೌದು, ಯಾವುದು ರಾಶಿಯೊ ಅದು ಶಕ್ತಿಯೂ ಹೌದು. ಇವೆರಡರ ನಡುವಿನ ಗಣಿತಸಂಬಂಧ ಹೀಗಿದೆ: $E = mc^2$.

ಆರೋಪಿತ ವೇಗದ (v) ಪರಿಣಾಮವಾಗಿ ರಾಶಿಯಲ್ಲಿ ಆಧಿಕ್ಯ ಕಂಡುಬರುತ್ತದೆ. ಅರ್ಥಾತ್ ಚಲನೆಯಲ್ಲಿರುವ ರಾಶಿ (m) ನಿಶ್ಚಲತೆಯಲ್ಲಿರುವ ರಾಶಿಗಿಂತ (m_o) ಅಧಿಕವಾಗಿರುತ್ತದೆ. ಇವೆರಡರ ನಡುವಿನ ಗಣಿತಸಂಬಂಧವಿದು:

$$m = \frac{m_o}{\sqrt{1-v^2/c^2}}$$

ಆರೋಪಿತ ವೇಗದ (v) ಪರಿಣಾಮವಾಗಿ ವಸ್ತುವಿನ ಉದ್ದ ಸಂಕೋಚಿಸಲ್ಪಡುತ್ತದೆ. ಚಲನೆಯಲ್ಲಿರುವ ವಸ್ತುವಿನ ಉದ್ದ ನಿಶ್ಚಲ ಸ್ಥಿತಿಯಲ್ಲಿರುವ ವಸ್ತುವಿನ ಉದ್ದಕ್ಕಿಂತ ಕಡಿಮೆ ಆಗಿರುತ್ತದೆ. ಇವೆರಡರ ನಡುವಿನ ಗಣಿತಸಂಬಂಧ ಇದು: $l = lo \sqrt{1-v^2/c^2}$

ವೇಗ v ಯು ಬೆಲೆ ಬೆಳಕಿನ ವೇಗ c ಯನ್ನು ಸಮೀಪಿಸಿದಂತೆ ರಾಶಿ m ನ ಬೆಲೆ ಹೆಚ್ಚು ಹೆಚ್ಚು ಆಗಿ ಅದೇ ವೇಳೆ ಉದ್ದ l ನ ಬೆಲೆ ಕಡಿಮೆ ಕಡಿಮೆ ಆಗಿ v ಯು c ಯೇ ಆಗುವಾಗ m ಅನಂತವಾಗುತ್ತದೆ, l ಶೂನ್ಯವಾಗುತ್ತದೆ. ಹೀಗೆ ವಸ್ತು ಬೆಳಕಿನ ವೇಗವನ್ನು ತಲಪಿದ್ದಾದರೆ ಆಗ ಅದರ ರಾಶಿ ಅನಂತವೂ ಉದ್ದ (ಗಾತ್ರ) ಶೂನ್ಯವೂ ಆಗಿರುತ್ತವೆ. ಭೌತವಿಶ್ವದಲ್ಲಿ ಇಂಥ ವಿಪರ್ಯಾಸ ಅಸಾಧ್ಯ. ಆದ್ದರಿಂದ ಯಾವ ವಸ್ತುವೂ ಬೆಳಕಿನ ವೇಗವನ್ನು ಐದಲಾರದು.

ನಮ್ಮ ಇಂದ್ರಿಯಾನುಭವಗಳ ಪ್ರಕಾರ ಕಾಲ ವೆಂಬುದು ಸತತ ಏಕಮುಖಿ ಏಕವೇಗ ಪ್ರವಾಹ. ಇದಕ್ಕಿಂತ ಭಿನ್ನವಾದದ್ದು ಆಕಾಶ (space). ಆಕಾಶಕ್ಕೆ ಉದ್ದ, ಅಗಲ, ಎತ್ತರ (ಆಳ) ಎಂಬ ಮೂರು ಪ್ರತ್ಯೇಕ ಆಯಾಮಗಳಿವೆ (dimensions), ಈ ಆಯಾಮಗಳಲ್ಲಿ ನಾವು ಹಿಂದೆ ಮುಂದೆ. ಮೇಲೆ ಕೆಳಗೆ. ಎಡ ಬಲ ಬೇಕಾದಂತೆ ಬೇಕಾದ ವೇಗದಲ್ಲಿ ಚಲಿಸಬಲ್ಲೆವು, ಚಲಿಸದೆಯೂ ಇರಬಲ್ಲೆವು. ಕಾಲ ಹೀಗಲ್ಲ. ನಮ್ಮ ಇಂಥ ಯಾವ [illegible] ಅದು ಸಗ್ಗುವುದಿಲ್ಲ. ಎಂದೇ ಆಕಾಶ ಮತ್ತು ಕಾಲ ಎರಡು ಪ್ರತ್ಯೇಕ ಅನುಭವಗಳೆಂದು ನಾವು ಭಾವಿಸಿದ್ದೇವೆ. ತದನುಸಾರವಾಗಿ ನಮ್ಮ ವಿಜ್ಞಾನ ಮತ್ತು ತಂತ್ರವಿದ್ಯೆಯನ್ನು ಅಭಿವೃದ್ಧಿಸಿದ್ದೇವೆ. ಇವುಗಳಿಂದ ಸಮರ್ಪಕ ಫಲಿತಾಂಶಗಳನ್ನು ಪಡೆದು ಬಾಳುತ್ತಿದ್ದೇವೆ. ಆದರೆ ವಿಶೇಷ ಸಾಪೇಕ್ಷತಾ ಸಿದ್ಧಾಂತ ಈ ನಿಲವನ್ನು ಒಪ್ಪುವುದಿಲ್ಲ: ನಮ್ಮ ಸೀಮಿತ ಅನುಭವದ [illegible]. ಅರ್ಥಾತ್. ವಿಶ್ವದಲ್ಲಿಯೂ ಆಕಾಶ ಮತ್ತು ಕಾಲ ಎರಡು ಪ್ರತ್ಯೇಕ ಅನುಭವಗಳು ಎಂಬುದನ್ನು ತಿರಸ್ಕರಿಸಿ ಆಕಾಶ–ಕಾಲ ಸಾತತ್ಯವನ್ನು (space–time continuum) ಪ್ರತಿಪಾದಿಸುತ್ತದೆ.

ವಿಶೇಷ ಸಾಪೇಕ್ಷತಾಸಿದ್ಧಾಂತವೇ ಆಗಲಿ ಮುಂದೆ ೧೯೧೫ರಲ್ಲಿ ಪ್ರಕಟವಾದ ಸಾರ್ವತ್ರಿಕ ಸಾಪೇಕ್ಷತಾಸಿದ್ಧಾಂತವೇ ಆಗಲಿ (General

theory of Relativity) ಕಲ್ಪನಾವಿಲಾಸಿಯೊಬ್ಬನ ಊಹನಾವಿನ್ಯಾಸಗಳಲ್ಲ — ಸ್ಪಷ್ಟ ಗಣನೆಗಳು, ನಿಖರ ಮಾಪನೆಗಳು ಮುಂತಾದವುಗಳ ಮೇಲೆ ನಿರ್ಮಿಸಿದ ಬೃಹಚ್ಛಿಲ್ಪಗಳು; ಇವುಗಳಿಗೆ ನಿಷ್ಕೃಷ್ಟ ಸಾಧನೆಗಳನ್ನು ಐನ್‌ಸ್ಟೈನರು ನೀಡಿದ್ದಾರೆ; ಪ್ರಯೋಗಗಳಲ್ಲಿ ಇವುಗಳ ಸಾಧುತ್ವ ಸ್ಥಿರೀಕೃತವಾಗಿದೆ. ಕೆಲವು ಉದಾಹರಣೆಗಳನ್ನು ಈಗ ನೋಡೋಣ.

ಈಥರಿನ ಅಸ್ತಿತ್ವವನ್ನೆ ಐನ್‌ಸ್ಟೈನ್ ತೊಡೆದು ಹಾಕಿದರು. ಆ ಕೂಡಲೆ ಅದನ್ನು ಆಧರಿಸಿ ನಿಂತಿದ್ದ ಹಲವಾರು ಅಸಾಂಗತ್ಯಗಳು ರೆಕ್ಕೆ ಕಡಿದ ಮಳೆಹಾತೆಗಳಂತೆ ನೆಲಕ್ಕೆ ಕುಸಿದು ಕುಕ್ಕರಿಸಿದುವು. ಅಂದರೇನಾಯಿತು ? ಬೆಳಕಿನ ಸಂಚಾರಕ್ಕೆ ಯಾವ ಮಾಧ್ಯಮವೂ ಬೇಡ, ಅದು ನಿರ್ವಾತದಲ್ಲಿ ಸಂಚರಿಸಬಲ್ಲ ಶಕ್ತಿರೂಪ, ಅದನ್ನು ಶಬ್ದದ ಗುಣದೊಂದಿಗೆ ಹೋಲಿಸಿದ್ದೆ ತಪ್ಪು ಎಂಬ ಸಂಗತಿಗಳು ಸ್ಪಷ್ಟವಾದುವು.

ಬೆಳಕಿನ ಕಿರಣ ಸರಳರೇಖೆಯಲ್ಲಿ ಸಂಚರಿಸುವುದೆಂದು ತಿಳಿದಿತ್ತು. ಸಾಪೇಕ್ಷತಾಸಿದ್ಧಾಂತ ಇದಕ್ಕೊಂದು ಮುಖ್ಯ ಸ್ಪಷ್ಟೀಕರಣ ನೀಡಿತು. ಕಿರಣಗಳು ಪ್ರಬಲ ಗುರುತ್ವಾಕರ್ಷಣ ಕ್ಷೇತ್ರವನ್ನು–ಉದಾಹರಣೆಗೆ ನಕ್ಷತ್ರಗಳಂಥ ಮಹಾಕಾಯಗಳ ಸನಿಹವನ್ನು — ಅಡ್ಡಹಾಯುವಾಗ ಅದರತ್ತ ಬಾಗುತ್ತವೆ ಎಂಬುದಾಗಿ ಈ ಸಿದ್ಧಾಂತ ಪ್ರತಿಪಾದಿಸಿದ್ದು ಮಾತ್ರವಲ್ಲ, ಆ ಬಾಗುವನ್ನು ಕರಾರುವಾಕ್ಕಾಗಿ ಕಣಿನುಡಿಯಿತು. ಕೂಡ ಸೂರ್ಯನನ್ನು ಕುರಿತಂತೆ ಇದು ಕೇವಲ ೧.೭೫ ಕೋನ ಸೆಕೆಂಡುಗಳು (ಕೋನದ ೧ ಡಿಗ್ರಿ = ೩೬೦೦ ಕೋನ ಸೆಕೆಂಡುಗಳು). ಇದನ್ನು ತಾಳೆನೋಡುವುದು ಹೇಗೆ? ೧೯೧೯ರಲ್ಲಿ ಸಂಭವಿಸಿದ ಪೂರ್ಣ ಸೂರ್ಯಗ್ರಹಣದ ಛಾಯಾಚಿತ್ರಗಳನ್ನು, ಆ ಗ್ರಹಣ ಕಾಣುವ ಪ್ರದೇಶಕ್ಕೆ ಸಾಕಷ್ಟು ಪೂರ್ವಸಿದ್ಧತೆ ಸಮೇತವಾಗಿ ವಿಜ್ಞಾನಿಗಳ ದಂಡನ್ನು ರವಾನಿಸಿ, ತುಂಬ ನಾಜೂಕಾಗಿ ಸೆರೆಹಿಡಿಯಲಾಯಿತು. ಸೂರ್ಯನ ಹಿನ್ನೆಲೆಯಲ್ಲಿದ್ದ ನಕ್ಷತ್ರಗಳು ಛಾಯಾಚಿತ್ರಗಳಲ್ಲಿ ಪಡಿಮೂಡಿದ್ದುವು. ಸೂರ್ಯಗುರುತ್ವಾಕರ್ಷಣಕ್ಷೇತ್ರದ ಕಾರಣವಾಗಿ ವಿಚಲಿತವಾಗಿದ್ದ ನಕ್ಷತ್ರಸ್ಥಾನಗಳವು. ಇತ್ತ ನಕ್ಷತ್ರಗಳ ನಿಜಸ್ಥಾನಗಳು ಪ್ರತ್ಯೇಕವಾಗಿ ತಿಳಿದಿದ್ದುದರಿಂದ ನಿಜ ಮತ್ತು ವಿಚಲಿತ ಸ್ಥಾನಗಳ ನಡುವಿನ ಸೂಕ್ಷ್ಮಾಂತರವನ್ನು ಅಳೆದು ನಿರ್ಧರಿಸುವುದು ಸಾಧ್ಯವಾಯಿತು. ಅಳತೆ ತಿಳಿಸಿದ್ದು ೧.೬೪ ಕೋನ ಸೆಕೆಂಡುಗಳು (ಅಳತೆ ಎಂದೂ ಪರಿಪೂರ್ಣ ನಿಷ್ಕೃಷ್ಟವಾಗಿರುವುದಿಲ್ಲ). ಐನ್‌ಸ್ಟೈನರು ೧೯೧೫ ರಲ್ಲಿ ಕರಾರುವಾಕ್ಕಾಗಿ ನಿರೂಪಿಸಿದ್ದ ಊಹನೆಯನ್ನು ವಿಶ್ವ ಒಪ್ಪಿಕೊಂಡಿತ್ತು. ಗ್ರಹಣದ ಚಿತ್ರಗಳನ್ನೂ ಖಗೋಳವಿಜ್ಞಾನಿಗಳ ಮೆಚ್ಚುಗೆಯ ನುಡಿಗಳನ್ನೂ ಆ ವೇಳೆಗೆ ಬರ್ಲಿನ್ನಿನಲ್ಲಿದ್ದ, ಐನ್‌ಸ್ಟೈನರಿಗೆ ಒಪ್ಪಿಸಿದಾಗ, "ಎಷ್ಟು ಅದ್ಭುತ ಛಾಯಾಚಿತ್ರಗಳು" ಎಂದು ಉದ್ಗರಿಸಿದರು ಮಗುವಿನ ಬೆರಗುಗಣ್ಣುಗಳಿಂದ. ತಮ್ಮ ಊಹನೆಯ ಸತ್ಯತೆಯ ಬಗ್ಗೆ ಅವರಿಗೆ ಇನಿತೂ ಸಂದೇಹವಿರದ್ದರಿಂದ — ಅದು ಹಾಗೆಯೇ ಇರತಕ್ಕದ್ದು ಎಂಬುದೇ ಅವರ ನಿಲವು — ಈ ಸ್ಥಿರೀಕರಣ ಅವರನ್ನು ಭಾವೋದ್ದೀಪಿತರನ್ನಾಗಿಸಲಿಲ್ಲ.

ನ್ಯೂಟನ್‌ಬಲವಿಜ್ಞಾನದ ಪರಿಮಿತಿಯೊಳಗೆ ಸೌರವ್ಯೂಹದ ಎಲ್ಲ ಗ್ರಹಗಳ ವರ್ತನೆಯನ್ನೂ ಬಹುತೇಕ ಕರಾರುವಾಕ್ಕಾಗಿ ವಿವರಿಸುವುದು ಸಾಧ್ಯವಾಗಿತ್ತು. ಆದರೆ ಕಂಡಂತೆ ಬುಧ ಗ್ರಹ ಈ ಶಿಸ್ತಿಗೆ ಒಳಪಟ್ಟಿರಲಿಲ್ಲ. ಸೂರ್ಯನಿಗೆ ಅತಿ ಸಮೀಪವಿರುವ ಗ್ರಹವಿದು. ಇದರ ವರ್ಷ — ಸೂರ್ಯನನ್ನು ಪರಿಭ್ರಮಿಸಲು ತೆಗೆದುಕೊಳ್ಳುವ ಅವಧಿ — ಕೇವಲ ೮೮ ಭೂಮಿದಿವಸಗಳು. ಸೂರ್ಯನನ್ನು ಬುಧ ಇತರ ಗ್ರಹಗಳಂತೆಯೇ ದೀರ್ಘವೃತ್ತಾಕಾರದ ಕಕ್ಷೆಯಲ್ಲಿ ಸೂರ್ಯ ಈ ದೀರ್ಘವೃತ್ತದ (ellipse) ಒಂದು ನಾಭಿಯಲ್ಲಿ (focus) ಇರುವಂತೆ ಪರಿಭ್ರಮಿಸುತ್ತದೆ. ಬುಧಕಕ್ಷೆಯ ಮೇಲಿನ ಸೂರ್ಯನೀಚಬಿಂದು (perihelion) ಸೂರ್ಯನಿಗೆ ಅತಿ ಸಮೀಪವಾದ ಬಿಂದು — ತುಸು ವಿಚಿತ್ರವಾಗಿ ವರ್ತಿಸುತ್ತಿರುವುದು ವೀಕ್ಷಣೆಯಿಂದ ತಿಳಿದಿತ್ತು. ಗ್ರಹ ಒಮ್ಮೆ ಸೂರ್ಯನೀಚಬಿಂದುವಿನಿಂದ ಹೊರಟು ಒಂದು ಪರಿಭ್ರಮಣಾನಂತರ ಅದೇ ಬಿಂದುವಿಗೆ, ಮೈದಾನದಲ್ಲಿ ಸುತ್ತೋಟದ ಓಟಗಾರರು ಹೊರಟಲ್ಲಿಗೆ ಮತ್ತೆ

ಬರುವಂತೆ, ಮರಳುವಷ್ಟರಲ್ಲಿ ಆ ಬಿಂದು ಗ್ರಹ ಚಲನೆಯ ವಿರುದ್ಧ ದಿಶೆಯಲ್ಲಿ ಮುನ್ನಡೆದು ಗ್ರಹ ಪೂರ್ಣ ಪರಿಭ್ರಮಣೆ ಮುಗಿಸುವ ಮೊದಲೆ ಅದನ್ನು 'ಎದುರುಗೊಳ್ಳುವ' ವಿಚಿತ್ರ ವಿದ್ಯಮಾನವಿದು. ಈ ಮುನ್ನಡೆಯ ಅಳತೆ ಒಂದು ಶತಮಾನದಲ್ಲಿ ಸುಮಾರು ೪೩ ಕೋನಸೆಕೆಂಡುಗಳು ಮಾತ್ರ. ನ್ಯೂಟನ್‌ಬಲವಿಜ್ಞಾನದ ಪ್ರಕಾರ ವಿವರಿಸಲು ಸಾಧ್ಯವಾಗಿರದ ಈ ವೈಚಿತ್ರ್ಯವನ್ನು ಐನ್‌ಸ್ಟೈನರ ಸಿದ್ಧಾಂತ ಸಂದೇಹಾತೀತವಾಗಿ ಪರಿಹರಿಸಿ ನಿವಾರಿಸಿತು (೧೯೧೫). NP

$E=mc^2$ ದಂಥ ಅತ್ಯಂತ ಸುಂದರ ಗಹನ ಮತ್ತು ಸತ್ತ್ವಪೂರ್ಣ ಸೂತ್ರವನ್ನು ಆವಿಷ್ಕರಿಸಿದಾತ ಈ ಏಕೈಕ ಮಹಾ ಸಿದ್ಧಿಯಿಂದ ಪ್ರಾಪ್ತವಾಗುವ ಕೀರ್ತಿಶ್ರೀಯೊಂದರ ಅಡಿಪಾಯದ ಮೇಲೆಯೇ ತನ್ನ ಭವಿಷ್ಯ ಜೀವನಸೌಧವನ್ನು ನಿರ್ಮಿಸುತ್ತ ಬೇರೆ ಏನನ್ನೂ ಮಾಡದೆ ವೃತ್ತಿಯಿಂದ ನಿವೃತ್ತನಾಗಬಹುದು ಎಂಬುದಾಗಿ ವಿಖ್ಯಾತ ಭೌತರಸಾಯನ ವಿಜ್ಞಾನಿ ಮತ್ತು ನೊಬೆಲ್ ಪ್ರಶಸ್ತಿ ವಿಜೇತ ವಾಲ್ಟರ್ ನರ್ನ್‌ಸ್ಟ್ (೧೮೬೪–೧೯೪೧) ಒಮ್ಮೆ ಹೇಳಿದರು. (ಶ್ಲಾಘನೆಯ ಈ ಮಾತುಗಳನ್ನು ಐನ್‌ಸ್ಟೈನರಿಗೆ ವರದಿ ಮಾಡಿದಾಗ ಅವರು ನಕ್ಕು ನುಡಿದರು "ಆ ಹಳೆ ಅಪರಾಧಿಗೆ ಇದು ಪ್ರಿಯವಾದೀತು ನಿಜ, ಆದರೆ ನಾನವರಿಗೆ ಈ ಸುಖ ಒದಗಿಸಲಾರೆ." ಐನ್‌ಸ್ಟೈನರ ಊಹನೆಯ ಪ್ರಕಾರವೇ ವಿಶ್ವದಲ್ಲಿ ರಾಶಿ–ಶಕ್ತಿ ಅನ್ಯೋನ್ಯತೆ ಇದೆಯೆಂದು ಈ ಸಮೀಕರಣ ದೃಢಪಡಿಸಿತು. ವಾಸ್ತವತೆ ಯಾವ ಸುಳುಹನ್ನು ಕೊಡದೆಯೂ ಊಹನೆಗೆ ಮಣಿದ ಅಪೂರ್ವ ಪ್ರಸಂಗವಿದು. ಇದರಲ್ಲಿ ಐನ್‌ಸ್ಟೈನ್ ವ್ಯಕ್ತಿತ್ವದ ವಿಶೇಷ ಪರಿಮುದ್ರೆ ಟಂಕಿಸಲ್ಪಟ್ಟಿದೆ. ಇತರ ಯಾವುದೇ ಸಮಕಾಲೀನ ಪ್ರತಿಭೆಗೂ $E=mc^2$ ಪ್ರಾಯಶಃ ಗೋಚರವಾಗುತ್ತಿರಲಿಲ್ಲ.

ಈ ಸಮೀಕರಣದ ಅರ್ಥವೇನು? ನಮ್ಮ ಕೈಗೆ ದೊರೆಯುವ ಯಾವುದೇ ವಸ್ತುವಿನ ತುಣುಕನ್ನು ೧ ಗ್ರಾಮಿನಷ್ಟು ತೆಗೆದುಕೊಂಡು ಅದನ್ನು ನಿರ್ನಾಮಗೊಳಿಸುವುದು, ಅಂದರೆ ಅದರ ರಾಶಿಯನ್ನು ಸಂಪೂರ್ಣವಾಗಿ ಶಕ್ತಿರೂಪಕ್ಕೆ ಪರಿವರ್ತಿಸುವುದು. ಸಾಧ್ಯವಾದರೆ ಆ ಶಕ್ತಿಯ ಮೊತ್ತ ೩ ಕೋಟಿ ೩೦ ಲಕ್ಷ ಕುದುರೆಗಳು ಒಟ್ಟಿಗೆ ಒಂದು ಗಂಟೆ ಕಾಲ ಮಾಡುವ ಕಾರ್ಯಕ್ಕೆ ಸಮಾನವಾಗುತ್ತದೆ—ಅಷ್ಟೊಂದು ಅಗಾಧ ಶಕ್ತಿಯ ಉಗ್ರಾಣ ಯಾವುದೇ ಜಡವಸ್ತು! ಮಂಕುತಿಮ್ಮನ ಮಾತಿನಲ್ಲಿ 'ಜಡವೆಂದರೇನು? ಸೃಷ್ಟಿಯಲಿ ಚೇತನಸುಪ್ತಿ, ಅಡಗಿ ನಿದ್ರಿಪುದಲ್ಲಿ ಚೈತನ್ಯದಗ್ನಿ." ಸೂರ್ಯ ಮತ್ತು ನಕ್ಷತ್ರಗಳಲ್ಲಿ ಅತಿಯಾದ ಸಂಮರ್ದ ಮತ್ತು ಉಷ್ಣ ಇರುವುದರಿಂದ — ಭೂಮಿಯಲ್ಲಿ ಇವುಗಳ ಅನುಭವ ನಮಗೆಂದೂ ಆಗದು(ಸದ್ಯ ಬಚಾವ್! ಹೀಗಾಗಿ ಉಳಿದಿದ್ದೇವೆ!) ಆ ಆಕಾಶಕುಲುಮೆಗಳಿಗೆ ಬಿದ್ದ ವಸ್ತು ನಿರ್ನಾಮವಾಗಿ ಶಕ್ತಿಯ ಉತ್ಪಾದನೆ ಆಗುತ್ತಿರುವುದು. ಪರಮಾಣು ಬಾಂಬಿನಲ್ಲಾದರೂ ನಡೆಯುವುದು ಇದಕ್ಕೆ ಸಮಾನವಾದ ಒಂದು ಕ್ರಿಯೆ — ಅಲ್ಪ ವಸ್ತುನಷ್ಟದಿಂದ ಅಪಾರ ಶಕ್ತಿಯ ಬಿಡುಗಡೆ. ಇಂದು ವ್ಯಾಪಕವಾಗಿ ಬಲು

"ಓಟು ಕೇಳಲು ಬರುವಾಗ ನಾನು ಹೇಗಿದ್ದರೂ ನಡೆದಿತ್ತು; ಈಗ ಮಾತ್ರ ನಾನು ಈ ವೇಷದಲ್ಲಿದ್ರೆ ಖೂನಿ ಮಾಡಲು ಬಂದಿದ್ದಾನೆಂದು ಹೆದರುತ್ತೀರಲ್ರೀ...."

ದುಬಾರಿ ವೆಚ್ಚದಿಂದ ಚಾಲ್ತಿಗೆ ಬರುತ್ತಿರುವ ಶಾಂತಿಗಾಗಿ ಪರಮಾಣು ಯೋಜನೆಯ ಹಿನ್ನೆಲೆ ತತ್ತ್ವಕೂಡ ಇದೆ — ವಸ್ತುವನ್ನು 'ಹಿಂಡಿ' ಶಕ್ತಿಯನ್ನು ಪಡೆಯುವುದು.

ಶಕ್ತಿಯ ರಾಶಿ ಎಷ್ಟು ಎಂಬುದನ್ನು ಗ್ರಹಿಸಲು ಒಂದು ಉದಾಹರಣೆ ನೋಡಿ. ಉದ್ದ ಅಗಲ ಆಳ ಲಾ ೧.೬ ಕಿಲೊಮೀಟರ್ ಅಂದರೆ ೧ ಮೈಲು ಇರುವ ಮಹಾಸರೋವರ ನೀರಿನಿಂದ ಭರ್ತಿ ಆಗಿರಲಿ. ಅದರ ಉಷ್ಣತೆಯನ್ನು ೧ ಡಿಗ್ರಿ ಸೆಲ್ಸಿಯಸಿನಷ್ಟು ಏರಿಸಲು ಅವಶ್ಯವಾಗುವ ಉಷ್ಣಶಕ್ತಿಯ ತೂಕ ಕೇವಲ ೧೯೦ ಗ್ರಾಮುಗಳು.

ಇಷ್ಟು ತಿಳಿಯುವಾಗ ನಿಮಗೊಂದು ಸಂದೇಹ ಮೂಡುತ್ತದೆ: ಯಾವುದೇ ವಸ್ತು ಅಷ್ಟೊಂದು ಅಗಾಧ ಶಕ್ತಿಯ ಘನೀಭವಿತ ರೂಪವಾಗಿದ್ದರೆ ಆ ರಹಸ್ಯವನ್ನು ಮಾನವ ಈ ಶತಮಾನದ ತನಕವೂ ಗಮನಿಸದಿದ್ದುದೇಕೆ? ಅದರ ಲಾಭ ಪಡೆಯದಿದ್ದುದೇಕೆ? ಖುದ್ದು ಐನ್‌ಸ್ಟೈನರೇ ಈ ಪ್ರಶ್ನೆ ಎತ್ತಿ ಅದಕ್ಕೆ ಉತ್ತರವಿತ್ತಿದ್ದಾರೆ. "ಉತ್ತರಬಲು ಸರಳವಾಗಿದೆ. ಎಲ್ಲಿಯ ತನಕ ಯಾವುದೇ ವಸ್ತುವಿನಿಂದ ಒಂದಿನಿತು ಶಕ್ತಿಯೂ ಹೊರಸೂಸುವುದಿಲ್ಲವೊ ಅಲ್ಲಿಯ ತನಕ ಅದನ್ನು ಗುರುತಿಸುವುದು ಅಸಾಧ್ಯ— ಆಗರ್ಭ ಶ್ರೀಮಂತನೊಬ್ಬ ಬಿಡಿಗಾಸನ್ನೂ ವೆಚ್ಚಿಸದಿದ್ದರೆ ಅಥವಾ ಕೊಡದಿದ್ದರೆ ಹೇಗೊ ಹಾಗೆ: ಅವನ ಶ್ರೀಮಂತಿಕೆ ಯಾವ ಮಟ್ಟದ್ದು ಎಂದು ಯಾರೂ ಅಂದಾಜು ಮಾಡಲಾರರು." ವಿಕಿರಣ-ಪಟುತ್ವದ (radioactivity) ಆವಿಷ್ಕಾರವಾದದ್ದು (೧೮೯೬) ಒಂದು ಆಕಸ್ಮಿಕ. 'ಆಗರ್ಭ ಶ್ರೀಮಂತ'ನಾದ ನಿಸರ್ಗ ವಿಕಿರಣಪಟುತ್ವದ ಮೂಲಕ ಬಿಡಿಗಾಸನ್ನು ವೆಚ್ಚಿಸುತ್ತಿದ್ದುದನ್ನು ಮಾನವ ಗುರುತಿಸಿದಾಗ ಪರಮಾಣು ಹೂರಣದ ಪ್ರಥಮ ಸಂದೇಶ ಅವನಿಗೆ ದೊರೆಯಿತು.

ನಿಜಕ್ಕೂ ನಿಸರ್ಗ ಜಿಪುಣಾಗ್ರೇಸರ ಕುಬೇರ. ಇದರ ಪ್ರತಿಯೊಂದು ಕಣದಲ್ಲಿಯೂ ಅಗಾಧ ಶಕ್ತಿ ಹುದುಗಿದೆ ದಿಟ. ಆದರೆ ಈ ಶಕ್ತಿ ನಮಗೆ ಸುಲಭಲಭ್ಯವಾಗಿಲ್ಲ. ವಿಜ್ಞಾನ ಮತ್ತು ತಂತ್ರವಿದ್ಯೆ ಹಿರಿಮಟ್ಟಕ್ಕೆ ಬೆಳೆದಿರುವ ಇಂದಿನ ದಿನಗಳಲ್ಲಿಯೂ ಕೇವಲ ಕೆಲವೇ ಅಪೂರ್ವ ವಸ್ತುಗಳನ್ನು ಬಳಸಿ ಮಾತ್ರ ಪರಮಾಣುಗರ್ಭದಿಂದ ಶಕ್ತಿಯನ್ನು ಬಸಿಯುವ ಭಗೀರಥ ಸಾಹಸ ಕೈಗೂಡಿದೆ.

ಶಾಂತಿದೂತ ಕೋಮಲ ಹೃದಯಿ ಐನ್‌ಸ್ಟೈನ್ ಬದುಕಿದ್ದಾಗಲೇ ಪರಮಾಣುಬಾಂಬ್ ಹತ್ಯಾಕಾಂಡ ಆರಂಭವಾದದ್ದು ವಿಧಿಯ ಅಣಕ. ೧೯೪೫ ಅಗಸ್ಟ್ ೬ರಂದು ರೇಡಿಯೊ ಕರ್ಕಶವಾಗಿ ಬಿತ್ತರಿಸಿತ್ತು, ಜಪಾನಿನ ಹಿರೊಶಿಮಾದ ಮೇಲೆ ಮೊದಲ ಪರಮಾಣು ಬಾಂಬನ್ನು ತಾಡಿಸಿದ ದುರ್ವಾರ್ತೆಯನ್ನು. ಇದನ್ನು ಕೇಳಿ ತೀವ್ರಾಘಾತಕ್ಕೆ ತುತ್ತಾದ ಈ ಬುದ್ಧ ಉದ್ಗರಿಸಿದ್ದು ಕೇವಲ ಎರಡೇ ಪದಗಳನ್ನು "Oh, weh" (ಅಯ್ಯೋ……). ಮಾನವಾಂತಃಕರಣದ ವೇದನೆಯ ಕಂಪನವದಾಗಿತ್ತು.

(ಎರಡನೆಯ ಭಾಗ: ಮುಂದಿನ ಸಂಚಿಕೆಯಲ್ಲಿ)

ಬಾಯಿ ತಪ್ಪದ ಹಾಗೆ ನೋಡಿಕೊಳ್ಳಬೇಕೆಂದರೆ ನೀವು ಯಾರೊಂದಿಗೆ ಹೇಗೆ, ಯಾವಾಗ, ಎಲ್ಲಿ, ಹಾಗೂ ಯಾರ ಬಗೆಗೆ ಮಾತಾಡುತ್ತೀರೆಂಬ ಬಗೆಗೆ ಯಾವಾಗಲೂ ಲಕ್ಷ್ಯವಹಿಸಬೇಕು

-ಒಂದು ಆಂಗ್ಲ ಸೂಕ್ತಿ

Printed & published by P. S. Bhat for the Jayakarnataka News Printers Ltd., at the Samyukta Karnataka Press, Koppikar Road, Hubli-580 020. Rep: Bombay: V. Satyamurthy Phone: 522412; Calcutta: H. Muzamdar 46-4233; Madras: A. K. Subramanian Phone: 842201: New Delhi P. R. Chopra Phone: 224130.

Registered with the Registrar of Newspapers for India under No. 3533/57